ದಾನ ಚಿಂತಾಮಣಿ ಅತ್ತಿಮಬ್ಬೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಪಾರ್ವತೆವ್ವ. ವೀ. ಪೂಜಾರ

ಅಧ್ಯಾಪಕರು

ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ

ಕೊಪ್ಪಳ

ಮಾರ್ಗದರ್ಶಕರು

ಡಾ. ಡಿ.ವಿ.ಪರಮಶಿವಮೂರ್ತಿ

ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

110

ದಾನ ಚಿಂತಾಮಣಿ ಅತ್ತಿಮಬ್ಬೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಪಾರ್ವತೆವ್ವ. ವೀ. ಪೂಜಾರ

ಅಧ್ಯಾಪಕರು

ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ

ಕೊಪ್ಪಳ

ಮಾರ್ಗದರ್ಶಕರು

ಡಾ. ಡಿ.ವಿ.ಪರಮಶಿವಮೂರ್ತಿ

ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಮಾತೆಂಬುದು ಜ್ಯೋತಿರ್ಲಿಂಗ

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

110

ದೃಢೀಕರಣ ಪತ್ರ

ಶ್ರೀಮತಿ ಪಾರ್ವತೆವ್ವ ವೀ.ಪೂಜಾರ ಇವರು **'ದಾನಚಿಂತಾಮಣಿ ಅತ್ತಿಮಬ್ಬೆ'** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಡಿ.ವಿ.ಪರಮಶಿವಮೂರ್ತಿ)

ದಿನಾಂಕ : ೨೬.೦೩.೨೦೦೩

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು
ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

'**ದಾನಚಿಂತಾಮಣಿ ಅತ್ತಿಮಬ್ಬೆ**' ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ಡಿ.ವಿ. ಪರಮಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೬.೦೩.೨೦೦೩
ಸ್ಥಳ : ವಿದ್ಯಾರಣ್ಯ

(ಪಾರ್ವತೆಪ್ಪ ವೀ.ಪೂಜಾರ)
ಸಂಶೋಧಕರು

ಪರಿವಿಡಿ

೧

ಅಧ್ಯಯನದ ಅಗತ್ಯ ಮತ್ತು ಸ್ವರೂಪ

೧

ಅಧ್ಯಯನದ ಅಗತ್ಯ ಮತ್ತು ಸ್ವರೂಪ

ಮಹಿಚಕ್ರಕ್ಕಿದು ಚೋದ್ಯಮಲ್ತೆನಿಸುವಂತಾರ್ತೀವುದುಂ ಕಂಡು ಸ
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೇಂ ಚೋದ್ಯಮೀಗಳ್ ಜಗ
ನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿ
ಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣಮಂ ಶ್ರೀ ದಾನ ಚಿಂತಾಮಣೀ [೧]

ಅತ್ತಿಮಬ್ಬೆ ತನ್ನ ಆದರ್ಶದ ಗುಣಗಳಿಂದ ಜಗತ್ತಿನಲ್ಲಿಯೇ ಬಹು ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾಳೆ. ನಾನಾ ಗುಣಗಳು ಅವಳ ಸ್ವಭಾವದಲ್ಲಿವೆಯಾದರೂ ದಾನಗುಣವೇ ಅವುಗಳಲ್ಲಿ ಹಿರಿದಾಗಿರುವುದು. ಅತ್ತಿಮಬ್ಬೆಯ ಅದ್ಭುತವಾದ ವ್ಯಕ್ತಿತ್ವವನ್ನು ಹೇಳುವಾಗ ರನ್ನ ಕವಿಯು "ನಿಸ್ಪೃಹರುಂ ಬಣ್ಣಿಪರಲ್ತೆ" ಎಂದು ತುಂಬು ಮನಸ್ಸಿನಿಂದ ಹೇಳಿದ್ದಾನೆ.

ಅ. ಅಧ್ಯಯನದ ಅಗತ್ಯ

ಅತ್ತಿಮಬ್ಬೆಯಿಂದ ರನ್ನ ಕವಿ ಬಹಳವಾಗಿ ಉಪಕೃತನಾಗಿದ್ದಾನೆಂದು ಅವನ ಕೃತಿಯಿಂದ ತಿಳಿಯುತ್ತದೆ. ಆದರೆ ರನ್ನನು ಯಾವ ಅವಧಿಯಲ್ಲಿ ಅತ್ತಿಮಬ್ಬೆಯಿಂದ ಸಹಾಯವನ್ನು ಪಡೆದುಕೊಂಡಿದ್ದನು ಎಂಬುದು ಸ್ಪಷ್ಟವಾಗಿಲ್ಲ. ಆದರೂ ಡಾ. ಹಂಪನಾ ಅವರು ಈ ವಿಷಯಕ್ಕೆ ಸಂಬಂಧಪಟ್ಟು ಒಂದು ಊಹೆಯನ್ನು ಮಾಡುತ್ತಾರೆ. ಈಗ ಅದನ್ನೇ ಆಧಾರವನ್ನಾಗಿ ಇಟ್ಟುಕೊಳ್ಳಬಹುದು. "ರನ್ನನು ಅತ್ತಿಮಬ್ಬೆಯ ಆಶ್ರಯಕ್ಕೆ ಬಂದದ್ದು ಯಾವ ಇಸವಿಯಲ್ಲಿ ಎಂಬುದು ಖಚಿತವಾಗಿಲ್ಲವಾದರೂ ಕ್ರಿ.ಶ. ೯೨೮ರ ವೇಳೆಗೆ ರನ್ನನು ಅತ್ತಿಮಬ್ಬೆಯ ಪರಿಚಯವಲಯಕ್ಕೆ ಪ್ರವೇಶಿಸಿರಬಹುದು."[೨]

ರನ್ನನು ಸು. ೯೬೯ರಲ್ಲಿ ಸವದತ್ತಿಯ ರಟ್ಟರ ಕಾರ್ತವೀರ್ಯ ರಾಜನ ಸೇನೆಯಲ್ಲಿ ಸೇರಿಕೊಂಡಿದ್ದನು. ತನ್ನ ಭವಿಷ್ಯ ಇನ್ನೂ ಉತ್ತಮವಾಗಬೇಕೆಂಬ ವಾಂಛೆಯಿಂದ ಸು. ೯೭೧ರಲ್ಲಿ ಗಂಗರ ಪಡೆಗಳಲ್ಲಿ ಸೇರಿಕೊಂಡನು. ಆದರೆ ಈ ಕಾಲ ಗಂಗರಿಗೆ ಸುಖಮಯವಾಗಿರಲಿಲ್ಲ. ಗಂಗರು ಅವಸರ್ಪಿಣಿ ಕಾಲದಲ್ಲಿದ್ದರು. ಈ ಸಮಯದಲ್ಲಿ ರನ್ನನಿಗೆ ಆದ ದೊಡ್ಡ ಲಾಭವೆಂದರೆ ಚಾವುಂಡರಾಯನ ಸ್ನೇಹ. ಇವರಿಬ್ಬರೂ ಆತ್ಮೀಯ ಮಿತ್ರರಾಗಿರುವ ಕಾರಣ ಇಬ್ಬರು ಜತೆಯಾಗಿಯೇ ಬೆಳಗೊಳದಲ್ಲಿ ಜೈನಾಗಮವನ್ನು ಅಭ್ಯಾಸ ಮಾಡಿದರು. ರನ್ನನಿಂದ ಚಾವುಂಡರಾಯನು, ಚಾವುಂಡರಾಯನಿಂದ ರನ್ನನು ಪ್ರಭಾವಿತರಾದರು. ಇದೇ ಸಂದರ್ಭದಲ್ಲಿ ಸು. ೯೮೨ರಲ್ಲಿ ಅತ್ತಿಮಬ್ಬೆಯು ಗೊಮ್ಮಟನ ದರ್ಶನಕ್ಕಾಗಿಯೇ ಬೆಳ್ಗೊಳಕ್ಕೆ ಬಂದಿದ್ದಾಳೆ. ಅವಳನ್ನು ಗೌರವದಿಂದ ಬರಮಾಡಿಕೊಂಡಿರುವನಲ್ಲದೆ, ರನ್ನನನ್ನು ಅತ್ತಿಮಬ್ಬೆಯ ಆಶ್ರಯಕ್ಕೆ ಬಿಟ್ಟಿದ್ದಾನೆ.[೩]

ಈ ರೀತಿಯಾಗಿ ರನ್ನಮಹಾಕವಿಯು ಅತ್ತಿಮಬ್ಬೆಯ ಸಾಧನೆಯನ್ನು ಕಣ್ಣಾರೆಕಂಡಿದ್ದಾನೆ. ಅಲ್ಲದೆ ಅವಳಿಂದ ಉಪಕೃತನಾಗಿರುವದರಿಂದ ಪ್ರತಿ ಉಪಕಾರ ಮಾಡಬೇಕೆಂಬ ಮನಸ್ಸು ರನ್ನ ಕವಿಗಿದೆ. ಆದುದರಿಂದಲೇ ಅವಳ ಚರಿತ್ರೆಯನ್ನು ಅಜಿತ ತೀರ್ಥಕರ ಪುರಾಣ ಕೃತಿಯ ಪ್ರಥಮ ಮತ್ತು ಹನ್ನೆರಡನೆಯ ಆಶ್ವಾಸದಲ್ಲಿ ವರ್ಣಿಸಿ ಅದು ಶಾಶ್ವತವಾಗಿರುವಂತೆ ಮಾಡಿದ್ದಾನೆ. ಅತ್ತಿಮಬ್ಬೆಯ ಶುಭಚರಿತ್ರೆಯನ್ನು ಮೊದಲು ಹೇಳಿದವನು ಕವಿ ರನ್ನನಾಗಿದ್ದಾನೆ. ಅತ್ತಿಮಬ್ಬೆಯ ಅಧ್ಯಯನಕ್ಕೆ ನಮಗೆ ದೊರಕುವ ಮುಖ್ಯ ಆಕರ ಸಾಮಗ್ರಿಗಳಲ್ಲಿ

೧. ಲಕ್ಕುಂಡಿಯ ಶಾಸನ

೨. ರನ್ನ ಕವಿಯ ಅಜಿತಪುರಾಣ

೩. ಬ್ರಹ್ಮಶಿವ ಕವಿಯ ಪದ್ಯಗಳು (ಸಮಯ ಪರೀಕ್ಷೆ)

೪. ಪೊನ್ನ ಕವಿಯ ಶಾಂತಿಪುರಾಣ ಇವು ಪ್ರಮುಖವಾಗಿವೆ.

ಅತ್ತಿಮಬ್ಬೆಯ ಚರಿತ್ರೆಯನ್ನು ಮೊದಲು ತಿಳಿಸಿಕೊಟ್ಟವನು ರನ್ನ ಕವಿಯೇ ಆಗಿದ್ದಾನೆ. ಕನ್ನಡನಾಡಿನ ಕಲಾಕ್ಷೇತ್ರದಲ್ಲಿ ಶಾಂತಲೆ ಪ್ರಸಿದ್ಧಿಯಾಗಿರುವಂತೆ ದಾನ, ಧಾರ್ಮಿಕ ಕ್ಷೇತ್ರದಲ್ಲಿ ಅತ್ತಿಮಬ್ಬೆಯು ಪ್ರಖ್ಯಾತಿ ಪಡೆದವಳಾಗಿದ್ದಾಳೆ.

೨೧ನೆಯ ಶತಮಾನದ ಇಂದಿನ ವೈಜ್ಞಾನಿಕ ಯುಗದಲ್ಲಿ ''ದಾನ''ದಂತಹ ಪ್ರಕ್ರಿಯೆ ಹೃದಯದಿಂದ, ಬುದ್ಧಿಯಿಂದ ಬರಲಾರದೇ ಕೇವಲ ವ್ಯವಹಾರಿಕವಾಗಿ ಬಂದಿರುವುದು ಮನುಕುಲದ ಒಂದು ದುರಂತವೇ ಸರಿ. ಅನ್ಯಾಯ, ಅಪ್ರಾಮಾಣಿಕತನ, ಅಸತ್ಯ, ಅಕ್ರಮ, ಸ್ವಾರ್ಥಗಳೇ ತುಂಬಿರುವ ಈ ಕಾಲದಲ್ಲಿ ''ದಾನ'' ದಂತಹ ಮೌಲ್ಯ ನಶಿಸಿಹೋಗುತ್ತಿರುವ ಈ ಸಂದರ್ಭದಲ್ಲಿ ''ದಾನ ಚಿಂತಾಮಣಿ ಅತ್ತಿಮಬ್ಬೆ''ಯ ಅಧ್ಯಯನ ಅತ್ಯಗತ್ಯವಾಗಿದೆ.

ಅತ್ತಿಮಬ್ಬೆಯ ಕುರಿತು ಮೊಟ್ಟಮೊದಲು ಹೊಸಗನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿಕೊಟ್ಟ ಕೀರ್ತಿ ಪ್ರೊ. ತೀ.ನಂ.ಶ್ರೀಕಂಠಯ್ಯನವರಿಗೆ ಸಲ್ಲುತ್ತದೆ. ಲಕ್ಕುಂಡಿಯ ಶಾಸನ ಮತ್ತು ರನ್ನ ಕವಿಯ ಅಜಿತಪುರಾಣವನ್ನು ಆಧರಿಸಿ ಬರೆದ ಅವರ ಲೇಖನ "ದಾನ ಚಿಂತಾಮಣಿ ಅತ್ತಿಮಬ್ಬೆ" ಎಂಬುದು. ಅದು ಸಮಾಲೋಕನವೆಂಬ ಲೇಖನ ಸಂಕಲನದಲ್ಲಿ ಪ್ರಕಟಗೊಂಡಿದೆ. 'ಸಮಾಲೋಕನ' ಕನ್ನಡ ಕವಿಕಾವ್ಯ ಮಾಲೆಯಿಂದ ಪ್ರಕಟಗೊಂಡಿದೆ. ಪ್ರಕಾಶಕರು - ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು. ೧೯೫೪ರಲ್ಲಿ ಮುದ್ರಣಗೊಂಡಿದೆ.

'ಸಮಾಲೋಕನ'ವು ತೀ.ನಂ.ಶ್ರೀ.ಯವರ ಲೇಖನಗಳ ಸಂಕಲನವಾಗಿದೆ. ಹಳಗನ್ನಡ ಹೊಸಗನ್ನಡದ ಕೃತಿ, ಕವಿತೆ, ಛಂದಸ್ಸು, ಷಟ್ಪದಿ ಮೊದಲಾದ ವಿಷಯಗಳನ್ನು ಲೇಖನಗಳು ಒಳಗೊಂಡಿದೆ. ಅದರಲ್ಲಿ ೧೪ನೆಯ ಲೇಖನವೇ "ದಾನ ಚಿಂತಾಮಣಿ ಅತ್ತಿಮಬ್ಬೆ" ಎಂಬುದಾಗಿದೆ. ಇದು ೨೯.೪.೧೯೪೪ರಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ಮೊದಲು ಪ್ರಕಟವಾಗಿದೆ. ಶಾಸನ ಮತ್ತು ಅಜಿತ ಪುರಾಣದ ಪದ್ಯಗಳನ್ನಾಧರಿಸಿ ಬರೆದ ಸಮಾಲೋಕನದ ಈ ಲೇಖನ ಒಂದು ಸ್ತುತ್ಯ ಕಾರ್ಯವಾಗಿದೆ. ಲೇಖನದಲ್ಲಿಯ ಒಂದು ವಿಷಯ ಈ ಕೆಳಗಿನಂತಿದೆ.

> "ಅತನುವಿರೋಧಮುಂ ತನುವಿರೋಧಮುಂ ಒಪ್ಪುಗಂ
> ಅತ್ತಿಮಬ್ಬೆಯೊಳ್ !" ಈ ವಿರೋಧಾಭಾಸದ ಉಕ್ತಿ
> ರನ್ನ ಕವಿಯದು. ಅವನು "ಅಜಿತ ಪುರಾಣ"ವನ್ನು ರಚಿ
> ಸಿದ್ದು ಅತ್ತಿಮಬ್ಬೆಯ ಆಶ್ರಯದಲ್ಲಿ - ಕ್ರಿ.ಶ. ೯೯೩ರಲ್ಲಿ.
> ಪ್ರದಾತೃಗಳನ್ನು ಉತ್ಸಾಹದಿಂದ ಹೊಗಳುವುದು ಕವಿಕುಲಕ್ಕೆ
> ಬಂದ ಪದ್ಧತಿಯೆಂಬುದು ನಿಜ. ರನ್ನನು ಪ್ರಶಂಸಾಪಂಡಿತ
> ನೆಂಬುದು ನಿಜ. ಆದರೂ ಅತ್ತಿಮಬ್ಬೆಯನ್ನು ಕುರಿತು
> ಅಜಿತಪುರಾಣದ ಮೊದಲನೆಯ ಮತ್ತು ಕೊನೆಯ ಆಶ್ವಾಸಗಳಲ್ಲಿ
> ಬಂದಿರುವ ಮಾತುಗಳು ಕೇವಲ ವೇತನಕ್ಕಾಗಿ ರನ್ನನು
> ಸಲ್ಲಿಸಿದ ಪ್ರತಿಫಲವಲ್ಲ. ಆಕೆಯ ದಾನಗುಣ ಮಾತ್ರವ
> ಲ್ಲದೆ ದಾನಗುಣ ಮಾತ್ರವೇ ಧರ್ಮನಿಷ್ಠೆಯೂ
> ಶೀಲವ್ರತವೂ ಸದಾಚಾರಣೆಯೂ ರನ್ನನ ಗೌರವವನ್ನು
> ಗಳಿಸಿವೆ. ಆಕೆಯಲ್ಲಿ ತಪಸ್ವಿನಿಯ ತೇಜಸ್ಸನು ಕಂಡು
> ಭಕ್ತಿ ಭಾವದಿಂದ ತನ್ನ ಸ್ತುತಿ ಮಾಂತ್ತಂಗ ಮಾಲಿಕೆಯನ್ನು
> ಅರ್ಪಿಸಿದ್ದಾನೆ. ..... ಈ ಕೆಲವು ಪದ್ಯಗಳನ್ನು ಗಮನಿಸಬಹುದು.
> ಒಡಲನುಪವಾಸದಿಂ ತಂ

ನ್ನೊಡಮೆಯನವರತ ದಾನದಿಂ ತವಿಸಿ ಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆರರೊಳರೇ|| (೧.೫೧)

(ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವನಿಗೆ ಪಡೆವಳ ತೈಲ (ಪ) ನೆಂದೂ ಹೆಸರು. ತಂದೆಯಂತೆ ಅವನು ಚಕ್ರವರ್ತಿಯ ಸೇನಾಪತಿಯಾಗಿದ್ದನು)[೪]

ಹೀಗೆ ರನ್ನನ ಅಜಿತಪುರಾಣದ ಕಾವ್ಯ ಮತ್ತು ಲಕ್ಕುಂಡಿಯ ಶಾಸನಗಳನ್ನಾಧರಿಸಿ ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲ ಬಾರಿಗೆ ದಾನಚಿಂತಾಮಣಿ ಅತ್ತಿಮಬ್ಬೆ''ಯ ಕುರಿತಾಗಿ ಲೇಖನವೊಂದನ್ನು ಪ್ರೊ. ತೀ.ನಂ. ಶ್ರೀಕಂಠಯ್ಯನವರು ರಚಿಸಿದ್ದಾರೆ.

ತೀ.ನಂ.ಶ್ರೀಯವರ ತರುವಾಯ ಕನ್ನಡಿಗರಿಗೆ ಅತ್ತಿಮಬ್ಬೆಯ ಜೀವನ ಚಿತ್ರಣವನ್ನು ತೋರಿಸಿದ ಮಹಾನುಭಾವರೆಂದರೆ ಶ್ರೀ ಜಿ.ಬ್ರಹ್ಮಪ್ಪನವರು. ಇವರು ಅತ್ತಿಮಬ್ಬೆಯ ಕುರಿತಾಗಿ ದಾನಚಿಂತಾಮಣಿಯೆಂಬ ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ. ಮೊದಲ ಮುದ್ರಣ ೧೯೬೪ರಲ್ಲಿ ಆಗಿದೆ. ಇದೇ ಕೃತಿ ಜೂನ್ ತಿಂಗಳಿನ ೧೯೬೬ರಲ್ಲಿ ಡಾ.ಕಮಲಾ ಹಂಪನಾ ಅವರ ನುಡಿಯ ತೋರಣದೊಂದಿಗೆ ದ್ವಿತೀಯ ಮುದ್ರಣವನ್ನು ಕಂಡಿದೆ. ಸಾವಿರ ವರುಷಗಳ ಹಿಂದೆ ಬದುಕಿಬಾಳಿದ ಅತ್ತಿಮಬ್ಬೆಯನ್ನು ಶ್ರೀ ಜಿ.ಬ್ರಹ್ಮಪ್ಪನವರು ಐತಿಹಾಸಿಕ ಕಾದಂಬರಿ 'ದಾನ ಚಿಂತಾಮಣಿಯ ಮೂಲಕ ಮತ್ತೊಮ್ಮೆ ಸಜೀವಗೊಳಿಸಿದ್ದಾರೆ. ಈ "ದಾನ ಚಿಂತಾಮಣಿ"ಯೆಂಬ ಐತಿಹಾಸಿಕ ಕಾದಂಬರಿ ೧೯೬೬ - ೬೭ರ ಅವಧಿಯಲ್ಲಿ ೧೯೬೬ - ೬೭ನೆಯ ಸಾಲಿಗೆ ಪಿ.ಯು.ಸಿ.ಗೆ ಪಠ್ಯ ಪುಸ್ತಕವಾಗಿತ್ತು.[೫]

"ನಾಗಮಯ್ಯನ ಹಿರಿಯರೆಲ್ಲ ವೇದ ವೇದಾಂಗ
ಪಾರಂಗತರಾದ ಕೌಂಡಿನ್ಯ ಗೋತ್ರದ ಬ್ರಾಹ್ಮಣರು.
ನಾಗಮಯ್ಯನಿಗೂ ವೈದಿಕ ವಿದ್ಯೆ ಕರತಲಾ ಮಲಕ
ವಾಗಿತ್ತ. ಜಿನಚಂದ್ರಮುನಿಗಳ ಪ್ರಭಾವಕ್ಕೊಳ
ಗಾಗಿ ಯಜ್ಞ ಯಾಗಾದಿಗಳನ್ನು ತೊರೆದು ನಾಗಮಯ್ಯ
ಜೈನನಾದನು. ದೇವೇಂದ್ರ ಮುನಿಗಳು ಅತ್ಯ
ಪಂಪನ ತಂದೆಯಾದ ಅಭಿರಾಮ ದೇವರಾಯ
ನನ್ನು ಜೈನನನ್ನಾಗಿ ಮಾಡಿದರು. ಅದೇ ಕಾಲಕ್ಕೆ
ಜಿನಚಂದ್ರು ನಾಗಮಯ್ಯನ ಮೇಲೆ ಅಹಿಂಸೆಯ
ಬಲೆ ಬೀಸಿ ಮನವೊಲಿಸಿ ಈತನಿಗೆ ಜೈನದೀಕ್ಷೆ

ಕೊಟ್ಟರು. ಅಂದಿನಿಂದ ನಾಗಮಯ್ಯನ ನಂಟರು
ಇಷ್ಟರು ಒಬ್ಬರಾದ ಮೇಲೊಬ್ಬರಂತೆ ಜಿನಧರ್ಮ
ಕ್ಕೆ ಶರಣಾಗುತ್ತ ಬಂದರು. ವೆಂಗಿ ವಿಷಯದ
ಕಮ್ಮೆನಾಡು ಅಹಿಂಸಾ ಧರ್ಮದಾಗರವಾಯಿತು!
ಯಜ್ಞ ಕುಂಡಗಳೆಲ್ಲ ದಯಾವೃಕ್ಷಕ್ಕೆ ಕುಂಡಗಳಾ
ದವು. ಯಜ್ಞ ಸ್ತಂಭಗಳೆಲ್ಲ ಅಹಿಂಸಾ ಧ್ವಜ
ಸ್ತಂಭಗಳಾದವು.''[೬]

ಈ ರೀತಿಯಾಗಿ ಸುಮಾರು ಒಂದು ಸಾವಿರ ವರುಷಗಳ ಹಿಂದೆ ರನ್ನರ ಕಾವ್ಯನಾಯಕಿಯಾಗಿರುವ ಅತ್ತಿಮಬ್ಬೆ ಈ ಶತಮಾನದ ಐತಿಹಾಸಿಕ ಕಾದಂಬರಿಗೆ ನಾಯಕಿಯಾದಳು.

ಕರ್ನಾಟಕ ಜೈನ ಸೇವಾ ಪರಿಷತ್, ಹುಬ್ಬಳ್ಳಿ - ಧಾರವಾಡದಿಂದ ೧೯೯೩ರಲ್ಲಿ ''ದಾನಚಿಂತಾಮಣಿ ಅತ್ತಿಮಬ್ಬೆ'' ಎಂಬ ಪುಸ್ತಕ ಪ್ರಕಟಗೊಂಡಿದೆ. ಈ ಪುಸ್ತಕದ ಲೇಖಕರು ಡಾ. ಎಸ್.ಪಿ.ಪಾಟೀಲ ಮತ್ತು ಶ್ರೀ ಪ್ರಶಾಂತಕುಮಾರ ನಾಲವಾರ ಎಂಬುವರು.

''ದಾನ ಚಿಂತಾಮಣಿ ಅತ್ತಿಮಬ್ಬೆ''ಯು ಅತ್ತಿಮಬ್ಬೆಯ ವ್ಯಕ್ತಿತ್ವದ ಸಂಗ್ರಹ ರೂಪವಾಗಿದೆ. ಕಾವ್ಯ, ಶಾಸನ, ದಂತಕಥೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ ಕೃತಿ ಇದಾಗಿದೆ. ಡಾ. ವೀರಣ್ಣ ರಾಜೂರ ಇವರ ಮುನ್ನುಡಿಯೊಂದಿಗೆ ಈ ಕೃತಿ ಪ್ರಕಟವಾಗಿದೆ.

''ಹೀಗೆ ಅತ್ತಿಮಬ್ಬೆಯು ಮಂತ್ರಿಯ ಸೊಸೆಯಾಗಿ,''
ಸೇನಾಪತಿಯ ಪತ್ನಿಯಾಗಿ ಗಂಡನ ಮನೆ ಸೇರಿದಳು.
ತನ್ನ ತಂಗಿ ಗುಂಡಮಬ್ಬೆಯೊಂದಿಗೆ ಹುಟ್ಟಿದ
ಮನೆಯ ವಾತಾವರಣದಂತೆಯೇ ಇಲ್ಲಿಯೂ
ಧರ್ಮಶ್ರದ್ಧೆ, ಸ್ವಾಮಿನಿಷ್ಠೆ, ಶೌರ್ಯಗಳು, ಪ್ರೀತಿ
ವಿಶ್ವಾಸ, ಆತ್ಮೀಯತೆಗಳು ತುಂಬಿತುಳುಕುತ್ತಿದ್ದವು.
ತಂದೆಯ ಮನೆಯಲ್ಲಿ ಮೊಳೆತಿದ್ದ ಅವಳ ಧರ್ಮ
ಸಾಹಿತ್ಯಾಭಿಮಾನ ಹಾಗೂ ದಾನಗುಣಗಳು ಹಬ್ಬಲು
ಬೇಕಾದ ಅವಕಾಶಗಳು ಅವಳಿಗೆ ಪತಿಯ ಮನೆಯಲ್ಲಿ
ಲಭ್ಯವಾದವು. ಇದೇ ಸಮಯದಲ್ಲಿ ಅವಳಿಗೊಂದು
ಗಂಡುಮಗುವೂ ಆಯಿತು. ಮಗುವಿಗೆ ಅಣ್ಣಿಗದೇವ

ಎಂದು ಹೆಸರಿಡಲಾಯಿತು. ಮಗುವಿನ ಆಟ ತೊದಲ್ನುಡಿ,
ತಪ್ಪೆಜ್ಜೆಗಳಿಂದ ಮನೆ ಆನಂದದ ಕಡಲಾಯ್ತು, ನಂದನ
ವನವಾಯ್ತು. ಅತ್ತಿಮಬ್ಬೆಯು ಹುಟ್ಟಿದ ಮನೆ ಹಾಗೂ
ಕೊಟ್ಟ ಮನೆಗಳೆರಡರ ವಿವರವನ್ನು ರನ್ನ ಕವಿ ಒಂದೇ
ಪದ್ಯದಲ್ಲಿ ಸುಂದರವಾಗಿ ಸಂಗ್ರಹಿಸಿದ್ದಾನೆ.

''ಜಿನಪದಪಂಕಜ ಭ್ರಮರನೆಂಬ ನೆಗಳ್ತೆಯನಾಳ್ದ ಮಲ್ಲಪ
ಯ್ಯನ ನೆಗರ್ದಿಪ್ಪಕಬ್ಬೆಯ ಮಗಳ್ ಸಚಿವೋತ್ತಮನಪ್ಪ ಧಲ್ಲಪ
ಯ್ಯನ ಸೊಸೆ ನಾಗದೇವನ ಕುಲಾಂಗನೆ ತೈಲನ ತಾಯ್ ಜಸಕ್ಕೆಭಾ
ಜನ ಮೆನಿಪ್ಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತಮಿರ್ದಳ್ ''[೭]

ಡಾ. ಕಮಲಾ ಹಂಪನಾ ಅವರು ಗುಣದಂಕಕಾರ್ತಿ ಅತ್ತಿಮಬ್ಬೆ ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ೧೯೯೪ರಲ್ಲಿ ಶ್ರೀ ಪದ್ಮಾಂಬ ಜೈನ ಮಹಿಳಾ ಸಮಾಜ ಚಿಕ್ಕಪೇಟೆ, ತುಮಕೂರುನಿಂದ ಪ್ರಕಟಗೊಂಡಿದೆ.

ಅತ್ತಿಮಬ್ಬೆಯ ಸಹಸ್ರಮಾನೋತ್ಸವವನ್ನು ೧೯೯೪ರ ಮೇ ತಿಂಗಳು ೧೪, ೧೫ರಂದು ರಾಷ್ಟ್ರಮಟ್ಟದಲ್ಲಿ ತುಮಕೂರಿನ ಶ್ರೀ ಪದ್ಮಾಂಬಾ ಜೈನ ಮಹಿಳಾ ಸಮಾಜ ಹಮ್ಮಿಕೊಂಡಿತ್ತು. ಈ ರಾಷ್ಟ್ರೀಯ ಸಮಾವೇಶಕ್ಕೆ ಅತ್ತಿಮಬ್ಬೆಯನ್ನು ಕುರಿತು ಒಂದು ಕೃತಿಯನ್ನು ಬರೆದುಕೊಟ್ಟವರು ಡಾ.ಕಮಲಾ ಹಂಪನಾ.

''ಹೊರಗೆ ತೇಜಸ್ವಿನಿಯಾಗಿ, ಒಳಗೆ ತಪಸ್ವಿನಿಯಾಗಿ''
ಒಂದು ಉದಾತ್ತ - ಉನ್ನತ ಪಾರದರ್ಶಕ ಜೀವನವನ್ನು
ಬಾಳಿದ ಅತ್ತಿಮಬ್ಬೆಯ ಬದುಕೇ ಒಂದು ಬೃಹತ್
ಕಾವ್ಯ. ಸ್ತ್ರೀ ರತ್ನಗಳಲ್ಲಿ ಆಕೆ ನಾಯಕ ರತ್ನ. ಆತ್ಮ
ಕಲ್ಯಾಣದೊಳಗೆ ಲೋಕ ಕಲ್ಯಾಣವನ್ನೂ ಸಾಧಿಸಿದ ಈ
ವೀರ ವೀರಾಗಿನಿ ಅತ್ತಿಮಬ್ಬೆಯ ತುಂಬು ಜೀವನ ಇಂದಿಗೂ
ಆದರ್ಶವೆನಿಸಿದೆ. ಸಾಗರ ಸದೃಶವಾದ ಮಹಿಮಾನ್ವಿತ
ಸಾರ್ಥಕ ಜೀವನವನ್ನು, ಪದ್ಮ ಪತ್ರದ ಜಲಬಿಂದುವಿನಂತೆ
ಸ್ಥಿತಪ್ರಜ್ಞಳಾಗಿ ಅನುಭಾವಿಯಾಗಿ ಬದುಕಿದ ಅತ್ತಿಮಬ್ಬೆಯ
ಸ್ಮರಣೆ ಮಾನವ ಜನಾಂಗಕ್ಕೆ ಸದಾ ಸ್ಫೂರ್ತಿಯಾಗುವಂತಹದು.
ಕ್ರಿ.ಶ. ೯೯೩ರ ನವೆಂಬರ್ ತಿಂಗಳಲ್ಲಿ ರನ್ನ ಕವಿಯಿಂದ ಅಜಿತ
ಪುರಾಣ ಕಾವ್ಯವನ್ನು ಬರೆಸಿದ ಅತ್ತಿಮಬ್ಬೆಯ ಸಹಸ್ರಮಾನೋತ್ಸ

ವವನ್ನು ಕರ್ನಾಟಕದ ಆದ್ಯಂತ ಒಂದು ನಾಡಹಬ್ಬವಾಗಿ
ಆಚರಿಸುವದರಲ್ಲಿ ಅರ್ಥವಿದೆ. ಔಚಿತ್ಯವಿದೆ. ಮಿಗಿಲಾಗಿ
ಅದು ಕನ್ನಡಿಗರ ಕರ್ತವ್ಯವೂ ಆಗಿದೆ.''[೮]

ಅತ್ತಿಮಬ್ಬೆಯ ಒಂದು ಸ್ಮೃತಿ ಚಿತ್ರವನ್ನು ಈ ಕೃತಿಯಲ್ಲಿ ಡಾ.ಕಮಲಾ ಹಂಪನಾ ಕೊಟ್ಟಿದ್ದಾರೆ. ಕೃತಿಗೂ ಅತ್ತಿಮಬ್ಬೆಯ ಬಿರುದನ್ನೇ ಕೊಟ್ಟಿದ್ದಾರೆ.

ಪದ್ಮಾ ಪ್ರಕಾಶನ ಗದಗ ಇವರು ೧೯೯೪ರಲ್ಲಿ 'ಜಿನಧರ್ಮ ದೇವತೆ'' ಎಂಬ ಕೃತಿಯನ್ನು ಪ್ರಕಟಪಡಿಸಿದ್ದಾರೆ. ಈ ಕೃತಿಯ ಲೇಖಕರು ಕೆ.ಬಿ. ತಳಗೇರಿ ಎಂಬುವವರು. ಕೃತಿಯು ಅತ್ತಿಮಬ್ಬೆಯ ಚರಿತ್ರೆಯನ್ನು ಒಳಗೊಂಡಿದೆ.

'ಗುಂಡಮಬ್ಬೆ ''ಪತಿಯಿಲ್ಲದೆ ಬಾಳಿನಲ್ಲಿ ನಾನು ಬದುಕಲಾರೆ'
ಆದ್ದರಿಂದ ನಾನು ಪತಿಯೊಂದಿಗೆ ಸಹಗಮನ ಮಾಡುತ್ತೇನೆ.
ಅಕ್ಕಾ ನನಗೆ ಅನುಮತಿಯನ್ನು ನೀಡು, ನಿನಗೆ ಮಗ
ಅಣ್ಣಿಗದೇವನಿದ್ದಾನೆ. ಅವನ ಪಾಲನೆ ಪೋಷಣೆ ನಿನ್ನ
ಕರ್ತವ್ಯ. ಕಾರಣ, ನನಗೆ ಸತಿಹೋಗಲು ಅನುಮತಿಸು
ಎಂದು ಬದ್ಧಾಂಜಲಿಯಾಗಿ ಬೇಡಿಕೊಂಡಳು.''

''ನಿನಗೆ ಮಗಂ ಜಗತ್ತಿಲಕ ನಿರ್ದಪನಕ್ಕ ಮಗಂ ಸಮರ್ಥನ
ಪ್ಪಿನಮಿರು ನಾಗದೇವ ನೊಡನಾಂ ಬೆಸ (ಕೇ) ಳ್ದಪೆನೆಂದು ಬೇಡಿಕೊಂ
ಡಿನಿಯನನಪ್ಪಿಕೊಂಡು ಚಿತಮಾಂಗೆ ಚಿತಾಗ್ನಿಯೊಳಣ್ಮಿ ಸತ್ತಸ
ಜ್ಜನಿಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು ಗುಂಡುಮಬ್ಬೆಯಾ. [೯]

ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಉಪನ್ಯಾಸ ಗ್ರಂಥಮಾಲೆಯ ೪೪೫ನೆಯ ಚಿಕ್ಕ ಹೊತ್ತಗೆಯಾಗಿ ೧೯೯೫ರ ಮೇ ತಿಂಗಳಿನಲ್ಲಿ ಡಾ.ಮಧು ವೆಂಕಾರೆಡ್ಡಿಯವರಿಂದ ''ಅತ್ತಿಮಬ್ಬೆ'' ಎಂದು ಪ್ರಕಟಗೊಂಡಿದೆ.

ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ೪೦೬ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರ ಬೆಳಗಾಂವ ಜಿಲ್ಲೆಯ ''ಹಾಲಗಾ'' ಎಂಬ ಗ್ರಾಮದಲ್ಲಿ ೧೯೯೫ರ ಫೆಬ್ರವರಿ ೨ರಂದು ನಡೆದಿದ್ದಿತು. ಆ ಸಂದರ್ಭದಲ್ಲಿ ''ಅತ್ತಿಮಬ್ಬೆ''ಯನ್ನು ಕುರಿತು ನೀಡಿದ ಭಾಷಣದ ರೂಪವೇ ''ಅತ್ತಿಮಬ್ಬೆ'' ಎಂಬ ಕಿರು ಪುಸ್ತಕ.

''ಅತ್ತಿಮಬ್ಬೆಯ ಅಜ್ಜ ನಾಗಮಯ್ಯ ಈತನ ಹೆಂಡತಿ
ನಾಗಿಯಬ್ಬೆ. ನಾಗಮಯ್ಯ ಕೌಂಡಿನ್ಯ ಗೋತ್ರದ ಬ್ರಾಹ್ಮಣ

ನಾಗಿದ್ದನು. ಕಾಲಾನುಕ್ರಮದಲ್ಲಿ ಜೈನಾಚಾರ್ಯರಾದ ಜಿನಚಂದ್ರರ ಪ್ರಭಾವದಿಂದ ಜಿನಧರ್ಮ ದೀಕ್ಷೆ ಪಡೆದು ಅರ್ಹದ್ಭಕ್ತನಾದನು. ಈ ಜೈನ ಬ್ರಾಹ್ಮಣನಿಗೆ ಮಲ್ಲಪಯ್ಯ ಮತ್ತು ಪುನ್ನಮಯ್ಯ ಎಂಬ ಇಬ್ಬರು ವೀರಪುತ್ರರು. ಮಲ್ಲಪನನ್ನು ಕವಿ ಪೊನ್ನ ಪುನ್ನಮಯ್ಯನನ್ನು ಕವಿ ರನ್ನ ಕೀರ್ತಿಸಿದುದು ಹೀಗೆ.

ಮಲಪ್ಪನಲ್ಲದೊಂ ಪ್ರಭುವೆ
ಮಲ್ಲಪನಲ್ಲದೊನತ್ಯುದಾತ್ತನೇ
ಮಲ್ಲಪನಲ್ಲದೊಂ ಶುಚಿಯೆ
ಮಲ್ಲಪನಲ್ಲದೊನಿಷ್ಟ ದಾನಿಯೇ
ಮಲ್ಲಪನಲ್ಲದೊಂ ಗುಣಿಯೆ
ಮಲ್ಲಪನಲ್ಲದೊನೇಕವಾಕ್ಯನೇ
ಮಲ್ಲಪನಲ್ಲದೊಂ ಸ್ಥಿರನೆ
ಮಲ್ಲಪನಲ್ಲದೊನಾರ್ಯಪೂಜ್ಯನೆ"[೧೦]

ಈ ರೀತಿಯಾಗಿ ಭಾಷಣದ ರೂಪವೇ 'ಅತ್ತಿಮಬ್ಬೆ'ಯಾಗಿ ಹೊರಹೊಮ್ಮಿದೆ.

೧೯೯೫ರಲ್ಲಿ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಇವರು Attimabbe and Chalukyas ಎಂಬ ಇಂಗ್ಲೀಷ್ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಕೃತಿಯ ರಚನೆಗಾರರು ಡಾ.ಕಮಲಾ ಹಂಪನಾ ಅವರು.

ಈ ಕೃತಿಯಲ್ಲಿ ಡಾ.ಕಮಲಾ ಹಂಪನಾ ಅವರು ಅತ್ತಿಮಬ್ಬೆಯ ಜೀವನ ಮತ್ತು ಸಾಧನೆಗಳ ಕುರಿತು ಬರೆದಿದ್ದಾರೆ.

> "Attimabbe was at the helm of the affairs of the state, both cultural and political, during 980 and 1010 A.D., continuously for nearly a score and more years. Her association with the palace and the public, prints to her exalted position in the contemporary society, almost unequalled in history. She commanded a number of miraculous powers, by virate of which she not only enriched the glory of her ancestors and her religion, but also literally assisted the chalukyan kings, who were under the heavy obligations of Attimabbe and her family"[೧೧]

ರತ್ನತ್ರಯ ಪ್ರಕಾಶನ, ಮೈಸೂರಿನಿಂದ ''ಕವಿವರ ಕಾಮಧೇನು'' ಎಂಬ ಕೃತಿ ಪ್ರಕಟಗೊಂಡಿದೆ. ಇದರ ಕೃತಿಕಾರರು ಡಾ. ಹಂಪ ನಾಗರಾಜಯ್ಯ. ಪ್ರಕಟಗೊಂಡ ವರ್ಷ ಮಾರ್ಚ್ ೧೯೯೬. ಈ ಕೃತಿಯು ಹನ್ನೊಂದು ಅಧ್ಯಾಯಗಳನ್ನು ಹೊಂದಿದ್ದು, ಲಕ್ಕುಂಡಿಯ ಶಾಸನದ ಜತೆಗೆ ಗಾವರವಾಡ ಶಾಸನ ಮತ್ತು ಅಣ್ಣಿಗೇರಿಯ ಶಾಸನಗಳನ್ನು ಪರಿಶೀಲಿಸಿದೆ.

> ಈ ಅದ್ಭುತ ಮಹಿಮೆಗಳನ್ನು ಹೇಳುವಾಗ ಶಾಸನ ಕವಿಯೇ ''ಏವಣ್ಣಿಸುವೆಂ ಏವೇಳ್ವೆಂ'' ಎಂದು ಆಶ್ಚರ್ಯ ಸೂಚಿಸಿದ್ದಾನೆ. ಇದು ಆ ಕಾಲದ ಜನತೆ ಪಟ್ಟ ವಿಸ್ಮಯ ಭಾವದ ಅನುರಣದ ಧ್ವನಿ. ಸಮಕಾಲೀನ ಚಾಲುಕ್ಯ ಸಾಮ್ರಾಜ್ಯದ ಪ್ರಜಾಕೋಟಿ ಅತ್ತಿಮಬ್ಬೆಯ ವಿಚಾರದಲ್ಲಿ ಅತ್ಯಂತ ಪೂಜ್ಯಭಾವವನ್ನು ತಳೆಯಲು ಇಂತಹ ಸಂಗತಿಗಳು ಬಾಯ್ದೆರೆಯಲ್ಲಿ ಪಡೆದ ಉತ್ಪ್ರೇಕ್ಷೆಯೂ ಕಾರಣವಾಗಿದೆ. ಇದರ ಫಲವಾಗಿ ಆಕೆ ಜೀವಂತವಿರುವಾಗಲೇ ದೈವತ್ವದ ನೆಲೆಗೇರಿದ್ದಳು. ಚಕ್ರವರ್ತಿಗಳಿಂದ ಹಿಡಿದು ಸಾಮ್ರಾಜ್ಯದ ಪ್ರಜೆಗಳವರೆಗೆ, ಜಾತಿ ಮತ ವರ್ಣ ಲಿಂಗ ಬೇಧವಿಲ್ಲದೆ, ಎಲ್ಲರ ಕೈಗಳೂ ಮುಗಿದವು. ತಲೆಗಳು ಬಾಗಿದವು. ಮೇಲಿನ ಪವಾಡಗಳಲ್ಲಿ ಕೆಲವು ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಕಾರರಿಗೆ ಮುಖ್ಯವಾಗಿದೆ. ಅಲ್ಲದೆ ಈ ಮಹಿಮೆಗಳ ವಿಚಾರವಾಗಿ ಕೇಳಬೇಕಾದ ಪ್ರಶ್ನೆಗಳಿವೆ. ಕೆಲವು ಪವಾಡಗಳಂತೂ ಕೇವಲ ಕಾಲ್ಪನಿಕವಾಗಿರದೆ ಸತ್ಯಾಂಶದ ಛಾಯೆಯನ್ನು ಒಳಗೊಂಡಿದೆ.[೧೨]

'ದಾನ ಚಿಂತಾಮಣಿ ಅತ್ತಿಮಬ್ಬೆ' ಎಂಬ ಮರಾಠಿ ಕೃತಿಯನ್ನು ದಕ್ಷಿಣ ಭಾರತೀಯ ಜೈನ ಮಹಿಳಾ ಪರಿಷತ್, ಸಾಂಗಲಿಯವರು ಪ್ರಕಟಪಡಿಸಿದ್ದಾರೆ. ಇದು ಕನ್ನಡದಲ್ಲಿ ಎಸ್.ಪಿ. ಪಾಟೀಲರು ರಚಿಸಿದ ಕನ್ನಡ ದಾನ ಚಿಂತಾಮಣಿ ಅತ್ತಿಮಬ್ಬೆಯ ಮರಾಠಿ ಅನುವಾದಿತ ಕೃತಿಯಾಗಿದೆ. ಇದನ್ನು ಡಾ. ಬಾಬುರಾವ್ ಗಾಯಕವಾಡರು ಮರಾಠಿ ಭಾಷೆಗೆ ಅನುವಾದಿಸಿದ್ದಾರೆ.

ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರಿನಿಂದ ''ಅತ್ತಿಮಬ್ಬೆ'' ಎಂಬ ಕೃತಿ ಪ್ರಕಟಗೊಂಡಿದೆ. ಸಮೇತನಹಳ್ಳಿ ರಾಮರಾಯರು ರಚಿಸಿದ ಈ ಕೃತಿ ಕಾದಂಬರಿ ರೂಪವಾಗಿದೆ. ಈ ಕೃತಿ ಪ್ರಕಟಗೊಂಡ ವರ್ಷ ೧೯೯೮.

ಸಿಂಗಣನು ದೈನ್ಯವನ್ನು ನಟಿಸುತ್ತ ಕ್ಷಮೆಯನ್ನು ಯಾಚಿಸುವ
ಭಂಗಿಯಲ್ಲಿ ಬಗ್ಗಿ ಅತ್ತಿಮಬ್ಬೆಯನ್ನು ಹೊಡೆದುರುಳಿ
ಸಲೆಂದು ಬಲಗೈಯನ್ನು ಮುಷ್ಟಿಯಾಗಿ ಹಿಡಿದು ಮೇಲಕ್ಕೆ
ತ್ತಿದನು. ಅತ್ತಿಮಬ್ಬೆ ಅದರ ಸುಳುಹನ್ನು ತಿಳಿದು ಮಿಂಚಿನ
ವೇಗದಲ್ಲಿ ತನ್ನ ಎಡಗೈಯ ವಜ್ರ ಮುಷ್ಟಿಯಿಂದ ಎತ್ತಿದ
ಅವನ ಕಣ ಕೈಯನ್ನು ಹಿಡಿದು ತಿರುಚಿಬಿಟ್ಟಳು. ಸಿಂಗಣ
ಆ ನೋವನ್ನು ತಾಳಲಾರದೆ ಅಂಗತ್ತನಾಗಿ ನೆಲವನ್ನು ಕಚ್ಚಿದನು
ಅತ್ತಿಮಬ್ಬೆ ನೆಲಕ್ಕೆ ಧಮ್ಮಿಕ್ಕಿದ ಅವನ ಎದೆಯ ಮೇಲೆ
ತನ್ನ ಬಲಗಾಲನ್ನೂರಿ ಕತ್ತಿಯ ಮೊನೆಯನ್ನು ಅವನ
ಕುತ್ತಿಗೆಗೆ ಅನಿಸಿ ಹಿಡಿದಳು ಸಂಗಣ
ಅದೇ ದೈನ್ಯತೆಯಿಂದ ಅಂಗಲಾಚಿದನು.[೧೨]

೨೦೦೧ರಲ್ಲಿ ಚಂದ್ರಗಿರಿ ಚಿಕ್ಕಬೆಟ್ಟ ಮಹೋತ್ಸವ ಸಮಿತಿ ಶ್ರವಣಬೆಳ್ಗೊಳದಿಂದ ಜಿ. ಬ್ರಹ್ಮಪ್ಪನವರ ದಾನ ಚಿಂತಾಮಣಿ ಎಂಬ ಐತಿಹಾಸಿಕ ಕಾದಂಬರಿಯು ಹಿಂದಿ ಭಾಷೆಗೆ ಅನುವಾದಿತವಾಗಿದೆ. ಅನುವಾದ ಮಾಡಿದವರು ಶ್ರೀ ಎಮ್.ಕೆ. ಭಾರತಿರಮಣಾಚಾರ್ಯ.

ನಾಗಮಯ್ಯ ಕೆ ಪೂರ್ವಜ ವೇದ
ವೇದಾಂತ ಮೆ ಪಾರಂಗತ ಕೌಂಡಿಣ್ಯ
ಗೋತ್ರಕೆ ಬ್ರಾಹ್ಮಣ್ಯ ಥೇ ಇಸ್
ವೇದ ವಿದ್ಯಾ ಮೆ ನಾಗಮಯ್ಯ ಕಿ
ಕಾಪಿ ಪಹುಂಚ ಥಿ |

ಇಷ್ಟು ಹೊಸಗನ್ನಡ ಸಾಹಿತ್ಯದಲ್ಲಿ ಅತ್ತಿಮಬ್ಬೆಯ ಚಿತ್ರಣವಿದೆ. ಅಂದರೆ ಮೇಲೆ ಹೇಳಲಾದ ಕೃತಿಗಳನ್ನು ನನ್ನ ಅಧ್ಯಯನದ ವ್ಯಾಪ್ತಿಯೊಳಗೆ ತೆಗೆದುಕೊಂಡಿದ್ದೇನೆ. ಈ ಕೃತಿಗಳಲ್ಲದೆ ಅತ್ತಿಮಬ್ಬೆಯ ಕುರಿತಾಗಿ ಹಲವು ಲೇಖನ ಕವಿತೆಗಳು ಪ್ರಕಟಗೊಂಡಿವೆ. ಅವುಗಳು ಈ ಕೆಳಕಂಡಂತಿವೆ.

"ಸಮಾಲೋಕನ" ತೀ.ನಂ.ಶ್ರೀ.ಯವರ ಅತ್ಯುಪಯುಕ್ತ ಲೇಖನಗಳ ಸಂಕಲನವಾಗಿದೆ. ತೀ.ನಂ.ಶ್ರೀ.ಯವರ ಪ್ರಬುದ್ಧ ಲೇಖನಗಳಲ್ಲಿ ಒಂದು "ದಾನಚಿಂತಾಮಣಿ ಅತ್ತಿಮಬ್ಬೆ". ಹೊಸಗನ್ನಡ ಸಾಹಿತ್ಯದಲ್ಲಿ ಅತ್ತಿಮಬ್ಬೆಯ ಕುರಿತಾಗಿ ಇರುವ ಪ್ರಥಮ ಲೇಖನವೆಂಬ ಹೆಗ್ಗಳಿಕೆಯೂ ಇದಕ್ಕಿದೆ. ಲೇಖನವು ಕೇವಲ ಪ್ರಥಮವೆಂಬ ಹೆಗ್ಗಳಿಕೆಗೆ ಮಾತ್ರ ಸೀಮಿತವಾಗಿಲ್ಲ. ಇದು ಅತ್ಯಂತ ಪ್ರಬುದ್ಧವಾದ ಲೇಖನವಾಗಿದೆ. ಅತ್ತಿಮಬ್ಬೆಯ ಕುರಿತು ಕನ್ನಡ ಸಾಹಿತ್ಯದಲ್ಲಿ ಕೃಷಿಗೈದಿರುವ ಹಿರಿಯ ಕಿರಿಯ ಲೇಖಕರಿಗೆ ಶ್ರೀಯವರ 'ದಾನಚಿಂತಾಮಣಿ ಅತ್ತಿಮಬ್ಬೆ" ಎಂಬ ಲೇಖನವೇ ಪ್ರೇರಕವಾಗಿದೆಯೆಂದರೆ ತಪ್ಪಾಗಲಾರದು.

ಈ ಲೇಖನದಲ್ಲಿ ಲೇಖಕರು ಲಕ್ಕುಂಡಿಯ ಶಾಸನ, ರನ್ನ ಕವಿಯ ಅಜಿತಪುರಾಣದ ಪದ್ಯಗಳು ಮತ್ತು ಬ್ರಹ್ಮಶಿವನ ಕೆಲ ಪದ್ಯಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಲೇಖನ ಪ್ರಬುದ್ಧ ಮಾತ್ರವಲ್ಲ ಸಂಶೋಧನಾತ್ಮಕ ನೆಲೆಯಲ್ಲಿ ಕೂಡ ಇದೆ.

ಈ ಲೇಖನವು ಚಾಲುಕ್ಯ ರಾಷ್ಟ್ರಕೂಟರ ವಿಷಯ, ಅತ್ತಿಮಬ್ಬೆಯ ಇತಿಹಾಸ, ಅತ್ತಿಮಬ್ಬೆಯ ವ್ಯಕ್ತಿತ್ವ, ಬಿರುದುಗಳು ಹಾಗೂ ಪವಾಡಗಳನ್ನು ಒಳಗೊಂಡಿದೆ.

ನಂತರದಲ್ಲಿ ಪ್ರಕಟಗೊಂಡ ಕೃತಿಯೆಂದರೆ ''ದಾನಚಿಂತಾಮಣಿ'' ಎಂಬ ಐತಿಹಾಸಿಕ ಕಾದಂಬರಿ. ಜಿ.ಬ್ರಹ್ಮಪ್ಪನವರು ಇಲ್ಲಿ ಅತ್ತಿಮಬ್ಬೆಯ ಜೀವಂತ ಚಿತ್ರವನ್ನೇ ಕನ್ನಡಿಗರಿಗೆ ತೋರಿಸಿದ್ದಾರೆ. ಕಾದಂಬರಿಯಲ್ಲಿ ರನ್ನ, ಪಂಪರ, ಪ್ರವೇಶವು ಕೂಡಾ ಇದೆ. ಕಾದಂಬರಿಯು ಅತ್ತಿಮಬ್ಬೆಯ ಭವ್ಯವಾದ ಬಾಳನ್ನು ಚಿತ್ರಿಸುತ್ತದೆ.

ಕರ್ನಾಟಕದ ಇತಿಹಾಸ, ಸಾಹಿತ್ಯದ ಜೊತೆ ಜೈನ ಧರ್ಮ, ಇತಿಹಾಸ ಒಂದಿಲ್ಲ ಒಂದು ಬಗೆಯಲ್ಲಿ ಸಂಬಂಧವನ್ನು ಹೊಂದಿದೆ. ಕನ್ನಡ ನಾಡಿನಲ್ಲಿಯೇ ದೊರೆಯಬಹುದಾದ ಸಾಹಿತ್ಯ ಶಾಸನಗಳನ್ನು ಇಟ್ಟುಕೊಂಡು ಕಾದಂಬರಿಯನ್ನು ರಚಿಸಬಹುದು ಎನ್ನುವ ಮಾತಿಗೆ ಜಿ. ಬ್ರಹ್ಮಪ್ಪನವರ ದಾನಚಿಂತಾಮಣಿಯೇ ಸಾಕ್ಷಿ.

ಅತ್ತಿಮಬ್ಬೆಯ ಉದಾತ್ತ ಜೀವನವನ್ನು ಜೈನಧರ್ಮದ ಪಾರಿಭಾಷಿಕ ಪದಗಳನ್ನು ಬಳಸುತ್ತಾ, ಅತ್ಯಂತ ಸರಳವೂ, ಸುಂದರವಾದ ಶೈಲಿಯಲ್ಲಿ ಕಾದಂಬರಿ ರಚಿತಗೊಂಡಿದೆ. ''ಕಾದಂಬರಿಯ ಅರ್ಥವನ್ನು ಹೇಳುವಾಗ, ಕಾದಂಬರಿಯೆಂದರೆ ಕರತಲ ರಂಗಭೂಮಿಯೆಂದು ಆಧುನಿಕ ವಿಮರ್ಶಕರು ಅರ್ಥೈಸಿದ್ದಾರೆ. ಈ ಅರ್ಥ 'ದಾನಚಿಂತಾಮಣಿ' ಎನ್ನುವ ಕಾದಂಬರಿಗೆ ಸರಿಯಾಗಿ ಒಪ್ಪುತ್ತದೆ. ಅತ್ತಿಮಬ್ಬೆಯ ಜೀವನವನ್ನು ಬಿಂಬಿಸುವ ಕಾದಂಬರಿಯಾಗಿರುವುದರಿಂದ ಇಲ್ಲಿ ಕಲ್ಪನೆಗೆ ಸಾಕಷ್ಟು ಅವಕಾಶವಿದೆ. ಕತೆಯು ಹತ್ತನೆಯ ಶತಮಾನದಲ್ಲಿ ನಡೆದಿರಬಹುದಾದರೂ ಕೆಲವೊಂದು ವಿಷಯಗಳು ಅಸ್ಪಷ್ಟವಾಗಿದ್ದರೂ ಕಾದಂಬರಿಯಲ್ಲಿ ಮಾತ್ರ ಸ್ಪಷ್ಟವಾಗಿ ಚಿತ್ರಿತಗೊಂಡಿವೆ. ಆದುದರಿಂದ ಇಲ್ಲಿ ಸತ್ಯಶೋಧಕ್ಕಿಂತ ಕಲ್ಪನೆಗೆ ಹೆಚ್ಚಿನ ಅವಕಾಶವಿರುವದನ್ನು ಕಾಣಬಹುದು. ಅತ್ತಿಮಬ್ಬೆಯ ಮದುವೆ, ಗರ್ಭಿಣಿಯ ಬಯಕೆ, ಮಗುವಿನ ಜನನ, ಅತ್ತಿಮಬ್ಬೆ - ಗುಂಡಮಬ್ಬೆಯರ ಅನ್ಯೋನ್ಯ ಸಹೋದರಿತ್ವ, ನಾಗದೇವನ ಮರಣ ಇಲ್ಲೆಲ್ಲಾ ಸತ್ಯದ ಜತೆಯಲ್ಲಿ ಕಲ್ಪನೆ ತೀರ ಹೆಚ್ಚಾಗಿ ಕಂಡುಬಂದಿದೆ. ಈ ಕಾದಂಬರಿಯು ವರ್ಣನಾತ್ಮಕ ಐತಿಹಾಸಿಕ ವಿಷಯವನ್ನೊಳಗೊಂಡಿದ್ದು ವಸ್ತುವಿಗೆ ತಕ್ಕಂತಹ ಭಾಷಾ ಶೈಲಿಯಿಂದ ಕೂಡಿದೆ.

ಡಾ. ಮಧು ವೆಂಕಾರೆಡ್ಡಿಯವರು ೧೯೬೫ರ ಫೆಬ್ರವರಿ ೨ ರಂದು ಬೆಳಗಾಂವಿ ಜಿಲ್ಲೆಯ ಹಾಲಗಾ ಗ್ರಾಮದಲ್ಲಿ ಅತ್ತಿಮಬ್ಬೆಯನ್ನು ಕುರಿತಾಗಿ ಮಾಡಿದ ಭಾಷಣ ರೂಪವೇ ''ಅತ್ತಿಮಬ್ಬೆ'' ಎಂಬ ಕಿರುಹೊತ್ತಗೆ ಇದು ಉಪನ್ಯಾಸ ಗ್ರಂಥಮಾಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಪ್ರಕಟಗೊಂಡಿದೆ.

ಡಾ.ಮಧು ವೆಂಕಾರೆಡ್ಡಿಯವರು ರಚಿಸಿದ ಪುಸ್ತಕ ಚಿಕ್ಕದಾದರೂ ಅತ್ಯಂತ ಚೊಕ್ಕ ಪುಸ್ತಕವಾಗಿದೆ. ಅತ್ತಿಮಬ್ಬೆಯ ಕುರಿತಾಗಿ ಅವಳು ಬದುಕಿ ಬಾಳಿರುವ ಪರಿಸರ, ಅವಳ ವ್ಯಕ್ತಿತ್ವ, ಬಸದಿಗಳ ನಿರ್ಮಾಣ, ಶಾಂತಿಪುರಾಣದ ಮರುಲಿಪಿಕರಣ ಮೊದಲಾದ ವಿಷಯಗಳನ್ನೊಳಗೊಂಡ ಕೃತಿಯಾಗಿದೆ. ಇದು ಭಾಷಣದ ರೂಪವಾಗಿರುವದರಿಂದ ಅತ್ಯಂತ ಸಂಕ್ಷಿಪ್ತವಾಗಿ ವಿಷಯವನ್ನು ಲೇಖಕರು ಹೇಳಿದ್ದಾರೆ. ಅತ್ತಿಮಬ್ಬೆಯಂತಹ ಬೃಹತ್ ವ್ಯಕ್ತಿತ್ವದ ಚರಿತ್ರೆಯನ್ನು ಭಾಷಣ ರೂಪದ ಪುಸ್ತಕ ಮಾಡುವದು ಕಷ್ಟಸಾಧ್ಯ. ಇವರ ಕೆಲಸ ಸ್ತುತ್ಯಾರ್ಹವಾಗಿದೆ.

ಡಾ. ಎಸ್.ಪಿ.ಪಾಟೀಲರ "ದಾನಚಿಂತಾಮಣಿ ಅತ್ತಿಮಬ್ಬೆ" ೧೯೯೩ರಲ್ಲಿ ಕರ್ನಾಟಕ ಜೈನ ಸೇವಾ ಪರಿಷತ್ ಹುಬ್ಬಳ್ಳಿ - ಧಾರವಾಡ ಇವರಿಂದ ಪ್ರಕಟಗೊಂಡಿದೆ.

ದಾನಚಿಂತಾಮಣಿ ಅತ್ತಿಮಬ್ಬೆಯ ಸಹಸ್ರಮಾನೋತ್ಸವ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಅತ್ತಿಮಬ್ಬೆಯ ಉದಾತ್ತ ಬದುಕನ್ನು ಪರಿಚಯಿಸುವ ಒಂದು ಚಿಕ್ಕ ಕೃತಿಯಾಗಿ ಈ ಕೃತಿ ಮೂಡಿಬಂದಿದೆ. ಅತ್ತಿಮಬ್ಬೆಯ ವ್ಯಕ್ತಿತ್ವದ ಸಂಗ್ರಹರೂಪವೇ "ದಾನಚಿಂತಾಮಣಿ ಅತ್ತಿಮಬ್ಬೆ". ಕಾವ್ಯ, ಶಾಸನ, ದಂತಕಥೆಗಳನ್ನು ಆಧಾರವಾಗಿಟ್ಟುಕೊಂಡು ಈ ಕೃತಿ ರಚಿತವಾಗಿದೆಯಾದರೂ ಅತ್ಯಂತ ಸಂಗ್ರಹ ರೂಪದಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವ ನಿರೂಪಿತವಾಗಿದೆ.

ಡಾ.ಕಮಲಾ ಹಂಪನಾ ಅವರು ರಚಿಸಿದ "ಗುಣದಂಕಕಾರ್ತಿ ಅತ್ತಿಮಬ್ಬೆ" ಬಹಳ ಪ್ರಸಿದ್ಧವಾದ ಪುಸ್ತಕವಾಗಿದೆ. ಡಾ.ಕಮಲಾ ಹಂಪನಾ ನಾಡಿನ ಹಿರಿಯ ಸಾಹಿತಿ, ಶ್ರೇಷ್ಠ ವಾಗ್ಮಿ. ಇವರು ದಾನಚಿಂತಾಮಣಿ ಅತ್ತಿಮಬ್ಬೆಯ ಸಹಸ್ರಮಾನೋತ್ಸವವನ್ನು ನಾಡಿನಾದ್ಯಂತ ಆಚರಿಸಬೇಕೆಂದು ೧೯೯೩ರಲ್ಲಿ ಕರೆ ನೀಡಿದ್ದರು. ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ಓದಿದ ತುಮಕೂರಿನ ಶ್ರೀ ಪದ್ಮಾಂಬಾ ಜೈನ ಮಹಿಳಾ ಸಮಾಜದವರು ಒಂದು ರಾಷ್ಟ್ರೀಯ ಸಮಾವೇಶವನ್ನು ಮಾಡಿ, ಈ ಸಂದರ್ಭದಲ್ಲಿಯೇ ಡಾ.ಕಮಲಾ ಹಂಪನಾ ಈ ಸಮಾವೇಶಕ್ಕೆ ಅತ್ತಿಮಬ್ಬೆಯನ್ನು ಕುರಿತಾದ ಒಂದು ಪುಸ್ತಕವನ್ನು ರಚಿಸಿದ್ದಾರೆ.[೧೫] ಅದೇ ಪುಸ್ತಕ ಗುಣದಂಕಕಾರ್ತಿ ಅತ್ತಿಮಬ್ಬೆ. ಅತ್ತಿಮಬ್ಬೆಯನ್ನು ಕುರಿತು ಹಲವು ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಅನೇಕ ಕಾಲೇಜು ಮತ್ತು ಸಂಘಸಂಸ್ಥೆಗಳಲ್ಲಿ ಉಪನ್ಯಾಸ ಮಾಡಿದವರಾಗಿದ್ದಾರೆ. ಪತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದವರಾಗಿದ್ದಾರೆ. ಹೀಗಾಗಿ ಡಾ.ಕಮಲಾ ಹಂಪನಾ ಅವರು ಅತ್ತಿಮಬ್ಬೆಯ ವ್ಯಕ್ತಿತ್ವ ಚಿತ್ರಣವನ್ನು ಚೆನ್ನಾಗಿ ಮಾಡಬಲ್ಲವರಾಗಿದ್ದಾರೆ.

ದಾನಚಿಂತಾಮಣಿ ಅತ್ತಿಮಬ್ಬೆಯ ಸ್ಮೃತಿ ಚಿತ್ರವನ್ನು ಡಾ.ಕಮಲಾ ಹಂಪನಾ ಈ ಪುಸ್ತಕದ ಮೂಲಕ ಮಾಡಿಸಿದ್ದಾರೆ.

ಆರು ಅಧ್ಯಾಯಗಳನ್ನು ಒಳಗೊಂಡಿರುವ ಈ ಕೃತಿ ಅತ್ತಿಮಬ್ಬೆಯ ಕುರಿತಾದ ಒಂದು ಉತ್ತಮ ಪುಸ್ತಕವಾಗಿದೆ. ಅತ್ತಿಮಬ್ಬೆಯ ಇತಿಹಾಸ, ವ್ಯಕ್ತಿತ್ವ, ಪವಾಡ ಮೊದಲ ವಿಷಯಗಳನ್ನಲ್ಲದೆ ಲಕ್ಕುಂಡಿಯ ಶಾಸನದ ಒಳನೋಟಗಳನ್ನು ತೋರಿಸುವ ಡಾ. ಹಂಪನಾ ಅವರ ಲೇಖನವು ಈ ಪುಸ್ತಕದಲ್ಲಿ ಇದೆ.

ಡಾ. ಕಮಲಾ ಹಂಪನಾ ಅತ್ತಿಮಬ್ಬೆಯ ಕುರಿತಾಗಿ ಮತ್ತೊಂದು ಕೃತಿಯನ್ನು ಪ್ರಕಟಿಸಿರುವರು. ಅದು Attimabbe and Chalukyas ಎಂಬುದು. ಪಂಡಿತರತ್ನ ಶಾಂತಿರಾಜಶಾಸ್ತ್ರೀ ಟ್ರಸ್ಟ್ ನವರು ಈ ಪುಸ್ತಕವನ್ನು ೧೯೯೫ರಲ್ಲಿ ಪ್ರಕಟಪಡಿಸಿದ್ದಾರೆ. ಅತ್ತಿಮಬ್ಬೆ ಬೆಳೆದ ಪರಿಸರ, ನಾಗದೇವ, ಪವಾಡ, ರನ್ನನಿಗೆ ಆಶ್ರಯ, ಧಾರ್ಮಿಕ ಶ್ರದ್ಧೆ, ಕೊನೆಯ ದಿನಗಳು ಮೊದಲಾದವುಗಳನ್ನು ಅತ್ಯಂತ ಸರಳವಾಗಿ ಇಂಗ್ಲೀಷ್ ಭಾಷೆಯಲ್ಲಿ ನಿರೂಪಿಸಿದ್ದಾರೆ.

೧೯೯೩ರಲ್ಲಿ ಪ್ರಕಟವಾದ ಡಾ. ಎಸ್.ಪಿ.ಪಾಟೀಲರ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂಬ ಕೃತಿಯನ್ನು ಡಾ. ಬಾಬುರಾವ್ ಗಾಯಕವಾಡರು ಮರಾಠಿ ಭಾಷೆಗೆ ಅನುವಾದಿಸಿದ್ದಾರೆ. ಇದು ದಕ್ಷಿಣ ಭಾರತದ ಜೈನ ಮಹಿಳಾ ಪರಿಷತ್, ಸಾಂಗಲಿ ಇವರು ೧೯೯೫ರಲ್ಲಿ ಪ್ರಕಟಿಸಿದ್ದಾರೆ.

೧೯೯೭ರಲ್ಲಿ ಪ್ರಕಟಗೊಂಡ "ಕವಿವರ ಕಾಮಧೇನು ಅತ್ತಿಮಬ್ಬೆ" ಯನ್ನು ಕನ್ನಡದ ಹಿರಿಯ ಸಾಹಿತಿ, ಸಂಶೋಧಕ, ಶಾಸನತಜ್ಞ ಡಾ.ಹಂಪ ನಾಗರಾಜಯ್ಯನವರು ರಚಿಸಿದ್ದಾರೆ. 'ಕವಿವರ ಕಾಮಧೇನು' ಎನ್ನುವ ಕೃತಿ ಶ್ರೇಷ್ಠ ಕೃತಿಯಾಗಿದೆ. ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಪರಿಚಯಿಸಿಕೊಡುವ ಒಂದು ಪ್ರೌಢ ಕೃತಿಯಾಗಿದೆ. ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಕೇವಲ ಲಕ್ಕುಂಡಿಯ ಶಾಸನದಿಂದ ಅಷ್ಟೇ ಅಲ್ಲ ಅದಕ್ಕೆ ಹಿನ್ನೆಲೆಯಾಗಿ ಅಣ್ಣಿಗೇರಿಯ ಶಾಸನ, ಗಾವರವಾಡ ಶಾಸನಗಳನ್ನು ಸಂಶೋಧನಾತ್ಮಕ ನಿಟ್ಟಿನಿಂದ ಪರಿಶೀಲಿಸಿದ್ದಾರೆ. ಅತ್ತಿಮಬ್ಬೆಯ ವ್ಯಕ್ತಿತ್ವ, ಕುಟುಂಬದ ಹಿನ್ನೆಲೆ, ಅತ್ತಿಮಬ್ಬೆಯ ಗುರುಗಳು, ಪವಾಡಗಳು ಈ ಎಲ್ಲ ವಿಷಯಗಳಲ್ಲಿ ಡಾ.ಹಂಪನಾ ಅವರು ಬೆಳಕು ಚೆಲ್ಲಿದ್ದಾರೆ. ಅತ್ತಿಮಬ್ಬೆಯ ಸಮಗ್ರ ಮನೆತನಕ್ಕೆ ತನ್ನ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ ಬಿಕ್ಕಟ್ಟುಗಳಿಗೆ ಯಾವ ರೀತಿಯಾಗಿ ಪ್ರತಿಕ್ರಿಯಿಸಿತು ಎಂಬುದನ್ನು ಲಕ್ಕುಂಡಿಯ ಶಾಸನಾಧಾರದಿಂದ ಡಾ.ಹಂಪನಾ ಕವಿವರ ಕಾಮಧೇನುವಿನಲ್ಲಿ ಶ್ಲಾಘನೀಯ ಕೆಲಸವನ್ನು ಮಾಡಿದ್ದಾರೆ.

೧೯೭೪ರ ನಂತರ ಅಂದರೆ ೩೪ ವರ್ಷಗಳ ತರುವಾಯ ಮತ್ತೊಮ್ಮೆ ಅತ್ತಿಮಬ್ಬೆಯ ಜೀವನಗಾಥೆಯನ್ನು ಕಾದಂಬರಿ ರೂಪಕ್ಕೆ ಇಳಿಸಿದವರು ಸಮೇತನಹಳ್ಳಿ ರಾಮರಾಯರು. ಅತ್ತಿಮಬ್ಬೆಯ ಜೀವನ ತೆರೆದಿಟ್ಟ ಪುಸ್ತಕದಂತೆ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಇದು ಕಾದಂಬರಿಯಾಗಿರುವ ಕಾರಣ, ಅತ್ತಿಮಬ್ಬೆ ಜೀವನವನ್ನು ಹೆಚ್ಚಾಗಿ ಕಲ್ಪನೆಯ ದೃಷ್ಟಿಯಿಂದಲೇ ಅಳೆಯಲಾಗಿದೆ. ಸರಳಶೈಲಿಯ ಈ ಕಾದಂಬರಿಯು ನಿರಂತರವಾಗಿ ಓದಿಸಿಕೊಂಡು ಹೋಗುತ್ತದೆ.

೨೦೦೧ರಲ್ಲಿ ಜಿ.ಬ್ರಹ್ಮಪ್ಪನವರ ದಾನಚಿಂತಾಮಣಿ ಎಂಬ ಐತಿಹಾಸಿಕ ಕಾದಂಬರಿಯ ಹಿಂದಿ ಅನುವಾದ ಪ್ರಕಟಗೊಂಡಿದೆ. ಎಮ್.ಕೆ.ಭಾರತೀ ರಮಣಾಚಾರ್ಯ ಎನ್ನುವವರೇ ಅನುವಾದಕರು.

ಮೇಲೆ ತಿಳಿಸಲಾದ ಅತ್ತಿಮಬ್ಬೆಯ ಕುರಿತಾದ ಕೃತಿಗಳನ್ನು ನೋಡಿದಾಗ ಒಂದು ವಿಷಯ ಮನದಟ್ಟಾಗುತ್ತದೆ. ಅದೇನೆಂದರೆ ಎಲ್ಲ ಕೃತಿಗಳು ಅತ್ತಿಮಬ್ಬೆಯ ವ್ಯಕ್ತಿತ್ವ, ಧಾರ್ಮಿಕ ವಿಚಾರ, ಧರ್ಮಶ್ರದ್ಧೆ, ಪವಾಡಗಳನ್ನು

ಒಳಗೊಂಡಿವೆ. ಆದರೂ ಅತ್ತಿಮಬ್ಬೆಯ ಸಮಗ್ರ ವ್ಯಕ್ತಿತ್ವದ ದರ್ಶನವನ್ನು ಯಾವ ಕೃತಿಯೂ ಮಾಡಿಲ್ಲವೆಂದರೆ ತಪ್ಪಾಗಲಾರದು. ಡಾ. ಹಂಪನಾ ಮತ್ತು ಡಾ.ಕಮಲಾ ಹಂಪನಾ ಹೊರತುಪಡಿಸಿ ಯಾರೂ ಕ್ಷೇತ್ರಕಾರ್ಯವನ್ನು ಮಾಡಿಲ್ಲ.

ಇಷ್ಟು ಕೃತಿಗಳಲ್ಲಿ ಅಲ್ಲದೆ ಅನೇಕ ಲೇಖನಗಳಲ್ಲಿಯೂ ಅತ್ತಿಮಬ್ಬೆ ವಿಷಯ ಪ್ರಕಟಗೊಂಡಿದೆ. ಮತ್ತು ಸ್ಮರಣ ಸಂಚಿಕೆಯಲ್ಲಿಯೂ ಅತ್ತಿಮಬ್ಬೆಯ ವ್ಯಕ್ತಿತ್ವ ವರ್ಣನೆಯ ವಿಷಯ ಬರುತ್ತದೆ.

ಈ ರೀತಿಯಾಗಿ ಸಾವಿರ ವರ್ಷಗಳ ನಂತರವೂ ಅತ್ತಿಮಬ್ಬೆಯ ಕವಿತೆ, ಕಾದಂಬರಿ, ಲೇಖನಗಳಲ್ಲಿಯೂ ಮೂಡಿಬಂದಿದ್ದಾಳೆ. ಅಷ್ಟು ವೈವಿಧ್ಯಮಯ ಉದಾತ್ತ ಬದುಕನ್ನು ನಡೆಸಿರುವವಳು ಅತ್ತಿಮಬ್ಬೆ. ಮಠ ಮಾನ್ಯಗಳನ್ನು ಕಟ್ಟಿಸುವುದು, ಛತ್ರ ಅರವಟ್ಟಿಗೆಗಳನ್ನು ಇಡುವುದು ಧಾರ್ಮಿಕ ಕಾರ್ಯ ಚಟುವಟಿಕೆಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನ ದತ್ತಿಗಳನ್ನು ಕೊಡುವದಕ್ಕಾಗಿ ತಾವು ಸಂಪಾದಿಸಿರುವ ಸಂಪತ್ತನ್ನು ವಿನಿಯೋಗಿಸುವುದೇ ಸಂಪತ್ತಿನ ಸಾರ್ಥಕತೆಯೆಂದು ಕನ್ನಡಿಗರು ಭಾವಿಸಿದ್ದರು. ಕನ್ನಡಿಗರ ಸಂಸ್ಕೃತಿಯಲ್ಲಿ, ಸಮಾಜದಲ್ಲಿ, ವೀರರೂ, ಶೂರರೂ, ಪ್ರಜಾಹಿತ ಅರಸರೂ ಚತುರ ಆಡಳಿತಗಾರರೂ, ಅದ್ಭುತ ತ್ಯಾಗಿಗಳಿರುವಂತೆ ದಾನಿಗಳು ಮನೆ ಮಾತಾಗಿದ್ದರು. ಅಂತಹ ಶ್ರೇಷ್ಠ ದಾನಿಗಳಲ್ಲಿ ಮೊದಲನೆಯವಳಾಗಿ ಅತ್ತಿಮಬ್ಬೆಯು ಇದ್ದಾಳೆ. ಆದುದರಿಂದಲೇ ಸಾವಿರ ವರುಷಗಳ ತರುವಾಯವೂ ಅತ್ತಿಮಬ್ಬೆಯು ಕನ್ನಡಿಗರ ಮನಸ್ಸಿನಲ್ಲಿದ್ದಾಳೆ.

ಇಂತಹ ವ್ಯಕ್ತಿತ್ವವಿರುವ ಅತ್ತಿಮಬ್ಬೆಯ ಕುರಿತು ಸಂಶೋಧನೆ ಅತಿ ಅಗತ್ಯ. ಎಷ್ಟೇ ಮಹತ್ವಪೂರ್ಣವಾದ ಕೃತಿ ರಚನೆಯಾಗಿದ್ದರೂ, ಅತ್ತಿಮಬ್ಬೆಯ ಜೀವನ, ಸಾಧನೆ, ತ್ಯಾಗ, ತಪಸ್ಸು, ಧರ್ಮಶ್ರದ್ಧೆ, ಸಾಹಿತ್ಯಸೇವೆ, ಸಾಮಾಜಿಕ ಕಳಕಳಿ ಇವುಗಳ ಸಮಗ್ರ ಅಧ್ಯಯನದ ಪರಿಪೂರ್ಣತೆ ಆಗಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು.

ಜಗತ್ತಿನಲ್ಲಿ ಹಲವರು ದಾನದಿಂದ ತಮ್ಮ ವ್ಯಕ್ತಿತ್ವಕ್ಕೆ ವಿಶೇಷತೆಯನ್ನು ತಂದುಕೊಂಡಿರುತ್ತಾರೆ. ಹಲವರು ಶೌರ್ಯ ಸಾಹಸದಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ಧರ್ಮದಿಂದ, ಮತ್ತೆ ಕೆಲವರು ಸಮಯಪ್ರಜ್ಞೆಯಿಂದ ಹಾಗೂ ಆಳುವರಸರಿಗೆ ಆಪ್ತರಾಗುವ ಮೂಲಕವೂ ಕೀರ್ತಿಯನ್ನು ಪಡೆದುಕೊಳ್ಳುತ್ತಾರೆ. ಆದರೆ ಮೇಲೆ ಹೇಳಿದ ಹಲ, ಕೆಲವರಲ್ಲಿ ಇರಬಹುದಾದ ಗುಣಗಳೆಲ್ಲವೂ ಅತ್ತಿಮಬ್ಬೆ ಒಬ್ಬಳಲ್ಲಿಯೇ ಇದ್ದದ್ದು ಸತ್ಯ ಸಂಗತಿಯಾಗಿದೆ. ಅವಳು ದಾನ, ಧರ್ಮ, ಶೌರ್ಯ, ಸಮಯಪ್ರಜ್ಞೆ, ಸಮ್ಯಕ್ತ್ವಭಾವನೆ, ಶೀಲವ್ರತಾಚಾರಣೆ, ಸಾಮಾಜಿಕ ಕಳಕಳಿಯಿಂದ ಕೀರ್ತಿಶಾಲಿಯಾಗಿದ್ದಾಳೆ. ಹೀಗಾಗಿ ಇದುವರೆಗೆ ಪ್ರಕಟವಾಗಿರುವ ಕೃತಿಗಳು ಅತ್ತಿಮಬ್ಬೆಯ ಒಂದೊಂದು ಮುಖವನ್ನು ಇಲ್ಲವೇ ಒಂದೊಂದು ಮುಖವನ್ನು ಬಿಟ್ಟು ಇನ್ನೆಲ್ಲ ಅವಳ ವ್ಯಕ್ತಿತ್ವದ ಚಿತ್ರಣವನ್ನು ಮಾಡಿದೆ.

ಹೀಗಾಗಿ ಅತ್ತಿಮಬ್ಬೆಯ ಇತಿಹಾಸ ಜೀವನ, ಸಾಧನೆ, ಧರ್ಮಶ್ರದ್ಧೆ, ಸಾಹಿತ್ಯಸೇವೆ, ಸಾಮಾಜಿಕ ಕೊಡುಗೆ ಇವುಗಳ ಕುರಿತು ಸಮಗ್ರ ಅಧ್ಯಯನದ ಅಗತ್ಯವಿದೆಯೆಂದು ಪರಿಭಾವಿಸಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಆ. ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧದಲ್ಲಿ ನಮ್ಮ ಅಧ್ಯಾಯವನ್ನು ಆರು ಅಧ್ಯಾಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಅತ್ತಿಮಬ್ಬೆಯ ಇತಿಹಾಸ, ಅತ್ತಿಮಬ್ಬೆಯ ವ್ಯಕ್ತಿತ್ವ ವರ್ಣನೆ, ಅತ್ತಿಮಬ್ಬೆಯ ಕೊಡುಗೆ ಮತ್ತು ಅತ್ತಿಮಬ್ಬೆ ಸ್ತ್ರೀ ಚಿಂತನೆ ಎಂಬ ಪ್ರಮುಖ ಅಧ್ಯಾಯಗಳಲ್ಲಿ ಕೆಲವು ಉಪ ಅಧ್ಯಾಯಗಳನ್ನು ವಿಂಗಡಿಸಿಕೊಂಡು ಚರ್ಚಿಸಲಾಗಿದೆ. ಇಲ್ಲಿ ಸಾಧ್ಯವಾದಷ್ಟು ದಂತ ಕಥೆಗಳಿಗೆ ಆಸ್ಪದವೀಯದೆ ಹಾಗೇ ಅವುಗಳನ್ನು ಪೂರ್ವ ನಿರಾಕರಿಸದೆ ಸ್ಪಷ್ಟ ದಾಖಲೆಗಳ ಹಿನ್ನೆಲೆಯಲ್ಲಿಯೇ ನಮ್ಮ ಅಧ್ಯಯನವನ್ನು ನಡೆಸಲಾಗಿದೆ. ಆಯಾ ಅಧ್ಯಾಯಗಳ ಸಂಕ್ಷಿಪ್ತರೂಪ ಈ ಕೆಳಕಂಡಂತಿದೆ.

ಎರಡನೇ ಅಧ್ಯಾಯದಲ್ಲಿ ಅತ್ತಿಮಬ್ಬೆಯ ಇತಿಹಾಸವನ್ನು ಕುರಿತು ದೊರಕುವ ಸೀಮಿತ ಆಕರಗಳ ಹಿನ್ನೆಲೆಯಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ. ಅತ್ತಿಮಬ್ಬೆಯು ಒಬ್ಬ ಐತಿಹಾಸಿಕ ಸ್ತ್ರೀ. ಕನ್ನಡ ಸಾಹಿತ್ಯದಲ್ಲಿ ಕನ್ನಡನಾಡಿನಲ್ಲಿ ಮಿಂಚಿದ ಮಹಿಳೆಯಾಗಿ ಅತ್ತಿಮಬ್ಬೆಯು ಮಾಡಿದ ಧಾರ್ಮಿಕ ಕಾರ್ಯಗಳೇ ಕರ್ನಾಟಕ ಇತಿಹಾಸದ ಒಂದು ಅಪೂರ್ವ ಘಟ್ಟ. ಅತ್ಯುತ್ತಮವಾದ ಆಲೋಚನೆಗಳನ್ನು ತಿಳಿದುಕೊಳ್ಳುವಂತೆ ಅತ್ಯುತ್ತಮ ವ್ಯಕ್ತಿಗಳ ಚರಿತ್ರೆಯನ್ನು ತಿಳಿದುಕೊಳ್ಳುವುದು ಅತಿ ಅಗತ್ಯ. ಅತ್ತಿಮಬ್ಬೆಯು ಅತ್ಯುತ್ತಮ ವ್ಯಕ್ತಿಗಳ ಗುಂಪಿನಲ್ಲಿ ಬರುವಾಕೆ.

ಅತ್ತಿಮಬ್ಬೆಯ ಇತಿಹಾಸ ಅಧ್ಯಯನದ ಮಿತಿಯೊಳಗೆ ಪ್ರಾಚೀನ ಕಾವ್ಯಗಳಾದ ಪೊನ್ನನ ಶಾಂತಿಪುರಾಣ, ರನ್ನ ಕವಿಯ ಅಜಿತಪುರಾಣ ಮತ್ತು ಲಕ್ಕುಂಡಿಯ ಶಾಸನಗಳನ್ನು ಆಧರಿಸಲಾಗಿದೆ. ಈ ಅಧ್ಯಾಯದಲ್ಲಿ ಬರುವ ಅತ್ತಿಮಬ್ಬೆಯ ಇತಿಹಾಸದ ಸಂಗ್ರಹ ರೂಪ ಹೀಗಿದೆ.

ಪುಂಗನೂರಿನ ವೆಂಗಿಮಂಡಲದ ಕಮ್ಮೆ ದೇಶದಲ್ಲಿ ಜನ್ಮ ತಳೆದಿರುವ ಅತ್ತಿಮಬ್ಬೆಗೆ ಮಲ್ಲಪಯ್ಯ ತಂದೆ, ಅಪ್ಪಕಬ್ಬೆಯೆ ತಾಯಿ. ತಂದೆ ಚಾಳುಕ್ಯ ರಾಜ್ಯದಲ್ಲಿ ಹಿರಿಯ ಅಧಿಕಾರಿಯಾಗಿರುವ ಮಲ್ಲಪಯ್ಯನ ಎಂಟು ಸಂತಾನಗಳಲ್ಲಿ ಅತ್ತಿಮಬ್ಬೆ ಏಳನೆಯವಳು. ಗುಂಡಮಯ್ಯ, ಎಳಮಯ್ಯ, ಪುನ್ನಮಯ್ಯ, ಆಹವಮಲ್ಲ, ವಲ್ಲ ಎಂಬ ಹಿರಿಯ ಸಹೋದರರು, ನಾಗಿಯಬ್ಬೆ ಎಂಬ ಅಕ್ಕ ಗುಂಡಮಬ್ಬೆ ಎಂಬ ತಂಗಿ ಅತ್ತಿಮಬ್ಬೆಗೆ ಇದ್ದರು. ಅತ್ತಿಮಬ್ಬೆ ತನ್ನ ತಂಗಿ ಗುಂಡಮಬ್ಬೆ ಸಹಿತವಾಗಿ ಚಾಲುಕ್ಯ ಸೇನಾಪತಿಯಾಗಿರುವ ಧಲ್ಲಪನ ಮಗನಾದ ನಾಗದೇವನನ್ನು ವರಿಸುತ್ತಾಳೆ. ಅತ್ತಿಮಬ್ಬೆಗೆ ಅಣ್ಣಿಗದೇವನೆಂಬ ಮಗನು ಹುಟ್ಟುತ್ತಾನೆ. ಯುದ್ಧದಲ್ಲಿ ನಾಗದೇವ ವೀರಮರಣವನ್ನು ಹೊಂದಿದ ಕಾರಣ ಗುಂಡಮಬ್ಬೆ ಸಹಗಮನ ಮಾಡಿದರೆ ಮಹಾಭಾರತದ ಕುಂತಿಯಂತೆ, ಪುತ್ರ ಪರಿಪಾಲನೆಗಾಗಿ ಅತ್ತಿಮಬ್ಬೆ ಬದುಕಿ ಉಳಿಯುತ್ತಾಳೆ. ಜೈನಧರ್ಮದ ಕಠಿಣವಾದ ವ್ರತ ನೇಮಗಳನ್ನು ನಿಷ್ಠೆಯಿಂದ ಆಚರಿಸುತ್ತಾಳೆ. ಮಹಾಕವಿಗೆ ಪೋಷಕಿಯಾಗಿದ್ದಾಳೆ. ೧೫೦೦ ಹೊನ್ನ ಪುತ್ಥಳಿಯನ್ನು ದಾನ ಮಾಡಿದ್ದಾಳೆ. ೧೫೦೦ ಬಸದಿಗಳನ್ನು ನಿರ್ಮಿಸಿದ್ದಾಳೆ. ಹೀಗೆ ತುಂಬು ಜೀವನವನ್ನು ನಡೆಸಿದರೂ, ಅವಳ ಕೊನೆಗಾಲ ಮಾತ್ರ ದು:ಖದಿಂದ ತುಂಬಿದೆ. ಅತ್ತಿಮಬ್ಬೆಯ ಸಾವು ಹೇಗೆ ಘಟಿಸಿತು, ಯಾವಾಗ ಘಟಿಸಿತು ಎಂಬುದು ತಿಳಿದುಬಂದಿಲ್ಲವಾದರೂ ಡಾ.ಹಂಪನಾ ಅವರ ಊಹೆಯಂತೆ ಅಪ್ರತಿಮ ಜಿನಭಕ್ತೆಯಾದ ಅವಳು ಸಲ್ಲೇಖನ

ವೃತದಿಂದ ಮರಣ ಹೊಂದಿರಬಹುದು. ಅಲ್ಲದೆ ಡಾ.ಹಂಪನಾ ಅವರ ಊಹೆಯಂತೆ ಅತ್ತಿಮಬ್ಬೆಯು ಕ್ರಿ.ಶ. ೯೫೦ ರಿಂದ ಕ್ರಿ.ಶ. ೧೦೧೮ ರವರೆಗೆ ಜೀವಿಸಿದ್ದಳು.

ಮೂರನೇ ಅಧ್ಯಾಯವಾದ ಅತ್ತಿಮಬ್ಬೆಯ ವ್ಯಕ್ತಿತ್ವ ವರ್ಣನೆ ಎಂಬಲ್ಲಿ ಅತ್ತಿಮಬ್ಬೆಯು ತನ್ನ ದಾನಗುಣದಿಂದ ಹಾಗೂ ರಾಜಕೀಯ ಶಕ್ತಿಯಿಂದ ಮೈಗೂಡಿಸಿಕೊಂಡ ಉನ್ನತ ವ್ಯಕ್ತಿತ್ವವನ್ನು ಚರ್ಚಿಸಲಾಗಿದೆ. ಮನುಷ್ಯ ಆಡುವ ಮಾತಿನಿಂದ ಅವನ ಮನಸಿನ ಸಂಸ್ಕಾರವನ್ನು, ಬೆಳೆದ ವಾತಾವರಣವನ್ನು ಲೆಕ್ಕಹಾಕಿ ಸ್ಪಷ್ಟವಾಗಿ ತಿಳಿದುಕೊಳ್ಳುವದಕ್ಕೆ ಸಾಧ್ಯವಿದೆ. ಹಾಗೆಯೇ ಒಬ್ಬ ವ್ಯಕ್ತಿಯ ನಡವಳಿಕೆಯಿಂದ ಮಾಡಿರಬಹುದಾದ ಕೆಲಸ ಕಾರ್ಯಗಳಿಂದ ಆ ವ್ಯಕ್ತಿಯ ವ್ಯಕ್ತಿತ್ವವನ್ನು ಅರಿತುಕೊಳ್ಳುವುದಕ್ಕೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಅತ್ತಿಮಬ್ಬೆಯು ಜೈನ ಧರ್ಮದಲ್ಲಿಟ್ಟಿರುವ ಅದ್ಭುತ ವಿಶ್ವಾಸ, ಅವಳ ಬಸದಿಗಳ ನಿರ್ಮಾಣ ಕಾರ್ಯ, ಜಿನ ಪುತ್ಥಳಿಯ ದಾನ, ಮುಂತಾದವುಗಳಿಂದ ಅತ್ತಿಮಬ್ಬೆಯು ಮೇರೆ ಮೀರಿದ ವ್ಯಕ್ತಿತ್ವವುಳ್ಳವಳಾಗಿದ್ದಳು ಎಂಬ ವಿಷಯ ಮನದಟ್ಟಾಗುತ್ತದೆ.

ಸಂಸಾರ ಸುಖದ ಮಧ್ಯದಲ್ಲೇ ಪತಿ ನಾಗದೇವನು ಸ್ವರ್ಗಕ್ಕೆ ಸಂದು ಹೋದಾಗ "ಜಿನ ದೀಕ್ಷಾಚರಣ"ವನ್ನು ಬದುಕಿನ ಗುರಿಯನ್ನಾಗಿ ಅತ್ತಿಮಬ್ಬೆಯು ಮಾಡಿಕೊಂಡಿದ್ದಾಳೆ. ಪತಿ ಹಾಗೂ ಸೋದರಿಯನ್ನು ದಹಿಸಿದ ಚಿತಾಗ್ನಿಯಲ್ಲಿ ತನ್ನ ಲೌಕಿಕ ಬಯಕೆಗಳನ್ನು ಸುಟ್ಟು ಸಂಸಾರದಲ್ಲಿದ್ದೇ ಗೆಲ್ಲುವ ಪಣ ತೊಡುತ್ತಾಳೆ. ವಿಧವೆಯಿಂದ ಧರ್ಮ ವೈವಿಧ್ಯತೆ ಕಡೆ ತಿರುಗಿ ಆತ್ಮಕಲ್ಯಾಣ, ಜನಕಲ್ಯಾಣ, ಪುತ್ರ ಕಲ್ಯಾಣವನ್ನು ಮರೆಯಲಾರದೆ ತನ್ನ ಬದುಕಿನ ಕಹಿಸತ್ಯವನ್ನು ಅಲ್ಲಗಳೆಯಲಿಲ್ಲ. ಅತ್ತಿಮಬ್ಬೆಯು ಬದುಕಿನ ಅನಿಶ್ಚಿತತೆಯ ಸಂದರ್ಭದಲ್ಲಿ ತನ್ನ ದಾರಿಯನ್ನು ಕಂಡುಕೊಂಡ ರೀತಿ ವಿಶಿಷ್ಟವಾಗಿದೆ. ಉನ್ನತವಾದ ವಿಚಾರಧೋರಣೆ, ಸಂಸ್ಕಾರ ಇವುಗಳಿಂದಾಗಿ ಅತ್ತಿಮಬ್ಬೆ ಸಾಮಾನ್ಯ ಸ್ತ್ರೀಯಾಗದೆ ಒಂದು ಅನರ್ಘ್ಯ ಸ್ತ್ರೀ ರತ್ನವಾಗಿ ಅನುಪಮ ಅಪ್ರತಿಮ ವ್ಯಕ್ತಿತ್ವವುಳ್ಳವಳಾಗಿ, ಮನೋದೌರ್ಬಲ್ಯವನ್ನು ಮೆಟ್ಟಿನಿಂತು ಚರಿತ್ರಾರ್ಹ ವ್ಯಕ್ತಿತ್ವವನ್ನು ಪಡೆದುಕೊಂಡ ವ್ಯಕ್ತಿಯಾಗಿದ್ದಾಳೆ.

ಈ ಅಧ್ಯಾಯದಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವ ವರ್ಣನೆಯ ಹಿನ್ನೆಲೆಯಾಗಿ ರನ್ನ ಕವಿಯ ಅಜಿತ ಪುರಾಣ, ಲಕ್ಕುಂಡಿಯ ಶಾಸನಗಳನ್ನು ಗಮನಿಸಲಾಗಿದೆ. ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಅವಳ ಬಿರುದು, ಪವಾಡಗಳನ್ನು ವಿಶ್ಲೇಷಿಸಿ ಗುರುತಿಸಲಾಗಿದೆ. ಹೊಸಗನ್ನಡ ಸಾಹಿತ್ಯದಲ್ಲಿಯೂ ನನ್ನ ಅಧ್ಯಯನದ ಮಿತಿಯೊಳಗೆ ಬಂದಿರುವ ಪ್ರಕಟಣೆಗಳನ್ನು ಸಹಿತ ಗಮನಿಸಲಾಗಿದೆ.

ಅತ್ತಿಮಬ್ಬೆಯ ಕೊಡುಗೆ ಎಂಬ ನಾಲ್ಕನೆ ಅಧ್ಯಾಯದಲ್ಲಿ ಅತ್ತಿಮಬ್ಬೆಯು ಕರ್ನಾಟಕ ಸಂಸ್ಕೃತಿಗೆ ನೀಡಿದ ಕೊಡುಗೆಗಳನ್ನು ಚರ್ಚಿಸಲಾಗಿದೆ. ದೈಹಿಕವಾಗಿ ತಾಯಿ ಆಗಲಾರದೆ ಹೃದಯದಿಂದ ಭಾರತದ ಅನಾಥ ಮಕ್ಕಳಿಗೆ ತಾಯಿಯಾಗಿ ತಾಯ್ತನದ ಮಮತೆಯ ರಸವುಣಿಸಿದ ಮದರ್ ಥೆರೆಸಾಳು ಆ ಮಕ್ಕಳಿಗೆ ಅನುಪಮ ಕೊಡುಗೆಯಾದಂತೆ ರನ್ನ ಕವಿ ನಿಸ್ಸಂಕೋಚವಾಗಿ ಹೇಳುವಂತೆ "ಮೀಸೆ ಹೊತ್ತ ಗಂಡಸಾಗದಿದ್ದರೂ, ಮೊಲೆವೆತ್ತ ಹೆಣ್ಣಾದರೂ,

ಕಂತಿಯಾಗದಿದ್ದರೂ, ಶ್ರಾವಕಿಯಾಗಿ ಜೈನಧರ್ಮಕ್ಕೆ, ಆ ಸಮಾಜಕ್ಕೆ, ಕನ್ನಡ ಸಾಹಿತ್ಯಕ್ಕೆ ದಾನ ಚಿಂತಾಮಣಿ ಅತ್ತಿಮಬ್ಬೆ ಕೊಟ್ಟ ಕೊಡುಗೆ ಮಹತ್ತರವಾದದ್ದು. ಈ ಅಧ್ಯಾಯದಲ್ಲಿ ಅತ್ತಿಮಬ್ಬೆಯ ಕೊಡುಗೆಯ ಸ್ಪಷ್ಟಿಕರಣಕ್ಕಾಗಿ ಧಾರ್ಮಿಕ ಕೊಡುಗೆ, ಸಾಮಾಜಿಕ ಕೊಡುಗೆ, ಸಾಹಿತ್ಯಿಕ ಕೊಡುಗೆ, ವಿಶೇಷ ಕೊಡುಗೆ ಎಂಬ ಪ್ರಕಾರಗಳನ್ನು ಮಾಡಿಕೊಂಡಿದೆ. ಅಧ್ಯಾಯದ ಆರಂಭದಲ್ಲಿ ತನ್ನ ಕಾಲದ ದಾನಿಗಳಿಗಿಂತ ಶ್ರೇಷ್ಠಳಾಗಿರುವದನ್ನು ಚರ್ಚಿಸಲಾಗಿದೆ. ಲಕ್ಕುಂಡಿಯ ಬ್ರಹ್ಮ ಜಿನಾಲಯದ ಬಗ್ಗೆ ಹೇಳುವಾಗ ಶಾಸನ, ಕಾವ್ಯದಂತೆ, ಸ್ಥಳೀಯ ಐತಿಹ್ಯವನ್ನು ಗಮನದಲ್ಲಿಟ್ಟು ಕೊಳ್ಳಲಾಗಿದೆ.

ಐದನೇ ಅಧ್ಯಾಯದಲ್ಲಿ ಆಧುನಿಕ ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಒರೆಗೆ ಹಚ್ಚಲಾಗಿದೆ. ಭಾರತೀಯ ಸ್ತ್ರೀತ್ವದ ಆದರ್ಶದ ವಿಷಯ - ವಿಚಾರಗಳು ಮತ್ತು ಆದರ್ಶದ ನೀತಿ ನೇಮಗಳು ಪುರಾಣದಲ್ಲಿರುವ ಅಹಲ್ಯೆ, ಸೀತೆ, ದ್ರೌಪದಿ, ತಾರಾ, ಮಂಡೋದರಿ ಮುಂತಾದವರಿಂದ ಕಲ್ಪಿತಗೊಂಡು ಬಂದಿರುವಂತಹದು. ಏನೇ ಆಗಲಿ ಸ್ತ್ರೀಯರಿಗೆ ವೇದಗಳ ಕಾಲದಲ್ಲಿ ಬಹು ಉತ್ತಮವಾದ ಸ್ಥಾನ - ಮಾನಗಳಿದ್ದವು. ಅವರು ಸಹಿತ ಪುರುಷರ ಹಾಗೆ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಬಲ್ಲವರಾಗಿದ್ದರು. ವೇದಗಳ ಕಾಲದಲ್ಲಿ ಸ್ತ್ರೀಯರು ಮಂತ್ರಗಳ ರಚನೆಯನ್ನು ಮಾಡಿದ್ದಾರೆ. ಆದರೆ ಇದೇ ಸ್ಥಿತಿ ಮುಂದಿನ ಶತಮಾನಗಳಲ್ಲಿ ಕಂಡುಬರುವದಿಲ್ಲ. ಸ್ತ್ರೀಯರನ್ನು ಅಲಕ್ಷ, ಅಸಡ್ಡೆಯಿಂದ ಕಾಣುವ ಪರಿಪಾಠ ಬೆಳೆಯತೊಡಗಿತು. ಗಂಡು ಮಗುವಿನಿಂದಲೇ ಮೋಕ್ಷ, ಮುಕ್ತಿ ಎಂಬ ಬಲವಾದ ನಂಬಿಕೆ ಗಟ್ಟಿಗೊಂಡಿತು. ಸ್ತ್ರೀ ಪರಕೀಯಳಾಗಿ ಕೌಟುಂಬಿಕ ಸೀಮಿತ ವಲಯದಲ್ಲಿಯೇ ಬದುಕು ಸಾಗಿಸಬೇಕಾಯಿತು. ಅವಳು ಅತಂತ್ರಳು, ಅವಲಂಬಿತಳು. ದುರ್ಬಲಳು ಎನ್ನುವ ವಿಚಾರವನ್ನು ಮನು ಮೊದಲಾದವರು ವಿಧಿಸಿದರು. ಇದೇ ತರಹದ ಯೋಚನೆ ಭಾವನೆಗಳು ಕನ್ನಡಿಗರಲ್ಲಿಯೂ ಇದ್ದವು. ಆದರೆ ಇಂತಹ ವಾತಾವರಣಲ್ಲಿದ್ದುಕೊಂಡೇ ಅತ್ತಿಮಬ್ಬೆಯೂ ತನ್ನ ಸಾತ್ವಿಕ ನಿಲುವನ್ನು ಕಂಡುಕೊಂಡಳು.

ಹಾಗೆ ನೋಡಿದರೆ ಅತ್ತಿಮಬ್ಬೆ ಸ್ತ್ರೀ ವಾದಿಯಲ್ಲ ಅಥವಾ ಪುರುಷವಾದಿಯೂ ಅಲ್ಲ. ಅವಳದು ವೈಶಿಷ್ಟ್ಯಪೂರ್ಣವಾದ ಧೋರಣೆ, ಪುರುಷರೊಂದಿಗೆ ಸ್ಪರ್ಧೆಗೆ ಇಳಿದವಳಲ್ಲ. ತನಗೂ ಪುರುಷರ ಜತೆ ಸಮಾನತೆ ಬೇಕೆಂದು ಕೇಳಲಿಲ್ಲ ಸ್ತ್ರೀಗೂ ಒಂದು ವ್ಯಕ್ತಿತ್ವವಿದೆ, ಅವಕಾಶ ದೊರೆತರೆ ಅವಳು ಯಾವ ಪುರುಷನಿಗಿಂತ ಕಡಿಮೆ ಇಲ್ಲ ಎನ್ನುವ ಮಾತಿಗೆ ಅತ್ತಿಮಬ್ಬೆಯೇ ಒಂದು ಉದಾಹರಣೆ. ಈ ಶತಮಾನದ ಸ್ತ್ರೀಯರು ಹೋರಾಟ ಮಾಡಿ ತನಗೆ ಬೇಕೆನ್ನುವ ಸ್ಥಾನ - ಮಾನಗಳನ್ನು ಅತ್ತಿಮಬ್ಬೆ ತನ್ನ ವ್ಯಕ್ತಿತ್ವ ಮಾತ್ರದಿಂದಲೇ ಪಡೆದುಕೊಂಡಿದ್ದಳು.

ಅತ್ತಿಮಬ್ಬೆಯು ವೈಧವ್ಯದ ಕೀಳರಿಮೆಯಿಂದ ಪಾರಾಗಿ ಕಟ್ಟಳೆಗಳನ್ನು ಮೀರಿ ಸರಳ ಸಜ್ಜನಿಕೆಯ ಜೀವನವನ್ನು ನಡೆಸಿದಳು. ಸ್ತ್ರೀಯು ಯಾವ ರೀತಿಯ ಸಾಧನೆಯನ್ನು ಮಾಡಬಲ್ಲಳು ಎಂಬುದನ್ನು ಅವಳು ತೋರಿಸಿಕೊಟ್ಟಳು. ಅವಳದು ಪ್ರಗತಿಪರ ಧೋರಣೆ. ಅವಳ ಈ ಧೋರಣೆಯನ್ನು ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಡಾ.ಹಂಪನಾ ಹೇಳುವಂತೆ "..... ಅತ್ತಿಮಬ್ಬೆಯನ್ನು ಆಧುನಿಕ ಪಾತ್ರವಾಗಿ ನೋಡುವಂತೆ ಆದಿಮ ಪ್ರತಿಮೆಯಾಗಿಯೂ (Archetypal Image) ಪರಿಭಾವಿಸುವಂಥ ವಿಶಿಷ್ಟ ಸತ್ವ ಆಕೆಯ ವ್ಯಕ್ತಿತ್ವದಲ್ಲಿದೆ."[೧೬] ಡಾ.ಹಂಪನಾ ಅವರು ಅತ್ತಿಮಬ್ಬೆಯ ಕುರಿತಾಗಿ "ದೇಶಿ ಸ್ತ್ರೀವಾದದ ಉದ್ಘಾಟಿಕಿ ಅತ್ತಿಮಬ್ಬೆ" ಎಂದು ಅತ್ತಿಮಬ್ಬೆ ವ್ಯಕ್ತಿತ್ವ ಕುರಿತು ಲೇಖನವೊಂದನ್ನು ರಚಿಸಿದ್ದಾರೆ.[೧೭] (ಚಂದ್ರಕೊಡೆ - ಡಾ.ಹಂಪ ನಾಗರಾಜಯ್ಯ, ಪು.೫೨೯) ಈ ನಮ್ಮ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಹಿನ್ನೆಲೆಯೊಂದಿಗೆ ಲಕ್ಕುಂಡಿಯ ಶಾಸನಗಳು, ಐತಿಹ್ಯಗಳು, ಸ್ಮಾರಕ - ಶಿಲ್ಪಗಳ ಅಧ್ಯಯನದೊಂದಿಗೆ ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಪುನಾರಚಿಸಲು ಪ್ರಯತ್ನಿಸಲಾಗಿದೆ. ಈ ಪ್ರಯತ್ನದ ಜೊತೆಗೆ ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯನ್ನು ಗಮನಿಸಲಾಗಿದೆ. ಈ ಮೂಲಕ ಅತ್ತಿಮಬ್ಬೆಯ ಆಂತರೀಕ ವ್ಯಕ್ತಿತ್ವದ ಬಗ್ಗೆಯೂ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿ


೧. ಅಜಿತಪುರಾಣ, ೧೨ - ೧೨
೨. ಕವಿವರ ಕಾಮಧೇನು, ಡಾ.ಹಂಪನಾ, ಪು. ೪೩
೩. ಅದೇ, ಪು. ೪೪
೪. ಸಮಾಲೋಕನ, ತೀ.ನಂ.ಶ್ರೀ. ಪು. ೧೫೧
೫. ದಾನಚಿಂತಾಮಣಿ, ಜಿ.ಬ್ರಹ್ಮಪ್ಪ, ನುಡಿ ತೋರಣ, ಪು. ii
೬. ಅದೇ, ಪು. ೮
೭. ದಾನಚಿಂತಾಮಣಿ ಅತ್ತಿಮಬ್ಬೆ, ಡಾ. ಎಸ್.ಪಿ.ಪಾಟೀಲ, ಶ್ರೀ.ಪ್ರಶಾಂತಕುಮಾರ ನಾಲವಾರ, ಪು. ೧೬
೮. ಗುಣದಂಕಕಾರ್ತಿ ಅತ್ತಿಮಬ್ಬೆ, ಡಾ. ಕಮಲಾ ಹಂಪನಾ, ಪು. ೧೦
೯. ಜಿನಧರ್ಮ ದೇವತೆ, ಕೆ.ಬಿ.ತಳವಗೇರಿ, ಪು.
೧೦. ಅತ್ತಿಮಬ್ಬೆ, ಡಾ.ಮಧು ವೆಂಕಾರೆಡ್ಡಿ, ಪು. ೮
೧೧. Attimabbe and Chalukyas, Dr.Kamala Hampana, P. ೯, ೧೦
೧೨. ಕವಿವರ ಕಾಮಧೇನು, ಡಾ. ಹಂಪನಾ, ಪು. ೨೯
೧೩. ಅತ್ತಿಮಬ್ಬೆ, ಸಮೇತನಹಳ್ಳಿ, ರಾಮರಾಯ, ಪು. ೮
೧೪. ದಾನಚಿಂತಾಮಣಿ, ಶ್ರೀ ಜಿ.ಬ್ರಹ್ಮಪ್ಪ, ಪು. ೧೪
೧೫. ಗುಣದಂಕಕಾರ್ತಿ ಅತ್ತಿಮಬ್ಬೆ, ಡಾ. ಕಮಲಾ ಹಂಪನಾ, ಪ್ರಕಾಶಕರ ಮಾತು, ಪು. iii
೧೬. ಕವಿವರ ಕಾಮಧೇನು, ಡಾ. ಹಂಪನಾ, ಓದುಗರೊಡನೆ, ಪು. i, ii
೧೭. ಚಂದ್ರಕೊಡೆ, ಡಾ. ಹಂಪನಾ, ಪು. ೫೨೯

❑❑

೨

ಅತ್ತಿಮಬ್ಬೆಯ ಇತಿಹಾಸ

ಲಕ್ಕುಂಡಿಯ ನಕ್ಷೆ



* ನಕ್ಷೆ : ಶ್ರೀ ಅ. ದ. ಕಟ್ಟಿಮನಿ

೨

ಅತ್ತಿಮಬ್ಬೆಯ ಇತಿಹಾಸ

"ಬಳಿಯರಳೆಯಂತೆ ಗಂಗಾ
ಜಳದಂತೆಸೆವಜಿತ ಮುನಿಪತಿಯ ಗುಣಾ
ವಳಿಯಂತೆ ನೆಗಟ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಎಂದು ರನ್ನ ಮಹಾಕವಿಯು ತನಗೆ ಆಶ್ರಯ ನೀಡಿದ ಅತ್ತಿಮಬ್ಬೆಯ ಕುರಿತು "ಅಜಿತ ಪುರಾಣ"ದ ಪದ್ಯಗಳಲ್ಲಿ ಹೇಳಿದ್ದಾನೆ.[೧] ಅವಳ ವ್ಯಕ್ತಿತ್ವವನ್ನು ಮನೋಜ್ಞವಾಗಿ ಚಿತ್ರಿಸುವಾಗ; ಅವಳ ಶುಭ್ರ ಶೀಲವನ್ನು ಅಮೋಘವಾಗಿ ಉಪಮಿಸುತ್ತಾನೆ. ಆ ಉಪಮೆಗಳು ಯಾವವು ಎಂದರೆ ಬಳಿಯರಳೆ, ಗಂಗಾಜಳ, ಜಿನಮುನಿಪತಿಯ ಗುಣಗಳು ಮತ್ತು ನೆಗಟ್ದ ಕೊಪಣಾಚಳ. ಸರಸ್ವತಿಯ ಭಂಡಾರದ ಬೀಗ ಮುದ್ರೆಯನ್ನೊಡೆದ ರನ್ನ ಮಹಾಕವಿಗೆ ಶಬ್ದಗಳು ಸುಲಲಿತವಾಗಿ ಸಹಜವಾಗಿ ಮೂಡಿ ಬರುತ್ತವೆ. ಮೇಲಿನ ಪದ್ಯದಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವವು ಬಿಳಿಯರಳೆಯಂತೆ, ಗಂಗಾಜಳದಂತೆ, ಮುನಿಪತಿಯ ಗುಣಾವಳಿಯಂತೆ; ಎಂದಾಗ ಅತ್ತಿಮಬ್ಬೆಯ ವ್ಯಕ್ತಿತ್ವ ಕಿಂಚಿತ್ ದೋಷವಿಲ್ಲದ್ದು, ಪವಿತ್ರವಾದದ್ದು ಎನ್ನುವ ಅರ್ಥ ಥಟ್ಟನೆ ಗೋಚರಿಸುತ್ತದೆ. ಆದರೆ "ಕೊಪಣಾ ಚಳದಂತೆ" ಎನ್ನುವ ಪ್ರಯೋಗದ ಅರ್ಥವನ್ನು ತಿಳಿದುಕೊಳ್ಳಬೇಕಾದಾಗ "ಕೊಪ್ಪಳ" ಇತಿಹಾಸವನ್ನು ಅರ್ಥೈಸಿಕೊಳ್ಳುವುದು ಅತಿ ಅಗತ್ಯವಾಗುತ್ತದೆ.

ಇಂದು ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳ ನಗರದ ಸುತ್ತಲೂ ದುರ್ಗಮವಾದ ಬೆಟ್ಟ ಗುಡ್ಡಗಳು ಆವರಿಸಿಕೊಂಡಿವೆ. ಕೊಪ್ಪಳದ ಪೂರ್ವಕ್ಕೆ ಗವಿಮಠ ಬೆಟ್ಟಗಳ ಸಾಲು ಇದೆ. ಹಾಗೆಯೇ ಕೊಪ್ಪಳದ ಪಶ್ಚಿಮಕ್ಕೆ ಪಾಲ್ಕಿಗುಂಡು ಎನ್ನುವ ಬೆಟ್ಟಗಳ ಸಾಲು ಇದೆ. ಕೊಪ್ಪಳದ ವಾಯುವ್ಯ ದಿಕ್ಕಿಗೆ ಮಳೆಮಲ್ಲೇಶ್ವರನ ಬೆಟ್ಟಗಳ ಸಾಲು ಇದೆ. ಕೊಪ್ಪಳವು ಬೆಟ್ಟಗಳ ಸಾಲಿನ ಊರಾಗಿ ಶಾಸನಾಧಾರಿತವಾಗಿ ಸುದೀರ್ಘವಾದ ಇತಿಹಾಸವನ್ನು

ತನ್ನೊಳಗೆ ಇಟ್ಟುಕೊಂಡಿದೆ. ಯಾಕೆಂದರೆ ''ಕ್ರಿ.ಪೂ. ಮೂರನೆಯ ಶತಮಾನಕ್ಕೂ ಹಿಂದಿನಿಂದಲೇ ಕೊಪ್ಪಳ ಹೆಸರುವಾಸಿಯಾಗಿತ್ತು.''[೨]

ಶಾಸನಗಳಲ್ಲಿ ಕೊಪ್ಪಳವನ್ನು ಕುಪಣ, ಕೊಪಣ, ಕುಪಿನತೀರ್ಥ, ಮಹಾತೀರ್ಥವೆಂದು ಕರೆಯಲಾಗಿದೆ.[೩] ಕವಿರಾಜಮಾರ್ಗಕಾರನಾದ ಶ್ರೀವಿಜಯನು ಕೊಪ್ಪಳವನ್ನು 'ವಿದಿತ ಮಹಾಕೊಪಣನಗರ'ವೆಂದು ಕೀರ್ತಿಸಿದ್ದಾನೆ.[೪]

ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಜೈನ ಧರ್ಮವು ಭಾರತದಲ್ಲೆಲ್ಲಾ ಪ್ರಮುಖ ಸ್ಥಾನವನ್ನು ಪಡೆದಿದ್ದ ಕಾಲ. ತ್ರಿಕಾಲ ಜ್ಞಾನಿಗಳು, ಮಹಾತ್ಮರೂ ಆದ ಭದ್ರಬಾಹು ಭಟಾರರು ಭಾರತದಲ್ಲಿ ದೀರ್ಘಕಾಲದ ಕ್ಷಾಮ ಉಂಟಾಗಲಿರುವುದನ್ನು ತಿಳಿದುಕೊಂಡು, ತಮ್ಮ ಸಾವಿರಾರು ಶಿಷ್ಯರ ಜತೆಗೂಡಿ ಧರ್ಮವನ್ನು ಉಳಿಸುವದಕ್ಕಾಗಿ, ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದರು. ಈ ಜಿನಮುನಿಗಳವರ ಬಯಕೆಯಂತೆ ಮುನಿ ಸಂಘವು ದಕ್ಷಿಣದತ್ತ ಸಾಗಿತು. ಈ ಮುನಿಪುಂಗವರ ಜತೆಗೆ ಚಂದ್ರಗುಪ್ತ ಮೌರ್ಯನು ಟೊಂಕ ಕಟ್ಟಿ ನಿಂತನು. ಭದ್ರಬಾಹು ಮುನಿಗಳು ತಮ್ಮ ಅಪೇಕ್ಷೆಯನ್ನು ಈಡೇರಿಸಿಕೊಳ್ಳಬೇಕೆಂದು ಆ ಭಾಗದ ಬೆಟ್ಟದಲ್ಲಿರುವ ಒಂದು ಗುಹೆಯನ್ನು ಆಯ್ದುಕೊಂಡರು. ಮುನಿಪುಂಗವರ ಪಾದಸ್ಪರ್ಶದಿಂದ, ಜೈನ ಧರ್ಮೀಯರ ತೀರ್ಥಸ್ಥಾನವಾಗಿರುವ ಸ್ಥಳವೇ ಶ್ರವಣಬೆಳ್ಗೊಳದಲ್ಲಿರುವ ಭದ್ರಬಾಹು ಗುಹೆ. ಈ ಗುಹೆಯು ಇರುವ ಬೆಟ್ಟಕ್ಕೆ ''ಚಂದ್ರಗಿರಿ'' ಎಂಬ ಹೆಸರಿರುವದನ್ನು ಇತಿಹಾಸ ಬಣ್ಣಿಸುತ್ತದೆ. ಅರಸನೆಂಬ ಅಹಂಕಾರವಿಲ್ಲದ ಗುರು ಸನ್ನಿಧಿಯಲ್ಲಿ ಆತ್ಮದ ಉನ್ನತಿಯನ್ನು ಪಡೆದ ಮೌರ್ಯ ವಂಶದ ಅರಸ ಚಂದ್ರಗುಪ್ತನ ಹೆಸರಿನಿಂದಲೇ ''ಚಂದ್ರಗಿರಿ'' ಎಂದು ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ಜೈನ ಧರ್ಮೀಯರ ಹೃದಯದಲ್ಲಿ ಶ್ರವಣಬೆಳ್ಗೊಳಕ್ಕೆ ಅಪೂರ್ವವಾದ ಸ್ಥಾನವಿದೆ. ಇಲ್ಲಿ ಜೈನ ಶಾಸನಗಳ ಸಂಖ್ಯೆಯೂ ಅಧಿಕವಾಗಿದೆ. ಕ್ರಿ.ಶ. ೬, ೭ನೆಯ ಶತಮಾನದಿಂದಲೂ ಚಾರಿತ್ರಿಕ, ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡು ''ಕಳ್ಬೊಪ್ಪು'' ಎಂದು ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಶ್ರವಣಬೆಳಗೊಳದಷ್ಟೇ ಪ್ರಸಿದ್ಧಿಯನ್ನು ಪಡೆದುಕೊಂಡಿರುವ ಕೊಪ್ಪಳವು ಜೈನರ ಕಾಶಿ ಎಂದು ಕರೆಯಿಸಿಕೊಂಡಿದೆ. ಇಂಥ ಪವಿತ್ರ ಕ್ಷೇತ್ರದಲ್ಲಿ ತಮ್ಮ ಕೊನೆಯ ಸಮಯವನ್ನು ಕಳೆದು ಸಲ್ಲೇಖನ ವ್ರತ ಸ್ವೀಕರಿಸಿ ಭೌತಿಕ ಶರೀರವನ್ನು ತ್ಯಜಿಸಲು ಕೊಪ್ಪಳಕ್ಕೆ ಜೈನ ಮುನಿಗಳು ಬರುತ್ತಿದ್ದರೆಂಬುದು ಇಲ್ಲಿರುವ ನಿಷಧಿಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಈ ರೀತಿಯಾಗಿ ಧಾರ್ಮಿಕ ಮಹತ್ವದ ಕ್ಷೇತ್ರವಾಗಿರುವ ಕೊಪ್ಪಳದ ಮಹತ್ವವನ್ನು ತಾಮ್ರ ಶಾಸನವೊಂದು ''ಕೊಪ್ಪಳವು ಶ್ರವಣಬೆಳ್ಗೊಳ ಮತ್ತು ಉಜ್ಜಂತ ಗಿರಿಗಳಿಗೆ ಇದು ಸರಿಸಮಾನವಾಗಿದ್ದು, ಈ ಧರ್ಮಕ್ಕೆ ಜೈನನಾದವನು ತಪ್ಪು ನಡೆದರೆ ಬೆಳಗೊಳದ ಗುಮ್ಮಟನಾಥ ಉಜ್ಜಂತಗಿರಿಯ ನೇಮಿನಾಥ ಮತ್ತು ಕೊಪಣದ ಚಂದ್ರನಾಥರ ಜಿನಬಿಂಬಗಳನ್ನೊಡೆದ ಪಾಪಕ್ಕೆ ಗುರಿಯಾಗುವನು''[೫] ಎಂದು ವರ್ಣಿಸಿದೆ. ಇಷ್ಟು ಪವಿತ್ರವಾದ ಕ್ಷೇತ್ರ ಕೊಪ್ಪಳ.

ಈ ಮೊದಲು ಗಮನಿಸಿದಂತೆ ಕೊಪ್ಪಳವನ್ನು ತೀರ್ಥ, ಆದಿತೀರ್ಥ, ಮಹಾತೀರ್ಥ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಅಲ್ಲದೆ ಶಿವಮೊಗ್ಗೆಯ ೬೪ನೆಯ ಶಾಸನದಲ್ಲಿ ಕೊಪಣ ತೀರ್ಥವನ್ನು ''ಜೈನರ ಇನ್ನುಳಿದ ಸಾವಿರಾರು ತೀರ್ಥಗಳಿಗಿಂತ ಇದು ಮಿಗಿಲಾದುದು'' ಎಂದು ವರ್ಣಿಸಲಾಗಿದೆ.

ಕಾವ್ಯ ಪ್ರತಿಭೆಯನ್ನು ಹೊಂದಿದ ಜಟಾಸಿಂಹನಂದಿಯು ''ವರಾಂಗ ಚರಿತೆ'' ಎನ್ನುವ ಕೃತಿ ರಚಿಸಿದ್ದಾನೆ. ಕರ್ನಾಟಕದವನಾಗಿರಬಹುದಾದ ಈ ಜಟಾಸಿಂಹನಂದಿಯು ಪರಿಪೂರ್ಣ ಧಾರ್ಮಿಕ ಚರಿತ್ರೆಯುಳ್ಳವನಾಗಿ, ವೈಶಿಷ್ಟಪೂರ್ಣವಾದ ವ್ಯಕ್ತಿತ್ವದವನಾಗಿದ್ದನು. ದೇಶದ ವಿವಿಧೆಡೆಗಳಲ್ಲಿ ಸಂಚರಿಸಿ ಬಡವ - ಶ್ರೀಮಂತ, ಸಾಮಾನ್ಯ ಅಸಾಮಾನ್ಯ ಎಂಬ ಭೇದವಿಲ್ಲದೆ ಧಾರ್ಮಿಕ ಮನೋಭಾವನೆ ನೆಲೆಯೂರುವಂತೆ ತತ್ವಗಳನ್ನು ಉಪದೇಶಿಸಿ, ಇಳಿವಯಸ್ಸಿನಲ್ಲಿ ಸಲ್ಲೇಖನ ವ್ರತಾಚರಣೆ ಮಾಡಿ ಸಮಾಧಿ ಮರಣಕ್ಕಾಗಿ ಕೊಪ್ಪಳ ಕ್ಷೇತ್ರಕ್ಕೆ ಬಂದನು.[೬]

ಗಂಗ ರಾಜ ಮನೆತನದ ಮಾರಸಿಂಹ (ದ್ವಿತೀಯ)ನ ಮಂತ್ರಿಯಾಗಿ, ಅವನ ಮಗನಾದ ರಾಜ ರಾಚಮಲ್ಲನ ಮಂತ್ರಿ ಮತ್ತು ಸೇನಾಪತಿಯೂ ಆಗಿದ್ದ ಚಾವುಂಡರಾಯನು ಜೈನ ಧರ್ಮದ ಪೋಷಕನಾಗಿದ್ದನು. ಇವನು ತನ್ನ ''ತ್ರಿಷಷ್ಟಿ ಲಕ್ಷಣ ಮಹಾಪುರಾಣ''[೭] ದ ಪೀಠಿಕಾ ಭಾಗದಲ್ಲಿ ಮುಳಗುಂದದ ಕುಮಾರಸೇನ ಮುನಿಗಳಿಗೆ ಕೊಪಣಾಚಲಕ್ಕೆ ಹೋದ ಮೇಲೆ ಜ್ಞಾನೋದಯವಾಯಿತು ಎಂಬುದನ್ನು ಉಲ್ಲೇಖಿಸಿದ್ದಾನೆ.

''ಅಸಿಧಾರಾವ್ರತಿಯೆಂಬ ಪೆಂಪಸೆವಿನಂ ಮುಳ್ಗುಂದ ದೊಳ್ಮುನ್ನೆ ಸ
ನ್ಯಸನಕ್ಕೆಯ್ದೆ ನಿವೃತಿಗೆಯ್ದಾ ಕೊಪಣಾದ್ರೀಂದ್ರಕ್ಕೆ ವಂದಾಗಮೋ
ಕ್ತ ಸಮಾಧಾನ ವಿಧಾನದಿಂ ಮುಡಿಪಿ ಮುಕ್ತಿ ಸ್ಥಾನಮಂ ಮುಂಚೆ ಸಾ
ಧಿಸಿ ಕೊಂಡೊಳ್ಳುಕುಮಾರ ಮುನಿಪ್ರಂಗಕ್ಕುಂ ಪೆರಂಗಕ್ಕುಮೆ''[೮]

ಸುಪ್ರಸಿದ್ಧ ಜೈನ ಮುನಿಯಾಗಿರುವ ಸರ್ವನಂದಿ ಮುನಿ ಸಲ್ಲೇಖನ ವ್ರತವನ್ನಾಚರಿಸಿ ಸನ್ಯಾಸ ಮರಣ ಹೊಂದಲು ಕೊಪ್ಪಳಕ್ಕೆ ಬಂದಿದ್ದನು. ಗುಡ್ಡದ ಮೇಲೆ 'ಚಂದ್ರಾಮ ಬಂಡೆಯ' ಮೇಲಿನ ಕ್ರಿ.ಶ. ೮೮೧ - ೮೮೨ರ ಶಾಸನವು ಸರ್ವನಂದಿಯ ಕುರಿತಾಗಿದೆ.[೯] ಸರ್ವನಂದಿಯು ಜೈನಧರ್ಮ ತತ್ವಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು ಮತ್ತು ಪ್ರಚಾರವನ್ನು ಮಾಡುತ್ತಿದ್ದನು. ಹಾಗೂ ದೇವೇಂದ್ರಕೀರ್ತಿಮುನಿ, ಸಿಂಹನಂದಿ ಆಚಾರ್ಯರು, ಮೂಲ ಸಂಘದ ಸೇನಗಣದ ಪಾಯಣ್ಣ, ಚಂದ್ರಸೇನಮುನಿ ಮೊದಲಾದ ಮುನಿಪುಂಗವರು ಸಲ್ಲೇಖನ ಮರಣ ಹೊಂದಿದ ವಿಷಯವನ್ನು ಶಾಸನಗಳು ತಿಳಿಸುತ್ತವೆ.

ಈ ರೀತಿಯಾಗಿ ಪವಿತ್ರ ಕ್ಷೇತ್ರ, ಜೈನರ ಕಾಶಿಯಾಗಿರುವ ಕೊಪ್ಪಳದಲ್ಲಿ ಜಿನಾಲಯಗಳನ್ನು ನಿರ್ಮಿಸಲು ಹಲವಾರು ದಾನಶೂರರು, ಧರ್ಮಾಭಿಮಾನಿಗಳು ಮುಂದೆ ಬಂದಿದ್ದಾರೆ. ದೇಶದ ವಿವಿದೆಡೆಗಳಿಂದ ಕೊಪ್ಪಳಕ್ಕೆ ಬಂದಿರುವ ಪ್ರವಾಸಿ ಯಾತ್ರಿಕರ ಹೆಸರುಗಳನ್ನು ಇಲ್ಲಿನ ಅನೇಕ ಗವಿಯಲ್ಲಿ ಕೆತ್ತಲಾಗಿದೆ. ಕೊಪಣವು ೭ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಜೈನರ ಪುಣ್ಯಕ್ಷೇತ್ರವಾಗಿದ್ದಿತೆಂಬುದನ್ನು ಹುಂಚದ ಶಾಸನ ತಿಳಿಸುತ್ತದೆ.

"ಕೊಪಣ ಮೊದಲಾದ ತೀರ್ಥದೊ
ಳ ಪರಿಮಿತ ದ್ರವ್ಯದಿಂದೆ ಹಾಜ್ಞಾವಿಧಿಯಿಂ
ಸ್ವಪವರ್ಗದ ಫಲಕಾಗಿಯೆ
ವಿಪುಲೋದಯ ಮಾಡಿ ಮೆರದೆ ವಿದ್ಯಾನಂದಾ [೧೦]

ಅದೇ ರೀತಿಯಾಗಿ ಶಿಕಾರಿಪುರದ, ಶ್ರವಣಬೆಳಗೊಳದ ಶಾಸನ ಪ್ರಸಿದ್ಧಿಗೆ ಕೊಪಣವನ್ನು ಹೋಲಿಕೆಯಾಗಿ ಕೊಟ್ಟಿದೆ.

"ಊರೊಳತ್ತಪ್ಪದೆ ಬಸದಿಯ ನೋರಂತಿರೆ ಮಾಡಿ ಬೆಳಗವತ್ತಿಯೆ ನಾಡಂ
ಧಾರಿಣಿ ನೆಗವ್ದಿ ಕೋಪಣ | ಕೋರೆಗೆ ಮಾಡಿದನುದಾರ ನಿಧಿಯೇ ಚರಸಂ
ಗಂಗವಾಡಿ ತೊಂಬತ್ತುಮಿಸಾಸಿರಂ | ಕೊಪಣಮಾದುದು ಗಂಗಣ ದಂಡನಾಥನಿಂ"[೧೧]

ಇಷ್ಟೆಲ್ಲ ವಿಷಯವನ್ನೊಳಗೊಂಡಿರುವುದು ಕೊಪ್ಪಳದ ಕೊಪಣಾಚಳ. ಜಿನಭಕ್ತಳು, ಜಿನಧರ್ಮ ಪ್ರಚಾರಕಿಯೂ ಆದ ಅತ್ತಿಮಬ್ಬೆಗೆ "ಕೊಪಣಾಚಳ"ವನ್ನು ಉಪಮಿಸಿರುವುದು ಉಚಿತವಾಗಿದೆ. ಆದುದರಿಂದಲೇ ರನ್ನ ಮಹಾಕವಿಯು..... ಕೊಪಣಾಚಳದಂತೆ ಪವಿತ್ರಮತ್ತಿಬ್ಬೆಯ ಚರಿತಂ" ಎಂದು ಮನೋಜ್ಞವಾಗಿ ಹಾಡಿ ಹೊಗಳಿದ್ದಾನೆ.[೧೨]

ಅತ್ತಿಮಬ್ಬೆಯು ಕ್ರಿ.ಶ. ೧೦ನೆಯ ಶತಮಾನದ ಪೂರ್ವಾರ್ಧ ಅಂದರೆ ಚಾಲುಕ್ಯ ಚಕ್ರವರ್ತಿ ಆಹವಮಲ್ಲ ತೈಲಪನ ಮಗ ಇರಿವ ಬೆಡಂಗ (ಕ್ರಿ.ಶ. ೯೭೩ - ೯೯೭) ಹಾಗೂ ಸತ್ಯಾಶ್ರಯ (ಕ್ರಿ.ಶ. ೯೯೭ - ೧೦೦೮) ರ ಕಾಲದಲ್ಲಿದ್ದಳು. ಕನ್ನಡ ನಾಡಿನ ಪ್ರಮುಖ ರಾಜ ಮನೆತನಗಳಲ್ಲಿ ರಾಷ್ಟ್ರಕೂಟರ ಮನೆತನವು ಒಂದು. ರಾಷ್ಟ್ರಕೂಟರು ಬಾದಾಮಿ ಚಾಳುಕ್ಯರ ಸಾಮಾಂತರಾಗಿದ್ದವರು. ಕೆಲವು ಕಾಲಾನಂತರ ಬಾದಾಮಿ ಚಾಳುಕ್ಯರಿಂದ ಬೇರ್ಪಟ್ಟು ತಾವೇ ಸ್ವತಂತ್ರ ಸಾಮ್ರಾಟರಾದರು. ಹಾಗೆಯೇ ಚಾಳುಕ್ಯರು ತೋರಿಸಿದ ಜಿನ ಧರ್ಮಶ್ರದ್ಧೆಯನ್ನು ತಾವು ಅನುಸರಿಸಿದರು. ಜಿನಧರ್ಮ ಪರಿಪಾಲನೆ ಮತ್ತು ಪ್ರಸಾರ ಅವರ ರಾಜ್ಯಾಡಳಿತದ ಒಂದು ಭಾಗವೇ ಆಯಿತು. ಈ ಸಂದರ್ಭದಲ್ಲಿ ಹಂಪನಾ ಹೇಳುವಂತೆ "ರಾಷ್ಟ್ರಕೂಟ ಮಹಾಸೇನಾನಿಗಳಲ್ಲಿ ಅನೇಕರು ಜೈನರು. ಶ್ರೀವಿಜಯ, ಬಂಕೇಯ, ನರಸಿಂಹ ಮೊದಲಾದವರನ್ನು ಹೆಸರಿಸಬಹುದು.[೧೩]

ರಾಷ್ಟ್ರಕೂಟ ರಾಜ ಮನೆತನದ ಮಹಾಸಾಮಂತನು ತೈಲಪಯ್ಯ ಎಂಬುವನು. ಇವನು ಬಾದಾಮಿಯ ಚಾಲುಕ್ಯ ವಂಶಜನೆಂದು ಹೇಳಿಕೊಂಡಿದ್ದಾನೆ. ೮ನೆಯ ಶತಮಾನದ ಮಧ್ಯಭಾಗದಲ್ಲಿ ರಾಷ್ಟ್ರಕೂಟರಿಂದ ಪರಾಜಿತನಾದ ಇಮ್ಮಡಿ ಕೀರ್ತಿವರ್ಮನಿಗೆ ಭೀಮನೆಂಬ ಚಿಕ್ಕಪ್ಪನೊಬ್ಬನಿದ್ದನು. ಆ ಭೀಮನ ವಂಶಜರಲ್ಲಿ ಕೊನೆಯವನಾದ ನಾಲ್ಕನೆಯ ವಿಕ್ರಮಾದಿತ್ಯನ ನಾಲ್ಕನೆಯ ಮಗನೇ ಎರಡನೆಯ ತೈಲಪ. ಇವನ ತಾಯಿಯು ಬೊಂತಾದೇವಿ. ಬೊಂತಾದೇವಿಯು ತ್ರಿಪುರಿಯ ಕಳಚುರಿ ಲಕ್ಷ್ಮಣನ ಮಗಳು. 'ತೈಲಪನಿಗೆ ತೈಲಪ್ಪ, ತೈಲಪ್ಪಯ್ಯ

ಎಂಬ ಹೆಸರುಗಳೂ', "ಆಹವಮಲ್ಲ", "ಭುವನೈಕಮಲ್ಲ" ಎಂಬ ಬಿರುದುಗಳೂ ಇದ್ದವು.[೧೪] ಈ ತೈಲಪನು ರಾಷ್ಟ್ರಕೂಟ ಇಮ್ಮಡಿ ಕರ್ಕರಾಜನನ್ನು ಕ್ರಿ.ಶ. ೯೭೩ - ೭೪ ರಲ್ಲಿ ಸಿಂಹಾಸನದಿಂದ ಇಳಿಸಿ ತಾನೆ ಸಾಮ್ರಾಟನಾಗಿ ತನ್ನ ಪಿತಾಮಹರುಗಳ ಚಾಲುಕ್ಯವಂಶವೈಭವವನ್ನು ಪುನಃ ಸ್ಥಾಪನೆ ಮಾಡಿದನು. ಜೈನ ಧರ್ಮಕ್ಕೆ ಅಪರಿಮಿತವಾದ ಉತ್ತೇಜನವನ್ನು ಕೊಟ್ಟನು. ಅಂದರೆ ಕರ್ನಾಟಕ ಇತಿಹಾಸದಲ್ಲಿ, ಅತ್ತಿಮಬ್ಬೆ ಬದುಕಿರುವ ಕಾಲವಾದ ೧೦ನೆಯ ಶತಮಾನದ ಉತ್ತರಾರ್ಧಕ್ಕೆ ರಾಷ್ಟ್ರಕೂಟರು ಅಳಿದು ಕಲ್ಯಾಣ ಚಾಲುಕ್ಯರು ತಲೆಯೆತ್ತಿದರು. ಜೈನಧರ್ಮವನ್ನು ರಾಜ ಮಹಾರಾಜರು ಇಲ್ಲಿಯವರೆಗೆ ಪೋಷಿಸಿಕೊಂಡು ಬಂದಿದ್ದರು. ಇಲ್ಲಿಂದ ಮುಂದೆ ಮಂತ್ರಿ, ಸಾಮಂತ, ಮಂಡಲಾಧಿಪತಿ - ಮುಂತಾದ ಪ್ರಮುಖ ಅಧಿಕಾರಿಗಳು ಜಿನಧರ್ಮವನ್ನು ಪೋಷಿಸಿಕೊಂಡು ಬಂದಿರುವುದನ್ನು ಇತಿಹಾಸ ಹೇಳುತ್ತದೆ. ಮಹಾಸಾಮಂತನಾಗಿದ್ದವನು - ಚಕ್ರವರ್ತಿಯಾದ ತೈಲಪನ ಸೈನ್ಯದಲ್ಲಿರುವ ಸೇನಾಪತಿ, ಸೇನಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜೈನರೇ ಆಗಿದ್ದರು. ಈ ಸೇನಾನಿಗಳಲ್ಲಿ ಮುಖ್ಯವಾದವರು ಕಮ್ಮೆ ನಾಡಿನ ವೆಂಗಿಯ ಕಡೆಯಿಂದ ಬಂದವರಾಗಿದ್ದರು.[೧೪] ಇದೇ ವೆಂಗಿಮಂಡಲದ ಪುಂಗನೂರಿನವರೆ ಅತ್ತಿಮಬ್ಬೆಯ ಪೂರ್ವಜರು. ಈ ಪುಂಗನೂರು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿದೆ.

ಅತ್ತಿಮಬ್ಬೆಯ ತಾಯಿ-ತಂದೆಯರ ಊರು ವೆಂಗಿಮಂಡಲದ ಕಮ್ಮೆದೇಶದ ಪುಂಗನೂರು. ಈ ಊರಿನಲ್ಲಿಯೇ ಅತ್ತಿಮಬ್ಬೆ ಜನಿಸಿದ್ದು. ಈ ಪುಂಗನೂರನ್ನು ಮತ್ತು ವೆಂಗಿಪ್ರದೇಶದ ಕಮ್ಮೆ ನಾಡನ್ನು ಕವಿಗಳು ಅನೇಕ ರೀತಿಯಲ್ಲಿ ಬಣ್ಣಿಸಿದ್ದಾರೆ.

ಪೊನ್ನ ಕವಿ - ಶಾಂತಿಪುರಾಣದಲ್ಲಿ,

"ಆ ಧರಣೀವಧೂ ತಿಳಕಮಾಧಣೀ ಲಲನಾ ಮುಖಾಬ್ಜ ಮಂ
ತಾ ಧರಣೀ ರಮ್ಯೈಕ ನವ ಯೌವನಮಾಧರಣೀ ಪ್ರಿಯಾ ಕಟಾ
ಕ್ಷಾ ದರ ವಿಭ್ರಮ ಭ್ರಮಣಮಗ್ಗಳದಗ್ಗದ ಕಮ್ಮೆನಾಡು ವಿ
ದ್ಯಾಧರ ಲೋಕಮೇನದರ ಪೋಲ್ವೆಗೆ ಬರ್ಕುಮೆ ಸೋಲದಿರ್ಕುಮೇ [೧೫]

ಪೊನ್ನ ಕವಿಗೆ ಕಮ್ಮೆ ನಾಡನ್ನು ಹೋಲಿಸಬೇಕೆಂದರೆ ವಿಧ್ಯಾದರ ಲೋಕವೆ ಸರಿಯಂತೆ! ಭೂದೇವಿಯ ಹಣೆಯ ತಿಲಕದಂತೆ, ಭೂಮಾತೆಯ ಮುಖಕಮಲದಂತೆ, ಧರಣಿನಾರಿಯ ಹೊಸ ಹರೆಯದಂತೆ, ತರುಣಿಯ ಕಡೆಗಣ್ಣ ನೋಟದಂತೆ ಇರುವ ಆ ನಾಡನ್ನು ನೋಡಿ ಸೋಲದವರು ಯಾರು? ಎಂದು ಪೊನ್ನ ಕವಿ ಅಭಿಮಾನದಿಂದ ಪ್ರಶ್ನಿಸಿದ್ದಾನೆ.

ರನ್ನ ಕವಿಯು ಅಜಿತ ಪುರಾಣದಲ್ಲಿ,

ಜಳಧಿತರಂಗ ತಾಡಿತ ಮಹೀತಳದೊಳ್ ನೆಗಟ್ದಿತ್ತು ವೆಂಗಿಮಂ
ಡಲ ಮದರೊಳ್ ಜಿತಾನ್ಯವಿಷಯಂ ನೆಗರ್ಟ್ವಿರ್ದುದು ಕಂಮೆದೇಶಮ

ಗ್ಗಳಿಕೆಯ ಕಂಮೆದೇಶಮನಲಂಕರಿಸಿರ್ದಿದು ಪುಂಗನೂರ್ ಜಗ

ತ್ತಿಲಕಮದರ್ಕ್ಕೆ ಮುಖ್ಯಮೆನೆ ಪೆಂಪಸಿದಿರ್ದ್ದುದು ನಾಗಮಯ್ಯನಾ [೧೬]

ಶ್ರೇಷ್ಠವಾದ ನಾಡು ಕಮ್ಮ ದೇಶ. ಆ ಕಮ್ಮದೇಶವನ್ನು ಅಲಂಕರಿಸಿರುವುದು ಪುಂಗನೂರು ಎಂದು ಎಲ್ಲ ಕವಿಗಳ ಅಭಿಮತ.

ದುರ್ಗಸಿಂಹ ಕವಿಯು ತನ್ನ ಪಂಚತಂತ್ರ ಕೃತಿಯಲ್ಲಿ ''ಜನಕಂ ಕಮ್ಮೆಕುಲ ಪ್ರದೀಪಂ'' ಎಂದು ಹೇಳಿದರೆ, ಯಶೋಧರ ಚರಿತೆಯಲ್ಲಿ ಜನ್ನ ಕವಿಯು ''ಜನ್ನಂ ಕಮ್ಮೆಕುಲದ ತೊಡವಿನ ರನ್ನಂ'' ಎಂದಿದ್ದಾನೆ.

ಹೀಗೆ ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಕಮ್ಮೆ ನಾಡನ್ನು ಪುಂಗನೂರನ್ನು ಮನದುಂಬಿ ಹೊಗಳಿದ್ದಾರೆ. ಈ ಪುಂಗನೂರು ರಾಷ್ಟ್ರಕೂಟ ರಾಜಮನೆತನದ ಮಹಾಸಾಮಂತನಾಗಿದ್ದ ತೈಲಪನ ಆಳ್ವಿಕೆಯಲ್ಲಿತ್ತು. ಆ ರಾಜಮನೆತನದ ಇಮ್ಮಡಿ ಕರ್ಕರಾಜನನ್ನು ಕ್ರಿ.ಶ. ೯೭೩ - ೯೭೪ರಲ್ಲಿ ಆಡಳಿತದಿಂದ ಇಳಿಸಿ ತಾನೆ ದೊರೆಯಾಗಿ ಚಾಳುಕ್ಯವಂಶವನ್ನು ಪುನಃಶ್ಚೇತನಗೊಳಿಸಿದನಷ್ಟೆ. ಇವನು ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದನು. ಇವನ ಸೈನ್ಯದಲ್ಲಿ ಜೈಮತಾವಲಂಬಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅತ್ತಿಮಬ್ಬೆಯ ಪೂರ್ವಜರು ಕೂಡ ಇವನ ಆಶ್ರಯದಲ್ಲಿದ್ದರು. ಇವರ ಮೂಲಸ್ಥಳ ಕನ್ನಡ ಕವಿಗಳು ವರ್ಣಿಸಿರುವ ವೆಂಗಿಮಂಡಲದ ಪಂಗನೂರು. ಇದು ಈಗ ಆಂಧ್ರಪ್ರದೇಶದಲ್ಲಿದೆ.

ಅತ್ತಿಮಬ್ಬೆಯ ಜನನ, ಬಾಲ್ಯ ಮತ್ತು ಸಾಂಸಾರಿಕ ಜೀವನವನ್ನು ಗಮನಿಸುವದಕ್ಕಿಂತ ಪೂರ್ವದಲ್ಲಿ ಅವಳ ಧರ್ಮ ಕಾರ್ಯಕ್ಷೇತ್ರವಾದ ಲಕ್ಕುಂಡಿಯ ಬಗ್ಗೆ ಮೊದಲು ನೋಡಬಹುದು.

ಶ್ರೀಲೊಕ್ಕಿಗುಣ್ಡಿಯೊಳ್ಬಸದಿಯಂ ಮಾಡಿಸಿ ಯದಕ್ಕೆ ತಳವೃತ್ತಿಯೆಂದು ಕೊಟ್ಟ ಸುಙುಕಿಯ ಸೀಮಾ[೧೭]

ಅತ್ತಿಮಬ್ಬೆಯ ಇತಿಹಾಸಕ್ಕೆ ಅನುಗುಣವಾಗಿ ಲಕ್ಕುಂಡಿಯ ಕುರಿತಾಗಿ ಹೇಳುವುದು ಅಗತ್ಯವೆನಿಸುತ್ತದೆ.

ಅ. ಲಕ್ಕುಂಡಿಯ ಇತಿಹಾಸ

ಲಕ್ಕುಂಡಿ ಈ ಮೊದಲು ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿಯ ಒಂದು ಗ್ರಾಮ. ಆದರೆ ಈಗ ಗದಗ ಜಿಲ್ಲೆಗೆ ಸೇರಿದ ಒಂದು ಗ್ರಾಮವಾಗಿದೆ. ಗದುಗಿನ ಆಗ್ನೇಯ ಭಾಗಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿ ಲಕ್ಕುಂಡಿಯು ಇದೆ. ಲಕ್ಕುಂಡಿಯು ಕಲ್ಯಾಣ ಚಾಳುಕ್ಯರ, ಕಳಚೂರ್ಯರ, ಸೇವುಣರ, ಹೊಯ್ಸಳರ ರಾಜಕೀಯ ವಲಯದಲ್ಲಿತ್ತು ಎಂಬುದಕ್ಕೆ ಆ ಅರಸು ಮನೆತನಗಳ ೨೯ ಶಿಲಾಶಾಸನಗಳೇ ಆಧಾರವಾಗಿವೆ.[೧೮]

ಗದುಗಿನ ಸ್ಥಳ ಪುರಾಣವನ್ನು ಹೇಳುವ ಗ್ರಂಥ, ''ಕೃತ ಪುರ ಮಹಾತ್ಮೆ''[೧೯] ಯಲ್ಲಿ ಲಕ್ಕುಂಡಿಯ ಉಲ್ಲೇಖ ಬರುತ್ತದೆ.

''ಉಶೀನರಾತ್ಮಜೋ ರಾಜಾ ಶಿಬಿರಾಸೀತ್ಪ್ರತಾಪವಾನ್ ।

ಧಾರ್ಮಿಕಃ ಸತ್ಯ ಸಂಧಶ್ಚ ದಾತಾ ಯಜ್ವಾ ಕೃಪಾಕರಃ - - - - -

- -

ಉಶೀನರನೆಂಬುವವನಿಗೆ ಮಹಾ ಪರಾಕ್ರಮಿಯಾದ ಶಿಬಿ ಎನ್ನುವ ಮಗನಿದ್ದನು. ಅವನು ಧಾರ್ಮಿಕನೂ, ದಾನಿಯೂ, ಯಾಗಾದಿಗಳನ್ನು ಮಾಡುವವನೂ, ಸತ್ಯಪ್ರತಿಜ್ಞನೂ ಆಗಿದ್ದನು.

ಶಿಬಿಯು ತೀರ್ಥಯಾತ್ರೆಯನ್ನು ಮಾಡುವುದಕ್ಕಾಗಿ ಭೂಸಂಚಾರವನ್ನು ಕೈಗೊಂಡನು. ಕಪೋತಗಿರಿಯ ಉತ್ತರ ದಿಕ್ಕಿನಲ್ಲಿದ್ದ ''ಲಕ್ಕುಂಡಿ'' ಎಂಬ ನಗರಕ್ಕೆ ಪರಿವಾರ ಸಮೇತನಾಗಿ ಆಗಮಿಸಿದನು. ''ಪಾಪನಾಶಿನೀ'' ಎಂಬ ನದಿಯ ಸಮೀಪವೇ ಶಿಬಿರಾಜನು ಬೀಡು ಬಿಟ್ಟನು. ಲಕ್ಕುಂಡಿಯ ಪಶ್ಚಿಮ ಭಾಗದಲ್ಲಿ ಪಾಪನಾಶಿನೀ ಎಂಬ ನದಿಯು ಹರಿಯುತ್ತದೆ. ಇಲ್ಲಿ ಒಬ್ಬ ಕಳ್ಳನಿದ್ದನು. ಅವನು ದುಷ್ಟನೂ, ಮಹಾಪಾಪಿಯೂ, ನಿಷ್ಕರುಣಿ ಹಾಗೂ ಹಿಂಸಕನಾಗಿದ್ದನು. ಈ ಕಳ್ಳನ ಹೆಸರು ''ಭಲ್ಲಾಟಕ''ವೆಂದು. ಇವನ ವೃತ್ತಿಯೇ ಚೋರತನ. ಹೀಗಾಗಿ ಈತನು ದಾರಿಹೋಕರನ್ನು ಕಾಡಿಸಿ, ಪೀಡಿಸಿ, ಕೊಲೆಮಾಡಿ; ಅವರ ಬಳಿ ಇರುವ ನಗನಾಣ್ಯಗಳನ್ನು ದೋಚುತ್ತಿದ್ದನು. ಬೀಡು ಬಿಟ್ಟಿರುವ ಶಿಬಿರಾಜನು ಹೆಚ್ಚಿನ ಸೈನ್ಯವನ್ನು ತಂದಿಲ್ಲವೆಂದು ತಿಳಿದುಕೊಂಡ ಭಲ್ಲಾಟಕನು ಶಿಬಿರಾಜನೊಂದಿಗೆ ಯುದ್ಧಮಾಡಲು ಮುಂದಾದನು. ಕಳ್ಳನಿಗೂ, ರಾಜನಿಗೂ ಯುದ್ಧ ನಡೆದು ಕಳ್ಳನ ಅನುಚರರೆಲ್ಲ ಸರ್ವನಾಶವಾಗಿ ಭಲ್ಲಾಟಕ ಕಳ್ಳನ ತಲೆಯು ಶಿಬಿರಾಜನಿಂದ ಕತ್ತರಿಸಲ್ಪಟ್ಟಿತು. ಅಳಿದುಳಿದ ಕಳ್ಳನ ಅನುಚರರು ಹೆದರಿಕೆಯಿಂದ ಪಲಾಯನಗೈದರು. ಆದರೂ ಲಕ್ಕುಂಡಿಯಲ್ಲಿ ಆ ಚೋರನ ಅನುಚರರು ಮತ್ತು ಅವರು ಸಂಗ್ರಹಿಸಿಟ್ಟಿದ್ದ ಧನ ಕನಕಾದಿಗಳಿದ್ದವು. ರಾಜನು ಅವರನ್ನೆಲ್ಲ ಸದೆಬಡಿದು; ಸಂಗ್ರಹಿಸಲಾಗಿರುವ ಧನದಿಂದ ದೇವಾಲಯಗಳನ್ನು ಕೆರೆ ಬಾವಿಗಳನ್ನು ಕಟ್ಟಿಸಿದನು. ಲಕ್ಕುಂಡಿಯ ಉಪಗ್ರಾಮವನ್ನು, ತ್ರಿಕೂಟೇಶ್ವರ ಹೆಸರಿನ ಅಗ್ರಹಾರವನ್ನು ನಿರ್ಮಾಣ ಮಾಡಿದನು. ಅಗ್ರಹಾರಪುರಗಳಲ್ಲಿ ವಿಪ್ರರಿಗೆ ವಸತಿ, ಜೀವನ ಸಹಾಯಕ ವೃತ್ತಿಗಳನ್ನು ಮಾಡಿಕೊಟ್ಟು ಕೃತಪುರಕ್ಕೆ ಹೋಗಿ, ರಾಜವೈಭವದಿಂದ ಶಿವನನ್ನು ಪೂಜಿಸಿ, ವಿವಿಧ ಭಕ್ಷ್ಯ ಭೋಜ್ಯಗಳಿಂದ ವಿಪ್ರರನ್ನು ಸಂತೋಷಪಡಿಸಿದನಲ್ಲದೆ, ಅನೇಕ ದಾನಗಳನ್ನು ನೆರವೇರಿಸಿ, ಪರಶಿವನ ಉತ್ಸವವನ್ನು ಮಾಡಿ ಮತ್ತೆ ಲಕ್ಕುಂಡಿಗೆ ಬಂದು ವಾಸಿಸತೊಡಗಿದನು. ಉಶೀನರನ ಮಗನಾದ ಶಿಬಿಯು ಅತ್ಯಂತ ಸಮರ್ಥಶಾಲಿಯಾಗಿರುವ ತನ್ನ ಮೊಮ್ಮಗನನ್ನು ದೇಶಪಾಲನೆಗಾಗಿ ಲಕ್ಕುಂಡಿಯಲ್ಲಿಯೇ ನೆಲೆಗೊಳಿಸಿದನು. ಈ ರೀತಿಯಾದ ವಿವರಗಳು ಮತ್ತು ಲಕ್ಕುಂಡಿಯ ಉಲ್ಲೇಖ ''ಕೃತಪುರ ಮಹಾತ್ಮೆ''ಯಲ್ಲಿ ದೊರೆಯುತ್ತವೆ.

ಶಿಬಿ ಚಕ್ರವರ್ತಿಯ ಕಾಲಕ್ಕೆ ಲಕ್ಕುಂಡಿಗೆ ''ಏಳೂರಪುರ'' ಎಂಬ ಹೆಸರಿತ್ತು. ಈ ಏಳೂರಪುರಕ್ಕೆ ಲಕ್ಕುಂಡಿ ಎಂಬ ಹೆಸರು ಬಂದದ್ದೆ ಶಿಬಿರಾಜನ ದಾನಗುಣದಿಂದಲೇ ಎಂಬುದನ್ನು ಕತೆಯೊಂದು ಹೇಳುತ್ತದೆ.

ಶಿಬಿರಾಜನು ದಾನಕ್ಕೆ ಹೆಸರುವಾಸಿಯಾಗಿದ್ದನು. ಧರ್ಮಗುಣಸಂಪನ್ನನು, ಸಾತ್ವಿಕ ಮನೋಭಾವದವನು, ಮಹಾಶಿವಭಕ್ತನು, ಶಿವಭಕ್ತನಾಗಿರುವ ಶಿಬಿಯು ಶಿವನ ಮಹೋತ್ಸವವನ್ನು ತಪ್ಪದೇ ಮಾಡಿಸುತ್ತಿದ್ದನು.

[illegible]

[illegible]

[illegible]

ಯಾವಾಗಲೂ ದಾನ ಧರ್ಮಾದಿಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡವನು. ಇವನನ್ನು, ಇವನ ದಾನಗುಣವನ್ನು ಪರೀಕ್ಷೆ ಮಾಡಬೇಕೆಂದು ಹರಿಹರಬ್ರಹ್ಮಾದಿಗಳಿಗೆ ಒಮ್ಮೆ ಮನಸ್ಸಾಯಿತಂತೆ. ಅವರುಗಳು ವೇಷವನ್ನು ಮರೆಸಿಕೊಂಡು ಭೂಲೋಕಕ್ಕೆ ಬರುತ್ತಾರೆ. ತ್ರಿಮೂರ್ತಿಗಳು ಕ್ರಮವಾಗಿ ಗಿಡುಗ, ಬೇಡ, ಕಪೋತ ವೇಷಧಾರಿಗಳಾಗಿ ಬರುತ್ತಾರೆ. ಬೇಡನ ವೇಷದಲ್ಲಿರುವ ಶಿವನಿಂದ ತಪ್ಪಿಸಿಕೊಂಡ ಕಪೋತವು ಶಿಬಿಯ ಬಳಿಗೆ ಹಾರಿಕೊಂಡು ಬರುತ್ತದೆ. ಕಪೋತವನ್ನು ಅಟ್ಟಿಸಿಕೊಂಡ ಬಂದ ಬೇಡ ಆ ಪಕ್ಷಿಯನ್ನು ಕೊಡಬೇಕೆಂದು ಶಿಬಿಯಲ್ಲಿ ಕೇಳುತ್ತಾನೆ. ಆದರೆ ಸರ್ವಗುಣ ಸಂಪನ್ನನಾದ ಶಿಬಿಯು ಆ ಪಕ್ಷಿಯನ್ನು ಕೊಡಲಾರದೆ, ಅದಕ್ಕೆ ಬದಲಿಯಾಗಿ ಪಕ್ಷಿಯ ತೂಕದಷ್ಟೇ ಮಾಂಸವನ್ನು ಕೊಡಬೇಕೆಂಬ ಶಿವನ ಮಾತನ್ನು ಒಪ್ಪಿಕೊಳ್ಳುತ್ತಾನೆ. ಈಗ ಶಿಬಿ ದೊರೆಯು ತನ್ನ ತೊಡೆಯ ಮಾಂಸವನ್ನು ತಕ್ಕಡಿ (ಚಿಂತಾಲ)ಯ ಒಂದು ಭಾಗದಲ್ಲಿ ಇಡುತ್ತಾನೆ. ತೂಕ ಸರಿಬರುವುದಿಲ್ಲ. ಆ ತಕ್ಕಡಿಯಲ್ಲಿ ತಾನೇ ಕುಳಿತುಕೊಳ್ಳುತ್ತಾನೆ. ಆಗಲೂ ತೂಕ ಸರಿಬರುವುದಿಲ್ಲ. ತನ್ನ ಐವರು ರಾಣಿಯರನ್ನು ಕರೆಯಿಸಿಕೊಂಡು, ಅವರನ್ನು ತನ್ನ ಜತೆಗೆ ಕುಳ್ಳರಿಸಿಕೊಳ್ಳುತ್ತಾನೆ. ಆಗ ತೂಕವು ಸರಿಬರುತ್ತದೆ. ಇವನ ದಾನದ ಗುಣ, ಭಕ್ತಿಗೆ ಮೆಚ್ಚಿ, ವೇಷಧಾರಿಗಳಾದ ತ್ರಿಮೂರ್ತಿಗಳು ತಮ್ಮ ತಮ್ಮ ನಿಜರೂಪವನ್ನು ತೋರಿಸುತ್ತಾರೆ. ಶಿಬಿಯನ್ನು ಮನದುಂಬಿ ಹರಿಸಿ ಹೊನ್ನ ಲೋಹದ ಮಳೆಯನ್ನು ಸುರಿಸುತ್ತಾರೆ. ಅಂದಿನಿಂದ ಆ ಪ್ರದೇಶವು ಲೋಹದ ಕುಂಡ > ಲೋಹಗುಂಡಿ > ಲೊಕ್ಕುಂಡಿ > ಲಕ್ಕುಂಡಿ ಎಂಬ ಹೆಸರನ್ನು ಪಡೆದುಕೊಂಡಿದೆಯೆಂದು ಹೇಳುತ್ತಾರೆ. ಈಗಲೂ ಸಹಿತ ಊರ ಉತ್ತರ ದಿಕ್ಕಿನ ತೋಟವೊಂದರಲ್ಲಿ ಶಿಬಿಯು ಮಾಂಸವನ್ನು ತೂಗಿ ಕೊಟ್ಟ "ಚಿಂತಾಲ ಕಟ್ಟೆ" ಇದ್ದು, ಅದನ್ನು "ಶಿಬಾರ ಗಟ್ಟೆ" ಎಂತಲೂ ಕರೆಯುತ್ತಾರೆ.

ಪೌರಾಣಿಕ ಹಿನ್ನಲೆಯಲ್ಲದೆ ಚಾರಿತ್ರಿಕ ಹಿನ್ನಲೆಯೂ ಲಕ್ಕುಂಡಿ ಗ್ರಾಮಕ್ಕಿದೆ. ಲಕ್ಕುಂಡಿ ಹೆಸರಿನ ಬಗೆಗೆ ಇರುವ ಮಾಹಿತಿಗಳೆಂದರೆ ಲಕ್ಕುಂಡಿಯ ಮೊದಲಿನ ಹೆಸರು ಲೊಕ್ಕಿಗುಂಡಿ. ಲೊಕ್ಕಿ ಎಂದರೆ 'ಲೊಕ್ಕಿ' ಎಂಬ ಒಂದು ಜಾತಿಯ ಗಿಡ. ಗುಂಡಿ ಎಂದರೆ ತೆಗ್ಗು ಪ್ರದೇಶ, ತೆಗ್ಗಿನಿಂದ ಕೂಡಿದ ಪ್ರದೇಶ ಎಂದು ಅರ್ಥವಾಗುತ್ತದೆ. ಈ ಹೆಸರಿನ ವಿವರಣೆಯನ್ನು ಹಂಪನಾ ಅವರು ಸ್ವಾರಸ್ಯಕರವಾಗಿ ಸತ್ಯಕ್ಕೆ ಹತ್ತಿರವಾಗಿ ವಿಶ್ಲೇಷಿಸಿದ್ದಾರೆ. ಅದು ಹೀಗೆ - ಲೊಕ್ಕಿ ಗಿಡವನ್ನು ಲಕ್ಕಿ, ಕರೆಲಕ್ಕಿ, ಬಿಳೇಲಕ್ಕಿ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ಗಿಡ ಜೈನರಲ್ಲಿ ವಿಶೇಷ ಮಾನ್ಯತೆ ಪಡೆದುಕೊಂಡಿದೆ. "ಲಕ್ಕಿ ಗಿಡವನ್ನು ಜೈನರು ಯಕ್ಷಿ ಪದ್ಮಾವತಿಯ ವಾಸವೃಕ್ಷವೆಂದು ಭಾವಿಸುತ್ತಾರೆ."[೨೦] ಈ ಗಿಡಕ್ಕೆ ಪದ್ಮಾವತಿಯ ಸಂಬಂಧ ಕ್ರಿ.ಶ. ಏಳನೆಯ ಶತಮಾನದ ವೇಳೆಗೆ ಬಂದಂತೆ ತೋರುತ್ತದೆ.[೨೧] ಅದನ್ನು ಶಾಸನದಿಂದ ಕಂಡುಕೊಳ್ಳಬಹುದಾಗಿದೆ. ಹಾಗಾದರೆ ಲಕ್ಕುಂಡಿಯಲ್ಲಿ ಪದ್ಮಾವತಿಯ ಗುಡಿಯೊ, ದೇವಾಲಯವೊ, ಇರಲೇಬೇಕಾಗುತ್ತದೆ. ಈಗಿನ ಸಂಶೋಧನೆಗಳಿಂದ ಲಕ್ಕುಂಡಿಯ ಕೆರೆಯ ಬಳಿ ಪದ್ಮಾವತಿಯ ವಿಗ್ರಹವಿದ್ದೆಯೆಂದು ತಿಳಿದು ಬಂದಿದೆ. ಅಲ್ಲದೆ ಈ ಚರ್ಚೆಗೆ "ಲೊಕ್ಕಿಗುಂಡಿಯಲ್ಲಿ ಪದ್ಮಾವತಿಯ ಬಸದಿ ಕೂಡ ಪ್ರಸಿದ್ಧವಾಗಿದ್ದಿತು" ಎಂಬ ವಿಷಯವನ್ನು ಹೇಳುವ ಲಕ್ಕುಂಡಿ ಶಾಸನದ ಸಾಲುಗಳು ಪುಷ್ಟಿ ಕೊಡುತ್ತವೆ.

"ಅತ್ತಿಮಬ್ಬೆಯ ಜಿನೇಂದ್ರಗೃಹಂ ಧರಣೀತಳಕ್ಕೆ ಬಿಳ್ತರೆ ಪೊಸತಾಗಿದೆಯ್ವು
ಭರತಾರ್ಯ್ಯನಿನಾ ಭರತಾರ್ಯ್ಯನಿಂ ಬಳಿಕ್ಕಿರದದು (ಚೋಳರಿ)ನ್ದರಲೆ

ಬೆಂದಡೆ ಸುನ್ದರಮಾಗೆ ನಾಕಿಯಿಂ ಪರಮ ಪರೋಪಕಾರಿ ಸಿರಿಪಾಳನಿನೇ ಪರಿಪೂರ್ಣ್ನಮಾದುದೊ|| ಆ ಬಸದಿಯ ಪ್ರತಿಬದ್ಧವಪ್ಪ ತೋಂಟದ ಘಟಾಂತಿಕೆಯ ಬಸದಿಯ ಪಾರ್ಶ್ವ - - - - -[೨೨]

ಪದ್ಮಾವತಿ ಎಂದರೆ ಶಾಸನದಲ್ಲಿ - ಘಟಾಂತಿಕೆಯೆಂದು ನಿರೂಪಿತವಾಗಿದೆ. ಲೊಕ್ಕಿಯವ್ವೆ ಎನ್ನುವುದು ಪದ್ಮಾವತಿಯ ಹೆಸರು. ಈ ಎಲ್ಲ ಕಾರಣಗಳಿಂದ "ಲಕ್ಕುಂಡಿ" ಪದ ನಿಷ್ಪತ್ತಿಯ ಪರಾಮರ್ಶನವು ಪದ್ಮಾವತಿ ಹೆಸರನ್ನು ಹೊಂದಿರಬಹುದಾದ ಲೊಕ್ಕಿಗಿಡದ ಸಮೀಪಕ್ಕೆ ಹೋಗುತ್ತದೆ.

೧೧ನೆಯ ಶತಮಾನದ ಶಾಸನದಲ್ಲಿ ಇನ್ನೊಂದು ಬಗೆಯ ಉಲ್ಲೇಖ ದೊರೆಯುತ್ತದೆ. ಅದೇನೆಂದರೆ "ದಶರಥ ಪುತ್ರ ಶ್ರೀ ರಾಮಚಂದ್ರನು ದಾನವಾಗಿ ಕೊಟ್ಟ ಅಗ್ರಹಾರವೇ ಈ ಲಕ್ಕುಂಡಿ"[೨೩] ಶಾಸನದಲ್ಲಿ ಅದು ರಾಮರದತ್ತಿ ಅಗ್ರಹಾರ, ಶ್ರೀಮದ್ರಾಮ ಮಹೇಂದ್ರದತ್ತ ಅಗ್ರಹಾರ, ದಾಶರಥದತ್ತ ಅಗ್ರಹಾರ ಎಂಬ ಶಬ್ದಗಳಿಂದ ವರ್ಣಿತವಾಗಿದೆ. ಶ್ರೀ ರಾಮಚಂದ್ರನೇ ಅಗ್ರಹಾರವನ್ನು ದಾನ ಮಾಡಿದನು ಎನ್ನುವುದನ್ನು ಐತಿಹಾಸಿಕ ದೃಷ್ಟಿಕೋನದಿಂದ ಸತ್ಯವೆಂದು ಒಪ್ಪಿಕೊಳ್ಳುವುದು ಕಷ್ಟಸಾಧ್ಯ. ಆದರೆ ಆ ಕಾಲದಲ್ಲೇ ಈ ರೀತಿ ನಂಬಿಕೆಯಿತ್ತೆಂದು ಈ ಶಾಸನದಿಂದ ತಿಳಿದು ಬರುತ್ತದೆ.

ಲಕ್ಕುಂಡಿ ಶಾಸನವೇ ಈ ಲೊಕ್ಕಿಗುಂಡಿ ಅಗ್ರಹಾರವು ಒಂದು ಸಾವಿರ ಮಹಾಜನರ ಆಡಳಿತವನ್ನು ಹೊಂದಿತ್ತು ಎನ್ನುವುದನ್ನು ತಿಳಿಸಿಕೊಡುತ್ತದೆ.[೨೪] ಹಾಗೆಯೇ ಶಿಕ್ಷಣ ಕೇಂದ್ರವೂ ಆಗಿತ್ತು. ಅಗ್ರಹಾರದ ಉಸ್ತುವಾರಿ, ಸಾಮಾಜಿಕ ಕಾರ್ಯ, ವಾಜ್ಯ ತೀರ್ಮಾನವೆಲ್ಲಾ "ಪ್ರಮುಖ ಮಹಾಜನ ಸಾಸಿರ್ವರು" ನಡೆಸುತ್ತಿದ್ದರು. ಅವರ ಗುಣಗಳನ್ನು ಸಹಿತ ಈ ಊರ ಶಾಸನವೇ ವಿವರಿಸುತ್ತದೆ.[೨೫]

ಲಕ್ಕುಂಡಿಯ ವೀರಭದ್ರ ದೇವಾಲಯದಲ್ಲಿ ಕ್ರಿ.ಶ. ೧೧೨೧ರ ಶಾಸನವು ಲಕ್ಕುಂಡಿಯು "ಸಂಪತ್ತಿನಲ್ಲಿ ವೈಭವದಲ್ಲಿ ಧರ್ಮದ ಆಗರ, ಲೊಕ್ಕಿಗುಂಡಿ ಗ್ರಾಮವು ಇಂದ್ರನ ರಾಜಧಾನಿಯಾಗಿರುವ ಅಮರಾವತಿಗಿಂತ, ಭೋಗಾವತಿಗಿಂತ ಶ್ರೇಷ್ಠವಾದದ್ದು" ಎಂದು ಹೇಳುತ್ತದೆ.

"ಶ್ರೀ ಗೆ ವಿಭೂತಿಗೆ ಧರ್ಮ
ಕ್ಕಾಗರಮೆನಲಿಂದ್ರನಗ್ಗ್ರದಮರಾವತಿಗಂ
ಭೋಗಾವತಿಗಂ ಸತಿ - ಮೇ
ಲಾಗಿಪ್ಪುದು ಧರೆಗೆ ಲೊಕ್ಕಿಗುಂಡಿ ಗ್ರಾಮ"[೨೬]

ಇದೇ ರೀತಿಯಾಗಿ ೧೧೮೫ರ ಶಾಸನವು ಲಕ್ಕುಂಡಿ ಗ್ರಾಮವನ್ನು ಮೂರು ಲೋಕಗಳಲ್ಲಿಯ ಲಕ್ಷ್ಮಿದೇವಿಯ ಕೊರಳಹಾರವೆಂದು ಬಣ್ಣಿಸುತ್ತದೆ. ಗದುಗಿನ ಶಾಸನವು ಲೊಕ್ಕಿಗುಂಡಿಯು ಬೆಳ್ವಲ ನಾಡಿಗೆ ಚಂದನದ ತಿಲಕದಂತಿದೆ ಎಂದು ಬಣ್ಣಿಸುತ್ತದೆ.

ಲಕ್ಕುಂಡಿಯು ತನ್ನ ಘನತೆಯಿಂದಲೇ ಭೂಮಿಯ ಮೇಲೆ ಉಳಿಯಿತೆಂಬುದನ್ನು ಅತ್ಯಂತ ಸ್ವಾರಸ್ಯಕರವಾಗಿ ಗದುಗಿನ ಶಾಸನವು[೨೭] ಬಣ್ಣಿಸುತ್ತದೆ.

ಸರಸಿಜಯೋನಿ ಬಿನ್ನಪನರಿಯಲ್ಕ
ಮರಾವತಿ ಲೊಕ್ಕಿಗುಂಡಿ ಎಂಬೆ
ರಡು ಮನೆಯ್ದೆ ತೂಗಲ್ ಅಮರಾವತಿ
ಮುಟ್ಟಿದು ದೂರ್ಧ್ವಲೋಕಂ ||
ಧರೆಯೊಳೆ ಲೊಕ್ಕಿಗುಂಡಿ ನೆಲೆಸಿತ್ತೆನೆ
ಬಣ್ಣಿಪರಾರ್ಜ್ಜನಕ್ಕಲಂಕರಿಸುವ
ಲೊಕ್ಕಿಗುಂಡಿ ಮಹಾಗ್ರಾಮಮಂ
ದೊರೆವೆತ್ತ ಬಿಣ್ಪುಮ .....

ಅಲ್ಲದೆ ಲೊಕ್ಕಿಗುಂಡಿಯು ನಾಣ್ಯಗಳನ್ನು ತಯಾರು ಮಾಡುವ ಟಂಕಸಾಲೆಯನ್ನು ಹೊಂದಿತ್ತು ಎಂಬ ವಿಷಯವು ಶಾಸನಗಳಿಂದ ತಿಳಿದುಬರುವ ಅಂಶವಾಗಿದೆ. ಇಲ್ಲಿ ನಿರ್ಮಿತವಾಗುತ್ತಿರುವ ನಾಣ್ಯ ಯಾವುದೆಂದರೆ "ಲೊಕ್ಕಿಗದ್ಯಾಣ" ವೆಂಬುದು.[೨೮]

ಲೋಕ್ಕಿ ಗದ್ಯಾಣವಲ್ಲದೆ, ಗದ್ಯಾಣ, ಪೊನ್ ಗದ್ಯಾಣವೆಂಬ ಹೆಸರುಗಳು ನಾಣ್ಯಕ್ಕೆ ಇದ್ದವು. ಇವು ಬಂಗಾರದ ನಾಣ್ಯಗಳಾಗಿದ್ದು ಗಜಲಕ್ಷ್ಮಿಯ ಮುದ್ರೆಯನ್ನು ಹೊಂದಿವೆ. ಸಾಮಾನ್ಯವಾಗಿ ಇವುಗಳ ತೂಕ ೧, ೩, ೫ ಗುಂಜಿಗಳಾಗಿರುವುದು ತಿಳಿದುಬರುತ್ತದೆ. ಮತ್ತು ಐದೂವರೆ ಆಣೆ ತೂಕದ ನಾಣ್ಯಗಳೂ ಸಹಿತ ಇದ್ದವು.

ಲಕ್ಕುಂಡಿಯಲ್ಲಿ ಅಚ್ಚಿನಕೇಣಿ ಎಂಬ ಭಾಗವಿದೆ. ೧೨ನೇ ಶತಮಾನದಲ್ಲಿ ಈ ಪ್ರದೇಶವು ಟಂಕಸಾಲೆಯ ಪ್ರದೇಶವಾಗಿತ್ತು. ಈ ಟಂಕಸಾಲೆಯ ಅಧಿಕಾರಿಯಾಗಿ ಅಮಜಶೆಟ್ಟಿ ಎಂಬುವವನು ಇದ್ದನು.

ಈ ಲೊಕ್ಕಿ ಗದ್ಯಾಣ ನಾಣ್ಯವು ಕನ್ನಡ ನಾಡಿನಲ್ಲಲ್ಲದೇ ತಮಿಳು ಹಾಗೂ ತೆಲುಗು ನಾಡಿನಲ್ಲಿ ಸಹಿತ ಚಲಾವಣೆಯಲ್ಲಿತ್ತು ಎಂಬುದನ್ನು ಗಮನಿಸಿದರೆ ಲಕ್ಕುಂಡಿಯು ವೈಭವದ ತುತ್ತ ತುದಿಯನ್ನು ಮುಟ್ಟಿತ್ತು ಎಂಬುದು ಅರ್ಥವಾಗುತ್ತದೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ೮ ರಿಂದ ೧೪ನೆಯ ಶತಮಾನಗಳವರೆಗಿನ ಕಾಲ ಅತ್ಯಂತ ಮಹತ್ವದ್ದಾಗಿದೆ. ಈ ಅವಧಿಯಲ್ಲಿ ಕನ್ನಡ ನಾಡಿನ ಪ್ರಮುಖ ಅರಸು ಮನೆತನಗಳಾದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ತಮ್ಮ ರಾಜಕೀಯ, ಸಾಂಸ್ಕೃತಿಕ ಸಾಧನೆಗಳನ್ನು ಮೆರೆದಿದ್ದಾರೆ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಚಾಲುಕ್ಯರ ರಾಜಮನೆತನದಲ್ಲಿ ಅತ್ಯಂತ ಪ್ರಸಿದ್ಧನಾದ ಇಮ್ಮಡಿ ಪುಲಕೇಶಿಯ ತರುವಾಯ ಒಬ್ಬರಿಗಿಂತ, ಮತ್ತೊಬ್ಬ ಶ್ರೇಷ್ಠ ಅರಸರು ಆಗಿ ಹೋಗಿರುವಂತೆ ರಾಷ್ಟ್ರಕೂಟ ರಾಜವಂಶದಲ್ಲಿ ಅಂತಹ ಅರಸರು

ಆಳ್ವಿಕೆ ನಡೆಸಲಿಲ್ಲ. ಅಮೋಘವರ್ಷನ ನಂತರದ ಕಾಲಾವಧಿಯಲ್ಲಿ ಗದ್ದುಗೆಯೇರಿದ ಒಬ್ಬೊಬ್ಬ ಅರಸರು ಉತ್ತಮ ಆಳ್ವಿಕೆಯನ್ನು ನಡೆಸಿದರೂ ಬಹಳ ದಿನಗಳವರೆಗೆ ಆಳ್ವಿಕೆಯನ್ನು ಉಳಿಸಿಕೊಳ್ಳಲಿಲ್ಲ. ರಾಷ್ಟ್ರಕೂಟ ಅರಸರ ಅವನತಿಯ ನಂತರದ ಕಾಲಘಟ್ಟದಲ್ಲಿ, ಎರಡು ಶತಮಾನಗಳಷ್ಟು ಕಾಲ ಸಾಮಂತರಾಗಿದ್ದ ಚಾಲುಕ್ಯರು ಕರ್ನಾಟಕದ ರಾಜಗದ್ದುಗೆಯನ್ನೇರಿದರು. ಇವರು ''ಕಲ್ಯಾಣಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪ್ರಬಲರಾದರು.''[೨೯] ಕಲ್ಯಾಣ ಚಾಲುಕ್ಯರಲ್ಲಿ ತೈಲಪನೆಂಬುವನು ರಾಷ್ಟ್ರಕೂಟ ವಂಶದ ಕರ್ಕನೆಂಬುವವನ್ನು ಪೂರ್ಣವಾಗಿ ಸೋಲಿಸಿ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದನು. ನೃಪತುಂಗನ (ಅಮೋಘ ವರ್ಷ) ನಂತರದಲ್ಲಿ ಸುಮಾರು ನೂರು ವರ್ಷಗಳಲ್ಲಿಯೆ ರಾಷ್ಟ್ರಕೂಟ ರಾಜಮನೆತನವು ಕೊನೆಗೊಂಡು ೯೭೩ರಲ್ಲಿ ಚಾಲುಕ್ಯ ವಂಶ ಮರುಸ್ಥಾಪನೆಗೊಂಡಿತು.

ಕಲ್ಯಾಣ ಚಾಲುಕ್ಯರ ವಂಶಾವಳಿ[೩೦]

ತೈಲಪ - ೨ (೯೭೩ - ೯೯೭)

ಸತ್ಯಾಶ್ರಯ (೯೯೭ - ೧೦೦೮)
ದಸವರ್ಮ

ವಿಕ್ರಮಾದಿತ್ಯ - ೫ (೧೦೦೮ - ೧೦೧೫)
ಅಯ್ಯಣ (೧೦೧೫)
ಜಯಸಿಂಹ - ೨ (೧೦೧೫ - ೧೦೪೪)

ಸೋಮೇಶ್ವರ - ೧ (೧೦೪೪ - ೧೦೬೮)
ಜಯಸಿಂಹ - ೩

ಸೋಮೇಶ್ವರ - ೨ (೧೦೬೮ - ೧೦೭೬)
ವಿಕ್ರಮಾದಿತ್ಯ (೧೦೭೬ - ೧೧೨೭)
ಜಯಸಿಂಹ - ೪

ಸೋಮೇಶ್ವರ - ೩ (೧೧೨೭ - ೧೧೩೯)


ಜಗದೇಕಮಲ್ಲ - ೨ (೧೧೩೯ - ೧೧೪೯)
ತೈಲಪ - ೩ (೧೧೪೯ - ೧೧೬೨)

ಸೋಮೇಶ್ವರ - ೪ (೧೧೮೪ - ೧೧೯೮)
ಭೂಲೋಕಮಲ್ಲ - ೨
ಜಗದೇಕಮಲ್ಲ - ೬

ಈ ಕಲ್ಯಾಣ ಚಾಲುಕ್ಯರ ಕಾಲವು ಅತ್ಯಂತ ವೈಭವದ ಕಾಲವಾಗಿತ್ತು. ಈ ಕಾಲದ ಅರಸರು ಅನೇಕ ಪ್ರತಿಭಾವಂತ ಕವಿಗಳಿಗೂ, ಪಂಡಿತ, ವಿದ್ವಾಂಸರಿಗೂ ಆಶ್ರಯದಾತರಾಗಿದ್ದರು. ತಮ್ಮ ಆಳ್ವಿಕೆಯ ಇಡೀ ಅವಧಿಯಲ್ಲಿ ದಕ್ಷಿಣ ಭಾರತದ ಪ್ರಭುತ್ವಕ್ಕಾಗಿ ಚೋಳರೊಂದಿಗೆ ಹೋರಾಡುತ್ತಲೆ ಇದ್ದರು. ಹಲವಾರು ಜಯ, ವಿಜಯಗಳನ್ನು ಈ ರಾಜಮನೆತನ ಕಂಡಿದೆ. ಏನೇ ಆಗಲಿ ಕಲ್ಯಾಣ ಚಾಲುಕ್ಯರ ಕಾಲ ಕರ್ನಾಟಕದ ಇತಿಹಾಸದಲ್ಲಿ

ಅತ್ಯಂತ ವೈಭವದ ಕಾಲ. "ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಬಿತ್ತಿದ ಬೀಜವು ರಾಷ್ಟ್ರಕೂಟರ ಕಾಲದಲ್ಲಿ ವೃಕ್ಷವಾಗಿ ಬೆಳೆದು, ಅದರ ಸವಿಯಾದ ಫಲಗಳು ಈ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತಿನ್ನಲಿಕ್ಕೆ ದೊರೆತವು.[೩೧]

ಈ ಕಲ್ಯಾಣ ಚಾಲುಕ್ಯರ ಸಾಮ್ರಜ್ಯವು ದಕ್ಷಿಣದಿಂದ ಉತ್ತರದ ಕಡೆಗೆ, ಸೋಮನಾಥಪುರ, ಬಸರಾಳು, ಬೇಲೂರು, ಹಳೇಬೀಡು, ಅರಸಿಕೇರೆ, ಬಳ್ಳಿಗಾವೆ, ಕುರವತ್ತಿ, ಸೂರಟೂರು, "ಲಕ್ಕುಂಡಿ", ಅಣ್ಣಿಗೇರಿ, ಕೂಡಲಸಂಗಮ, ಬಾಗೇವಾಡಿ, ಕಲ್ಯಾಣ, ಓರಂಗಲ್ಲು, ಮಂಗಳವೇಢೆ, ಪಂಡರಪುರ, ಸಂಗನೇರ, ಸಿಂದಿನೇರ, ದೇವಗಿರಿ, ದೇವಳಹಳ್ಳಿ, ನವಸಾರಿಕಾದಲ್ಲೆಲ್ಲಾ ಹಬ್ಬಿತ್ತು.



ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ

ಎರಡನೇ ತೈಲಪನೇ ಈ ರಾಜ್ಯದ ಸ್ಥಾಪಕನು. ಇವನ ಆಳ್ವಿಕೆ ಕ್ರಿ.ಶ. ೯೭೩ರಲ್ಲಿ ಪ್ರಾರಂಭವಾಯಿತು. ಈತನು ೨೪ ವರ್ಷಗಳವರೆಗೆ ರಾಜ್ಯವಾಳಿದ್ದಾನೆ. ಈ ದೀರ್ಘ ಆಳ್ವಿಕೆಯಲ್ಲಿ ಮಾಳವದ ಅರಸ ಸೀಯಕ ಹರ್ಷನ ಉತ್ತರಾಧಿಕಾರಿ ವಾಕ್ಪತಿ ಮುಂಜನಿಂದ ೧೫ ಸಾರಿ ಪರಾಭವಕ್ಕೊಳಗಾಗಿ ೧೬ನೆಯ ಸಲ ಮುಂಜನನ್ನು ಸೋಲಿಸಿದ್ದಾನೆ.[೩೨] ಗಂಗ ಮಾರಸಿಂಹನನ್ನು ಸೋಲಿಸಿದ ತೈಲಪ, ರಾಷ್ಟ್ರಕೂಟರನ್ನು, ಚೋಳ ರಾಜರನ್ನು ಸೋಲಿಸಿದ್ದಾನೆ. ತೈಲಪನು ಶೂರನಾದ ಅರಸನಾಗಿದ್ದನು. ಅವನು ಯುದ್ಧ ಪ್ರಿಯಾನಾಗಿರುವಂತೆ ಸಾಹಿತ್ಯ ಪ್ರಿಯನೂ ಆಗಿದ್ದನು. ಕನ್ನಡಸಾಹಿತ್ಯದಲ್ಲಿ ರತ್ನತ್ರಯರೆಂದೆ ಪ್ರಸಿದ್ಧರಾದ ಪೊನ್ನ, ಪಂಪ, ರನ್ನ - ಇವರಲ್ಲಿ ರನ್ನ ಕವಿಯು ತೈಲಪನ ಆಸ್ಥಾನ ಕವಿಯಾಗಿದ್ದನು.

ಎರಡನೆಯ ತೈಲಪನ ನಂತರ ಅವನ ಮಗನಾದ ಸತ್ಯಾಶ್ರಯನು ಕ್ರಿ.ಶ. ೯೯೭ ರಾಜಗದ್ದುಗೆಯನ್ನೇರಿದನು. ಇವನ ಆಳ್ವಿಕೆಯ ಕಾಲ ಕ್ರಿ.ಶ. ೯೯೭ರಿಂದ ೧೦೦೮ರವರೆಗೆ ಇದ್ದಿತು. ಸತ್ಯಾಶ್ರಯನಿಗೆ "ಇರಿವ ಬೆಡಂಗ, ಆಹಮಲ್ಲ, ಅಕಲಂಕ ಚರಿತ" ಎಂಬ ಬಿರುದುಗಳಿದ್ದವು. ಅಲ್ಲದೆ ಸತ್ತಿಗ, ಸತ್ತಿಮ ಎಂಬ ಮತ್ತೆರಡು ಹೆಸರುಗಳಿದ್ದವು.[೩೩]

ಸತ್ಯಾಶ್ರಯನ ತಂದೆಯಾದ ೨ನೆಯ ತೈಲಪನ ಆಸ್ಥಾನದಲ್ಲಿಯೇ ರನ್ನ ಕವಿಯು ಆಸ್ಥಾನ ಕವಿಯಾಗಿದ್ದನಷ್ಟೆ. ಈಗ ಸತ್ಯಾಶ್ರಯನ ಕಾಲದಲ್ಲಿಯೂ ಆಸ್ಥಾನ ಕವಿಯಾಗಿಯೇ ಮುಂದುವರೆದನು. ಸತ್ಯಾಶ್ರಯನು ತಂದೆಯ ಹಾಗೆ ಯುದ್ಧಪ್ರಿಯನೂ ಸಾಹಿತ್ಯಪ್ರಿಯನೂ ಆಗಿದ್ದನು. ಹೀಗಾಗಿ ರನ್ನಕವಿಯು ಸತ್ಯಾಶ್ರಯದ ಆಸ್ಥಾನ ಕವಿಯಾಗಿಯೂ ಮುಂದುವರೆದನು. ಈ ರನ್ನ ಕವಿಯು ಸತ್ಯಾಶ್ರಯನಿಗಿಂತ ಪೂರ್ವದಲ್ಲಿ ಸೌದತ್ತಿಯ ರಟ್ಟರ ದೊರೆಯಾದ ಕಾರ್ತವಿರ್ಯ ಅರಸನ ಸೇನೆಯಲ್ಲಿ ಸೇರಿಕೊಂಡಿದ್ದನು. (ಸು. ೯೬೯). ತನ್ನ ಉತ್ತಮವಾದ ಸ್ಥಿತಿಗಳಿಗಾಗಿ ರನ್ನನು ರಟ್ಟರಿಂದ ಗಂಗ ಅರಸರ ಸೈನ್ಯದಲ್ಲಿ ಸು. ೯೭೧ರಲ್ಲಿ ಸೇರಿಕೊಂಡನು. ಆದರೆ ಈ ಕಾಲ ಗಂಗರಿಗೆ ಸುಖಕರವಾದ ಕಾಲವಾಗಿರಲಿಲ್ಲ. ಇದೇ ಸಮಯದಲ್ಲಿ ರನ್ನನಿಗೆ ಆದ ಒಂದು ದೊಡ್ಡ ಲಾಭವೆಂದರೆ ಚಾವುಮಡರಾಯನ ಸ್ನೇಹ. ಇಬ್ಬರೂ ಶ್ರವಣಬೆಳ್ಗೊಳದಲ್ಲಿ ಭೇಟಿಯಾಗಿರಬೇಕು. ಇಬ್ಬರೂ ಪರಸ್ಪರ ಗುಣಗಳಿಂದ ಪ್ರಭಾವಿಗಳಾದರು. ಈ ಸ್ನೇಹಸಂಬಂಧಕ್ಕಿಂತ ಮುಂಚಿತವಾಗಿ ರನ್ನನು ಅಂದರೆ ೨ ತೈಲಪನ ಆಸ್ಥಾನ ಕವಿಯಾಗಿದ್ದನು. ಸುಮಾರು ೯೮೨ರಲ್ಲಿ ನಮ್ಮ ಅತ್ತಿಮಬ್ಬೆಯು ಶ್ರವಣಬೆಳ್ಗೊಳದ ರನ್ನನನ್ನು ಅತ್ತಿಮಬ್ಬೆಗೆ ಪರಿಚಯಿಸಿಕೊಟ್ಟಿದ್ದಾನೆ. ಈಗಾಗಲೇ ಸತ್ಯಾಶ್ರಯ ತೈಲಪನ ಜೋಳದ ಪಾಳಿಯನ್ನು ತೀರಿಸುವದಕ್ಕಾಗಿ ರನ್ನ ಕವಿಯು 'ಸಾಹಸ ಭೀಮ ವಿಜಯ'ವೆಂಬ ಕೃತಿ ರಚಿಸಿ ಅದರಲ್ಲಿ ಭೀಮನಿಗೂ ಸತ್ಯಾಶ್ರಯನಿಗೂ ಅಬೇಧ ಕಲ್ಪನೆಯನ್ನು ಮಾಡಿದ್ದನು. ಈಗ ಸತ್ಯಾಶ್ರಯನ ಆಸ್ಥಾನ ಕವಿಯಾದ ರನ್ನನಿಗೆ ಅತ್ತಿಮಬ್ಬೆ ಪೋಷಕಿಯಾದಳು. ಈ ಅತ್ತಿಮಬ್ಬೆಯೋ ಧಲ್ಲಪನ ಸೊಸೆ. ಈ ಧಲ್ಲಪನು ೨ನೆಯ ತೈಲಪನು ಈ ಮೊದಲು ರಾಷ್ಟ್ರಕೂಟರ ಮಾಂಡಲಿಕರಸನಾಗಿರುವಾಗ, ಅವನಿಗೆ ೯೬೦ರಲ್ಲಿ ಅವನ ದಂಡನಾಯಕರಾಗಿದ್ದವರು ಅತ್ತಿಮಬ್ಬೆಯ ಅಪ್ಪನಾದ ಮಲ್ಲಪಯ್ಯ ಚಿಕ್ಕಪ್ಪನಾದ ಪೊನ್ನಮಯ್ಯ[೩೪] ೨ ತೈಲಪನು ರಾಷ್ಟ್ರಕೂಟರ ಕಕ್ಕನನ್ನು ಸೋಲಿಸಿ ೯೭೩ರಲ್ಲಿ ಚಾಳುಕ್ಯ ಅರಸೊತ್ತಿಗೆಯನ್ನು ಸ್ಥಾಪಿಸಿ ಚಕ್ರವರ್ತಿಯಾದಾಗ - ಚಕ್ರವರ್ತಿಗೆ ಮಹಾಮಂತ್ರಿಯಾದವನು ಧಲ್ಲಪ. ಧಲ್ಲಪನ ಸೊಸೆಯೇ ಅತ್ತಿಮಬ್ಬೆ.

ಹೀಗೆ ಅತ್ತಿಮಬ್ಬೆಯ ಇತಿಹಾಸಕ್ಕೆ ಸಂಬಂಧಪಟ್ಟ ವ್ಯಕ್ತಿಗಳೆಲ್ಲ ಕಲ್ಯಾಣ ಚಾಲುಕ್ಯ ಆಸ್ಥಾನದಲ್ಲಿಯೇ ಬರುವದರಿಂದ ಅವರ ಇತಿಹಾಸವನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ. ಅತ್ತಿಮಬ್ಬೆಯು ರನ್ನನಿಗೆ ಆಶ್ರಯಕೊಟ್ಟ ಅಜಿತಪುರಾಣವನ್ನು ಬರೆಸಿದಳು. ಅತ್ತಿಮಬ್ಬೆಯಿಂದ ಉಪಕೃತನಾದ ರನ್ನ ಕವಿಯು ಅವಳ ಚರಿತ್ರೆಯನ್ನು ಅಜಿತಪುರಾಣದಲ್ಲಿ ಸೇರಿಸಿ ಅವಳನ್ನು ಚಿರಸ್ಥಾಯಿಗೊಳಿಸಿದನು.

ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯದಲ್ಲಿ ಬರುವ ಊರುಗಳಲ್ಲಿ ಲಕ್ಕುಂಡಿಯು ಒಂದು ಹಾಗೆಯೇ ಅತ್ತಿಮಬ್ಬೆಯ ಕಾರ್ಯಕ್ಷೇತ್ರವೂ ಲಕ್ಕುಂಡಿಯಾಗಿರುವುದರಿಂದ ಲಕ್ಕುಂಡಿಯ ಇತಿಹಾಸವನ್ನು ಗಮನಿಸುವುದು ಅತ್ಯಗತ್ಯವಾಗಿದೆ.

ಆರಂಭದಲ್ಲಿ ಹೇಳಿರುವಂತೆ ಲಕ್ಕುಂಡಿಯು ಕಲ್ಯಾಣ ಚಾಳುಕ್ಯರ, ಕಳಚೂರ್ಯರ, ಸೇಉಣರ, ಹೊಯ್ಸಳರ ರಾಜಕೀಯ ವಲಯದಲ್ಲಿತ್ತು. ಶಾಸನಗಳನ್ನು ನೋಡಿದಾಗ ಲಕ್ಕುಂಡಿಗೆ ಈ ಮೊದಲು ಲೊಕ್ಕಿಗುಂಡಿ ಎಂಬ ಹೆಸರಿರುವುದು ತಿಳಿದುಬರುತ್ತದೆ. ಬಹುಶ: ಇದು ಜೈನ ಯಕ್ಷಿ ಪದ್ಮಾವತಿ ಮತ್ತು ಲೊಕ್ಕಿಗಿಡದ ಸಂಬಂಧದಿಂದ ಇರಬಹುದು.[೯]

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಲಕ್ಕುಂಡಿಯು ಚಾಳುಕ್ಯರ ಕಲೆ ಶಿಲ್ಪಗಳಿಗೆ ಪ್ರಧಾನ ಕೇಂದ್ರವಾಗಿತ್ತು.

ಕ್ರಿ.ಶ. ೧೧೯೨ರಲ್ಲಿ ಹೊಯ್ಸಳ ವೀರಬಲ್ಲಾಳನು (೧೧೭೨ - ೧೨೧೧) ಲಕ್ಕುಂಡಿಯಲ್ಲಿ ವಾಸವಾಗಿದ್ದು, ಇದನ್ನು ತನ್ನ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.[೧೦]

ಶಿವಶರಣನಾದ ಅಜಗಣ್ಣ ತನ್ನ ತಂಗಿಯಾದ ಶಿವಶರಣೆ ಮುಕ್ತಾಯಕ್ಕನೊಡನೆ ಲಕ್ಕುಂಡಿಯಲ್ಲಿದ್ದನು.೧೧ ಅಜಗಣ ಹಾಗೂ ಮುಕ್ತಾಯಕ್ಕರು ೧೨ನೆಯ ಶತಮಾನದ ಪ್ರಮುಖ ಶಿವಶರಣರಾಗಿದ್ದಾರೆ. ಹೊಯ್ಸಳರು, ವಿಜಯನಗರದ ಅರಸರು ಲಕ್ಕುಂಡಿಯಲ್ಲಿ ಆಡಳಿತ ನಡೆಸಿದ್ದಾರೆ.

ಒಟ್ಟಾರೆಯಾಗಿ ೯ ರಿಂದ ೧೪ನೆಯ ಶತಮಾನದವರೆಗಿನ ಕಾಲದಲ್ಲಿ ಲಕ್ಕುಂಡಿಯು ಒಂದು ಪ್ರಮುಖ ನಗರವಾಗಿದೆ.

ಲಕ್ಕುಂಡಿಯಲ್ಲಿ ಚಾಲುಕ್ಯ ವಾಸ್ತುಶಿಲ್ಪಕಲೆ

ಕಲ್ಯಾಣ ಚಾಲುಕ್ಯ ಶೈಲಿಕಯ ದೇವಸ್ಥಾನಗಳು ಪ್ರಸಿದ್ಧಿಯಾಗಿವೆ. ಗದಗ, ಕುರುವತ್ತಿ, ಹಾವೇರಿ, ರಾಯಚೂರು ಜಿಲ್ಲೆಯ (ಈಗ ಕೊಪ್ಪಳ) ಇಟಗಿ ಮತ್ತು ಕುಕನೂರು, ಬಳ್ಳಾರಿ ಜಿಲ್ಲೆಯ ಹಡಗಲಿ, ಬಾಗಲಿ, ಶಿವಮೊಗ್ಗ ಜಿಲ್ಲೆಯ ಬೆಳ್ಗಾವಿ, ಚಿತ್ರದುರ್ಗ ಜಿಲ್ಲೆಯ ಹರಿಹರಗಳಲ್ಲಿರುವ ದೇವಾಲಯಗಳು ಚಾಳುಕ್ಯ ಶೈಲಿಯ ಪ್ರಸಿದ್ಧವಾದ ದೇವಾಲಯಗಳಿರುವಂತೆ ಗದಗ ಜಿಲ್ಲೆಯ ದೇವಸ್ಥಾನ ಲಕ್ಕುಂಡಿಯ ದೇವಸ್ಥಾನಗಳು ಚಾಳುಕ್ಯ ಶೈಲಿಯ ಪ್ರಸಿದ್ಧ ದೇವಾಲಯಗಳಾಗಿವೆ.[೧]

ಈ ಶೈಲಿಯ ದೇವಾಲಯಗಳ ಗೋಡೆಯ ಭಾಗಗಳಲ್ಲಿ ಉಬ್ಬುಗಂಬಗಳ ಪಟ್ಟದಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ಪಾಪನಾಥ ದೇವಾಲಯಗಳಲ್ಲಿರುವಂತೆ ಇವೆ. ಉಬ್ಬುಗಂಬಗಳ ಮಧ್ಯಭಾಗದಲ್ಲಿ ಗೂಡುಗಳನ್ನು ಜಾಣತನದಿಂದ ಕೆತ್ತಲಾಗಿದೆ. ಶಿಖರವು ಮೇಲು ಭಾಗಕ್ಕೆ ಹೋದಂತೆ ಗಾತ್ರ, ಭಾರ ಕಡಿಮೆಯಾಗುತ್ತ ಹೋಗಿವೆ. ಬಾಗಿಲಿನ ಚಿತ್ತಾರ ಅಲಂಕಾರಿಕವಾಗಿ ಕಾಣುತ್ತದೆ. ಸ್ತೂಪಿ, ಶಿಖರ ಮತ್ತು ಮಹಾನಾಸಿಕಗಳು ಲಕ್ಕುಂಡಿಯ ನನ್ನೇಶ್ವರ ದೇವಾಲಯದಲ್ಲಿ ಸುಂದರವಾಗಿವೆ. ಸೂಕ್ಷ್ಮವಾಗಿ ಕೆತ್ತಲಾದ ಸಣ್ಣ ಪ್ರಮಾಣದ ದೇವದೇವತೆಗಳ ಮೂರ್ತಿಗಳಿಂದ ದೇವಾಲಯಗಳನ್ನು ಅಲಂಕರಿಸಿರುವುದನ್ನು ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪಕಲೆಯಲ್ಲಿ ಕಾಣುತ್ತೇವೆ. ಈ ದೇವದೇವತೆಗಳ ವಿಗ್ರಹಗಳನ್ನು ದೇವಾಲಯದ ಗೋಡೆಗಳ ಮೇಲ್ಭಾಗದಲ್ಲಿ ಅಳವಡಿಸಿದ್ದಾರೆ ಮತ್ತು ಶಿಖರದ ಬೇರೆ ಬೇರೆ ಸ್ತರಗಳಲ್ಲಿಯೂ ಕಾಣಬಹುದಾಗಿದೆ. ವೈದಿಕ ಮತ್ತು ಜೈನ ದೇವಾಲಯಗಳಲ್ಲಿ ಶಿಲ್ಪಗಳ ಅಲಂಕಾರದಲ್ಲಿ ಉಡುಗೆಯು ಬಹಳ ನವಿರಾಗಿ, ನಾಜೂಕಾಗಿ ಕೆತ್ತಲ್ಪಟ್ಟಿವೆ. ಮನಾಕರ್ಷಕವಾದ ಕಲ್ಯಾಣದ ಚಾಳುಕ್ಯ ಕಲಾ ವಿನ್ಯಾಸವು, ವಾಸ್ತು ಶಿಲ್ಪಕಲೆಯ ವೈಭವವನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಅಲೆಕ್ಸಾಂಡರ್ ಹೇಳಿರುವ ವಾಸುತಿಶಿಲ್ಪ ಒಂದು ಜನಾಂಗದ ಒಂದು ಕಾಲದ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ ಎಂಬ ಮಾತು ಲಕ್ಕುಂಡಿಯಲ್ಲಿರುವ ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಕಲೆಯನ್ನು ಗಮನಿಸಿದಾಗ ಸತ್ಯವೆನಿಸುತ್ತದೆ.

ಲಕ್ಕುಂಡಿಯ ಬಸದಿಗಳು

ಲಕ್ಕುಂಡಿಯಲ್ಲಿ ಏಳು ಜೈನ ಬಸದಿಗಳಿವೆ.[೪೦]

ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಬಸದಿಯನ್ನು ನಿರ್ಮಾಣ ಮಾಡುವುದಕ್ಕೆ ಮುನ್ನವೇ ಕೆಲವೊಂದು ಬಸದಿಗಳನ್ನು ಮಾಡಿಸಿದ್ದಾಳೆ. ಅದು ಶಾಸೋನಕ್ತವು ಆಗಿದೆ.

> "ಪರಮಶ್ರೀ ಜಿನನಾಥಗೇಹ ವಿಳಸಚ್ಛಂದೋಹ ಸಂದೋಹ ಭಾ
> ಸುರ ಜೈನ ಪ್ರತಿಮಾ ವಿಚಿತ್ರ ಮಣಿಘಂಟಾ ಚಿತ್ರ ಮಣಿಘಂಟಾ
> ಮಾಳಿಕಾ ಸಂಖೆ ಸಾಯಿರದಯ್ಯೂ ಜೆವು ಬೇಜಿವೇಜೆನಿಪಿನ್ನಂ ನಿರ್ಮ್ಮಾವಣಂ
> ಗೆಯ್ದು ಭೂಭರದೊಳ್ ಧರ್ಮ್ಮಮನತ್ತಿಮಬ್ಬೆಯ ವೊಲಿನ್ನಾರುಜ್ವಳಂ ಮಾಡಿದರ್

ಹೀಗೆ ಬ್ರಹ್ಮ ಜಿನಾಲಯಕ್ಕಿಂತ ಪೂರ್ವದಲ್ಲಿ ಬಸದಿಗಳನ್ನು ನಿರ್ಮಿಸಿದ್ದಾಳೆ. ಅವುಗಳು ಶಾಸನದಲ್ಲಿ ಮುಮ್ಮಾಡಿಸಿದ ಬಸದಿಗಳೆಂದು ಬಣ್ಣಿಸಲ್ಪಟ್ಟಿವೆ. ಆ ಬಸದಿಗಳಿಗೆ ಕಳಶವಿಟುವಂತೆ ಬ್ರಹ್ಮಜಿನಾಲಯ ನಿರ್ಮಿಸಿದ್ದಾಳೆ.

> ಜಿತ ದೇವಾ .....
> ....
> ....
> .... ಜೈನಾಧಿವಾಸಂ.

ಆ ಕಲ್ಯಾಣ ಚಾಲುಕ್ಯ ಅರಸನಾದ ಇರಿವಬೆಡಂಗ ಸತ್ಯಾಶ್ರಯನಿಗೆ ಭಿನ್ನವಿಸಿಕೊಂಡು ಹೊನ್ನಿನ ಕಳಶವನ್ನು ಪೆಡೆದುಕೊಂಡಿದ್ದಾಳೆ. ಅತ್ತಿಮಬ್ಬೆಯು ಕಟ್ಟಿಸಿದ್ದು ಬ್ರಹ್ಮ ಜಿನಾಲಯ. ಈ ಕುರಿತಾದ ವಿಷಯಗಳನ್ನು ಅತ್ತಿಮಬ್ಬೆಯ ಕೊಡುಗೆ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಲೊಕ್ಕಿಗುಂಡಿಯ ಮಹಾಜನರಿಗೆ ಈ ಜಿನಾಲಯಕ್ಕೆ ಬ್ರಹ್ಮ ಜಿನಾಲಯವೆಂದು ನಾಮಕರಣ ಮಾಡಿದ್ದಾರೆ. (ಬ್ರಹ್ಮ ಜಿನಾಲಯದ ಕುರಿತಾಗಿ ಅತ್ತಿಮಬ್ಬೆಯ ಕೊಡುಗೆ)

ಈಗ ನಾಗನಾಥಾಲಯವೆಂಬ ಒಂದು ದೇವಾಲಯ ಲಕ್ಕುಂಡಿಯಲ್ಲಿದೆ. ಆದರೆ ಅದು ಕೂಡಾ ಬಸದಿಯಾಗಿದೆ. ಆ ಬಸದಿಯು ಪಾರ್ಶ್ವನಾಥ ಬಸದಿ ಎಂದು ಗುರುತಿಸಬಹುದಾಗಿದೆ. ಹೇಗೆಂದರೆ ಗರ್ಭಗುಡಿಯಲ್ಲಿ ವಿಗ್ರಹದ ಪೀಠ ಮತ್ತು ಪಾರ್ಶ್ವನಾಥನ ತಲೆಯ ಮೇಲೆ ಇರುವ ೫ ಹೆಡೆಗಳುಳ್ಳ ಸರ್ಪ ಇರುವುದರಿಂದ ಮತ್ತು ಪಾರ್ಶ್ವನಾಥನ ಶಿಲ್ಪ ಈ ಕಟ್ಟಡದ ಹಿಂಭಾಗದ ಗೋಪುರದ ಬಳಿ ಇರುವುದರಿಂದ ಈ ಕಟ್ಟಡವು ಪಾರ್ಶ್ವನಾಥನ ಬಸದಿ ಇರಬಹುದೆಂದು ಊಹಿಸಬಹುದಾಗಿದೆ. ಆದರೆ ಈಗ ಗರ್ಭಗುಡಿಯಲ್ಲಿ ಲಿಮಗ ಸ್ಥಾಪನೆ ಮಾಡಿದ್ದಾರೆ.

ಅತ್ತಿಮಬ್ಬೆ ನಿರ್ಮಿಸಿದ ಬ್ರಹ್ಮ ಜಿನಾಲಯ ಈ ಸುಸ್ಥಿತಿಯಲ್ಲಿರುವ ಬಸದಿಯಾಗಿದೆ. (ಅದರ ವಿಷಯ ಅತ್ತಿಮಬ್ಬೆಯ ಕೊಡುಗೆ)

ಚಾರಿತ್ರಿಕವಾಗಿ ಪರಾಮರ್ಶಿಸಿದಾಗ ಲಕ್ಕುಮಡಿಯಲ್ಲಿರುವ ದೇವಾಲಯ ಬಸದಿ ಕಟ್ಟಡಗಳಿಂದಾಗಿ ಇದು ಶಿಲ್ಪಕಲಾಕೃತಿಗಳ ಬೀಡು ಎನಿಸುತ್ತದೆ. ಸೋಮನಾಥಪುರ ದೇವಾಲಯದ ಬಗ್ಗೆ ರಾಷ್ಟ್ರಕವಿ ಕುವೆಂಪು "ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು" ಎಂಬ ಕವಿತೆಯ ಸಾಲುಗಳು ನೆನಪಾಗುತ್ತವೆ.

ಬ್ರಹ್ಮಜಿನಾಲಯ, ನಾಗನಾಥ ದೇವಾಲಯವಲ್ಲದೆ ನೀಲಕಂಠೇಶ್ವರ ದೇವಾಲಯ, ವಿದ್ಯಾಶಂಕರ ದೇವಾಲಯ, ನಾರಾಯಣ ದೇವಾಲಯ, ಕಾಶಿವಿಶ್ವನಾಥನ ದೇವಸ್ಥಾನ, ನನ್ನೇಶ್ವರ ಗುಡಿ ಹಾಲಗುಂಡಿ ಬಸವೇಶ್ವರನ ಗುಡಿ, ಕುಂಬಾರೇಶ್ವರ ದೇವಸ್ಥಾನ, ಚಂದ್ರಮೌಳೇಶ್ವರ ಮತ್ತು ವೀರಭದ್ರೇಶ್ವರ ಗುಡಿ, ವಿರೂಪಾಕ್ಷೇಶ್ವರ, ಮಲ್ಲಿಕಾರ್ಜುನ ದೇವರ ಗುಡಿಗಳು ಪ್ರವಾಸಿಗರಿಗೆ ಗತಕಾಲದ ಐತಿಹಾಸಿಕ ಶಿಲ್ಪಕಲೆಯ ವೈಭವವನ್ನು ಸೂಚಿಸುತ್ತವೆ.

ಮೇಲ್ಕಾಣಿಸಿದ ದೇವಸ್ಥಾನಗಳು ಶಿಥಿಲವಾಗಿ ಮತ್ತೆ ಜೀರ್ಣೋದ್ಧಾರಗೊಂಡಿವೆ. ಆದರೂ ಕಾಶೀ ವಿಶ್ವೇಶ್ವರ ದೇವಾಲಯ ಉತ್ತಮ ಸ್ಥಿತಿಯಲ್ಲಿರುವ ಉತ್ತಮ ಕಲಾಕೃತಿಯಾಗಿದೆ.

ಈ ದೇವಾಲಯಕ್ಕೆ ವಿಶಾಲವಾದ ಪ್ರಾಂಗಣವಿದೆ. ಇದು ಸಂಪೂರ್ಣ ಕರಿಯ ಕಲ್ಲಿನಿಂದಲೇ ನಿರ್ಮಾಣಗೊಂಡಿರುವ ಕಾರಣಕ್ಕಾಗಿ ಸ್ಥಳಿಕರು ಕರಿದೇವರ ಗುಡಿಯೆಂದು ಕರೆಯುವುದು ರೂಢಿಯಾಗಿದೆ. ಈ ದೇವಾಲಯಕ್ಕೆ ಎರಡು ಗರ್ಭಗುಡಿಗಳಿರುವುದು ವಿಶೇಷವಾಗಿದೆ. ಒಂದು ಗರ್ಭಗುಡಿಯಲ್ಲಿ ಪೂರ್ವ ದಿಕ್ಕಿಗೆ ಮುಖಮಾಡಿರುವ ಕಾಶೀ ವಿಶ್ವೇಶ್ವರನಿರುವ ದೇವಾಲಯದ ತಳಪಾಯವು ಕೆಲವು ಚೌಕಗಳ ಆಕಾರದಲ್ಲಿ

ಕಟ್ಟಿಸಲ್ಪಟ್ಟಿದೆ. ಸುಮಾರು ೨೦ ಘಟಗಳಷ್ಟು ಅಂತರವಿರುವ ಪೀಠದ ಮೇಲೆ ಏಳು ಕುದುರೆಗಳನ್ನು ಈಗ ನೋಡಬಹುದಾಗಿದೆ. ಗರ್ಭಗುಡಿಯ ಮುಂದೆ ಮೇಲ್ಭಾಗದಲ್ಲಿ ಸೂರ್ಯನ ವಿಗ್ರಹವನ್ನು ಕೆತ್ತಲಾಗಿದೆ. ಪಶ್ಚಿಮ ದಿಕ್ಕಿಗೆ ಮುಖ ಮಂಟಪ, ಸೂರ್ಯದೇವರ ದೇವಸ್ಥಾನವು ತಳಸಾಯವು ವೃತ್ತಾಕಾರವಾಗಿದೆ. ಗರ್ಭಗುಡಿಯಲ್ಲಿ ಸೂರ್ಯದೇವನ ಪೀಠ ಮಾತ್ರ ಇದೆ. ಮುಂದೆ ಅರ್ಧಮಂಟಪ ಹಾಗೂ ನವರಗಂಗಗಳನ್ನು ಹೊಂದಿದೆ. ಒಂದೇ ಜಗಲಿಯ ಮೇಲೆ ಇರುವ ದ್ವಿಕೂಟ ದೇವಾಲಯವಾಗಿರುವ ಲಕ್ಕುಂಡಿಯ ಕಾಶೀ ವಿಶ್ವನಾಥ ದೇವಾಲಯದ ಹೊರಗೋಡೆಗಳು ಮಾತ್ರ ಚಾಳುಕ್ಯ ಶೈಲಿಯಾಗಿರುವ ನಕ್ಷತ್ರಾಕಾರದಲ್ಲಿ ರಚಿತಗೊಂಡಿವೆ. ತಳಪಾಯದಲ್ಲಿ ಕೆತ್ತಿರುವ ಆನೆಗಳು ಸಾಲು, ದೂರದಿಂದ ನೋಡಿದರೆ ಇಡೀ ದೇವಾಲಯವನ್ನು ಹೊತ್ತಿರುವಂತೆ ಆಕರ್ಷಕವಾಗಿ ಕಾಣುತ್ತದೆ. ಹೊರಗೋಡೆಯ ರಚನೆ ಶಿಲ್ಪಿಗಳ ಕಾಲಾಚಾತುರ್ಯವನ್ನು, ಶ್ರಮವನ್ನು ತೋರಿಸುತ್ತದೆ.

ಕಾಶೀ ವಿಶ್ವೇಶರನ ದೇವಾಲಯದ ಗರ್ಭಗುಡಿಯ ಕಂಬಗಳು ವೈಶಿಷ್ಟ್ಯಪೂರ್ಣವಾಗಿವೆ. ಸೂಕ್ಷ್ಮ ಕೆತ್ತನೆಗಳನ್ನು ಒಳಗೊಂಡ ಅತಿ ನುಣುಪಾದ ಈ ಕಂಬಗಳಲ್ಲಿ ಪ್ರತಿಬಿಂಬ ತಲೆಕೆಳಗಾಗಿ ಕಾಣಿಸುತ್ತದೆ. ಗರ್ಭಗುಡಿಯ ಚೌಕಟ್ಟಿನ ಮೇಲೆ ಮಧ್ಯದಲ್ಲಿ ಶಿವ ಎರಡೂ ಬದಿಗಳಲ್ಲಿ ಬ್ರಹ್ಮ ವಿಷ್ಣುವಿನ ವಿಗ್ರಹವನ್ನು ಕೆತ್ತಲಾಗಿದೆ. ಮಧ್ಯದಲ್ಲಿ ಶಿವನ ವಿಗ್ರಹವಿರುವದರಿಂದ ಈ ದೇವಾಲಯವನ್ನು ಶೈವ ದೇವಾಲಯವೆಂದು ಗುರುತಿಸಬಹುದಾಗಿದೆ.

ಈ ದೇವಾಲಯದ ಪೂರ್ವದಿಕ್ಕಿಗಿರುವ ದ್ವಾರವೂ ಅತ್ಯಂತ ಕಲಾತ್ಮಕವಾಗಿ, ಜಾಲಂಧ್ರಗಳಿರುವದರಿಂದ ಆಕರ್ಷಕವಾಗಿದೆ. ದಕ್ಷಿಣ ದಿಕ್ಕಿಗಿರುವ ಮಹಾದ್ವಾರವು ಸಹಿತ ಕಲಾತ್ಮಕವಾಗಿದೆ. ಆದರೂ ಪೂರ್ವದಿಕ್ಕಿನ ದ್ವಾರವು ಹೆಚ್ಚು ಕಲಾತ್ಮಕವಾಗಿದ್ದು, ಸೂಕ್ಷ್ಮವಾದ ಕಲಾ ಕುಸುರಿ ಇದೆ. ಬೆಳ್ಳಿ, ಬಂಗಾರ ಇಲ್ಲವೆ ಕಟ್ಟಿಗೆಯಲ್ಲಿ ಕೆತ್ತಬಹುದಾದ ಸೂಕ್ಷ್ಮ ಕುಸುರಿ ಕೆಲಸವನ್ನು ಶಿಲ್ಪಿಗಳು ಕಲ್ಲಿನಲ್ಲಿ ಕೆತ್ತಿರುವುದು ಅತ್ಯಂತ ಅದ್ಭುತವಾಗಿದೆ. ಆದುದರಿಂದಲೇ ಶ್ರೀ.ಎಂ.ಎಂ.ಅಣ್ಣಿಗೇರಿ ಅವರು.

> "ಇಲ್ಲಿ ಕೆತ್ತಿದ ಸುಳವುಗಳು, ಝೂಲರಿಗಳನ್ನು ಹೇಗೆ ಕಳೆದಿದ್ದಾರೆ
> ಇವುಗಳನ್ನು ಕೆತ್ತಲು ಕಲ್ಲು ಕುಟಿಗರ ಉಳಿಯು ಎಷ್ಟು ಸೂಕ್ಷ್ಮವಾಗಿ,
> ಜಾಗರೂಕತೆಯಿಂದ ಕೆಲಸ ಮಾಡಿರಬೇಕು ಎಂದೆನಿಸುತ್ತದೆ.
> ಇಲ್ಲಿನ ಕೆತ್ತನೆಯನ್ನು ನೋಡಿದರೆ ಹಳೇಬಿಡು, ಬೇಲೂರು
> ದೇವಾಲಯ ಮತ್ತು ಅವುಗಳಲ್ಲಿಯ ವಿಗ್ರಹಗಳ ನೆನಪಾಗುತ್ತದೆ."[೪೧]

ಇಷ್ಟು ವಿಶೇಷವಾಗಿರುವ ಈ ಕಾಶೀ ವಿಶ್ವೇಶ್ವರ ದೇವಸ್ಥಾನಕ್ಕೆ ಶಿಖರದ ಮೇಲೆ ಕಳಸವಿಲ್ಲ. ಇಷ್ಟೆಲ್ಲಾ ಶಿಲ್ಪ ವೈಭವವನ್ನು ಹೊಂದಿರುವ ಈ ದೇವಸ್ಥಾನಕ್ಕೆ ಶಿಖರವಿಲ್ಲವೆಂದರೆ ಅಚ್ಚರಿಯಾಗುತ್ತದೆ. ಅದು ನಿರ್ಮಾಣ ಕಾಲದಲ್ಲಿ ಅಪೂರ್ಣವಾಗಿರಲಿಕ್ಕಿಲ್ಲ. ನಂತರ ಬಿದ್ದು ಹೋಗಿರಬಹುದು.

ಕಾಶೀ ವಿಶ್ವೇಶ್ವರನ ಗುಡಿಯಲ್ಲಿ ಹಲವಾರು ಮೂರ್ತಿಗಳು ಇವೆ. ಪಾರ್ವತಿ ತಪಸ್ಸು ಮಾಡುವ ಮೂರ್ತಿ, ರಾವಣನು ಆನೆ ಜತೆ ಹೋರಾಡುವ ಮೂರ್ತಿ, ಭೀಮನು ಭಗದತ್ತ ಆನೆಯನ್ನು ಎದುರಿಸುತ್ತಿರುವ ಮೂತಿ, ಗಜ ಚರ್ಮಾಬರದಾರಿ ಮೂರ್ತಿ, ನಾಗಮೂರ್ತಿ, ಗಣಪತಿ, ವಾಲಿ, ಸುಗ್ರೀವರ ಮೂರ್ತಿಗಳಲ್ಲದೆ ನೃತ್ಯ ಗಣಪತಿ, ನೃತ್ಯದೇವತೆ ನೃತ್ಯ ಮಾಡುತ್ತಿರುವ ಪಾರ್ವತಿ, ಸುತ್ತಲೂ ಗುಣಗಳು, ರುದ್ರದೇ ಮೊದಲಾದ ಮೂರ್ತಿಗಳು ಅತ್ಯಂತ ಕಲಾತ್ಮಕವಾಗಿವೆ. ಈ ಮೂರ್ತಿಗಳು ಗುಡಿಯ ಉತ್ತರಭಾಗಕ್ಕೆ, ಗುಡಿಯ ಪೂರ್ವದ ಹೊರಗೋಡೆ ಮೇಲೆ ವಿರಾಜಮಾನವಾಗಿದೆ. ಮೈತುಂಬ ಆಭರಣಗಳನ್ನು ತೊಟ್ಟು ಆನೆಯ ಮೂರ್ತಿಯಂತೂ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ.

ಈ ದೇವಾಲಯದ ತೊಲೆಯ ಮೇಲೆ ಕಲ್ಯಾಣ ಚಾಲುಕ್ಯ ದೊರೆ ೩ನೆಯ ತೈಲನ ಕಾಲದ ಶಾಸನವಿದೆ.[೪೨] ಶಾಸನವು ತ್ರಿಭುವನ ಕೇಶವ ದೇವಾದಿಗಳಿಂದ ಕೌತಾಳೇಶ್ವರ ದೇವರಿಗೆ ಭೂಮಿ ಹಾಗೂ ಸುವರ್ಣದಾನದ ವಿಷಯವನ್ನೊಳಗೊಂಡಿದೆ.

ನನ್ನೇಶ್ವರ ದೇವಾಲಯ

ಲಕ್ಕುಂಡಿಯಲ್ಲಿಯ ಮತ್ತೊಂದು ದೇವಾಲಯ ನನ್ನೇಶ್ವರ ದೇವಾಲಯವಾಗಿದೆ. ಈ ದೇವಾಲಯವನ್ನು ನೋಡಿದ ತಕ್ಷಣವೇ ಇದು ಕಾಶಿ ವಿಶ್ವನಾಥನ ದೇವಾಲಯವೇ ಎಂದೆನಿಸುತ್ತದೆ. ಇದೊಂದು ಪರಿಪೂರ್ಣ ದೇವಸ್ಥಾನ. ಪೂರ್ವಾಭಿಮುಖವಾಗಿರುವ ಈ ದೇವಸ್ಥಾನ ಗೋಪುರ ಕಳಸಗಳನ್ನು ಒಳಗೊಂಡಿದೆ. ಕಳಸ ಸಾಮಾನ್ಯವಾಗಿ ಇತರ ದೇವಾಲಯಗಳಲ್ಲಿರುವಂತೆ ಇರಲಾರದೆ ಕೊಡದ ಮೇಲಿಟ್ಟ ತೆಂಗಿನಕಾಯಿಯನ್ನು ತುಸುಮಟ್ಟಿಗೆ ಹೋಲುತ್ತದೆ.

ಈ ದೇವಸ್ಥಾನಕ್ಕೆ ಗರ್ಭಗುಡಿಯಿದ್ದು, ಮುಖಮಂಟಪ ಮತ್ತು ಒಳಮಂಟಪಗಳಿವೆ. ಒಳಮಂಟಪವು ನಾಲ್ಕು ಕಂಬಗಳ ಮೇಲೆ ನಿಂತ ಹಾಗಿದೆ. ಈ ಕಂಬಗಳು ನುಣುಪಾಗಿ ಆಕರ್ಷಕವಾಗಿವೆ. ಈ ದೇವಾಲಯದ ತೊಲೆಯ ಮೇಲೆ ಹಾಗೂ ಕಂಬದ ಮೇಲೆ ಕಲ್ಯಾಣ ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಕಾಲದ ಶಾಸನವಿದೆ.[೪೩] ಈ ದೇವಸ್ಥಾನವು ತಕ್ಕಮಟ್ಟಿಗೆ ಕಾಶೀ ವಿಶ್ವನಾಥ ದೇವಾಲಯವನ್ನು ಹೋಲುತ್ತದೆ. ಕಂಬ ಶಿಖರದ ರಚನೆಗಳು ಕಲಾತ್ಮಕವಾಗಿ, ಕೌಶಲಯುಕ್ತ ಕುಸುರಿ ಕೆಲಸದಿಂದ ಕೂಡಿದೆ.

ಲಕ್ಕುಂಡಿಯಲ್ಲಿರುವ ಮತ್ತೊಂದು ಪ್ರಾಚೀನ ದೇವಸ್ಥಾನವೆಂದರೆ ನಗರೇಶ್ವರ ದೇವಾಲಯ. ಈ ದೇವಾಲಯದ ಗರ್ಭಗುಡಿಯಲ್ಲಿ ಬಹು ವಿಚಿತ್ರವಾದ ಅಪರೂಪವಾದ ನಾಗಮೂರ್ತಿಯಿದೆ. ಈ ದೇವಸ್ಥಾನದ ಮೇಲಿನ ಭಾಗ ಮತ್ತು ಶಿಖರ ಜೀರ್ಣಗೊಂಡು ಬಿದ್ದುಹೋಗಿದೆ. ಆದರೆ ದೇವಸ್ಥಾನ ಒಳಗೆ ಪ್ರತಿಯೊಂದು ಭಾಗವು ಸುಂದರವೂ ಕಲಾತ್ಮಕತೆಯಿಂದ ಕೂಡಿದೆ.

ವಿಶ್ವನಾಥ ದೇವಾಲಯವು ಸಹಿತ ಎರಡು ಗರ್ಭಗುಡಿಗಳನ್ನು ಹೊಂದಿರುವ ಜೋಡುಗುಡಿಯಾಗಿದೆ. ಇಲ್ಲಿರುವ ಎರಡು ಗರ್ಭಗುಡಿಗಳು ಒಂದಕ್ಕೊಂದು ಎದುರುಬದರಾಗಿವೆ. ಈ ಗುಡಿಯು ಅತ್ಯಂತ ಪ್ರಾಚೀನವಾದ ಗುಡಿ ಹಾಗೂ ಬಹಳ ಶಿಥಿಲಗೊಂಡಿರುವ ಗುಡಿಯಾಗಿದೆ.

ನೀಲಕಂಠೇಶ್ವರ ದೇವಾಲಯ ಬ್ರಹ್ಮ ಜಿನಾಲಯಕ್ಕೆ ಸಮೀಪದಲ್ಲಿರುವ ದೇವಸ್ಥಾನವಾಗಿದೆ. ಬಹುಶಃ ಇದು ಜಿನಾಲಯವಾಗಿರಬೇಕು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಗರ್ಭಗುಡಿಯ ಪೀಠದ ಮೇಲೆ ಪ್ರಭಾವಳಿಯಿದ್ದು ಜೈನರ ಕುರುಹುಗಳು ಇರುವುದು ಕಂಡುಬರುವುದು. ಈ ದೇವಾಲಯ ಅತ್ಯಂತ ಶಿಥಿಲಗೊಂಡಿದೆ.

ಆದರೆ ಸುಸ್ಥಿತಿಯಲ್ಲಿರುವ ದೇವಸ್ಥಾನಗಳೆಂದರೆ ವಿರೂಪಾಕ್ಷ ದೇವಾಲಯ, ಮಾಣಿಕೇಶ್ವರ ದೇವಾಲಯ, ನಾರಾಯಣಗುಡಿ, ನಾದಯದೇವನ ಮಂದಿರ ಇವುಗಳು ಸಹಿತ ಕಲಾತ್ಮಕವಾಗಿವೆ. ಪಾಲಗುಂದ ಬಸವಣ್ಣನ ಗುಡಿಯಲ್ಲಿರುವ ಬೃಹತ್ ಆಕಾರದ ಬಸವಣ್ಣನ ಮೂರ್ತಿ ಅಚ್ಚರಿಯನ್ನುಂಟು ಮಾಡುತ್ತದೆ.

ಮಠ ಮಾನ್ಯಗಳ ಕುರಿತಾಗಿ ಹೇಳಬೇಕೆಂದರೆ ಶಾಸನಗಳಲ್ಲಿ ವೀರಶೈವ ಮಠಗಳಾದ 'ಕಪ್ಪಚರಮಠ', 'ನಾಗಪ್ಪಯ್ಯಮಠ' ಗಳಿಗೆ ಜೈನ ಅರಸರು, ಮಹಾಜನರು ದಾನ, ದತ್ತಿ ಕೊಟ್ಟ ಉಲ್ಲೇಖ ಸಿಗುತ್ತದೆ. ಈಗ ಶಿವಪ್ಪಯ್ಯನ ಮಠವಿರುವುದು ತಿಳಿದುಬರುತ್ತದೆ. ಈ ಮಠವು ಈಗ ಪ್ರಭುದೇವರ ಮಠವಾಗಿ ಪರಿವರ್ತನೆಯಾಗುತ್ತಿದೆ. ಇದಲ್ಲದೆ ಈಗ ಕಲ್ಮಠ, ಚೌಕೀಮಠ ಮತ್ತು ಬದನೆಮಠಗಳಿಲ್ಲಿರುವುದು ತಿಳಿದುಬರುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳ ನಿರ್ಮಾಣವಾಗಿವೆ. ಲಕ್ಕುಂಡಿಯು ಸಹಿತ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು. ಕರ್ನಾಟಕದ ಇತರ ಸ್ಥಳಗಳಿಲ್ಲಿರುವಂತೆ ಕುಕನೂರಿನ ಕಲ್ಲೇಶ್ವರ, ಅಬಲೂರಿನ ಬ್ರಹ್ಮೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ಉಣಕಲ್ಲಿನ ಚಂದ್ರಮೌಳೇಶ್ವರದಂತೆ ಲಕ್ಕುಂಡಿಯ ಬ್ರಹ್ಮಜಿನಾಲಯ, ಕಾಶಿ ವಿಶ್ವೇಶ್ವರ ಮತ್ತು ನನ್ನೇಶ್ವರ ದೇವಾಲಯಗಳು ಪ್ರಖ್ಯಾತಿಯನ್ನು ಹೊಂದಿವೆ. ಕಪ್ಪು ಮಿಶ್ರಿತ ನೀಲಿಛಾಯೆಯ ಬಳಪದ ಶಿಲೆ ಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸಕ್ಕೆ ಅನುಕೂಲಕರವಾಗಿದೆ. ಶಿಲ್ಪ ಕಲಾವಿದರಿಗೆ ಹೆಚ್ಚಿನ ಶ್ರಮ ಈ ಕಾಲದಲ್ಲಿ ಕಂಡುಬಂದಿದೆ. ಚಿನ್ನದ ಆಭರಣಗಳಲ್ಲಿ ಮಾಡಬಹುದಾದ ಸೂಕ್ಷ್ಮ ಕೆತ್ತನೆಯ ಕೆಲಸವನ್ನು ಲಕ್ಕುಂಡಿಯ ದೇವಸ್ಥಾನಗಳಲ್ಲಿರುವ ದೇವಾಲಯಗಳ ಆ ಕಟ್ಟಡಗಳಲ್ಲಿ ಕಂಡುಬರುತ್ತದೆ.

ಲಕ್ಕುಂಡಿಯಲ್ಲಿ ಹೇರಳ ಸಂಖ್ಯೆಯಲ್ಲಿ ಶಿಲಾಶಾಸನಗಳು ದೊರಕಿವೆ ಅವುಗಳಲ್ಲಿ ದಾನಶಾಸನಗಳೇ ಹೆಚ್ಚಾಗಿವೆ.

ಅತ್ತಿಮಬ್ಬೆಯ ಕುರಿತಾಗಿ ಇರುವ ಶಾಸನ[೪೪] ಮ್ಯೂಸಿಯಂ ಪಕ್ಕದಲ್ಲಿದೆ. ಈ ಶಾಸನವು ಅತ್ತಿಮಬ್ಬೆಯಿಂದ ಬ್ರಹ್ಮಜಿನಾಲಯದ ನಿರ್ಮಾಣ, ದಾನ, ಮಹಾಜನರ ಉಲ್ಲೇಖ, ಅತ್ತಿಮಬ್ಬೆಯ ತಂದೆ, ತಾಯಿ ಅವಳ ಜಿನಧರ್ಮ ಶ್ರದ್ಧೆ ಮೊದಲಾದವುಗಳನ್ನು ಹೇಳುತ್ತದೆ. ಈ ಶಾಸನ ಚಾಲುಕ್ಯ ದೊರೆಯ ಕಾಲದ್ದು.

ಲಕ್ಕುಂಡಿಯ ಶಾಸನಗಳ ಸಾರಾಂಶ

೧೦೭೫ರಲ್ಲಿ ಕಲ್ಯಾಣ ಚಾಲುಕ್ಯ ದೊರೆಯಾದ ಸೋಮೇಶ್ವರನ ಕಾಲದಲ್ಲಿ ಮರುಳಮಯ್ಯನಿಂದ ಮರುಳೇಶ್ವರ ದೇವರ ಪ್ರತಿಷ್ಠಾಪನೆಗಾಗಿ ಕೊಟ್ಟಿರುವ ದಾನ ಶಾಸನ. [೪೫]

ಅತ್ತಿಮಬ್ಬೆಯಿಂದ ಬ್ರಹ್ಮ ಜಿನಾಲಯದ ನಿರ್ಮಾಣ, ಜಿನಬಿಂಬಗಳ ದಾನ ಸುರುಕಿ ಎಂಬ ಅಗ್ರಹಾರದ ದತ್ತಿ, ಈ ವಿಷಯವನ್ನೊಳಗೊಂಡ ೮೮ ಸಾಲುಗಳಿರುವ ಈ ಶಾಸನವು ಅತ್ಯಂತ ಪ್ರಾಚೀನವೂ ಹಾಗೂ ದೊಡ್ಡದು ಆಗಿರುವಂತಹದು. ಈ ಶಾಸನ.[೪೬] ಕಲ್ಯಾಣ ಚಾಲುಕ್ಯ ದೊರೆ ಇರಿವ ಬೆಡಂಗನ ಕಾಲದಲ್ಲಿಯದು. ಈ ಶಾಸನದಲ್ಲಿ ರನ್ನ ಕವಿಯ ಅಜಿತಪುರಾಣದಲ್ಲಿಯ ೨ ಪದ್ಯಗಳು ಇವೆ. ಇರಿವ ಬೆಡಂಗ ಸತ್ಯಾಶ್ರಯನು ರಾಜ್ಯವಾಳುತ್ತಿರುವಾಗ ಈ ಶಾಸನವು ರಚಿಸಲ್ಪಟ್ಟಿದೆ. ಒಬ್ಬ ಮಹಿಳೆಯ ಕುರಿತಾಗಿ ಕಾವ್ಯಮಯವಾಗಿ ದೀರ್ಘವಾಗಿ ವರ್ಣಿಸಿರುವ ಶಾಸನಗಳು ಇಲ್ಲವೆಂದೇ ಹೇಳಬೇಕು. ಡಾ. ಹಂಪನಾ ಅವರು ಈ ಶಾಸನದ ರಚನಾಕಾರ - ಕುಮಾರ ಮಹಾಕವಿ ರನ್ನನೆಂದು ಅಭಿಪ್ರಾಯಿಸುತ್ತಾರೆ.[೪೭]

ಕಲ್ಯಾಣ ಚಾಲುಕ್ಯ ದೊರೆ ೩ನೆಯ ಜಯಸಿಂಹನ ಆಳ್ವಿಕೆ ಕಾಲ ೧೦೩೦. ಈ ಕಾಲದಲ್ಲಿ ರಚಿತವಾಗಿರುವ ಶಾಸನ[೪೮]ದಲ್ಲಿ ಕುಂದಮರಸ, ಬನವಾಸಿ - ೧೨೦೦೦ ಆಳುವಾಗ ಗೊಲ್ಲಿಮಯ್ಯನಿಂದ ದಾನ ಕೊಟ್ಟ ವಿಷಯವಿದೆ.

ಮಲ್ಲಿಕಾರ್ಜುನ ದೇವರ ಗುಡಿಯ ಗೋಡೆಯ ಮೇಲಿನ ಶಾಸನವು,[೪೯] ೧೦೨೮ರ ಕಾಲದ್ದು. ಈ ಶಾಸನದಲ್ಲಿ ದೇವೇಂದ್ರ ಪಂಡಿತರ ಶಿಷ್ಯನಿಂದ ಕಲಿದೇವಸ್ವಾಮಿಗೆ ಸುವರ್ಣ ದಾನ ಕೊಟ್ಟಿರುವ ವಿಷಯವನ್ನೊಳಗೊಂಡಿದೆ.

೧೦೮೦ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯ ಕಲ ಆಹವಮಲ್ಲನ ಕಾಲದ ಶಾಸನ[೫೦]ದಲ್ಲಿ ಲೊಕ್ಕಿಗುಂಡಿಯ ಜೋಳದಂಗಡಿಯವಣಿಗ ಮಹಾಜನರು ಶ್ರೀ ಮರುಳೇಶ್ವರ ದೇವರಿಗೆ ನೀಡಲಾಗಿರುವ ಭತ್ತದ ದಾನ ಕೊಟ್ಟಿರುವ ವಿಷಯವಿದೆ.

ಲೊಕ್ಕಿಗುಂಡಿ ಮತ್ತು ಮಹಾಜನರ ಉಲ್ಲೇಖವಿರುವ ಶಾಸನವು[೫೧] ತ್ರುಟಿತಗೊಂಡಿದೆ. ಈ ಶಾಸನ ಕಾಲಾವಧಿಯಲ್ಲಿ ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನು ರಾಜ್ಯವಾಳುತ್ತಿದ್ದನು.

ಸೋಮೇಶ್ವರ ಗುಡಿ ಮಂಟಪ - ಕಂಬದ ಮೇಲೆ ಇರುವ ಶಾಸನವು[೫೨] ೧೧೦೪ರ ಕಾಲಘಟ್ಟದ್ದಾಗಿದೆ. ಈ ಶಾಸನದಲ್ಲಿ ಸಂಕಿಮಯ್ಯ ನಾಯಕನಿಂದ ಹನ್ನೆರಡು ಜನರಿಗೆ ವಸ್ತ್ರ ದಾನ ಕೊಟ್ಟಿರುವ ವಿಷಯವಿದೆ.

೧೧೨೧ರ ಕಲಚೂರಿಯ ಕಾಲದಲ್ಲಿರುವ ವೀರಭದ್ರದೇವರ ಗುಡಿಯ ಗೋಡೆ ಮೇಲೆ ಇರುವ ಶಾಸನವು[೫೩] ನಾಣಿಮಯ್ಯ ನಾಯಕನಿಂದ ಕೆರೆ, ಅರವಟಿಗೆಗಳಿಗೆ ದಾನ ಕೊಟ್ಟಿರುವದನ್ನು ತಿಳಿಸುತ್ತದೆ.

೧೧೪೦ರ ಕಲ್ಯಾಣ ಚಾಲುಕ್ಯ ದೊರೆ ಜಗದೇಕಮಲ್ಲನ ಆಡಳಿತಾವಧಿಯ ಶಾಸನವು[೫೪] ಮಲ್ಲಿಕಾರ್ಜುನ ದೇವರ ಗುಡಿ - ಗೋಡೆಯ ಮೇಲಿದ್ದು, ಗ್ರಾಮದ ಹೆಗ್ಗಡೆಯಿಂದ ಸುವರ್ಣ ದಾನ ಕೊಟ್ಟಿರುವ ವಿಷಯವನ್ನು ಒಳಗೊಂಡಿದೆ.

೧೧೫೬ರಲ್ಲಿ ಕಲ್ಯಾಣ ಚಾಲುಕ್ಯ ಅರಸು ೩ನೆಯ ತೈಲನ ಆಡಳಿತ ಅವಧಿಯಲ್ಲಿರುವ ಶಾಸನದಲ್ಲಿ ಕಾಳಯ ನಾಯಕನು ಅನ್ನಸತ್ರಕ್ಕಾಗಿ ಮೋನಿ ದೇವನಿಗೆ ನೀಡಿದ ದಾನದ ವಿಷಯವಿದೆ.

ಮಹಾದೇವನಾಯಕನ ಉಲ್ಲೇಖವಿರುವ ಶಾಸನವೊಂದು[೫೫] ತ್ರುಟಿತವಾಗಿದೆ. ಅದು ಕಲಚೂರಿಯ ಮನೆತನದ ಬಿಜ್ಜಳನ ಕಾಲದ್ದಾಗಿದೆ. ಗುಣನಿಧಿ ಕೇಶವದೇವನಿಂದ ಬಸದಿಗೆ ಸುವರ್ಣದಾನ ಕೊಟ್ಟಿರುವುದನ್ನು ಹೇಳುತ್ತದೆ.

ಗುಣನಿಧಿ ಕೇಶವದೇವನಿಂದ ಅಸಿತರ ಕೇಶವಾದಿತ್ಯದೇವರ ನಂದಾ ದೀವಿಗೆಗಾಗಿ ಸುವರ್ಣದಾನ ಕೊಟ್ಟಿರುವ ವಿಷಯವನ್ನು ಚಂದ್ರಮೌಳೇಶ್ವರ ದೇವಸ್ಥಾನದ ತೊಲೆಯ ಮೇಲೆ ರಚಿಸಲಾದ ಶಾಸನವು ಹೇಳುತ್ತದೆ. ಈ ಶಾಸನವು[೫೬] ಕಲಚೂರಿಯ ಅರಸು ಮನೆತನದ ಸೋವಿದೇವನ ಕಾಲದ್ದು. ಅಂದರೆ ೧೧೭೪ ರಲ್ಲಿಯದು.

೧೧೭೯ರಲ್ಲಿ ಕಲಚೂರಿಯರ ಸಂಕಮನ ಕಾಲದಲ್ಲಿ ರಚಿತಗೊಂಡಿರುವ ಶಾಸನವು[೫೭] ವೀರಭದ್ರದೇವರ ಗುಡಿಯ ಗೋಡೆಯ ಮೇಲಿದೆ. ಈ ಶಾಸನದಲ್ಲಿ ನಾಲ್ಕನೆಯ ಸೋಮೇಶ್ವರ ಮತ್ತು ಶಿಲ್ಪಿಗಳು ಅಭಿನವ ಪ್ರಸನ್ನ ಕೇಶವ ದೇವರಿಗೆ ಕೊಟ್ಟಿರುವ ದಾನ ವಿಷಯವಿದೆ.

೧೧೮೦ರಲ್ಲಿ ಕಲಚೂರಿಯ ಅರಸು ಸಂಕಮನ ಕಾಲದಲ್ಲಿ ರಚಿತಗೊಂಡಿರುವ ಶಾಸನವು[೫೮] ನಾಕಯ್ಯ ನಾಯಕನಿಂದ ಅಸಿತರ ಕೇಶವಾದಿತ್ಯ ದೇವರಿಗೆ ದಾನಕೊಟ್ಟಿರುವ ವಿಷಯವನ್ನೊಳಗೊಂಡಿದೆ. ಈ ಶಾಸನವು ಚಂದ್ರಮೌಳೇಶ್ವರ ಗುಡಿಯ ಕಂಬದ ಮೇಲೆ ಇದೆ.

ಚಂದ್ರಮೌಳೇಶ್ವರ ದೇವಸ್ಥಾನದ ತೊಲೆಗಳ ಮೇಲಿರುವ ಶಾಸನವು[೫೯] ಕಲ್ಯಾಣ ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಕಾಲಾವಧಿಯಲ್ಲಿಯದಾಗಿದೆ. ಈ ಶಾಸನವು ಬಸವರಸ, ಸಿದ್ಧಯಾದಿಗಳಿಂದ ಅಸಿತರ ಕೇಶವಾದಿತ್ಯ ದೇವರಿಗೆ ಸುವರ್ಣದಾನ ಕೊಟ್ಟಿರುವ ವಿಷಯವನ್ನು ತಿಳಿಸುತ್ತದೆ.

೧೧೮೪ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಆಡಳಿತ ಅವಧಿಯಲ್ಲಿರುವ ಶಾಸನ[೬೦]ದಲ್ಲಿ ಸಾಸಿರ್ವರ ಸನ್ನಿಧಿಯಲ್ಲಿ ಆಯಿಚಿಸೆಟ್ಟಿಯಾದಿಗಳಿಂದ ಸುವರ್ಣದಾನ ಕೊಟ್ಟ ವಿಷಯ ಬರುತ್ತದೆ.

೧೧೮೪ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಆಡಳಿತದ ಅವಧಿಯಲ್ಲಿ ಚಂದ್ರಮೌಳೇಶ್ವರ ದೇವಸ್ಥಾನದ ಇನ್ನೊಂದು ತೊಲೆಯ ಮೇಲಿರುವ ಶಾಸನವು[೬೧] ಆಯಿಚಿಸೆಟ್ಟಿಯಾದಿಗಳಿಂದ ಕೇಶವಾದಿತ್ಯ ದೇವರಿಗೆ ಸುವರ್ಣದಾನ ಕೊಟ್ಟ ವಿಷಯವಿದೆ.

೧೧೮೪ - ೮೫ರ ಕಾಲಾವಧಿಯಲ್ಲಿ ಕಲ್ಯಾಣ ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಆಡಳಿತಕಾಲದಲ್ಲಿ ವೀರಭದ್ರದೇವರ ಗುಡಿಯಲ್ಲಿರುವ ಶಾಸನವು[೬೨] ಪ್ರಸನ್ನ ಕೇಶವದೇವರಿಗೆ ನೀಡಿದ ಹಣದಾನದ ವಿಷಯವನ್ನು ಹೇಳುತ್ತದೆ.

ಕಲ್ಯಾಣ ಚಾಲುಕ್ಯರರಸ ನಾಲ್ಕನೆಯ ಸೋಮೇಶ್ವರನ ಕಾಲದಲ್ಲಿಯ ಶಾಸನವು[೬೩] ಊರೊಡೆಯ ಪ್ರಮುಖ ಜನರಿಂದ ಕೊಡಲ್ಪಟ್ಟ ದಾನದ ಕುರಿತಾಗಿ ಇರುವ ವಿಷಯವನ್ನೊಳಗೊಂಡಿದೆ.

೧೧೮೫ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರನ ಆಡಳಿತ ಅವಧಿಯಲ್ಲಿ ರಚಿತಗೊಂಡು, ಹೆಣ್ಣುಮಕ್ಕಳ ಶಾಲೆಯ ಹತ್ತಿರದ ಗಣೇಶನ ದೇವಸ್ಥಾನದಲ್ಲಿ ದೊರಕಿರುವ ಶಾಸನದಲ್ಲಿ[೬೪] ಸೆಟ್ಟಿಗಳಿಂದ ನೋಂಪಿಯ ಬಸದಿಯ ಅಷ್ಟ ವಿಧಾರ್ಚನೆಗೆ ಸುವರ್ಣದಾನ ಕೊಟ್ಟಿರುವ ವಿಷಯವಿದೆ.

೧೧೮೮ರ ಸೋಮೇಶ್ವರ ಗುಡಿ ಮಂಟಪ - ಕಂಬದ ಮೇಲಿರುವ ಶಾಸನದಿಂದ[೬೫] ಭರತೇಶ್ವರ ದೇವಾಲಯದ ಶಿಲ್ಪಿಗಳಿಂದ ಸುವರ್ಣದಾನ ಕೊಟ್ಟಿರುವ ವಿಷಯವು ತಿಳಿದುಬರುತ್ತದೆ.

೧೧೯೫ರ ಎರಡನೆಯ ಹೊಯ್ಸಳ ಬಲ್ಲಾಳನ ಆಡಳಿತ ಅವಧಿಯಲ್ಲಿ ಸಿದ್ಧರ ಬಾವಿ ಪ್ರವೇಶದ್ವಾರದಲ್ಲಿರುವ ಶಾಸನ[೬೬]ದಿಂದ ನಾಗನ ಬಾವಿಯ ಸಲುವಾಗಿ ಇಬ್ಬರಿಂದ ಸುವರ್ಣದಾನ ಕೊಟ್ಟಿರುವ ವಿಷಯ ತಿಳಿದುಬರುವುದು.

ರಾಯಮುರಾರಿ ಸೋವಿದೇವ ರಾಜನ ಆಡಳಿತದಲ್ಲಿ ೧೧೭೩ರ ಕಾಲದಲ್ಲಿ ರಚಿಸಲ್ಪಟ್ಟ ಶಾಸನ[೬೭]ದಲ್ಲಿ ಮಹಾ ಅಗ್ರಹಾರದ ಒಂದು ಸಾವಿರ ಮಹಾಜನರು ಲಕ್ಕುಂಡಿಯಲ್ಲಿದ್ದ ಉಲ್ಲೇಖವಿದೆ. ಅಲ್ಲದೆ ಗುಣನಿಧಿ ಕೇಶವನೆಂಬ ಭಕ್ತನು ಬಲ್ಲಿಯ ಜೇಮಯ್ಯನ ಜೈನ ಬಸದಿಯ ಪೂಜಾರಿಗೆ ದಾನ ಕೊಟ್ಟಿರುವ ಉಲ್ಲೇಖ, ಆಣೆಕಾರ ನಾಗಶೆಟ್ಟಿ ಎಂಬುವನು ದಾನ ಕೊಟ್ಟ ವಿವರಗಳು ಈ ಶಾಸನದಲ್ಲಿವೆ.

ಸುಮಾರು ೧೨ನೆಯ ಶತಮಾನದಲ್ಲಿ ನನ್ನೇಶ್ವರ ಗುಡಿಯ ಕಂಬದಲ್ಲಿರುವ ಶಾಸನವು[೬೮] ಹೆಣ್ಣುಣವಂಶದ ದೇವಲಬ್ಬೆಯ ಆದೇಶದ ಮೇರೆಗೆ ನನ್ನೇಶ್ವರ ದೇವಾಲಯದ ಕಂಬಗಳ ನಿರ್ಮಾಣದ ವಿಷಯವನ್ನು ತಿಳಿಸುತ್ತದೆ.

ಸುಮಾರು ೧೨ನೆಯ ಶತಮಾನದಲ್ಲಿ ಮಾಣಿಕ್ಯೇಶ್ವರ ದೇವಸ್ಥಾನದ ಕಂಬದಲ್ಲಿರುವ ಶಾಸನವು[೬೯] ಬಸವಶೆಟ್ಟಿಯಿಂದ ದಾನ ಕೊಟ್ಟಿರುವ ವಿಷಯವನ್ನೊಳಗೊಂಡಿದೆ. ದಾನ ಯಾರಿಗೆ ಯಾವ ರೂಪದಲ್ಲಿ ಎನ್ನುವ ವಿಷಯಗಳು ತಿಳಿದುಬರುವದಿಲ್ಲ.

ಸುಮಾರು ೧೨ನೆಯ ಶತಮಾನದ ಚಂದ್ರಮೌಳೇಶ್ವರ ದೇವಸ್ಥಾನದ ಇನ್ನೊಂದು ತೊಲೆಯ ಮೇಲೆ ಇರುವ ಶಾಸನವು[೭೦] ದೀಪಾವಳಿ ಹಬ್ಬದ ನಿಮಿತ್ಯ ಆಯಿಚಿಸೆಟ್ಟಿಯಿಂದ ನಾಲ್ಕುನೂರು ಅಡಿಕೆ ದಾನದ ವಿಷಯವನ್ನೊಳಗೊಂಡಿದೆ.

ಸುಮಾರು ೧೨ನೆಯ ಶತಮಾನದ ಶಾಸನವು[೭೧] ವಸುಧ್ಯೆಕಬಾಂಧವ ಜಿನಾಲಯದ ತ್ರಿಭುವನತಿಲಕ ಶಾಂತಿನಾಥ ದೇವರಿಗೆ ದಾನಶಾಲೆಯ ನಿವೇಶನ ದಾನ ಕೊಟ್ಟಿರುವ ವಿಷಯವನ್ನೊಳಗೊಂಡಿದೆ.

ಸುಮಾರು ೧೨ನೆಯ ಶತಮಾನದಲ್ಲಿ ಶಾಸನವು[೭೨] ಲಿಂಗಾಯಿತ ಮಠದ ಮುಂದಿನ ಗೋಡೆಯ ಮೇಲಿದೆ. ಈ ಶಾಸನವು ಮಹಾಜನರಿಂದ ನನ್ನೇಶ್ವರ ದೇವಸ್ಥಾನಕ್ಕೆ ಅಂಗಡಿಯ ದಾನ ಕೊಟ್ಟ ವಿಷಯವಿದೆ.

ಸುಮಾರು ೧೨ನೆಯ ಶತಮಾನದ ಜೈನ ಬಸದಿ - ನೇಮಿನಾಥ ಪಾರಪೀಠದಲ್ಲಿರುವ ಶಾಸನವು[೭೩] ಮೂಲ ಸಂಘ, ದೇವಗಣದ ಶಂಕರದೇವನಿಂದ ವಿಗ್ರಹ ದಾನ ಮಾಡಿರುವುದನ್ನು ಹೇಳುತ್ತದೆ.

೧೨೦೨ರಲ್ಲಿ ಎರಡನೆಯ ಹೊಯ್ಸಳ ಬಲ್ಲಾಳನ ಕಾಲದಲ್ಲಿ ಕಾಶೀ ವಿಶ್ವನಾಥ ದೇವಾಲಯದ ವೇದಿಕೆ ಮೇಲೆ ಇರುವ ಶಾಸನದಲ್ಲಿ[೬೪] ಮಧುಸೂದನ ದೇವರ ಪೂಜೆಗಾಗಿ ಸುವರ್ಣದಾನ ಕೊಟ್ಟಿರುವ ವಿಷಯವಿದೆ. ಯಾರು ದಾನ ಕೊಟ್ಟಿದ್ದು ಎಂಬ ವಿಷಯ ಸ್ಪಷ್ಟವಾಗಿಲ್ಲ. ತ್ರುಟಿತವಾಗಿದೆ.

ಸಿಂಘಣನ ಆಡಳಿತ ಕಾಲವಾದ ೧೨೨೩ರಲ್ಲಿ ಕಾಶೀ ವಿಶ್ವನಾಥ ದೇವಾಲಯದ ವೇದಿಕೆಯ ಮೇಲೆ ದೊರೆತಿರುವ ಶಾಸನ[೬೫]ದಲ್ಲಿ ಪ್ರತಿಷ್ಠಿತ ವ್ಯಾಪಾರಿಗಳಿಂದ ಮಧುಸೂದನ ದೇವರಿಗೆ ಸುವರ್ಣ ದಾನಕೊಟ್ಟಿರುವ ವಿಷಯವಿದೆ.[೬೬]

ಹೀಗೆ ಲಕ್ಕುಂಡಿಯಲ್ಲಿ ದೊರೆತಿರುವ ಶಾಸನಗಳನ್ನು ಅವಲೋಕಿಸಿದಾಗ ಹೆಚ್ಚಿನ ಸಂಖ್ಯೆಯಲ್ಲಿ ದಾನ ಶಾಸನಗಳಿರುವುದು ಕಂಡುಬಂದಿದೆ. ಈ ಗ್ರಾಮದ ಕುರಿತಾಗಿ ಡಂಬಳದಲ್ಲಿ ದೊರೆತ ಶಾಸನವು[೬೭] ಹೇಳುತ್ತದೆ.

''ಲೊಕ್ಕಿಗುಂಡಿಯ ವಡ್ಡ ವ್ಯವಹಾರಿಯಾಗದ ಸಂಗವಯ್ಯ ಶೆಟ್ಟಿಯರು ಆರ್ಯ ತಾರಾದೇವಿಯ ವಿಹಾರಕ್ಕೆ ದಾನ ಬಿಟ್ಟಿರುವ ವಿಷಯವಿದೆ. ಅಲ್ಲದೆ ಅಲ್ಲಿಯ (ಲೊಕ್ಕಿಗುಂಡಿಯ) ಹದಿನಾರು ಶೆಟ್ಟಿಗಳು ಮಾಡಿಸಿದ ಬೌದ್ಧವಿಹಾರಕ್ಕೂ ಅಲ್ಲಿಯ ಪೂಜಾರಿಗಳಿಗೂ, ಭಿಕ್ಷುಗಳಿಗೆ ದಾನ ಕೊಟ್ಟಿರುವ ವಿಷಯವಿದೆ.

ಈ ಶಾಸನದಂತೆ ಲಕ್ಕುಂಡಿಯು ಕೇವಲ ಜೈನ ಧರ್ಮಕ್ಕಷ್ಟೇ ಅಲ್ಲ, ಬೌದ್ಧ ಮತಾನುಯಾಯಿಗಳಿಗೂ ಆಶ್ರಯ ಕೊಟ್ಟಿದ್ದು ತಿಳಿದುಬರುತ್ತದೆ.

ಡಂಬಳದಲ್ಲಿರುವಂತೆ ಲಕ್ಕುಂಡಿಯ ಉಲ್ಲೇಖವಿರುವ ಶಾಸನವು[೬೮] ಗುದುಗಿನ ಪ್ರಸಿದ್ಧ ವೀರನಾರಾಯಣ ದೇವಾಲಯದ ರಂಗಮಂಟಪದ ಹತ್ತಿರ ಈ ಶಾಸನವು ದೊರಕಿದೆ.

''ದಂಡನಾಯಕ ಸೋಮೇಶ್ವರ ಚಟೋಪಾಧ್ಯಾಯರಿಂದ ಲಕ್ಕುಂಡಿಯ ಪ್ರಭಾಕರ ವ್ಯಾಖ್ಯಾನಶಾಲೆಯ ನಿರ್ಮಾಣ ಹಾಗೂ ದಾನ ಕೊಟ್ಟಿರುವ ವಿಷಯವಿದೆ.''

ಈ ಶಾಸನವು ಕಲ್ಯಾಣ ಚಾಲುಕ್ಯರ ಅರಸು ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ.

ಈ ರೀತಿಯಾಗಿ ಲಕ್ಕುಂಡಿಯಲ್ಲಿ ದೊರೆತ ಶಾಸನಗಳ ಸಂಖ್ಯೆ ಅಧಿಕವಾಗಿದೆ. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ - ೩ರಲ್ಲಿ ನಮೂದಿಸಿರುವಂತೆ ೨೯ ಶಿಲಾಶಾಸನಗಳಿವೆ. ಇದು ೧೯೮೬ರಲ್ಲಿ ಪ್ರಕಟವಾಗಿರುವದರಿಂದ ಇವತ್ತಿನ ಕಾಲಕ್ಕೆ ಶಾಸನಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಲಕ್ಕುಂಡಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅಲ್ಲಿಯ ಮನೆಗಳು, ವಿಶೇಷವಾಗಿ ಪ್ರಾಚೀನ ದೇವಸ್ಥಾನದ ಬಳಿ ಇರುವ ಮನೆಗಳು, ದೇವಾಲಯದ ಸಮುಚ್ಚಯದ ಗೋಡೆಗಂಟಿಕೊಂಡು ಇರುವ ಮನೆಗಳು, ತೀರ್ಥಂಕರ ಪೀಠ ಅರ್ಧ ಒಂದು ಮನೆಯಲ್ಲಿದೆ. ಇದನ್ನು ಗಮನಿಸಿದಾಗ ಒಂದೊಂದು ಮನೆಯ ಕೆಳಗೆ ಒಂದೊಂದು ದೇವಾಲಯವೂ, ಶಿಲಾಶಾಸನವೂ ಇದ್ದಿರಲೇಬೇಕು ಎಂದೆನಿಸುತ್ತದೆ. ಅಂತಹ ಮನೆಗಳನ್ನು ಹುಡುಕಿ ಆ ಮನೆಯವರಿಗೆ ಬೇರೆ ಕಡೆಗೆ ಇರಲು ವ್ಯವಸ್ಥೆಯನ್ನು ಮಾಡಿಕೊಟ್ಟು ಆರ್ಕಿಯಾಲಜಿ

ಸರ್ವೇ ಆಫ್ ಇಂಡಿಯಾದವರು ಅಧ್ಯಯನ ನಡೆಸಿ ತೀರ್ಮಾನಿಸಿ ಆ ಮನೆ, ಮನೆಗಳ ಆಸು ಪಾಸುಗಳಲ್ಲಿ ಉತ್ಖನನ ನಡೆಸಿದರೆ ಲಕ್ಕುಂಡಿಯ ಇತಿಹಾಸದ ಮೇಲೆ ಹೊಸ ಬೆಳಕು ಮೂಡುವದರಲ್ಲಿ ಸಂಶಯವಿಲ್ಲ.

ಲಕ್ಕುಂಡಿಯ ಬಾವಿಗಳು

ಇಲ್ಲಿ ೧೦೧ ಬಾವಿಗಳಿದ್ದವೆಂದು ಹೇಳಲಾಗುತ್ತದೆ. ಈಗ ೧೦೧ ಬಾವಿಗಳಿಲ್ಲದಿದ್ದರೂ ಕೆಲವು ಬಾವಿಗಳಾದರೂ ಕಾಣಸಿಗುತ್ತವೆ.

ಇಲ್ಲಿಯ ದೇವಾಲಯ ಶಾಸನಗಳಂತೆ ಬಾವಿಗಳು ಪ್ರಸಿದ್ಧವಾಗಿವೆ. ಬಾವಿಯೆಂದರೆ ಸುಮಾರು ಆಳದ ತಗ್ಗುಪ್ರದೇಶ ಮೇಲಕ್ಕೆ ವೃತ್ತಾಕಾರವಾಗಿ ಕಟ್ಟೆ, ಅದರ ಮೇಲೆ ಗಡಗಡೆ ಈಗಿಲ್ಲ. ಇವು ಸಾಮಾನ್ಯ ಬಾವಿಗಳಾಗಿವೆ. ಆದರೆ ಲಕ್ಕುಂಡಿಯಲ್ಲಿನ ಬಾವಿಗಳನ್ನು ವಾಸ್ತು ಶಿಲ್ಪಿಗಳು ದೇವಸ್ಥಾನಗಳನ್ನು ಕಟ್ಟಿದಂತೆ ಹೊಕ್ಕು ತುಂಬುವ ಬಾವಿಗಳನ್ನು ಕಲ್ಲುಗಳಿಂದ ಕಟ್ಟಿದ್ದಾರೆ. ಇಲ್ಲಿರುವ ಛಬ್ಬೇರ ಬಾವಿ, ಮುಸುಕಿನ ಬಾವಿ ಮತ್ತು ಕನ್ನೇರ ಬಾವಿಗಳು ಪ್ರಸಿದ್ಧವಾದ ಬಾವಿಗಳಾಗಿವೆ. ಪ್ರಾಚೀನ ಕಾಲದಲ್ಲಿ ದೇವಸ್ಥಾನದ ಹತ್ತಿರ ಒಂದು ಬಾವಿ ಇದ್ದೇ ಇರುತ್ತಿತ್ತು. ದೇವರ ಪೂಜೆಗಾಗಿ ಬಾವಿಯಲ್ಲಿನ ನೀರನ್ನು ಬಳಸಲಾಗುತ್ತಿತ್ತು.

ಮುಸುಕಿನ ಬಾವಿ ಪ್ರಾಚೀಣವಾದದ್ದಾದರೂ ಸುಂದರವಾಗಿರುವ ಬಾವಿಯಾಗಿದೆ. ಈ ಬಾವಿಯು ಅತ್ಯಂತ ವಿಶಾಲವಾದ ಬಾವಿಯಾಗಿದೆ. ಮಾಣಿಕೇಶ್ವರ ದೇವಸ್ಥಾನದ ಹತ್ತಿರದಲ್ಲಿ ಈ ಬಾವಿಯಿದೆ. ಬಾವಿಯ ಒಳಗೆ ಇಳಿಯಲು ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಮೇಲೆ ಮಂಟಪವಿದೆ. ಚೌಕಾಕಾರದ ಈ ಬಾವಿಯ ಒಳಗೋಡೆಗಳಿಗೆ ಪುಟ್ಟ ಪುಟ್ಟ ಗೋಪುರಗಳಿವೆ. ಗೋಪುರಗಳು ಅಲಂಕೃತ ಮಾಡುಗಳ ಮೇಲೆ ಇವೆ. ಮಾಡುಗಳಲ್ಲಿ ಈಶ್ವರ ಲಿಂಗಗಳು ಇವೆ. ಈ ಸೋಪಾನ ಬಾವಿಯ ರಚನೆ ಸುಂದರವೂ ಕಲಾತ್ಮಕವೂ ಆಗಿದೆ. ಬಹುಶಃ ಇಂತಹ ಬಾವಿ ಬೇರೆ ಕಡೆಗೆ ಇಲ್ಲವೇನೊ ಎಂದೆನಿಸುತ್ತದೆ.

ಛಬ್ಬೇರ ಬಾವಿ ಮತ್ತು ಕನ್ನೇರ ಬಾವಿ ಬಹಳಷ್ಟು ಶಿಥಿಲಗೊಂಡಿವೆ ಹಾಗೂ ರಿಪೇರಿಗೊಂಡಿಲ್ಲ. ಸಂಪೂರ್ಣ ಅಸ್ತವ್ಯಸ್ತಗೊಳ್ಳುತ್ತಿವೆ. ಮುಸುಕಿನ ಬಾವಿಯಂತೆ ಪ್ರಖ್ಯಾತಿಯನ್ನು ಪಡೆದುಕೊಂಡಿರುವ ಮತ್ತೊಂದು ಬಾವಿ ''ಮಜ್ಜನ ಬಾವಿ''. ಇದು ಹಲವಾರು ವಿಶೇಷತೆಗಳನ್ನು ಹೊಂದಿದೆ. ಮಜ್ಜನ ಪ್ರಿಯರಿಗಾಗಿರುವ ಬಾವಿಯಾಗಿರುವದರಿಂದ ಮಜ್ಜನ ಬಾವಿಯೆಂದು ಕರೆಯುತ್ತಾರೆ. ಇದು ವಾಸ್ತು ಶಿಲ್ಪಕೆ ಇರುವ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಇದರೊಳಗಿನ ನೀರು ಗುಲಾಬಿ ಬಣ್ಣದಂತಿದ್ದು, ಸುವಾಸನೆಯಿಂದ ಕೂಡಿರುವುದು ಅಚ್ಚರಿಯನ್ನುಂಟು ಮಾಡುತ್ತದೆ. ಲಕ್ಕುಂಡಿಯಲ್ಲಿ ೧೦೧ ಬಾವಿಗಳಿದ್ದವೆಂದು ಹೇಳಲಾಗುತ್ತದೆ.[೬೫] ಆದರೆ ಈಗ ಅಷ್ಟೊಂದು ಬಾವಿಗಳಿಲ್ಲವಾದರೂ ಮೇಲೆ ಹೇಳಿದ ಬಾವಿಗಳಲ್ಲದೆ ಪತ್ರಿ ಬಾವಿ, ಮಾಳೀ ಬಾವಿ, ಸಿದ್ಧರ ಬಾವಿ, ಹನುಮನ ಬಾವಿ, ಉಕ್ಕಲಿ ಬಾವಿಗಳಿವೆ. ಬಾವಿಗಳಲ್ಲದೆ ಮೂರು ದೊಡ್ಡ ಕೆರೆಗಳಿವೆ. ಬಾವಿಗಳು ಕೇವಲ ನೀರು ಕೊಡುವ ಸಾಮಾನ್ಯವಾದ ಬಾವಿಗಳಾಗದೆ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆಯ ದ್ಯೋತಕವಾಗಿ ಈಗ ಗತವೈಭವದ ಅವಶೇಷಗಳಾಗಿ ಉಳಿದುಕೊಂಡಿದೆ.

ಯೋಗಿರಾಜರು

ಕ್ರಿ.ಶ. ೧೮೬೪ರಲ್ಲಿ ಲಕ್ಕುಂಡಿಯ ಕುಲಕರ್ಣಿ ಮನೆತನದಲ್ಲಿ ಯೋಗಿರಾಜರು ಅವತರಿಸಿದ್ದಾರೆ. ಇವರ ಮೊದಲಿನ ಹೆಸರು ಹನುಮಂತರಾವ್ ಎಂದು. ತಮ್ಮ ತಂದೆ - ತಾಯಿಗಳಿಲ್ಲದ ಕಾರಣ ಇವರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದಿದ್ದಾರೆ. ಬ್ರಿಟಿಷ್ ಕಾಲದ ಪದವಿಯನ್ನು ಗಳಿಸಿಕೊಂಡ ಇವರು ಸರಕಾರಿ ಸೇವೆಯನ್ನು ಸಹಿತ ಮಾಡಿದ್ದಾರೆ. ಮುಂದೆ ಆಧ್ಯಾತ್ಮದಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ, ಶ್ರೀ ಹನುಮಂತರಾಯರು, ತೆಲುಗು ದೇಶದ ಶ್ರೀ ಗಗನಾಚಾರ್ಯರಲ್ಲಿ ಯೋಗ ಶಿಕ್ಷಣವನ್ನು ಪಡೆದುಕೊಂಡು ಸಿದ್ಧಯೋಗಿಗಳಾದರು. ''ರಾಮನಾಮ''ದ ಉಪದೇಶವನ್ನು ಶ್ರೀ ಬ್ರಹ್ಮಚೈತನ್ಯ ಗೋಂದಾನಲಿ ಮಹಾರಾಜರಿಂದ ಪಡೆದುಕೊಂಡಿದ್ದಾರೆ. ಮಹಾರಾಷ್ಟ್ರದ ಕರ್ಹಾಡ, ಕಾಸೇಗಾಂವ, ಪಾರವೇರಗಳಲ್ಲಿ ತಪಸ್ಸನ್ನು ಮಾಡಿ ಭಕ್ತರಿಂದ ಯೋಗಿರಾಜರೆಂದು ಕರೆಯಿಸಿಕೊಂಡಿದ್ದಾರೆ.

ಯೋಗ ಹಾಗೂ ಭಕ್ತಿಮಾರ್ಗದ ಮಹತ್ವವನ್ನು ಶ್ರೀ ಯೋಗಿರಾಜರು ತಿಳಿಸುತ್ತ ಸಂಚರಿಸಿದರು. ಇವರಿಗೆ ಅನೇಕ ಜನರು ಶಿಷ್ಯರಾದರು. ಇವರು ಕ್ರಿ.ಶ. ೧೯೨೧ರಲ್ಲಿ ತ್ರಿವೇಣಿ ಸಂಗಮದಲ್ಲಿ ಜಲಸಮಾಧಿ ರೂಪದಲ್ಲಿ ಐಕ್ಯರಾದರು. ಲಕ್ಕುಂಡಿಯಲ್ಲಿ ಈಗಲೂ ಪ್ರತಿವರ್ಷಕ್ಕೊಮ್ಮೆ ಶ್ರೀ ವಿದ್ಯಾಶಂಕರ ದೇವಸ್ಥಾನದಲ್ಲಿ ಶ್ರೀ ಯೋಗಿರಾಜ ಮಹಾರಾಜರ ಪುಣ್ಯಾರಾಧನೆಯನ್ನು ಆಚರಿಸುತ್ತಾರೆ. ಈ ಆರಾಧನಾ ಕಾರ್ಯದಲ್ಲಿ ಹಲವಾರು ಭಕ್ತರು ಪಾಲ್ಗೊಳ್ಳುತ್ತಾರೆ.

ಈ ರೀತಿಯಾಗಿ ಲಕ್ಕುಂಡಿಯ ವಾಸ್ತುಶಿಲ್ಪಕಲೆಗೆ ತವರುಮನೆಯಾಗಿತ್ತು. ಅಲ್ಲಿ ಶಿಲಾಲಿಪಿ, ಶಾಸನ, ದೇವಾಲಯ, ಮೂರ್ತಿಗಳು ತಿಳಿಸುವಂತೆ ಸೋಮೇಶ್ವರ, ಮಲ್ಲಿಕಾರ್ಜುನ, ನನ್ನೇಶ್ವರ, ಕಾಶೀ ವಿಶ್ವನಾಥ, ಸೂರ್ಯದೇವ, ವಿಷ್ಣು, ಗಣಪತಿ, ಜಿನದೇವ ಮೊದಲಾದ ದೇವರುಗಳಿಗೆ ನಿತ್ಯ ಪೂಜೆ ನಡೆಯುತ್ತಿತ್ತು. ಶೈವ, ವೈಷ್ಣವ, ಜೈನ ಪಂಥದ ಜನರು ಲಕ್ಕುಂಡಿಯಲ್ಲಿ ಸೌಹಾರ್ದದಿಂದ ವಾಸವಾಗಿದ್ದರು. ಅಲ್ಲಿಯ ಜನರು ದಾನಶೀಲರಾಗಿರುವುದನ್ನು ದಾನ ಶಾಸನಗಳೇ ತಿಳಿಸುತ್ತವೆ. ದೇವಾಲಯಗಳನ್ನು ಕಟ್ಟಿಸುವುದಲ್ಲದೆ ಅಲ್ಲಿಯ ಪೂಜಾಕಾರ್ಯಗಳಿಗಾಗಿ ದಾನ, ದತ್ತಿಯನ್ನು ಬಿಡುವ ಧರ್ಮಪರಂಪರೆಯನ್ನು ಅಲ್ಲಿನ ಜನರು ಹೊಂದಿದ್ದರು. ಪೌರಾಣಿಕ ಐತಿಹಾಸಿಕ ಹಿನ್ನೆಲೆ ಇರುವ ಲಕ್ಕುಂಡಿ ಒಂದು ಅಗ್ರಹಾರವಾಗಿತ್ತು. ಕೃತಪುರ ಪುರಾಣದಲ್ಲಿಯಂತೂ ಶಿಬಿ ಚಕ್ರವರ್ತಿ ಆಳುತ್ತಿದ್ದ ಉಲ್ಲೇಖವಿದೆ. ಇಲ್ಲಿ ಕರ್ನಾಟಕದ ಅರಸು ಮನೆತನಗಳಾದ ಕಲ್ಯಾಣ ಚಾಲುಕ್ಯರು, ಕಲಚೂರರು, ಸೇವಣರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮುಸ್ಲಿಂರು ಹಾಗೂ ಬ್ರಿಟಿಷರು ಆಡಳಿತ ನಡೆಸಿದರೂ ಸ್ಥಳೀಯ ಆಡಳಿತ ಮಾತ್ರ ಸಾವಿರ ಮಹಾಜನರಿಂದಲೇ ಆಗುತ್ತಿತ್ತು. ಸಾವಿರ ಮಹಾಜನರ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ. ಹಾಗೆ ಸಾವಿರ ಮಹಾಜನರ ಗುಣ ವಿಶೇಷಣಗಳ ಕುರಿತಾಗಿ ಶಾಸನಗಳಲ್ಲಿ ವಿವರಣೆಯು ದೊರೆಯುತ್ತದೆ. ಇಲ್ಲಿಯ ಕೋಟೆಗಳು ಒಂದು ಕಲ್ಲಿನಕೋಟೆ ಮತ್ತೊಂದು ಮಣ್ಣಿನಕೋಟೆ. ಅಂದಿನ

ರಾಜವೈಭವವನ್ನು ಸೂಚಿಸುತ್ತವೆ. ಇಷ್ಟೆಲ್ಲಾ ಇತಿಹಾಸವನ್ನು ತನ್ನಲ್ಲಿಟ್ಟುಕೊಂಡು ಲಕ್ಕುಂಡಿಯು ಇಂದು ಒಂದು ಸಾಮಾನ್ಯ ಗ್ರಾಮವಾಗಿದೆ. ನಾಗಲಿಂಗಯ್ಯನ ಹರಕೆಯ ಗ್ರಾಮವೆಂದೇ ಪ್ರಸಿದ್ಧಿಯನ್ನು ಪಡೆದ ಈ ಗ್ರಾಮದಲ್ಲೀಗ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯವು ಇದೆ. ಲಕ್ಕುಂಡಿಯಲ್ಲಿ ದೊರೆತಿರುವ ಅವಶೇಷಗಳನ್ನು ಇಲ್ಲಿ ಸಂಗ್ರಹಿಸಿ ಇಡಲಾಗಿದೆ.

ಲಕ್ಕುಂಡಿಯ ಹೂಗಳು

ಅತ್ತಿಮಬ್ಬೆಯಂತಹ ಮಹಾದಾನಿಯನ್ನು ಹೊಂದಿದ ಲಕ್ಕುಂಡಿಯ ದೇವಾಲಯಗಳು ಬಹುತೇಕ ಪಾಳು ಬಿದ್ದಿವೆ. ಅಂದಿನ ವೈಭವ ಕೇವಲ ಗತ ವೈಭವವಾಗಿದೆ. ಇವತ್ತಿನ ಲಕ್ಕುಂಡಿಯ ನಾಗರಿಕರು ಹೂವಿನ ಉದ್ಯಮದಿಂದ ಲಕ್ಕುಂಡಿಯನ್ನು ಆ ನಿಟ್ಟಿನಲ್ಲಿ ಪ್ರಸಿದ್ಧವನ್ನಾಗಿಸುತ್ತಿದ್ದಾರೆ. ಇಲ್ಲಿಯ ಮಲ್ಲಿಗೆ, ಸೇವಂತಿಗೆ ಮತ್ತು ಕನಕಾಂಬರಿ ಹೂಗಳು ಬೇರೆ ಕಡೆಗೆ ಪ್ರಸಿದ್ಧವಾಗಿವೆ. ಬೆಂಗಳೂರು, ಹೈದರಾಬಾದ, ಗೋವಾ, ಮುಂಬಯಿವರೆಗೆ ಲಕ್ಕುಂಡಿಯ ಹೂಗಳು ಮಾರಾಟವಾಗಿವೆ. ಮತ್ತು ಅಲ್ಲೆಲ್ಲಾ ಲಕ್ಕುಂಡಿಯ ಹೂಗಳೇ ಎಂದು ಪ್ರಸಿದ್ಧಿಯನ್ನು ಪಡೆದಿವೆ. ಕರ್ನಾಟಕದಲ್ಲಿ ಮೈಸೂರು ಮಲ್ಲಿಗೆ ಪ್ರಸಿದ್ಧಿಯನ್ನು ಪಡೆದುಕೊಂಡಿರುವಂತೆ, ಈಗ ಲಕ್ಕುಂಡಿಯ ಮಲ್ಲಿಗೆ ಪ್ರಖ್ಯಾತಿಯನ್ನು ಪಡೆದುಕೊಳ್ಳುತ್ತಿದೆ. ಮಲ್ಲಿಗೆಯ ಬೇರೆ ಬೇರೆ ಜಾತಿಗಳಾದ ಕಾಕಡಾ ಮಲ್ಲಿಗೆ, ದುಂಡುಮಲ್ಲಿಗೆ, ಸೂಜಿಮಲ್ಲಿಗೆ, ಜಾಜಿಮಲ್ಲಿಗೆ ವಸಂತ ಮಲ್ಲಿಗೆಯ ಹೂವುಗಳನ್ನು ಲಕ್ಕಂಡಿಯ ಕೃಷಿಕರು ಬೆಳೆದು, ಬೇರೆ ಕಡೆಗೆ ಮಾರಾಟವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಹೀಗೆ ಇಲ್ಲಿ ಬೆಳೆಯುವ ಹೂಗಳು ಪ್ರಮುಖ ವಾಣಿಜ್ಯದ ಹೂಗಳಾಗಿ ಬೆಂಗಳೂರು, ಹೈದರಾಬಾದ್ , ಗೋವಾ, ಮುಂಬಯಿಯನ್ನು ಸುವಾಸಿತಗೊಳಿಸುತ್ತಿವೆ. ಲಕ್ಕುಂಡಿಯ ಮಲ್ಲಿಗೆಯಂತೆ ಪೇರಲ ಹಣ್ಣುಗಳು ಪ್ರಸಿದ್ಧಿಯಾಗಿವೆ. ಗದಗ ಜಿಲ್ಲೆಯ ಮಾರುಕಟ್ಟೆಯಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡಿವೆ.

ಲಕ್ಕುಂಡಿ ಉತ್ಸವ

೧೯೯೪ರಿಂದ ಕರ್ನಾಟಕ ಸರ್ಕಾರವು ಲಕ್ಕುಂಡಿ ಉತ್ಸವವನ್ನು ನಡೆಸಲು ಸನ್ನದ್ಧವಾಗಿದೆ. ಪ್ರಥಮ ಲಕ್ಕುಂಡಿ ಉತ್ಸವವು ಗದಗನಲ್ಲಿ ಆಚರಿಸಲ್ಪಟ್ಟಿದೆ. ನಂತರದ ೧೯೯೮, ೨೦೦೦, ೨೦೦೨ರ ಲಕ್ಕುಂಡಿ ಉತ್ಸವ ಲಕ್ಕುಂಡಿಯಲ್ಲಿಯೇ ಆಚರಿಸಲಾಗುತ್ತಿದೆ.

ಒಂದು ಚಿಕ್ಕ ಗ್ರಾಮ ಒಂದು ಮಹತ್ವದ ಸ್ಥಳವಾಗುವುದಕ್ಕೆ ಐತಿಹಾಸಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸವೇ ಕಾರಣವಾಗುತ್ತದೆ. ಈ ಕಾರಣಗಳಿಂದಲೇ ಕರ್ನಾಟಕ ರಾಜ್ಯದ ನೂತನ ಜಿಲ್ಲೆಯ ಗದಗದಲ್ಲಿ ಬರುವ ಲಕ್ಕುಂಡಿಯು ಮಹತ್ವಪೂರ್ಣ ಸ್ಥಳವಾಗಿದೆ.

ಅರಸುಗಳ ದೃಷ್ಟಿಕೋನದಿಂದ ಲಕ್ಕುಂಡಿಯು ಪ್ರಮುಖವಾದ ನಗರವಾಗಿತ್ತು. ಅತ್ತಿಮಬ್ಬೆಯಂತಹ ದಾನವಿನೋದೆ, ಅಣ್ಣಿಗದೇವನಂತ ನನ್ನಿರಾಯಣರು ಇರುತ್ತಿದ್ದ ಈ ಪುರವು ಚಾಳುಕ್ಯ ಸಾಮ್ರಾಜ್ಯದ ಪ್ರಮುಖ ಪಟ್ಟಣವಾಗಿತ್ತು. ಅದನ್ನೆ ಶಾಸನವು "ರಾಜ್ಯದ ಸಾರ, ಇಡಿ ಭೂಮಿಗೆ ಆಧಾರ, ಚಾಳುಕ್ಯ ಚಕ್ರವರ್ತಿಯ ತವನಿಧಿ, ಭಂಡಾರದ ಮನೆ, ಪಟ್ಟಸ ಭಂಡಾರವೇ ಲೋಕ್ಕಿಗುಂಡಿ" ಎಂದು ಬಣ್ಣಿಸಿದೆ.

"ಸಾರಂ ಸಮಸ್ತಂ ವಸುಧಾಧಾರಂ ಚಾಳುಕ್ಯ ಚಕ್ರಿ ಗಷಯ ನಿಧಿ
ಭಂಡಾರಮನೆ ಪಟ್ಟಸಭಂಡಾರಮಿದೆನಿಸುವುದು ಲೊಕ್ಕಿಗುಂಡಿ ಗ್ರಾಮಂ ||"[೮೦]

ಇಷ್ಟೆಲ್ಲಾ ಪೌರಾಣಿಕ, ಐತಿಹಾಸಿಕ ಹಿನ್ನೆಲೆ ಇರುವ ಲಕ್ಕುಂಡಿಯನ್ನು ಅತ್ತಿಮಬ್ಬೆಯು ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದಳು. ಲಕ್ಕುಂಡಿಯಲ್ಲಿರುವ ಶಾಸನಗಳು, ಶಾಸನ ಸಾಹಿತ್ಯಪ್ರಿಯ ಕನ್ನಡಿಗರಿಗೆ ಎರಡು ಬಗೆಯ ಸಹಾಯವನ್ನು ಮಾಡುತ್ತವೆ. ಒಂದು ಅತ್ತಿಮಬ್ಬೆಯ ಇತಿಹಾಸವನ್ನು ತಿಳಿದುಕೊಳ್ಳುವಾಗ ಸಹಾಯ ಮಾಡಿದರೆ, ಮತ್ತೊಂದು ಕಡೆಯಿಂದ ಅತ್ತಿಮಬ್ಬೆಯ ಕಾರ್ಯವನ್ನು, ಅವಳ ವ್ಯಕ್ತಿತ್ವವನ್ನು ಹೇಳುವ ಮೌಕ್ತಿಕಗಳಾಗಿವೆ.

ಆ. ಅತ್ತಿಮಬ್ಬೆಯ ಇತಿಹಾಸ

ಅತ್ಯುತ್ತಮವಾದ ಆಲೋಚನೆಗಳನ್ನು ತಿಳಿದುಕೊಳ್ಳುವಂತೆ ಅತ್ಯುತ್ತಮ ವ್ಯಕ್ತಿಗಳ ಇತಿಹಾಸವನ್ನು ತಿಳಿದುಕೊಳ್ಳುವುದು ಅತಿ ಅಗತ್ಯ. ಅತ್ತಿಮಬ್ಬೆಯು ಅತ್ಯುತ್ತಮ ವ್ಯಕ್ತಿಗಳ ಗುಂಪಿನಲ್ಲಿ ಬರುವಾಕೆ. ಇಂತಹ ಅತ್ತಿಮಬ್ಬೆಯ ಚರಿತ್ರೆಯನ್ನು ತಿಳಿದುಕೊಳ್ಳಲು ಆಧಾರಗಳಿಗೆ ಇತಿ - ಮಿತಿಗಳಿವೆ. ಆ ಇತಿಮಿತಿಯ ಚೌಕಟ್ಟಿನಲ್ಲಿ ಬರುವ ಆಧಾರಗಳು ಯಾವುವು ಎಂದರೆ -

೧. ಲಕ್ಕುಂಡಿಯ ಶಾಸನಗಳು
೨. ಅಜಿತ ಪುರಾಣ (ರನ್ನ ಕವಿ)ದಲ್ಲಿಯ ಕೆಲವೊಂದು ಪದ್ಯಗಳು
೩. ಪೊನ್ನಕವಿಯ ಶಾಂತಿಪುರಾಣದಲ್ಲಿ ದೊರೆಯುವ ಕೆಲ ಪದ್ಯಗಳು (ಅತ್ತಿಮಬ್ಬೆಯ ಪೂರ್ವಜರ ಕುರಿತಾಗಿ)
೪. ಬ್ರಹ್ಮಶಿವ ಕವಿಯ - ಸಮಯ ಪರೀಕ್ಷೆಯಲ್ಲಿ ಬರುವ ಅತ್ತಿಮಬ್ಬೆಯ ಮೂರು ಸ್ತುತಿ ಪದ್ಯಗಳು
೫. ಶಾಂತಿನಾಥ ಕವಿಯು "ಸುಕುಮಾರ ಚರಿತ"ದಲ್ಲಿ ಅಣ್ಣಿಗದೇವ ಮತ್ತು ಅತ್ತಿಮಬ್ಬೆಯನ್ನು ವಿಶಿಷ್ಟವಾಗಿ ದಾಖಲಿಸಿದ್ದಾನೆ.

ಇಷ್ಟು ಆಧಾರಗಳಲ್ಲದೆ, ಪ್ರೊ.ತೀ.ನಂ.ಶ್ರೀಯವರ ಸಮಾಲೋಕನದಲ್ಲಿಯ ಲೇಖನ ಹಂಪನಾ - ಕವಿವರ ಕಾಮಧೇನು, ಕಮಲಾ ಹಂಪನಾ ಅವರ ಗುಣದಂಕಕಾರ್ತಿ ಎಂಬ ಪುಸ್ತಕಗಳು. ಇಷ್ಟು ಮಿತಿಯೊಳಗಿನ ಚೌಕಟ್ಟಿನಲ್ಲಿ ಅತ್ತಿಮಬ್ಬೆಯ ಇತಿಹಾಸದ ಸತ್ಯದರ್ಶನವನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಿದೆ.

ಕನ್ನಡದ ಪ್ರಮುಖ ಜೈನ ಪುರಾಣಗಳಲ್ಲಿ ರನ್ನನ ಅಜಿತ ಪುರಾಣವೂ ಒಂದು. ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿಯ ೧೪೩ ಶ್ಲೋಕಗಳಲ್ಲಿ ಅಡಕವಾಗಿರುವ ಕಥೆಯನ್ನು ೧೨ ಆಶ್ವಾಸಗಳ ಕೃತಿಯನ್ನಾಗಿ ಇರಿಸಿದ್ದಾನೆ, ರನ್ನ ಮಹಾಕವಿ. ಅಜೀತ ಪುರಾಣವು ಎರಡನೆಯ ತೀರ್ಥಂಕರನ ಕಥೆಯಾಗಿದೆ. ಆದರೂ ಅದು ಸಗರನ ಚರಿತ್ರೆ, ವೈರಾಗ್ಯ ಮತ್ತು ಭವಾಳಿಗಳ ಗೊಂದಲವಿಲ್ಲದೆ ತೀರ್ಥಂಕರನ ಕಥೆಯನ್ನು ನೇರವಾಗಿ ರನ್ನ ಮಹಾಕವಿ ಹೇಳಿದ್ದಾನೆ. ಈ ವಿಷಯಗಳಲ್ಲದೆ ಅತ್ತಿಮಬ್ಬೆಯ ಪುಣ್ಯ ಚರಿತೆಯನ್ನು ಅಜಿತಪುರಾಣವು ಹೊಂದಿದೆ. ಅತ್ತಿಮಬ್ಬೆಯು ಕನ್ನಡ ಸಾಹಿತ್ಯ ಕಂಡ ಅಪ್ರತಿಮ ವ್ಯಕ್ತಿತ್ವವುಳ್ಳವಳು. ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಮರೆಯದಂತೆ ಚಿರಸ್ಥಾಯಿಯಾಗಿ ಉಳಿಸಿಕೊಟ್ಟವನು ರನ್ನ ಕವಿಯು. ಅದೇ ರೀತಿಯಾಗಿ ಹೊಸಗನ್ನಡ ಸಾರಸ್ವತ ಲೋಕಕ್ಕೆ ಅತ್ತಿಮಬ್ಬೆಯನ್ನು ಪರಿಚಯಿಸಿಕೊಟ್ಟ ಕೀರ್ತಿ ಪ್ರೊ. ತೀ.ನಂ.ಶ್ರೀಕಂಠಯ್ಯನವರಿಗೆ ಸಲ್ಲುತ್ತದೆ. ರನ್ನನ ಅಜಿತ ಪುರಾಣದಲ್ಲಿಯ ಪದ್ಯಗಳು ಹಾಗೂ ಲಕ್ಕುಂಡಿಯ ಶಾಸನಗಳನ್ನು ಆಧರಿಸಿ "ಸಮಾಲೋಕನ"ದಲ್ಲಿ "ದಾನ ಚಿಂತಾಮಣಿ ಅತ್ತಿಮಬ್ಬೆ"ಯೆಂಬ ಲೇಖನ ಪ್ರಬುದ್ಧ ಕರ್ನಾಟಕದಲ್ಲಿ ೨೯.೪.೧೯೪೪ರಲ್ಲಿ ಮೊದಲು ಪ್ರಕಟವಾಗಿದೆ. ಅಲ್ಲಿಂದ ಹಿಡಿದು ಇಲ್ಲಿಯವರೆಗೆ ಅತ್ತಿಮಬ್ಬೆಯ ಜೀವನ ಸಾಧನೆ, ತ್ಯಾಗ, ತಪಸ್ಸು, ಸಾಹಿತ್ಯಸೇವೆ ಇವುಗಳ ಕುರಿತು ಕನ್ನಡದ ಹಿರಿ ಕಿರಿ ಸಾಹಿತಿಗಳು ಒಂದಿಲ್ಲೊಂದು ಪ್ರಕಟಣೆಗಳನ್ನು ನೀಡುತ್ತಲೇ ಬಂದಿದ್ದಾರೆ. ಆದರೂ ಅತ್ತಿಮಬ್ಬೆಯ ಜನನ, ಬಾಲ್ಯ, ಸಾಂಸಾರಿಕ ಜೀವನ, ಕೊನೆಯ ಕಾಲ, ಸಾವು - ಇವುಗಳು ಇದುವರೆಗೂ ಸ್ಪಷ್ಟವಾಗಿ ಪ್ರಕಟವಾಗಿಲ್ಲ. ಅವಳ ಸಾಧನೆ, ಪವಾಡ, ಧಾರ್ಮಿಕ ಜೀವನ, ಸಾಹಿತ್ಯ ಸೇವೆ ಮೊದಲಾದ ವಿಷಯಗಳು ಕಾವ್ಯ ಹಾಗೂ ಶಾಸನಗಳಲ್ಲಿ ಉಕ್ತವಾಗಿವೆ. ಆದರೆ ಇನ್ನುಳಿದ ಅವಳ ವೈಯಕ್ತಿಕ ಜೀವನದ ಬಗ್ಗೆ ಸಿಗುವ ಆಧಾರಗಳು ಅಷ್ಟೊಂದು ಗಟ್ಟಿಯಾಗಿಲ್ಲ. ಅತ್ತಿಮಬ್ಬೆಯ ಜನನ ಯಾವಾಗ ಆಯಿತು? ಅವಳ ಬಾಲ್ಯ ಹೇಗೆ ಕಳೆಯಿತು? ಅವಳು ಮದುವೆಯಾದದ್ದು ಯಾವಾಗ? ಮಗ ಹುಟ್ಟಿದ್ದು ಎಂದು? ಪತಿಯ ಸಾವು ಎಂದು ಸಂಭವಿಸಿತು? ಎನ್ನುವ ಪ್ರಶ್ನೆಗಳು ಪ್ರಶ್ನೆಯಾಗಿಯೇ ಉಳಿದಿವೆಯೆ ಹೊರತು ಉತ್ತರವನ್ನು ಕಂಡುಕೊಂಡಿಲ್ಲ. ಅವಳ ಹುಟ್ಟು, ಬಾಲ್ಯ, ಮದುವೆ, ಮಗ, ಪತಿಯ ರಣಾಂಗಣದ ವೀರಮರಣ - ಈ ಪ್ರಸಂಗಗಳು ದೊರಕಿದ ಆಧಾರಗಳಿಂದ, ಲಭ್ಯ ಪುರಾವೆಗಳಿಂದ, ತೀ.ನಂ.ಶ್ರೀ ಹಾಗೂ ಹಂಪನಾ ಅಂತಹ ಪಂಡಿತರ ಸಾಧಾರ ಊಹೆಯಿಂದ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ.

ಅತ್ತಿಮಬ್ಬೆ ಹುಟ್ಟಿದ್ದು ಈಗಿನ ಆಂಧ್ರಪ್ರದೇಶದ ಪುಂಗನೂರಿನಲ್ಲಿ. ಅವಳ ತಾಯಿ - ತಂದೆಯರ ಊರು ವೆಂಗಿಲಮಂಡಲದ, ಕಮ್ಮೆದೇಶದ ಪುಂಗನೂರು. ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಈ ಊರನ್ನು ಮನದುಂಬಿ ಹೊಗಳಿದ್ದಾರೆ.

ಕಮ್ಮೆನಾಡಿನ ಕೇಂದ್ರ ಭಾಗವೇ ಪುಂಗನೂರು ಎಂಬುದೇ ರನ್ನೋಕ್ತಿ. ಈ ಮೊದಲು ಗಮನಿಸಿದಂತೆ, ಪೊನ್ನ, ರನ್ನಾದಿ ಕವಿಗಳೆಲ್ಲ ಹೇಳುವ ಪುಂಗನೂರು ಈಗಿನ ಆಂಧ್ರಪ್ರದೇಶಕ್ಕೆ ಸೇರಿರುವ ಕರ್ನಾಟಕದ ಗಡಿ

ಜಿಲ್ಲೆಯಾದ ಅನಂತಪುರ ಜಿಲ್ಲೆಯಲ್ಲಿರುವ ಪುಂಗನೂರೇ ಆಗಿದೆ. ಈ ಪುಂಗನೂರಿನಲ್ಲಿರುವ ಅತ್ತಿಮಬ್ಬೆಯ ಪೂರ್ವಜನೇ ನಾಗಮಯ್ಯ. ಈ ನಾಗಮಯ್ಯನು ಸುಸಂಸ್ಕೃತ ಜೈನ ಬ್ರಾಹ್ಮಣ.

"ನಾಗಮನರ್ಥಿಮಯೂರ ಘ
ನಾಗಮನಧಿಗತ ವಿನೇಯ ಜನಹಿತಕರ ಜೈ
ನಾಗಮನ ಧಿಕರಿಪೊಂ ದಿ
ನ್ನಾಗಮನಕ್ಷೂಣ ಭದ್ರ ಲಕ್ಷಣ ಗುಣದಿಂ"[೮೧]

ನಾಗಮಯ್ಯನಿಗೆ, ಮಲ್ಲಪಯ್ಯ ಮತ್ತು ಪುನ್ನಪಯ್ಯ ಎಂಬ ಇಬ್ಬರು ಮಕ್ಕಳು. ಮಹಾಕವಿ ರನ್ನನು ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ವರ್ಣಿಸಿದರೆ, ಕವಿ ಪೊನ್ನನು ಅತ್ತಿಮಬ್ಬೆಯ ಪೂರ್ವಜರ ವ್ಯಕ್ತಿತ್ವವನ್ನು ಬಣ್ಣಿಸುತ್ತಾನೆ. ಮಲ್ಲಪಯ್ಯ ಮತ್ತು ಪುನ್ನಮಯ್ಯರೆಂಬ ಅಪೂರ್ವ ಸಹೋದರರು ಪೊನ್ನನಿಂದ ಶಾಂತಿಪುರಾಣವನ್ನು ಬರೆಸಿದರು. ಈ ವಿಷಯವನ್ನು ಕವಿ ಎದೆದುಂಬಿ ಹೇಳಿದ್ದಾನೆ. ಉತ್ಸವನಿಧಿ, ಉದಾತ್ತ ಯಶೋನಿಧಿಯಾಗಿರುವ ಈ ಸಹೋದರರು, ಜ್ಞಾನಸಂಪನ್ನರು, ಭೂಭಾರ ಭರಿಸುವ ಸಮರ್ಥರು, ತೇಜಸ್ವಿಯಾದ ದೇಹ ಧಾರ್ಢ್ಯ ಹೊಂದಿದವರು, ವಿನಯಚಿತ್ತರು ಹೀಗೆ ಸಕಲ ಗುಣ ಸಂಪನ್ನರಾದ ಈ ಸಹೋದರರ ಗುಣಾವಳಿಯನ್ನು ಪೊನ್ನ ಕವಿಯಿಂದಲೇ ಕೇಳಬೇಕು.

ಆ ಭೂಮಿ ದೇವ ತನಯರ್
ಪ್ರಾಭವ ಪರರಿರ್ವರತ್ಯ ಪೂರ್ವ ಶ್ರುತರು
ರ್ವಿ ಭಾರ ಭರಣ ಸಹರತಿ
ಶೋಭಾಸ್ಪದ ತನುಗಳವರೊಳಗ್ರ ತನೂಜಂ[೮೨]

ಅಮಿತ ಜ್ಯೋತಿಷ ಶಾಸ್ತ್ರೋ
ಕ್ತಿ - ಮಲ್ಲಪಂ ಜಿನಮತಜ್ಞನಾಹಿಮಸೇತು
ಪ್ರಮಿತ ಯಶಂ ಬಭ್ರುವರಾ
ಹಮಿಹಿರ ಶೌನಕ ಸುನಂದ ಗಾರ್ಗ್ಯ ಸಮಾನಂ[೮೩]

ಈ ನೆಲದೊಳ್ ಮಲ್ಲಪನ ಸ
ಮಾನರ್ ನರರೀಗಳಿಲ್ಲ ಮುನ್ನುಳ್ಳೊಡೆ ಕಾ
ನೀನಂ ಧಧೀಚಿ ಶಿಬಿ ವೃಷ
ಸೇನಂ ಯಮತನಯನಕ್ಕು ಮಲ್ಲರೊನಲ್ಲಂ.[೮೪]

ಕಾವ್ಯ - ರತ್ನವಾದ ಶಾಂತಿಪುರಾಣವನ್ನು ಬರೆಯಿಸಿದ ಅತ್ತಿಮಬ್ಬೆಯ ಅಪ್ಪ ಚಿಕ್ಕಪ್ಪಂದಿರು ಜಿನಮತವನ್ನು ಅರಿತವರು ಜ್ಯೋತಿಷ್ಯಶಾಸ್ತ್ರಜ್ಞನು, ಬಭ್ರು, ವರಾಹಮಿಹಿರ, ಶೌನಕ, ಸುನಂದ ಗಾರ್ಗ್ಯ ಸಮಾನರಾದ ಮಲ್ಲಪನ ಸಮಾನ ಯಾರೂ ಇಲ್ಲ. ಇರುವುದಾದರೆ ಕರ್ಣ, ದಧೀಚಿ, ಶಿಬಿ, ವೃಷಸೇನ, ಧರ್ಮರಾಯ ಮಾತ್ರ. ಈ ಮಲ್ಲಪನೇ ಅತ್ತಿಮಬ್ಬೆಯ ತಂದೆ. ಅತ್ತಿಮಬ್ಬೆಯ ವಂಶವೃಕ್ಷವನ್ನು ಹೀಗೆ ಸೂಚಿಸಬಹುದು.

ನಾಗಮಯ್ಯ

ಮಲ್ಲಪಯ್ಯ (ಜಿನ ಭಕ್ತ, ಜ್ಯೋತಿಷ್ಯ ಶಾಸ್ತ್ರಜ್ಞದಾನಿ) — ಪುನ್ನಮಯ್ಯ (ರಣಕಲಿ, ದಾನಿ)

ಗುಂಡಮ್ಯ ಎಳಮಯ್ಯ ಪೊನ್ನಮಯ್ಯ ಆಹವಮಲ್ಲ ವಲ್ಲ ನಾಗಿಯಬ್ಬೆ ಅತ್ತಿಮಬ್ಬೆ ಗುಂಡಮಬ್ಬೆ

ಅಣ್ಣಿಗದೇವ [೮೫]

ಅತ್ತಿಮಬ್ಬೆಗೆ ೫ ಜನ ಅಣ್ಣಂದಿರು ಒಬ್ಬಳು ಅಕ್ಕ ಮತ್ತು ಒಬ್ಬಳು ತಂಗಿ ಇದ್ದುದು ತಿಳಿದುಬರುತ್ತದೆ.

ಕರ್ನಾಟಕದ ಇತಿಹಾಸದಲ್ಲಿ ಕ್ರಿ.ಶ.ಸು. ೯೬೦ರ ಕಾಲವು ರಾಷ್ಟ್ರಕೂಟರ ಆಳ್ವಿಕೆಯ ಕೊನೆಯ ಕಾಲವಾಗಿತ್ತು. ಆಗ ತೈಲಪನು ರಾಷ್ಟ್ರಕೂಟರ ಪ್ರಮುಖ ಸಾಮಂತನಾಗಿದ್ದನು. ಇದೇ ವೇಳೆಯಲ್ಲಿ ಅತ್ತಿಮಬ್ಬೆಯ ತಂದೆಯಾದ ಮಲ್ಲಪ ಹಾಗೂ ಅವಳ ಚಿಕ್ಕಪ್ಪನಾಗಿರುವ ಪುನ್ನಮಯ್ಯರುಗಳು ದಂಡನಾಯಕರಾಗಿದ್ದರು. ರಾಷ್ಟ್ರಕೂಟರ ಆಳ್ವಿಕೆ ಕ್ಷೀಣಿಸುತ್ತಾ ಕ್ರಿ.ಶ. ಸುಮಾರು ೯೭೩ರಲ್ಲಿ ಮಹಾಸಾಮಂತನಾಗಿರುವ ತೈಲಪನೇ ಚಕ್ರವರ್ತಿಯಾದನು. ಚಾಳುಕ್ಯ ಚಕ್ರವರ್ತಿಯಾಗಿರುವ ತೈಲಪ ದೊರೆಗೆ ಮಹಾಮಂತ್ರಿಯಾದವನು ಧಲ್ಲಪನು. ಈ ಧಲ್ಲಪನ ಮಗನೇ ನಾಗದೇವ. "ಒರಟರ ಮಲ್ಲ"ನೆಂಬ ಬಿರುದಾಂಕಿತನು ಈತನೇ ಅತ್ತಿಮಬ್ಬೆಯನ್ನು ಅವಳ ತಂಗಿ ಗುಂಡಮಬ್ಬೆ ಸಹಿತವಾಗಿ ಮದುವೆ ಮಾಡಿಕೊಂಡವನು. ಈ ಐತಿಹಾಸಿಕ ವಿಷಯವು ಲಕ್ಕುಂಡಿ ಶಾಸನದಲ್ಲಿ ದಾಖಲಾಗಿದೆ. ಅಂದರೆ ಅವಳ ತಂದೆ, ತಾಯಿ, ಗಂಡ, ಮಗ ಇವರುಗಳ ಹೆಸರುಗಳು ಲಕ್ಕುಂಡಿ ಶಾಸನದಲ್ಲಿ ಇವೆ.

ಜಿನಪದ ಪಂಕಜಭ್ರಮರನೆಂಬ ನೆಗರ್ತೆಯನಾಳ್ದ ಮಲ್ಲಪ
ಯ್ಯನ ನೆಗಟ್ದಪ್ಪ ಕಬ್ಬೆಯ ಮಗಳ್ ಸಚಿವೋತ್ತಮನಪ್ಪ ಧಲ್ಲಪ
ಯ್ಯನ ಸೊಸೆ ನಾಗದೇವನ ಕುಲಾಂಗನೆ ತೈಲನ ತಾಯ್ ಜಸಕ್ಕೆ ಭಾ
ಜನ ಮೆನಿಪತ್ತಿಯಬ್ಬೆ ಜಿನಶಾಸನಂ ಬೆಳಗುತ್ತ ಮಿರ್ದಪಳ್ [೮೬]

ಇದು ರನ್ನ ಕವಿಯ ಪದ್ಯವೂ ಹೌದು. ಲಕ್ಕುಂಡಿ ಶಾಸನ ಪದ್ಯವೂ ಹೌದು. ಅತ್ತಿಮಬ್ಬೆಯು ಹುಟ್ಟಿದ ಊರು - ಪುಂಗನೂರು. ಸಕಲ ಗುಣಸಂಪನ್ನನಾಗಿರುವ ಮಲ್ಲಪಯ್ಯನೇ ಅವಳ ತಂದೆ. ಅಪ್ಪಕಬ್ಬೆಯು ಅವಳ

ತಾಯಿ. ಸಚಿವನಾಗಿರುವ ಧಲ್ಲಪಯ್ಯನ ಸೊಸೆ ಅವಳು. ಚಾಳುಕ್ಯ ಚಕ್ರವರ್ತಿಯಲ್ಲಿ ಚಮೂಪತಿಯಾಗಿರುವ ನಾಗದೇವನೇ ಅವಳ ಪತಿ. ಇವನ ತಂದೆ ಧಲ್ಲಪನು ಆಹವಮಲ್ಲನ ಭುಜಾದಂಡ, ವಿವೇಕ ಬೃಹಸ್ಪತಿ ಎಂಬ ವಿಖ್ಯಾತಿಯನ್ನು ತಳೆದವನಾದರೆ, ಚಮೂಪತಿಯಾಗಿರುವ ಮಗ "ಒರಟರ ಮಲ್ಲ"ನೆಂಬ ವಿಖ್ಯಾತಿಗೆ ಪಕ್ಕಾದವನು. ಅಲ್ಲದೆ ಸೇವಾದುರಂಧರನಾಗಿರುವ ನಾಗದೇವ ಸುಭಟ ಚೂಡಾಮಣಿ, ವಾಜಿಕುಳತಿಳಕ, ತೇಜೋಭಾಸ್ಕರ, ವೀರತ್ರಿಣೇತ್ರ, ನನ್ನಿ ಮಹಾರ್ಣವ, ಕಂದರಪುರಂಧರ ಎಂದು ಬಿರುದಾಂಕಿತನಾದವನು. ತಂದೆಯಂತು ಸಕಲ ಗುಣ ಸಂಪನ್ನನಷ್ಟೆ ಅಲ್ಲ, "ಮಲ್ಲಪನಲ್ಲದೆ ಪೆರನಾವನೊ ಶಾಸ್ತ್ರ ಶಸ್ತ್ರ ವಿದ್ಯಾಕುಶಲಂ" ಎಂಬ ಮಾತಿಗೆ ಕಾರಣವಾಗಿದ್ದವನು. ಅಮ್ಮನ ಭಕ್ತ.

ಹೀಗೆ ಅತ್ತಿಮಬ್ಬೆಯ ಹುಟ್ಟಿದ ಮೆಟ್ಟಿದ ಮನೆತನಗಳೆರಡು ವೈಭವದಿಂದ ಕೂಡಿದ ರಾಜಾಶ್ರಯ ಮನೆತನಗಳಾಗಿದ್ದವು. ಉಭಯಮನೆತನಗಳೆರಡು ಜೈನ ಬ್ರಾಹ್ಮಣ್ಯವಾಗಿದ್ದವು. ಚಾಳುಕ್ಯರಾಜರ ಸೇವಾದೀಕ್ಷೆಯನ್ನು ಎರಡೂ ಮನೆತನದವರು ಹಿಡಿದುಕೊಂಡಿದ್ದರು. ಸದ್ಗುಣ ಸಂಪನ್ನರು, ಶಾಸ್ತ್ರಜ್ಞರು, ಕವಿಪೋಷಕರಾಗಿರುವ ಇವರು ಖಡ್ಗವನ್ನು ಬೀಸಿ ಯುದ್ಧಮಾಡಿ, ಸಮಯ ಬಂದರೆ, ಸ್ವಾಮಿಗಾಗಿ ಪ್ರಾಣವನ್ನೇ ಮುಡಿಪಾಗಿಡುವ ಜಿನಭಕ್ತರು.

ಮಲ್ಲಪ್ಪಯ್ಯ ಅಪ್ಪಕಬ್ಬೆಗೆ ಅತ್ತಿಮಬ್ಬೆಯಲ್ಲದೆ ಇನ್ನೂ ಏಳು ಜನ ಮಕ್ಕಳಿದ್ದರು. ಗುಂಡಮಯ್ಯ, ಎಳಮಯ್ಯ, ಪೊನ್ನಮಯ್ಯ, ಆಹವಮಲ್ಲ, ವಲ್ಲ ಎಂಬ ಐವರು ಗಂಡುಮಕ್ಕಳು. ನಾಗಿಯಬ್ಬೆ, ಗುಂಡಮಬ್ಬೆ ಎನ್ನುವ ಇಬ್ಬರು ಹೆಣ್ಣುಮಕ್ಕಳು. ಅತ್ತಿಮಬ್ಬೆಯ ಜನನ ಯಾವಾಗ ಎನ್ನುವ ಪ್ರಶ್ನೆಗೆ ಖಚಿತವಾದ ಉತ್ತರಕ್ಕೆ ಬೇಕಾಗುವ ಯಾವ ಆಧಾರಗಳು ಇಲ್ಲ. ಆದರೂ ಡಾ. ಹಂಪನಾ ಅವರ ಅಭಿಪ್ರಾಯ ತೆಗೆದುಕೊಳ್ಳುವುದು ಅತ್ಯಂತ ಸೂಕ್ತವೆನಿಸುತ್ತದೆ. (ಅಂತರ - ಬಾಹ್ಯ ಪ್ರಮಾಣಗಳಿಂದ) ಅತ್ತಿಮಬ್ಬೆಯ ಜನನವನ್ನು ಕ್ರಿ.ಶ. ೯೫೦ ಎಂದು ಹೇಳಿದ್ದಾರೆ. ಅತ್ತಿಮಬ್ಬೆಯ ಜನನದ ಹಾಗೆ ಬಾಲ್ಯವು ಸಹಿತ ನಿರಾಧಾರವಾಗಿದೆ. ಯಾವ ಶಾಸನದ ಆಧಾರವೂ ಇಲ್ಲ. ಅತ್ತಿಮಬ್ಬೆಯ ಗುಣಗಾನ ಮಾಡಿರುವ ರನ್ನ ಕವಿಯು ಅವಳ ಬಾಲ್ಯದ ವಿಷಯವನ್ನು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಈ ಮೊದಲೇ ಹೇಳಿದ ಹಾಗೆ ಅತ್ತಿಮಬ್ಬೆಯ ಮೆಟ್ಟಿದ ಮನೆಯ ಹಾಗೆ ಹುಟ್ಟಿದ ಮನೆ ಶ್ರೀಮಂತ ಮನೆತನವಾಗಿತ್ತು. ಅವಳ ತಂದೆ ಮತ್ತು ಚಿಕ್ಕಪ್ಪರು; ಮಹಾಸಾಮಂತ ತೈಲಪಯ್ಯನಲ್ಲಿ ದಂಡನಾಯಕರಾಗಿದ್ದರು. ಅವಳ ಪೂರ್ವಜರಲ್ಲಿ ಒಬ್ಬನಾಗಿರುವ ನಾಗಮಯ್ಯ ಕೌಂಡಿನ್ಯಗೋತ್ರದ ದ್ವಿಜಾಗ್ರಣಿಯಾಗಿದ್ದನು. ಈತನ ಮಕ್ಕಳೆ ದಂಡನಾಯಕರಾಗಿರುವ ಮಲ್ಲಪ ಮತ್ತು ಪುನ್ನಮಯ್ಯ. ತಂದೆ ಮಲ್ಲಪಯ್ಯ "ಅಮ್ಮನ ಭಕ್ತ", "ವಿದ್ಯಾವಿಧಾನ" ಎಂಬ ಬಿರುದಾಂಕಿತನು. "ಪಂಡಿತ ಮಂಡಳಿಗಂ ಕವಿಮಂಡಳಿಗಂ ತನ್ನಮನೆ ತವರ್ಮನೆ" ಎನ್ನುವಂತೆ ಕವಿಗಳಿಗೆ ಆಶ್ರಯದಾತನು. ಅಲ್ಲದೆ ಜ್ಯೋತಿಷ್ಯಶಾಸ್ತ್ರಜ್ಞನು; ಕವಿಪೋಷಕನಾಗಿರುವಂತೆ, ರಣರಂಗಕಲಿಯೂ ಹೌದು! ಹೀಗಾಗಿ ಅತ್ತಿಮಬ್ಬೆಯು ಯಾವೊಂದರ ಕೊರತೆಯಿಲ್ಲದೆ ಬಾಲ್ಯದಲ್ಲಿ ಸುಖವಾಗಿ ಬೆಳೆದಳು. ಶಾಸ್ತ್ರ, ಜ್ಞಾನ, ಕವಿಪೋಷಣೆಯಂತಹ ಪ್ರಭಾವದಲ್ಲಿ ಬೆಳೆದಳು. ಅವಳ ಅಪ್ಪ ಚಿಕ್ಕಪ್ಪರು ಪೊನ್ನ ಕವಿಯಿಂದ ಶಾಂತಿಪುರಾಣವನ್ನು ಬರೆಯಿಸಿದ್ದರು. ಕವಿ ರನ್ನನು ಅತ್ತಿಮಬ್ಬೆಯ ವ್ಯಕ್ತಿತ್ವವನ್ನು

ವರ್ಣಿಸಿದರೆ, ಕವಿ ಪೊನ್ನನು ಅತ್ತಿಮಬ್ಬೆಯ ಪೂರ್ವಜರ ವ್ಯಕ್ತಿತ್ವವನ್ನು ವರ್ಣಿಸಿದ್ದಾನೆ. ಅವಳ ತಂದೆ ಮಲ್ಲಪಯ್ಯನ ಕೀರ್ತಿ ರಾಮೇಶ್ವರದಿಂದ ಹಿಮಾಲಯದವರೆಗೆ ಹಬ್ಬಿತ್ತಂತೆ. ಇವನ ಯಶಸ್ಸು ಬಬ್ರುವಾಹನ, ವರಾಹಮಿಹಿರ ಶೌನಕ, ಸುನಂದ, ಗಾರ್ಗ್ಯರಿಗೆ ಸರಿ ಸಮಾನವಾಗಿತ್ತಂತೆ. ಇಷ್ಟು ಮಾತ್ರವೇ ಅವಳ ಅಪ್ಪ ಚಿಕ್ಕಪ್ಪಂದಿರ ಗುಣಗಳಲ್ಲ. ಈ ನೆಲದಲ್ಲಿ ಮಲ್ಲಪನಿಗೆ ಸರಿಯಾಗಿ ಹೆಸರುವಾಸಿಯಾದ ಮಾನವರು ಯಾರೂ ಇಲ್ಲ. ಇದ್ದುದಾದರೆ; ಪುರಾಣನಾಯಕರಾದ ಕರ್ಣ, ದಧೀಚಿ, ಶಿಬಿ, ವೃಷಸೇನ ಧರ್ಮರಾಯನಂಥವರು, ಮಾತ್ರವೇ ಹೊರತು ಬೇರೆಯವರಲ್ಲ. ಉತ್ಸವನಿಧಿ, ಉದಾತ್ತಯಶೋನಿಧಿಯಾಗಿರುವ ಈ ಸಹೋದರರು - ಅಪೂರ್ವ ಸಹೋದರರೇ ಸರಿ! ಇವರಿಬ್ಬರೂ ಜ್ಞಾನಸಂಪನ್ನರು. ಸಾರ್ಥಕವಾಗಿ ಬಾಳುವೆ ಮಾಡಿ, ಭೂಭಾರ ಭರಿಸುವ ಸಮರ್ಥರು. ಕ್ಷಾತ್ರ ತೇಜಸ್ವಿಗಳಾದ ದೇಹ ಧಾರ್ಡ್ಯ ಹೊಂದಿದವರು. ವಿನಯಚಿತ್ತರು ಹೀಗೆ ಸಕಲ ಗುಣಸಂಪನ್ನರು ಅತ್ತಿಮಬ್ಬೆಯ ಅಪ್ಪ ಚಿಕ್ಕಪ್ಪರು.

"ಶಾಂತಿಪುರಾಣದ ನಿರ್ವಾ
ಣಂ ತಕ್ಕುದೆ ಮಲ್ಲಪಯ್ಯನಿಂ ತದನುಜನಿಂ
ಶಾಂತಿಧನ ಪುನ್ನಮಯ್ಯನಿ
ನೇಂ ತಮ್ಮುತಿರ್ವರುಂ ಕೃತಾರ್ಥರೊ ಜಗದೊಳ್ "[೮೭]
ಜಿನಚಂದ್ರಂ ಕೃತಿನಾಥನಾ ಕೃತಿಗೆನಾಥಂ ಶಾಂತಿನಾಥಂ

ಪುರಾತನ ಕಾವ್ಯಂಗಳು ಮೀಗಳಾದ ಕುಕೃಥಾ ಕಾವ್ಯಂಗಳುಂ ಪೋಲ್ವವಿ ಅಲ್ಲನ ಭೂತೋ ನ ಭವಿಷ್ಯತಿ ಕ್ರಮಮದಕ್ಕೀ ಪೌಢಿಮೆಯಂ ಮಲ್ಲಪ ಯ್ಯನುಮತ್ತ್ಯನ್ನತ ಪುನ್ನಮಯ್ಯನುಮಧೀಶ ಪ್ರೀತಿಯ ಮಾಡಿದರ್.[೮೮]

ಇವುಗಳೆಲ್ಲದರ ಪ್ರಭಾವ ಬಾಲಕಿ ಅತ್ತಿಮಬ್ಬೆಯ ಮೇಲೆ ಗಾಢವಾಗಿ ಆಗಿದೆ. ಈ ಕಾರಣದಿಂದಲೇ ಅವಳು ರನ್ನನಿಗೆ ಪೋಷಕಿಯಾಗಿ ಅಜಿತಪುರಾಣವನ್ನು ಬರೆಯಿಸಿ "ಶಾಂತಿ ಪುರಾಣ"ದ ಸಾವಿರ ಪ್ರತಿ ಮಾಡಿಸಿದಳು. "ಕವಿವರ ಕಾಮಧೇನು" ಎಂದು ಬಿರುದಾಂಕಿತಳಾದಳು. ಅವಳ ಚಿಕ್ಕಪ್ಪ ಅಣ್ಣನ ಭಕ್ತ, ಕಾವೇರಿ ತೀರದ ಕಾಳಗದಲ್ಲಿ ಜೋಳದ ಪಾಳಿಗಾಗಿ, ಹೋರಾಟದಲ್ಲಿ ಪಾಲ್ಗೊಂಡು ತೈಲಪ ನೃಪನೇ ಬದುಕಿ - ಬಾಳಲಿ ಎಂದು ಕತ್ತಿಯನ್ನು ಹಿರುದು ವೀರಾವೇಶದಿಂದ ಹೋರಾಡುತ್ತಿರುವಾಗಲೇ ವೀರಸ್ವರ್ಗವನ್ನು ಪಡೆದವನು. ಈ ಕ್ಷಾತ್ರ ತೇಜಸ್ಸು ಅತ್ತಿಮಬ್ಬೆಯ ಮೇಲೆ ಪ್ರಭಾವ ಬೀರಿದೆ. ಅವಳ ವೀರವನಿತೆಯಾಗಿಯೂ ರೂಪುಗೊಂಡಿದ್ದಾಳೆ.

ಅತ್ತಿಮಬ್ಬೆಯ ಬಾಲ್ಯ ಅತ್ಯುನ್ನತ ಸುಖ, ಸಾರ್ಥಕ್ಯದಿಂದ ಕಳೆದಿದೆ. ಅವಳ ಜೀವನದ ಮುಂದಿನ ಘಟ್ಟ ಮದುವೆ. ಹಂಪನಾ ಅವರ ಅಭಿಪ್ರಾಯದಂತೆ ಅವಳ ಮದುವೆ ಕ್ರಿ.ಶ.ಸು. ೯೭೫ರಲ್ಲಿ ನಡೆಯಿತು ಎಂದು ಹೇಳಬಹುದಾಗಿದೆ. ಅವಳು ತನ್ನ ತಂಗಿ ಗುಂಡಮಬ್ಬೆಯ ಜತೆಗೂಡಿ ಚಾಳುಕ್ಯ ಚಮೂಪತಿಯಾಗಿರುವ ನಾಗದೇವನನ್ನು ವಿವಾಹವಾದಳು. ಈ ನಾಗದೇವನು, ಚಾಳುಕ್ಯ ಚಕ್ರವರ್ತಿಯಲ್ಲಿ ಸಚಿವೋತ್ತಮನಾಗಿರುವ ಧಲ್ಲಪನ

ಮಗನು. ಅಂದರೆ ಅತ್ತಿಮಬ್ಬೆ ಈಗ ಮಹಾಮಂತ್ರಿ ಧಲ್ಲಪನ ಸೊಸೆಯಾದಳು. ಇದು ಶಾಸನೋಕ್ತವಾಗಿದೆ. - - - - - ಶಚಿವೋತ್ತ ಮನಪ್ಪ ಧಲ್ಲಪಯ್ಯನ ಸೊಸೆ - - - - -[೮೯]

ಅವಳ ಮಾವನಾದ ಧಲ್ಲಪನು ಸಹಿತ ಅವಳ ತೌರುಮನೆಯವರಂತೆ ವೀರಾಗ್ರಣಿ. ಆಹವಮಲ್ಲನ ಭುಜಾದಂಡ ಎಂದು ಪ್ರಖ್ಯಾತಿಯನ್ನು ಪಡೆದುಕೊಂಡಿದ್ದನು. ಹಾಗೂ ಅತ್ತಿಮಬ್ಬೆಯ ಅಪ್ಪ ಚಿಕ್ಕಪ್ಪರಂತೆ ಶಾಸ್ತ್ರಜ್ಞ ಜ್ಞಾನಸಂಪನ್ನನಾಗಿದ್ದನು. ''ವಿವೇಕ ಬೃಹಸ್ಪತಿ'' ಎಂಬ ವಿಖ್ಯಾತಿಯನ್ನು ತಳೆದವನು. ಇಂತಹ ಮಹಾಮಂತ್ರಿಯ ಮಗನಾಗಿರುವ ನಾಗದೇವನಲ್ಲಿ ತಂದೆಯ ಗುಣಗಳು ಸಾಕಷ್ಟು ಇದ್ದವು. ತಂದೆಯಂತೇ ಈತನು ವೀರಾಗ್ರಣಿ. ಅವನ ಬಿರುದುಗಳನ್ನು ನೋಡಿದರೆ ಸಾಕು ಅವನೆಂಥ ವೀರನು ಎಂಬುದು ಮನವರಿಕೆಯಾಗುತ್ತದೆ. ಸುಭಟ ಚೂಡಾಮಣಿ, ವಾಜಿಕುಳತಿಳಕ, ತೇಜೋಭಾಸ್ಕರ, ವೀರತ್ರಿಣೇತ್ರ, ನನ್ನಿಮಹಾರ್ಣವ, ಕಂಧರಪರಂಧರ, ಎಂಬುವುಗಳು ಅವನು ಪಡೆದುಕೊಂಡಿದ್ದ ಬಿರುದುಗಳು. ಅತ್ತಿಮಬ್ಬೆಯ ತೌರುಮನೆಯ ಬಾಲ್ಯದ ವಾತಾವರಣವೇ ಗಂಡನ ಮನೆಯಲ್ಲೂ ಇದೆ. ಉಭಯಮನೆತನಗಳೆರಡು ಚಾಳುಕ್ಯರಾಜರ ಸೇವಾದೀಕ್ಷೆಯನ್ನು ಪಡೆದುಕೊಂಡಿದ್ದ ಕಾರಣ ಅವಳಿಗೆ ಇಲ್ಲಿಯು ಯಾವೊಂದರ ಕೊರತೆಯೂ ಇಲ್ಲ. ಇವರೂ ಜಿನಭಕ್ತರು, ಸೇವಾ ದುರಂಧರರು. ತವರುಮನೆಯಂತಹುದೇ ವಾತಾವರಣದಲ್ಲಿ ಅತ್ತಿಮಬ್ಬೆ ಇಲ್ಲಿಯೂ ಅತ್ಯಂತ ಸುಖಿಯಾಗಿ ಕಾಲ ಕಳೆದಿದ್ದಾಳೆ. ಮದುವೆ ನಂತರದ ಅವಳ ಜೀವನದ ಮಹತ್ತರ ಘಟ್ಟ ಮಾತೃತ್ವ. ಅವಳು ಅಣ್ಣಿಗದೇವನ ತಾಯಿಯಾಗಿ (ಕ್ರಿ.ಶ. ೯೭೭ ರಲ್ಲಿ) ಹೆಣ್ಣು ಜನ್ಮದ ಸಾರ್ಥಕತೆಯನ್ನು ಪಡೆದುಕೊಂಡಳು. ಇದು ಅವಳ ಜೀವನದ ಸುಖದ ಪರಾಕಾಷ್ಠೆ. ಸುಖದ ತುತ್ತ ತುದಿಯನ್ನೇ ಅತ್ತಿಮಬ್ಬೆಯು ಮುಟ್ಟಿದಳು. ಆದರೆ ಈ ಸುಖ ಬಹಳ ಹೊತ್ತಿನವರೆಗೆ ಉಳಿಯಲಿಲ್ಲ. ಅವಳ ಸಂಸಾರ ಸುಖದ ಕಾಲವು ಕ್ಷಣಕಾಲದ ಮಿಂಚಿನಂತೆ ಮಿಂಚಿ ಮರೆಯಾಯಿತು. ಪತಿ ನಾಗದೇವ ವೀರಮರಣವನ್ನು ಹೊಂದುತ್ತಾನೆ. ಇದು ಸಹಿತ ಶಾಸನೋಕ್ತವಾಗಿದೆ.[೯೦] ಇಲ್ಲಿ ಅತ್ತಿಮಬ್ಬೆಯು ತೆಗೆದುಕೊಂಡ ನಿರ್ಧಾರ; ಇತಿಹಾಸದಲ್ಲಿಯ ಒಂದು ಅನನ್ಯ ಪುಟ. ಅದನ್ನು ರನ್ನ ಮಹಾಕವಿಯು ತನ್ನ ಕಣ್ಣೆದುರಿಗೆ ನಡೆದಿರುವ, ತನ್ನ ಆಶ್ರಯದಾತೆಯ ಬಾಳಿನ ಗೋಳನ್ನು ವೈಶಿಷ್ಟ್ಯಪೂರ್ಣವಾಗಿ ಬಣ್ಣಿಸಿದ್ದಾನೆ. ಕುಲತಿಲಕನಾದ ನನ್ನಿ ನಾರಾಯಣನನ್ನು ಮಗನಾಗಿ ಪಡೆದ ನಾಗದೇವನು, ತನ್ನಂತಹ ವೀರರು, ಸ್ವಾಮಿಭಕ್ತರು ಬೇರೊಬ್ಬರು ಇಲ್ಲ ಎಂಬಂತೆ ಕಲಿತನವನ್ನು ಮೆರೆದು, ಸ್ವಾಮಿಯನ್ನು ಮೆಚ್ಚಿಸಿ ದೇವಲೋಕಕ್ಕೆ ಹೋದನು. ಅತ್ತಿಮಬ್ಬೆ ಸಂಸಾರ ಸುಖದ ಮಧ್ಯದಲ್ಲಿರುವಾಗಲೇ ಅವಳ ಪತಿ ನಾಗದೇವನು ಇನ್ನಿಲ್ಲವಾದನು. ಆಗ ಅತ್ತಿಮಬ್ಬೆಯು ತೆಗೆದುಕೊಳ್ಳುವ ನಿರ್ಧಾರವನ್ನು ರನ್ನಕವಿಯ ಬಾಯಿಂದಲೇ ಕೇಳಬೇಕು.

ಎರಡೆವಲಂ ಕುಲವಧುಗಾ
ಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾ
ಚರಣಂ ಮೇಣ್ ಶುಭಚರಿತದೆ
ಮರಣಂ ಮೇಣಳಿಪಿನಿಂದೆ ಬಾಳ್ವುದು ದೊರೆಯೇ[೯೧]

ಪತಿ ವೀರಮರಣವನ್ನಪ್ಪಿದಾಗ ಕುಲವಧುವಿನ ಮುಂದೆ ಇರುವ ಮಾರ್ಗಗಳು ಎರೆಡೆ ಎರಡು. ಒಂದು ಜಿನದೀಕ್ಷೆಯನ್ನು ಆಚರಿಸುವುದು, ಮತ್ತೊಂದು ಪತಿಯ ಚಿತಾಗ್ನಿಯಲ್ಲಿ ಬೆಂದು ಶುಭಚರಿತಳಾಗುವುದು.

ಅತ್ತಿಮಬ್ಬೆ ಮಗನ ಪಾಲನೆಗಾಗಿ; ಗುಂಡಮಬ್ಬೆಯು ಹೇಳಿದಂತೆ ಮೊದಲನೆಯದಾದ ಜಿನದೀಕ್ಷೆಯನ್ನು ತೆಗೆದುಕೊಂಡಳು. ಗುಂಡಮಬ್ಬೆಯು ಸತಿ ಹೋಗುತ್ತಾಳೆ. ವಿಧಿ ತನ್ನ ಬಾಳಿನಲ್ಲಿ ಹೂಡಿದ ಆಟಕ್ಕೆ; ಒಂದು ದಿವ್ಯ ತಿರುವನ್ನು ಅತ್ತಿಮಬ್ಬೆ ಪಡೆದುಕೊಳ್ಳುತ್ತಾಳೆ. ಸುಖದ ತುತ್ತ ತುದಿಯಿಂದ ಒಂದೇ ಏಟಿಗೆ ದುಃಖದ ಪ್ರಪಾತಕ್ಕೆ ಅವಳು ಬಂದು ತಲುಪಿದ್ದಾಳೆ. ಈ ಸಮಯದಲ್ಲಿ ಅವಳು ಆಯ್ದುಕೊಂಡ ಮಾರ್ಗ ಅವಳನ್ನು ಧನ್ಯಳನ್ನಾಗಿ ಮಾಡಿದೆ. ಪತಿಯ ಸಾವಿನ ನಂತರದ ಅವಳ ಬದುಕು ಧರ್ಮದ ಉದ್ಧಾರಕ್ಕೆ ಆತ್ಮದ ಉದ್ಧಾರಕ್ಕೆ, ಸಮಾಜದ ಉದ್ಧಾರಕ್ಕೆ, ಸಾಹಿತ್ಯದ ಉದ್ಧಾರಕ್ಕೆ ಮೀಸಲಾಯಿತು. ಗುಂಡಮಬ್ಬೆ ತನ್ನ ದೇಹವನ್ನು ಗಂಡನ ಜತೆಯಲ್ಲಿ ಬೂದಿ ಮಾಡಿದರೆ, ಅತ್ತಿಮಬ್ಬೆಯು ತನ್ನ ದೇಹವನ್ನು ಉಪವಾಸದಿಂದಲೇ ದಂಡಿಸುತ್ತಾಳೆ. ಆ ದಂಡನೆ ಅವಳು ಇಚ್ಛೆಪಟ್ಟು ಮಾಡಿಕೊಳ್ಳುತ್ತಾಳೆ. ಜಿನಧರ್ಮದ ಕಠಿಣವಾದ ವ್ರತ ನೇಮಗಳನ್ನು ಅವಳು ಮನಸಾರೆ ಒಪ್ಪಿಕೊಂಡು ಅದರಂತೆ ಆಚರಣೆಯಲ್ಲಿ ತರುತ್ತಾಳೆ. ಅವಳ ಜಿನ ಭಕ್ತಿ, ಕಠಿಣವಾದ ವ್ರತ ನೇಮಗಳಿಂದಾಗಿ ಅವಳೊಬ್ಬ ತಪಸ್ವಿನಿಯಾಗಿದ್ದಾಳೆ. ಆದುದರಿಂದಲೇ ತುಂಬಿ ಹರಿಯುತ್ತಿರುವ ನದಿ ಅವಳಿಗೆ ದಾರಿಯನ್ನು ಮಾಡಿಕೊಟ್ಟಿತು. ಕುಕ್ಕೇಟಶ್ವರನ ದರ್ಶನಕ್ಕೆ ಉಪವಾಸದಿಂದಲೇ ಶ್ರವಣಬೆಳ್ಗೊಳದ ಬೆಟ್ಟವನ್ನು ಹತ್ತಿ ಹೋದಾಗ; ಅವಳ ಆಯಾಸ ಪರಿಹಾರಕ್ಕಾಗಿ, ದಾಹ ನಿವಾರಣೆಗಾಗಿ ಅಕಾಲದಲ್ಲಿ ಮಳೆಯಾಗಿ, ನಿಸರ್ಗವು ಅವಳಿಗೆ ಸಹಾಯ ಮಾಡಿತು.

ಅತ್ತಿಮಬ್ಬೆಯು ಜಿನಧರ್ಮ ಪತಾಕೆಯಾಗಿ ಸಾಧನೆಗೈದ್ದದ್ದು ಅವಳ ಜೀವನದ ಮತ್ತೊಂದು ಮಹತ್ತರವಾದ ಭಾಗ. ಈ ವಿಷಯವನ್ನು ಅವಳ ವ್ಯಕ್ತಿತ್ವ ವರ್ಣನೆ ಅಧ್ಯಾಯದಲ್ಲಿ ಚರ್ಚಿಸಬೇಕಾಗಿದೆ. ಆದುದರಿಂದ ಅವಳ ಬಿರುದು ಮತ್ತು ಕೊನೆಗಾಲದ ವಿಷಯವನ್ನು ಗಮನಿಸೋಣ.

ಲಕ್ಕುಂಡಿಯ ಶಾಸನಗಳು ಅತ್ತಿಮಬ್ಬೆಯ ಗುಣಗಾನವನ್ನು ಧಾರಾಳವಾಗಿ ಮಾಡಿವೆ. ಅತ್ತಿಮಬ್ಬೆಯು ಗುಣದಂಕಕಾರ್ತಿ, ಕಟಕ ಪವಿತ್ರೆ, ಅಭಿಲಷಿತಾರ್ಥೆ, ದಾನವಿನೋದೆ, ದಾನಚಿಂತಾಮಣಿಯೆಂದು ಘಟಾಂತಿಕೆಯೆಂದು ಹೊಗಳಲ್ಪಟ್ಟಿದ್ದಾಳೆ.[೬೨] ಆದರೆ ಶಾಸನದಲ್ಲಿ ಎಲ್ಲಿಯೂ ಅವಳ ಕೊನೆಯ ಕಾಲ ಹೇಗಿತ್ತು ಎನ್ನುವ ವಿಷಯ ಎಲ್ಲೂ ಇಲ್ಲ. ಅಜಿತ ಪುರಾಣದಲ್ಲಿಯೂ ಸಹಿತ ಅವಳ ಗುಣಗಾನ ಮಾಡಿದ ರನ್ನ ಕವಿ ಎಲ್ಲಿಯೂ ಅವಳ ಅಂತ್ಯವನ್ನು ಚಿತ್ರಿಸಿಲ್ಲ. ಲಕ್ಕುಂಡಿಯ ಶಾಸನಗಳು ಸಹಿತ ಅವಳನ್ನು

"ಎಣೆ ಮರುದೇವಿ ಪಾಸಟಿ ಸುಷೇಣೆ ಸಮಂ ಶಿವದೇವಿ ಪಾಟಿ
ಲಕ್ಷನೆ ಸದೃಶಂ ಮಹಾವಿಜಯಸೇನೆ ಸಮಾನೆ ಸುಸೀಳೆ ಪೋಲ್ವಿ ರುಕ್ಮಿಣಿ
ಸರಿಸತ್ಯಭಾಮೆ ತೊಣೆಮಿಕ್ಕ ಸುಳೋಚನೆ ತತ್ತ್ವರೂಪೆ ರೋಹಿಣಿ ದೊರೆ
ಸಂದರುನ್ಧತಿ ಪೆರದೊರ್ರಯೇ ಗುಣದಂಕಕಾತ್ತಿರ್ಯೋಳ್"[೬೩]

ಎಂದು ಅತ್ತಿಮಬ್ಬೆಯನ್ನು ಜೈನ ಪುರಾಣಾಂತರ್ಗತರಾದ ಪ್ರಸಿದ್ಧ ಸ್ತ್ರೀಯರಿಗೆ ಹೋಲಿಸಲಾಗಿದೆ.[೯೪] ಹೀಗೆ ಅತ್ತಿಮಬ್ಬೆಯ ಕೀರ್ತಿಯನ್ನು ಕನ್ನಡ ಕಾವ್ಯಗಳು ಬಣ್ಣಿಸಿವೆ.

ಅತ್ತಿಮಬ್ಬೆಯು ವಿಧಿವತ್ತಾಗಿ ಸನ್ಯಾಸತ್ವದ ದೀಕ್ಷೆಯನ್ನು ಸ್ವೀಕರಿಸಲಿಲ್ಲ. ಅಚ್ಚರಿಯೆಂದರೆ ಅವಳು ಸನ್ಯಾಸತ್ವದ ಕಠಿಣವಾದ ನೀತಿನೇಮಗಳನ್ನು ಬಿಡದಂತೆ ಪಾಲಿಸಿದಳು. ಪದ್ಮಪತ್ರದ ಮೇಲಿರುವ ಜಲಬಿಂದುವಿನಂತೆ ಸಂಸಾರದಲ್ಲಿದ್ದರೂ, ಸಂಸಾರದ ಮೋಹಕ್ಕೊಳಗಾಗಲಿಲ್ಲ. ಪತಿಯ ಮರಣದ ನಂತರ ಅವಳ ಜೀವನವನ್ನು ಕಷ್ಟ ಪರಂಪರೆಯಲ್ಲಿ ಕಳೆದಳು. ತಂಗಿ ಗುಂಡಮಬ್ಬೆ ಸತಿ ಹೋಗಿ ಒಂದೇ ಕ್ಷಣದಲ್ಲಿ ವೈಧವ್ಯದ ದುಃಖಗಳನ್ನೆಲ್ಲಾ ಬೂದಿ ಮಾಡಿಕೊಂಡಳು. ಆದರೆ ಅತ್ತಿಮಬ್ಬೆ ಕಷ್ಟದ ಹಾದಿಯಲ್ಲಿ ಗಟ್ಟಿ ಹೆಜ್ಜೆಯನ್ನೂರುತ್ತಾ, ಜಿನ ಧರ್ಮದ ಪಾಲಕಿ ಪ್ರಚಾರಕಿಯಾದಳು. ಆದರೆ ಅವಳ ಅಂತ್ಯಕಾಲ ಕಷ್ಟದಿಂದ ಕೂಡಿತ್ತು. ಹನ್ನೊಂದನೆಯ ಶತಮಾನದ ಆರಂಭಕ್ಕೆ ಜೈನಧರ್ಮ ತನ್ನ ಪ್ರಖರತೆಯನ್ನು ಕಳೆದುಕೊಳ್ಳತೊಡಗಿತ್ತು. ಜೈನಧರ್ಮದ ನೀತಿ ನೇಮ, ನಂಬಿಕೆ ನಡವಳಿಕೆಗಳು ಅತ್ಯಂತ ಕಠಿಣವಾಗಿದ್ದವು. ಅತ್ಯಂತ ಕಠಿಣವಾದ ಆಚರಣೆಗಳಿಂದಾಗಿ ಜನಸಾಮಾನ್ಯರು ಜೈನಧರ್ಮದಿಂದ, ಜೈನರಿಂದಲೂ ದೂರಕ್ಕೆ ನಡೆಯತೊಡಗಿದರು. ದುರ್ಬಲಗೊಳ್ಳುತ್ತಿದ್ದ ಜೈನರು, ಪ್ರಚಾರ ಪ್ರಸಿದ್ಧಿಗಾಗಿ ಈ ಸಂದರ್ಭದಲ್ಲಿ ಯಕ್ಷ, ಯಕ್ಷಿಯರನ್ನು ಸೃಷ್ಟಿಸಿಕೊಂಡು ತಾತ್ವಿಕ ಶುದ್ಧತೆಯನ್ನು ಕೈಬಿಟ್ಟರು. ಈ ಕಾರಣಗಳಿಂದಾಗಿ ಜೈನಧರ್ಮ ೧೧ನೆಯ ಶತಮಾನದಲ್ಲಿದ್ದ ಪ್ರಖರತೆಯನ್ನು ಕ್ರಮೇಣ ಕಳೆದುಕೊಳ್ಳತೊಡಗಿತು. ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಬಸದಿಯನ್ನು ಕಟ್ಟಿಸಿದ ಕೆಲವಾರು ವರ್ಷಗಳಲ್ಲಿಯೇ ಕಲ್ಯಾಣ ಚಾಲುಕ್ಯರ ಅರಸು ಜಯಸಿಂಹನ ಕಾಲದಲ್ಲಿ ಜೈನರು ಶೈವರಿಂದ ಸೋಲಿಸಲ್ಪಟ್ಟು ನೂರಾರು ಬಸದಿಗಳನ್ನು ಕಳೆದುಕೊಂಡರು. ಯಾಕೆಂದರೆ ಈ ಕಾಲಘಟ್ಟದಲ್ಲಿ ವೈದಿಕರು, ಶೈವರು ಪ್ರಬಲರಾಗತೊಡಗಿದರು - ಜೈನರು ದುರ್ಬಲವಾಗತೊಡಗಿದರು. ಈ ಪರಿಸ್ಥಿತಿಯ ಬಿಸಿ ಅತ್ತಿಮಬ್ಬೆಗೂ ತಟ್ಟಿರಬಹುದು ಎನಿಸುತ್ತದೆ. ಈ ವಿಷಯಕ್ಕೆ ಲಕ್ಕುಂಡಿ ಶಾಸನದಲ್ಲಿಯೇ ಸೂಚನೆ ಸಿಕ್ಕಿರುವುದನ್ನು ಡಾ.ಎಂ.ಎಂ.ಕಲ್ಬುರ್ಗಿಯವರು ಚರ್ಚಿಸಿದ್ದಾರೆ.[೯೫] ಹೀಗೆ ಅತ್ತಿಮಬ್ಬೆಯ ಕೊನೆಯ ದಿನಗಳು ಕಷ್ಟದಿಂದ ಕೂಡಿದ್ದವು. ಜೈನ ಧರ್ಮದ ಕಠಿಣವಾದ ನೀತಿ ನೇಮಗಳನ್ನು ಶ್ರದ್ಧೆಯಿಂದ ಪಾಲಿಸಿದ ಅವಳು ಸಲ್ಲೇಖನ ವ್ರತದಿಂದಲೇ ತನ್ನ ಜೀವವನ್ನು ಕೊನೆಗಾಣಿಸಿದ್ದಾಳೆ. ಜೈನ ತಪಸ್ಸಿನಲ್ಲಿ, ಸಲ್ಲೇಖನಕ್ಕೆ ಪ್ರಮುಖವಾದ ಸ್ಥಾನವಿದೆ. ಡಾ. ಹಂಪನಾ ಅವರು ಹೇಳುವಂತೆ ಕ್ರಿ.ಶ.ಸು. ೯೫೦ ರಿಂದ ಕ್ರಿ.ಶ. ೧೦೧೮ರವರೆಗೆ ಅತ್ತಿಮಬ್ಬೆಯು ಜೀವಿಸಿದ್ದಳು.[೯೬]

ಅತ್ತಿಮಬ್ಬೆಯ ನಂತರ ಅವಳ ಪ್ರಭಾವ ಮುಂದಿನ ತಲೆಮಾರುಗಳಲ್ಲಿ ಸಂಚರಿಸಿತು. ಅತ್ತಿಮಬ್ಬೆ ತಪಸ್ವಿನಿಯಾಗಿರುವಂತೆ ರಣವೀರೆಯು ಆಗಿದ್ದಳು. ಈ ವೀರಪರಂಪರೆಯನ್ನು ಮುಂದಿನ ಜೈನ ಸ್ತ್ರೀಯರು ಸಹಿತ ಪಾಲಿಸಿದ್ದಾರೆ.[೯೭]

ಅತ್ತಿಮಬ್ಬೆಯ ಅಂತ್ಯದ ನಂತರ ಅವಳ ವ್ಯಕ್ತಿತ್ವದ ಪ್ರಭಾವ ಹಲವಾರು ವರುಷಗಳವರೆಗೆ ಆಗಿರುವುದನ್ನು ಶಾಸನಗಳು ಗುರುತಿಸಿವೆ. ಅವಳ ವ್ಯಕ್ತಿತ್ವ ಇನ್ನೂ ಪ್ರಭಾವಿಪೂರ್ವವಾಗಿ ಬೆಳೆಯಿತು. ಲಕ್ಕುಂಡಿ ಶಾಸನಗಳಲ್ಲಿ

ಬರುವ "ದಾನಚಿಂತಾಮಣಿ" ಎಂಬ ಬಿರುದು; ಬಿರುದಲ್ಲ ಅದು ಅತ್ತಿಮಬ್ಬೆಯ ಹೆಸರೇ ಆಗಿರಬೇಕು ಎನ್ನುವಷ್ಟರಮಟ್ಟಿಗೆ ಪ್ರಖ್ಯಾತಿಯನ್ನು ಪಡೆದುಕೊಂಡಳು. ಅವಳ ತ್ಯಾಗ, ದಾನಗುಣ, ಧರ್ಮಶ್ರದ್ಧೆ, ಬಸದಿಗಳ ನಿರ್ಮಾಣಾಸಕ್ತಿ ಇವುಗಳು ಮುಂದಿನ ಜೈನ ಪೀಳಿಗೆಯವರಿಗೆ ಒಂದು ಹೊಚ್ಚ ಹೊಸ ದಾರಿಯನ್ನೇ ಸೃಷ್ಟಿಸಿ ದಾನ ಧರ್ಮಕಾರ್ಯಗಳು ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿರುವುದನ್ನು ಶಾಸನಗಳು ಹೇಳುತ್ತವೆ.

ಅಡಿಟಿಪ್ಪಣಿಗಳು

೧. ರನ್ನ ಕವಿಯ "ಅಜಿತ ಪುರಾಣ ಸಂಗ್ರಹ" ಸಂಗ್ರಹ ಮತ್ತು ಸರಳ ಗದ್ಯಾನುವಾದ, ಸಂಪಾದಕರು - ಅ.ರಾ.ಮಿತ್ರ, ಎಂ.ಎಚ್.ಕೃಷ್ಣಯ್ಯ, ೧೨ನೆಯ ಆಶ್ವಾಸ, ೬ನೆಯ ಪದ್ಯ

೨. ಕೊಪ್ಪಳ ಶಾಸನಗಳು, ಡಾ. ಹಂ.ಪ.ನಾ.

೩. ಗವಿದೀಪ್ತಿ, ಸಂ. ಎಸ್.ಎಂ.ವೃಷಭೇಂದ್ರಸ್ವಾಮಿ, ಪು. ೨೨೫

೪. ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಎಂ.ಎಂ.ಕಲಬುರ್ಗಿ, ಪು. ೪೭

೫. ಗವಿದೀಪ್ತಿ, ಸಂ. ಎಸ್.ಎಂ.ವೃಷಭೇಂದ್ರಸ್ವಾಮಿ

೬. ಅದೇ, ಪು. ೨೨೭

೭. ಚಾವುಂಡರಾಯ ತ್ರಿಷಷ್ಟಿ ಮಹಾಪುರಾಣ, ಪೀಠಿಕಾ

೮. ಅದೇ, ೧-೧೫

೯. ಶಾಸನ ಪರಿಚಯ, ಪಿ.ಬಿ.ದೇಸಾಯಿ

೧೦. EC viii No. ೪೬

೧೧. EC vii ೪೬

೧೨. ಅಜಿತ ಪುರಾಣ, ಸಂ. ಅ.ರಾ.ಮಿತ್ರ, ಎಂ.ಎಚ್.ಕೃಷ್ಣಯ್ಯ

೧೩. ಕವಿವರ ಕಾಮಧೇನು, ಹಂಪನಾ.

೧೪. ಕರ್ನಾಟಕ ಇತಿಹಾಸ ದರ್ಶನ, ಡಾ. ಎಂ. ಕೃಷ್ಣರಾವ್ ಹಾಗೂ ಎಂ. ಕೇಶವ ಭಟ್ಟ, ಪು. ೧೬೪

೧೫. ಪೊನ್ನ ಕವಿಯ ಶಾಂತಿ ಪುರಾಣ, ಹಂಪನಾ, ಪು. ೪೨

೧೬. ಅಜಿತ ಪುರಾಣ, ಸಂಗ್ರಹ ಅ.ರಾ.ಮಿತ್ರ, ಎಂ.ಎಚ್.ಕೃಷ್ಣಯ್ಯ

೧೭. SII, No. ೫೨, ಲಕ್ಕುಂಡಿ ಸಾಲು - ೫೫, ೫೬

೧೮. ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ ಗ್ಯಾಸೆಟಿಯರ ಭಾಗ - ಮೂರು, ಕರ್ನಾಟಕ ರಾಜ್ಯ ಸರಕಾರ, ಪು. ೫೮೯

೧೯. ಸಂಸ್ಕೃತ ಭಾಷೆಯ ಗ್ರಂಥ. ಇದು ಭವಿಷ್ಯೋತ್ತರ ಪುರಾಣದ ಒಂದು ಭಾಗ. ೯ ಹಾಗೂ ೧೧ನೆಯ ಶತಮಾನಗಳ ನಡುವೆ ರಚಿಸಲ್ಪಟ್ಟಿರಬಹುದೆಂದು ಊಹಿಸಲಾಗಿದೆ. ಇದು ಸಂಸ್ಕೃತದ ಅನುಷ್ಟುಪ್ ಛಂದದಲ್ಲಿದೆ. ಈ ಕೃತಿಯ ಲೇಖಕನ ಹೆಸರು - ಶಾಸನ ಕವಿ ಮಲ್ಲನೆಂದು ತಿಳಿಯಲಾಗಿದೆ. ಇವನು ಚಿಕ್ಕ ಹಂದಿಗೊಳದವನು. ಇದು ಶೈವ ಪುರಾಣವಾಗಿದ್ದರೂ, ಇದರ ಕರ್ತೃ ಹರಿ - ಹರ ಪಂಥಗಳೆರಡರ ಸಮನ್ವಯ "ಭಾಗವತ ಸಂಪ್ರದಾಯ" ದವನಿರಬಹುದೆಂದು ಊಹಿಸಲಾಗಿದೆ. ಈ ವಿಷಯಗಳು "ಕನ್ನಡ ನಾಡಿನ ಶಾಸನಗಳು" - ಶ್ರೀ ಮೇವುಂಡಿ ಮಲ್ಲಾರಿಯವರಲ್ಲಿವೆ.

೨೦. ಯಕ್ಷ ಯಕ್ಷಿಯರು, ಹಂಪನಾ

೨೧. EC, VIII ಹುಂಚದ ಶಾಸನ

೨೨. SII, XI- i, ೫೨ ಲಕ್ಕುಂಡಿ

೨೩. ಲಕ್ಕುಂಡಿ - ಕಲೆಯ ಬಲೆ, ಪ್ರೊ.ಎಚ್.ಹರಿದಾಸ್, ಪು. ೨೧

೨೪. SII, Xi- i, No, ೫೨, ಸಾಲುಗಳು ೭೨, ೭೩, ೭೪

೨೫. ಅದೇ, ೮೦, ೮೧, ನೆಯ ಸಾಲುಗಳು

೨೬. ಲಕ್ಕುಂಡಿ - ಎ.ಎಂ.ಅಣ್ಣಿಗೇರಿ, ಪು. ೪

೨೭. ಲಕ್ಕುಂಡಿ - ಕಲೆಯ ಬಲೆ, ಪ್ರೊ. ಎಚ್.ಹರಿದಾಸ್

೨೮. SII, XI- ii, ೧೩೬, ೧೯೧ರ ಮಿತಿಯಲ್ಲಿರುವ ಧಾರವಾಡ ಜಿಲ್ಲೆಯ ಮುಂಡರಗಿ ತಾಲೂಕಿನ ಆಲೂರಿನಲ್ಲಿರುವ (ಕ.ಚಾ: ವಿಕ್ರಮಾದಿತ್ಯ - VI) ಇದು ಲೆಂಕಸುರಿಗೆಯ ಮಹಾದೇವಯ್ಯನಿಂದ ಮಾಳದಾಲೂರದ ತ್ರೈಪುರುಷದೇವರಿಗೆ ಭೂದಾನವನ್ನು ಕೊಟ್ಟಿದ್ದನ್ನು ಹೇಳುತ್ತದೆ. ಈ ಶಾಸನದಲ್ಲಿ ಲಕ್ಕುಂಡಿಯು ಕುಮ್ಮಟವನ್ನು ಹೊಂದಿತ್ತು. ನಾಣ್ಯ ಲೊಕ್ಕಿಗದ್ಯಾಣವೆಂಬುದು ಎನ್ನುವ ದಾಖಲೆಯಿದೆ. (ಹಾಗೆಯೇ SII, XVIII, ೧೮೧)

೨೯. ಸಮಗ್ರ ಕರ್ನಾಟಕ ಚರಿತ್ರೆ, ಹೆಚ್.ವಿ.ಶ್ರೀನಿವಾಸಮೂರ್ತಿ, ಆರ್.ರಾಮಕೃಷ್ಣನ್, ಪು. ೧೦೩

೩೦. ಕರ್ನಾಟಕ ಚರಿತ್ರೆ, ಸಂಪುಟ - ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೫೫, ೫೬

೩೧. ಕರ್ನಾಟಕದ ಗತವೈಭವ, ಆಲೂರ ವೆಂಕಟರಾಯರು, ಪು. ೮೩

೩೨. ಕರ್ನಾಟಕದ ಚರಿತ್ರೆ, ಸಂಪುಟ - ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೫೭

೩೩. ಕರ್ನಾಟಕದ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಹಾಗೂ ಎಂ.ಕೇಶವಭಟ್ಟ, ಪು. ೧೬೭

೩೪. SII, XVIII, ೨೭, ಕಾರ್ಜೋಳ (ಬಿಜಾಪುರ ಜಿಲ್ಲೆ), ಪು. ೧೭, ೧೮

SII, XI- i, ೪೦, ನರಸಲಗಿ (ಬಿಜಾಪುರ ಜಿಲ್ಲೆಯ ಬಾಗೇವಾಡಿ) ಪು. ೨೫

೩೫. ಭಾರತದ ಗ್ಯಾಸೆಟಿಯರ್, ಕರ್ನಾಟಕದ ರಾಜ್ಯ ಗ್ಯಾಸೆಟಿಯರ್, ಭಾಗ - ೩, ಕರ್ನಾಟಕ ರಾಜ್ಯ ಸರಕಾರ, ಪು. ೩೮೯

೩೬. ಅದೇ

೩೭. ಲಕ್ಕುಂಡಿ, ಎ.ಎಂ.ಅಣ್ಣಿಗೇರಿ, ಪು. ೬೧

೩೮. ಲಕ್ಕುಂಡಿ - ಕಲೆಯ ಬಲೆ, ಪ್ರೊ.ಎಂ.ಎಚ್.ಹರಿದಾಸ, ಪು. ೮

೩೯. ಭಾರತದ ಗ್ಯಾಸೆಟಿಯರ್, ಕರ್ನಾಟಕದ ರಾಜ್ಯ ಗ್ಯಾಸೆಟಿಯರ್, ಭಾಗ - ೩, ಕರ್ನಾಟಕ ರಾಜ್ಯ ಸರಕಾರ, ಪು. ೩೯೪

೪೦. ಲಕ್ಕುಂಡಿ - ಕಲೆಯ ಬಲೆ, ಪ್ರೊ.ಎಂ.ಎಚ್.ಹರಿದಾಸ, ಪು. ೯

೪೧. ಲಕ್ಕುಂಡಿ - ಎ.ಎಂ.ಅಣ್ಣಿಗೇರಿ, ಪು. ೨೯

೪೨. SII, XV, ೪೮, ೧೧೫೨, ಶಾಸನ ಸಂಖ್ಯೆ ೫೪

೪೩. SII, XV, ೭೦, ೧೧೮೬, ಶಾಸನ ಸಂಖ್ಯೆ ೪೮

೪೪. SII, XI, ೫೨

೪೫. KI - ೧೧೯

೪೬. SII XI - ೫೨

೪೭. ಗುಣದಂಕಕಾರ್ತಿ ಅತ್ತಿಮಬ್ಬೆ, ಲಕ್ಕುಂಡಿ ಶಾಸನ ಕೆಲವು ಒಳನೋಟಗಳು, ಡಾ.ಹಂಪನಾ, ಪು. ೧೨

೪೮. KI - ೧೧, ೭

೪೯. SII XV- ೫೩೩

೫೦. KI ೧೧, ೧೦

೫೧. SII XI- ೧೧, ೨೦

೫೨. SII XI- ೧೧, ೧೮೭

೫೩. SII XI- ೧೧, ೧೯೬

೫೪. SII XV- ೨೧

೫೫. SII XV- ೧೧೯

೫೬. SII XV- ೧೨೫

೫೭. SII XV- ೧೩೫

೫೮. SII XV- ೧೩೭

೫೯. SII XV- ೬೦

೬೦. SII XV- ೬೧

೬೧. SII XV- ೬೨

೬೨. SII XV- ೬೩

೬೩. KI II- ೨೨

೬೪ SII XV- ೬೭

೬೫. SII XI- ii ೧೯೩

೬೬. SII XV- ೨೦೯

೬೭. SII, Vol, XV- ೩೮

೬೮. SII XV- ೫೬೧

೬೯. SII XV- ೫೬೦

೭೦. SII XV- ೫೫೯

೭೧. SII XV- ೫೫೭

೭೨. SII XV- ೫೫೮

೭೩. SII XV- ೫೫೬

೭೪. SII XV- ೨೨೨

೭೫. SII SV- ೧೬೭

೭೬. ಇಲ್ಲಿಯವರೆಗಿನ ಶಾಸನ ವಿವರಗಳಿಗೆ ಡಾ.ಎಂ.ಎಂ.ಕಲಬುರ್ಗಿ ಸಂಗ್ರಹಿಸಿ ಸಂಪಾದಿಸಿದ ಧಾರವಾಡ ಜಿಲ್ಲೆಯ ಶಾಸನ ಸೂಚಿಯನ್ನು ಆಧರಿಸಿದ್ದೇನೆ.

೭೭. IAX, P. ೧೮೫

೭೮. EIXV, P. ೩೪೮

೭೯. ಕರ್ನಾಟಕ ಗ್ಯಾಸೆಟಿಯರ್ , ಭಾಗ - ೩, ಪು. ೩೯೪

೮೦. EIXV, 355 (64), 1098

೮೧. ರನ್ನ ಕವಿಯ ಅಜಿತ ಪುರಾಣ, ಸಂಗ್ರಹ - ಅ.ರಾ.ಮಿತ್ರ, ಸಣ್ಣಯ್ಯ

೮೨. ಪೊನ್ನ ಕವಿಯ ಶಾಂತಿಪುರಾಣ, ಸಂ - ಹಂಪನಾ

೮೩. ಅದೇ

೮೪. ಅದೇ

೮೫. ಅದೇ, ಪೀಠಿಕೆ

೮೬. SII, Xi, No. 52, ಲಕ್ಕುಂಡಿ

೮೭. ಪೊನ್ನ ಕವಿಯ ಶಾಂತಿಪುರಾಣ, ಸಂ - ಹಂಪ ನಾಗರಾಜಯ್ಯ

೮೮. ಅದೇ

೮೯. SII, XI- i, No. 52, 27 ನೆಯ ಸಾಲು

೯೦. ಅದೇ

೯೧. ಅದೇ

೯೨. ಅದೇ

೯೩. ಅದೇ

೯೪. ಕವಿವರ ಕಾಮಧೇನು, ಹಂಪನಾ

೯೫. ಅತ್ತಿಮಬ್ಬೆಯ ಶಾಸನ ಮತ್ತು ಬುಕ್ಕರಾಯನ ಶಾಸನ, ಡಾ.ಎಂ.ಎಂ.ಕಲ್ಬುರ್ಗಿ


೯೬. ಕವಿವರ ಕಾಮಧೇನು, ಹಂಪನಾ

೯೭. ಅದೇ


❑❑



೧. ಲಕ್ಕುಂಡಿ ಗ್ರಾಮದ್ವಾರ (ಅಗಸೆ ಬಾಗಿಲು)




೨. ಬ್ರಹ್ಮಜಿನಾಲಯದ ಪ್ರವೇಶದ್ವಾರ



೩. ಬ್ರಹ್ಮಜಿನಾಲಯದ ಮುಖಮಂಟಪ



೪. ಬ್ರಹ್ಮಜಿನಾಲಯದ ಹಿಂಭಾಗದ ದೃಶ್ಯ




೫. ಬ್ರಹ್ಮಜಿನಾಲಯದ ಉತ್ತರ ದಿಕ್ಕಿನ ಬಸದಿ



೬. ಬ್ರಹ್ಮಜಿನಾಲಯದ ಆವರಣದಲ್ಲಿ ಭಗ್ನ ಜಿನಪ್ರತಿಮೆ







೭. ಬ್ರಹ್ಮಜಿನಾಲಯ (ಆಗ್ನೇಯ ದಿಕ್ಕಿನಿಂದ)



೮. ಬ್ರಹ್ಮಜಿನಾಲಯ ಪ್ರಾಂಗಣದ ಅವಶೇಷಗಳು








೯. ಬ್ರಹ್ಮಜಿನಾಲಯದೊಳಗೆ ಪದ್ಮಾವತಿ



೧೦. ಬ್ರಹ್ಮಜಿನಾಲಯದಲ್ಲಿರುವ ಚತುರ್ಮುಖ ಬ್ರಹ್ಮ




೧೧. ನಾಗನಾಥ ಬಸದಿ




೧೨. ನಾಗನಾಥ ಬಸದಿಯೊಳಗಿನ ಕಿಡಿಕಿ







೧೩.   ನಾಗನಾಥ ಬಸದಿಯ ಗರ್ಭಗುಡಿಯ ಚೌಕಟ್ಟು




೧೪.   ನಾಗನಾಥ ಬಸದಿ








೧೫. ನಾಗನಾಥ ಬಸದಿ



೧೬. ನಾಗನಾಥ ಬಸದಿ ಆವರಣದಲ್ಲಿನ ೨೪ ತೀರ್ಥಂಕರರ ಪೀಠ









೧೭. ನಾಗನಾಥ ಬಸದಿ ಪಾರ್ಶ್ವನೋಟ



೧೮. ನಾಗನಾಥ ಬಸದಿಯ ಹೊರಭಾಗದ ಸೂಕ್ಷ್ಮಶಿಲ್ಪ



೧೯. ಸೋಮನಾಥ ಗುಡಿ




೨೦. ನೀಲಕಂಠೇಶ್ವರ ಗುಡಿ (ಪೂರ್ವದಲ್ಲಿ ಬಸದಿಯಾಗಿತ್ತು)



೨೧. ಸೋಮನಾಥ ಗುಡಿ ಆವರಣದಲ್ಲಿ ಎರಡು ನಿಸಿಧಿಗಲ್ಲುಗಳು




೨೨. ಲಕ್ಷ್ಮೀನಾರಾಯಣ ಗುಡಿ (ಪೂರ್ವದಲ್ಲಿ ಬಸದಿ)




೨೩. ಅತ್ತಿಮಬ್ಬೆ ಶಾಸನ, ಮ್ಯೂಸಿಯಂ, ಲಕ್ಕುಂಡಿ



೨೪. ಅತ್ತಿಮಬ್ಬೆ ನಿರ್ಮಿತ ಬಸದಿಯೊಂದರ ಅವಶೇಷ




೨೫. ನೀಲಕಂಠೇಶ್ವರ ಗುಡಿಯ ಒಳಭಾಗ




೨೬. ಲಕ್ಕುಂಡಿಯ ಒಂದು ವೀರಗಲ್ಲು







೧೭. ಲಕ್ಕುಂಡಿಯ ಅಂಬೇಡ್ಕರ್ ನಗರದ ನಿಸಿಧಿಗಲ್ಲು




೧೮. ಮಾಣಕೇಶ್ವರ ದೇವಾಲಯ ಹಾಗೂ ಮುಸುಕಿನ ಭಾವಿ (ಬೋಗೇಶ್ವರ ಗುಡಿ, ಮಂಟಪ, ಭಾವಿ)




೨೯. ಮಲ್ಲಿಕಾರ್ಜುನ ಗುಡಿ (ತೆಲ್ಲಿಕೇಶ್ವರ ಗುಡಿ)




೩೦. ನನ್ನೇಶ್ವರ ದೇವಾಲಯ




೩೧. ಬ್ರಹ್ಮಜಿನಾಲಯದಲ್ಲಿರುವ ಜೈನಬಸದಿ



೩೨. ಲಕ್ಕುಂಡಿಯ ಆಯುಧಗಳು



೩೩. ಜುಮ್ಮಾ ಮಸೀದಿ



೩೪. ಕಲ್ಮೇಶ್ವರ ದೇವಸ್ಥಾನ (ಕಲ್ಮೇಶ್ವರ ಮಠದ ಮನೆ)



೩೫. ಕ್ಷೇತ್ರಕಾರ್ಯದ ಸಮಯದಲ್ಲಿ

೩

ಅತ್ತಿಮಬ್ಬೆ ವ್ಯಕ್ತಿತ್ವ ವರ್ಣನೆ

೩

ಅತ್ತಿಮಬ್ಬೆ ವ್ಯಕ್ತಿತ್ವ ವರ್ಣನೆ

ಕಲಿಯನೆ ನೆಗರ್ಟ್ದರ್ಳ್ ಕಸವರ
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್
ಮೊಲೆವೊತ್ತ ತೈಲ ಜನನಿಯ
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ [೧]

ಮೇಲಿನ ಪದ್ಯದ ಪ್ರಕಾರ ಅತ್ತಿಮಬ್ಬೆಯ ವಿಭಿನ್ನ ವ್ಯಕ್ತಿತ್ವದ ಪರಿಚಯವಾಗುತ್ತದೆ. ದಾನ ಎಂಬ ಗುಣ ಅವಳ ವ್ಯಕ್ತಿತ್ವದ ಒಂದು ಭಾಗ. ದಾನಿ ಆಗಿರುವಂತೆ ಅವಳು ವೀರಳೂ ಆಗಿದ್ದಳೆಂದು ಕವಿ ರನ್ನನು ಮಾರ್ಮಿಕವಾಗಿ ಬಣ್ಣಿಸಿದ್ದಾನೆ.

ಅ. ಕಾವ್ಯಗಳಲ್ಲಿ ವರ್ಣನೆ

ರನ್ನನ ಕಾಲವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವಾರು ವೈಶಿಷ್ಟ್ಯಗಳನ್ನು ಹೊಂದಿರುವ ಕಾಲ. ಅದನ್ನು ಸುವರ್ಣಯುಗ, ಜೈನ ಯುಗ, ಕ್ಷಾತ್ರ ಯುಗ ಎಂದು ಸಾಹಿತ್ಯ ಚರಿತ್ರೆಕಾರರು ಹಲವು ವಿಧದಲ್ಲಿ ಗುರುತಿಸಿದ್ದಾರೆ.[೨] ಈ ಕಾಲವು "ಜೋಟಿದ ಪಾಟಿ" ಎಂಬ ಮೌಲ್ಯಕ್ಕಾಗಿಯೇ ಪ್ರಖ್ಯಾತಿಯನ್ನು ಹೊಂದಿದ ಕಾಲವಾಗಿತ್ತು. ಅನ್ನ ಕೊಟ್ಟ ಸ್ವಾಮಿಗಾಗಿ, ಆಶ್ರಯ ಕೊಟ್ಟ ಧಣಿಗಾಗಿ ಉಪಕೃತನಾಗಿರುವುದು ಅಂದಿನ ಪ್ರಮುಖ ಮೌಲ್ಯವಾಗಿತ್ತು. ತಮ್ಮ ಸ್ವಾಮಿಗಾಗಿ ರಣಾಂಗಣದಲ್ಲಿ ಹೋರಾಡುವುದು ಒಂದು ಮೌಲ್ಯವಾದರೆ; ತಮ್ಮ ಕೃತಿಗಳಲ್ಲಿ ಆಶ್ರಯದಾತರನ್ನು ವರ್ಣಿಸುವುದು ಮತ್ತೊಂದು ಬಗೆಯ ಮೌಲ್ಯವಾಗಿತ್ತು.

ಕವಿಜನದೊಳ್ ರತ್ನತ್ರಯ

- - - - - - - - - - ಮೂವರ್

ಕವಿಗಳ್ ಜಿನಸಮಯ ದೀಪಕರ್ ಪೆರರೊಳರೆ.

ತನ್ನನ್ನು ಕವಿರತ್ನ ಎಂದು ಕರೆದುಕೊಂಡ ರನ್ನನು ಎರಡು ಬಗೆಯಿಂದ ಋಣಮುಕ್ತನಾದವನು. ಒಂದು ಧರ್ಮದ ಋಣ, ಮತ್ತೊಂದು ಅನ್ನದ ಋಣ. ಚಾಲುಕ್ಯ ಚಕ್ರವರ್ತಿಯೆನಿಸಿಕೊಂಡ ನೂರ್ಮಡಿ ತೈಲಪನು (೯೭೩ - ೯೯೭) ರನ್ನನಿಗೆ ಕವಿ ಚಕ್ರವರ್ತಿಯೆಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ. ಈ ಗೌರವ ಇರಿವ ಬೆಡಂಗ ಸತ್ಯಾಶ್ರಯ (ಕ್ರಿ.ಶ. ೯೯೭ - ೧೧೦೮) ಸಿಂಹಾಸನವನೇರಿದ ಮೇಲೆ ಆತ್ಮೀಯತೆಗೆ ತಿರುಗಿತು. ರನ್ನ ಮಹಾಕವಿಯು ಇರಿವ ಬೆಡಂಗ ಸತ್ಯಾಶ್ರಯನ ಶೌರ್ಯವನ್ನು ಕಣ್ಣಾರೆ ಕಂಡವನು. ತನ್ನ ಸ್ವಾಮಿಯ ಕೀರ್ತಿಯು ಚಿರಸ್ಥಾಯಿಯಾಗಿ ಉಳಿಯಬೇಕೆಂದು ''ಸಾಹಸ ಭೀಮ ವಿಜಯ''ವನ್ನು ರಚಿಸಿದನು. ಅದೇ ರೀತಿ ತನ್ನ ಜೈನ ಧರ್ಮದ ಮಹತ್ವಕ್ಕೋಸ್ಕರ ''ಅಜಿತ ಪುರಾಣ''ವನ್ನು ರಚಿಸಿದನು. ಕ್ರಿ.ಶ.ಸುಮಾರಿಗೆ ೯೮೨ರಲ್ಲಿ ರನ್ನನು ಚಾವುಂಡರಾಯನಿಂದಾಗಿ ಅತ್ತಿಮಬ್ಬೆಯ ಪರಿಚಯಕ್ಕೆ ಬಂದಿದ್ದಾನೆ ಮತ್ತು ಅತ್ತಿಮಬ್ಬೆಯಿಂದ ಉಪಕೃತನಾಗಿದ್ದಾನೆ. ಅವಳ ದಾನಗುಣವನ್ನು ಮತ್ತು ಕಲಿತನವನ್ನು ಕಣ್ಣಾರೆ ಕಂಡಿದ್ದಾನೆ. ಅವಳ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಅಜಿತಪುರಾಣದ ಆರಂಭಿಕ ಮತ್ತು ೧೨ನೆಯ ಆಶ್ವಾಸದ ಪದ್ಯಗಳಲ್ಲಿ ಅವಳ ಗುಣಗಾನವನ್ನು ಮಾಡಿ, ಅವಳ ಕೀರ್ತಿಯನ್ನು ಚಿರಸ್ಥಾಯಿಗೊಳಿಸಿ ಕೃತಾರ್ಥನಾಗಿದ್ದಾನೆ.

ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ರನ್ನ ಮಹಾಕವಿಯು ಅಜಿತ ಪುರಾಣದ ಪ್ರಥಮ ಆಶ್ವಾಸದ ೬೫ನೆಯ ಪದ್ಯವನ್ನು ಅತ್ಯಂತ ಮಾರ್ಮಿಕವಾಗಿ ಬಣ್ಣಿಸಿದ್ದಾನೆ. ಅವಳು ದಾನಿ ಆಗಿರುವಂತೆ ಕಲಿಯೂ ಆಗಿದ್ದಳು. ಅವಳ ಕಲಿತನ ಪುರುಷರನ್ನು ನಾಚಿಸುವಂತೆ ಇತ್ತು.

ಅತ್ತಿಮಬ್ಬೆ ಮಹಾದಾನಿ ನಿಜ. ಅವಳ ವ್ಯಕ್ತಿತ್ವವು ದಾನಗುಣದಿಂದ ಕೂಡಿದ್ದರೂ ಅವಳು ಅದೊಂದೇ ಗುಣದಲ್ಲಲ್ಲದೆ ನಾನಾ ಗುಣಗಳಲ್ಲಿ ಪ್ರಸಿದ್ಧಳಾಗಿದ್ದಾಳೆ. ಆ ನಾನಾ ಗುಣಗಳನ್ನೇ ರನ್ನ ಕವಿಯು ಹಾಡಿ ಹೊಗಳಿರುವುದು ಕವಿಯ ಗುಣಗಾನ ಕೇವಲ ಹೊಗಳಿಕೆಯಲ್ಲ. ತನ್ನಿಂದ ಕಾವ್ಯವನ್ನು ಬರೆಯಿಸಿದ, ತಾನು ಉಪಕೃತನಾಗಿರುವ ಅತ್ತಿಮಬ್ಬೆಯ ಜೀವನ ಚರಿತ್ರೆ, ವ್ಯಕ್ತಿತ್ವವನ್ನು ನಿಜವಾದ ಭಕ್ತಿ ಗೌರವಗಳಿಂದ ಅಜಿತಪುರಾಣದ ಮೊದಲ ಮತ್ತು ಕೊನೆಯ ಆಶ್ವಾಸಗಳಲ್ಲಿ ವರ್ಣಿಸಿದ್ದಾನೆ.

ಕಲಿಯೆನೆ ನೆಗರ್ದ್ದಳ್ ಕಸವರ

ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್, ಮನೆಯೊಳ್

ಮೊಲೆವೊತ್ತ ತೈಲ ಜನನಿಯ

ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್

ಈ ಪದ್ಯವು ಅತ್ತಿಮಬ್ಬೆಯ ಮತ್ತೊಂದು ಗುಣವನ್ನು ಅತಿಯಾಗಿ ವರ್ಣಿಸುತ್ತದೆ. ದಾನಗುಣವು ಅವಳ ವ್ಯಕ್ತಿತ್ವವಾಗಿರುವಂತೆ, ಕಲಿತನದ ಗುಣವೂ ಅವಳ ವ್ಯಕ್ತಿತ್ವದಲ್ಲಿ ಅಡಕವಾಗಿರುವದನ್ನೇ ರನ್ನ ಕವಿ ಇಲ್ಲಿ ಉಪಮಿಸಿದ್ದಾನೆ.

ಅತ್ತಿಮಬ್ಬೆಯು ಶ್ರೀಮಂತ ಮನೆತನದಲ್ಲಿ ಜನಿಸಿರುವ ಹಾಗೆ ಕಲಿತನದ ಕುಟುಂಬದ ಸದಸ್ಯಳಾಗಿದ್ದಳು. ಕಲಿತನ ಅವಳಿಗೆ ಅವಳ ಪೂರ್ವಜರ ಕೊಡುಗೆಯಾಗಿತ್ತು. "ಗುಣದಂಕಕಾರ್ತಿಯಾದ ಅತ್ತಿಮಬ್ಬೆ ಯುದ್ಧಭೂಮಿಯಲ್ಲಿ ಕಲಿಯೆಂದೂ ಮನೆಯಲ್ಲಿ ಕಸವರಗಲಿಯೆಂದೂ ಪ್ರಸಿದ್ಧಳಾದವಳು. ಆ ತೈಲಜನನಿಯ ಎದುರಿಗೆ ಮೀಸೆವೊತ್ತ ಅಣ್ಣಗಳು ರಂಜಿಸಬಲ್ಲರೆ" ಎಂಬ ಕವಿಯ ಹೇಳಿಕೆ ಮೇಲಿನ ಮಾತುಗಳನ್ನು ಸಮರ್ಥಿಸುವಂತಿದೆ.

ಅತ್ತಿಮಬ್ಬೆಯ ಗುಣಗಳನ್ನು ಯಾರಿಗೂ ಹೋಲಿಸುವುದಕ್ಕೆ ಸಾಧ್ಯವಿಲ್ಲ. ಅವಳು ಕಸವರಗಲಿಯಾಗಿರುವಂತೆ ಕವಿಯಾಗಿದ್ದಳು. ೧೦ನೆಯ ಶತಮಾನವಂತೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕ್ಷಾತ್ರ ಯುಗವೆಂದೂ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದನ್ನು ರನ್ನ ಮಹಾಕವಿ ಅತ್ಯಂತ ಸ್ವಾರಸ್ಯವಾಗಿ ಗದಾಯುದ್ಧದಲ್ಲಿ ಹೇಳಿದ್ದಾನೆ.

> ಮಣಿ ಕನಕಂ ವಸ್ತು ವಿಭೂ
> ಷಣಂಗಳಂ ಕೊಟ್ಟು ಪೆಂಡಿರೊಲ್ವರ ಗಂಡರ್
> ಗುಣಮನೆ ಮೆರೆವುದು ಶಸ್ತ್ರ
> ವ್ರಣಮಂ ನಿನ್ನಂತೆ ಮೆರೆವುದಿಜೆವ ಬೆಡಂಗಾ[೩]

ಹೆಂಡತಿಯರು ಆಭರಣಗಳನ್ನು ಕೊಟ್ಟಿದ್ದರಿಂದ ಒಲಿಯುವರೆ? ಆಯುಧಗಳಿಂದ ಆದ ಗಾಯದಿಂದ (ಭೀಮನಂತೆ)ಲೂ ಅವರ ಒಲವನ್ನು ಪಡೆದುಕೊಳ್ಳುವ ಸತ್ಯವನ್ನು ರನ್ನ ಕವಿ ದ್ರೌಪದಿಯಿಂದ ಹೇಳಿಸುತ್ತಾನೆ.

ಇಂತಹ ಕ್ಷಾತ್ರ ಪ್ರಧಾನವಾದ ಕಾಲದಲ್ಲಿ ಅತ್ತಿಮಬ್ಬೆಯು ಬದುಕಿದ್ದವಳು. ಅವಳ ತೌರುಮನೆ, ಗಂಡನ ಮನೆಯವರೆಲ್ಲರೂ ಕಲಿಗಳೇ ಆಗಿದ್ದರು.

ಅತ್ತಿಮಬ್ಬೆಯ ಅಪ್ಪ ಮತ್ತು ಚಿಕ್ಕಪ್ಪಂದಿರಾದ ಮಲ್ಲಪಯ್ಯ ಪೊನ್ನಮಯ್ಯರು "ವಿದ್ಯಾನಿಧಿ", "ಅನೂನಗುಣಂ", "ಅಣ್ಣನ ಭಕ್ತ"ನಾಗಿರುವಂತೆ ಪರಾಕ್ರಮಿಗಳಾಗಿದ್ದರೆಂಬ ವಿವರಣೆಯನ್ನು ರನ್ನ ಕವಿ ಕೊಡುತ್ತಾನೆ. ಶೂರತನಕ್ಕೆ, ಭವ್ಯತೆಗೆ, ಆಚಾರಕ್ಕೆ, ಗುಣಕ್ಕೆ ನೃಪ ಶಾಸ್ತ್ರಜ್ಞತೆಗೆ ಮಲ್ಲಪಯ್ಯ ಪ್ರಸಿದ್ಧನಾಗಿದ್ದುದಲ್ಲದೆ ಕವಿಗಳಿಗೂ ಮತ್ತು ವಿದ್ವಾಂಸರಿಗೂ ತವರ್ಮನೆಯಾಗಿದ್ದನೆಂದು ಕವಿ ಬಣ್ಣಿಸಿದ್ದಾನೆ.

> ನೃಪಶಾಸ್ತ್ರಜ್ಞತೆಗಿಲ್ಲಿ ಮಲ್ಲಪನೊಳಶ್ವೇ ಭಾಗಮಕ್ಕಿಲ್ಲ ಮ
> ಲ್ಲಪನೊಳ್ ಶೂರತೆಗಿಲ್ಲಿ ಮಲ್ಲಪನೊಳಾರ್ತೀವೊಳ್ಗುಣಕ್ಕಿಲ್ಲಿ ಮ
> ಲ್ಲಪನೊಳ್ ಭವ್ಯತೆಗಿಲ್ಲಿ ಮಲ್ಲಪನೊಳಾಚಾರ ಕ್ರಮಕ್ಕಿಲ್ಲಿ ಮ
> ಲ್ಲಪನೊಳ್ ನೋಳ್ಪಡೆ ಕಾಣಲಾಗದು ಸಮಾನಂ ಮಾನವಾನೀಕಮಂ

ಪಂಡಿತ ಮಂಡಳಿಗಂ ಕವಿ
ಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಕೆ
ಯ್ಕೊಂಡು ಪೊಗಳ್ದಿಪುರು ಭುವನಂ
ಕೌಂಡಿನ್ಯ ಕುಲಪ್ರದೀಪನಂ ಮಲ್ಲಪನಂ [೪]

ಅತ್ತಿಮಬ್ಬೆಯ ತಂದೆಯಾದ ಮಲ್ಲಪನು ಕವಿಯಾಗಿದ್ದನು. ಅವನನ್ನು ಕವಿಯು "ಶಸ್ತ್ರ ಶಾಸ್ತ್ರ ವಿದ್ಯಾ ಕೌಶಲ" ಎಂದು ವರ್ಣಿಸಿದ್ದಾನೆ.

ಅರೆವಡೆಯೊಳ್ ಕಾಲತ್ರಯ
ಮಿರೆವೆಡೆಯೊಳ್ ತನ್ನ ಶೌರ್ಯಮಮಂ ಬಲ್ಮೆಯುಮಂ
ಮೆರೆದಂ ಮಲ್ಲಪನಲ್ಲದೆ
ಪೆರನಾವನೊ ಶಸ್ತ್ರ ಶಾಸ್ತ್ರ ವಿದ್ಯಾಕುಶಲಂ [೫]

ಹಲವಾರು ಗುಣಗಳ ಸಂಗಮವಾಗಿರುವ ಮಲ್ಲಪ ಅನ್ಯಾದೃಶನಾಗಿದ್ದಾನೆ. ಮಹಾದಾನಿ, ಯುದ್ಧವೀರ, ಅಶ್ವಶಾಸ್ತ್ರನಿಪುಣ, ಆಚಾರವಂತನಾಗಿರುವ ಮಲ್ಲಪಯ್ಯನು ಭವ್ಯವ್ಯಕ್ತಿತ್ವವುಳ್ಳವನು. ಇಂತಹ ವ್ಯಕ್ತಿತ್ವವಿರುವ ಮಲ್ಲಪನ ಧೈರ್ಯ ಸಾಹಸವನ್ನು ರನ್ನ ಕವಿ ಕೊಂಡಾಡಿದ್ದಾನೆ. ಇದು ಕೇವಲ ಕೊಂಡಾಟವಲ್ಲ. ಮಲ್ಲಪನು ಅಂತಹ ಕವಿಯೇ ಆಗಿದ್ದನು. ಆದುದರಿಂದಲೇ ತೈಲಪನ ದಂಡನಾಯಕನಾಗಿದ್ದನು. ಮಲ್ಲಪನ ವೀರ ಸಾಹಸವನ್ನು ವರ್ಣಿಸುವ, ಯುದ್ಧದ ದೃಶ್ಯವೊಂದನ್ನು ಕವಿ ರನ್ನನು ಈ ಕೆಳಗಿನಂತೆ ಹೇಳಿದ್ದಾನೆ.

ಪಡೆವೆಂ ಪುತ್ರನನೊರ್ವನಂ ಪಡೆವೆನಾನೊಂದೇ ಸಿನಕ್ಕುಂ ಜಯಂ
ನುಡಿದೆಂ ಕೇಳ್ದರಿಮೆಂದು ಮುನ್ನರುಪಿ ತತ್ತದ್ವಿದ್ಯನಾಚಾರದೊಳ್
ಗುಡಿಯಂ ಕಟ್ಟಿ ಕುಮಾರಲೋಧ್ರಸಮರ ಪ್ರಾರಂಭದೊಳ್ ಬಲ್ಮೆ ನೇ
ರ್ಪಡೆ ಭೂವಲ್ಲಭನಂ ಮನಂಗೊಳಿಸಿದಂ ಶೌರ್ಯಾರ್ಜಿತಂ ಮಲ್ಲಪಂ

ಮೇಲಿನ ಪದ್ಯದಲ್ಲಿರುವ ಸಮರದ ಹೆಸರು ಕುಮಾರಲೋಧ್ರಸಮರ. ಈ ಪದ್ಯದಲ್ಲಿ ಭೂವಲ್ಲಭನಾದ ತೈಲಪನು ಮೆಚ್ಚಿಕೊಳ್ಳುವ ಹಾಗೆ ಶೌರ್ಯವನ್ನು ಮಲ್ಲಪನು ತೋರಿದನು ಎಂಬ ಅರ್ಥವಿದೆ. ಪದ್ಯವು ಚರಿತ್ರೆಗೆ ಸಂಬಂಧಪಟ್ಟಿರುವಂತಿದೆಯಾದರೂ ಅದಿನ್ನು ಖಚಿತವಾಗಿಲ್ಲ.

ಪಿ.ಬಿ.ದೇಸಾಯಿಯವರು "ಕುಮಾರ" ಪಟ್ಟವೇರದ ರಾಜಪುತ್ರನೆಂದೂ, "ಲೋಧ್ರಸಮರ"ವೆಂದರೆ "ರಕ್ತಸಂಗ್ರಾಮ"ವೆಂದೂ ಅರ್ಥೈಸುತ್ತಾರೆ. - - - - - ಈ ಕುಮಾರನಾದರೋ ಚಾಲುಕ್ಯ ರಾಜಪುತ್ರ ಇಮ್ಮಡಿ ತೈಲಪ. ಆತನಿಗೆ ಇನ್ನೂ ರಾಜಪದವಿ ಬಂದಿರಲಿಲ್ಲ. ಅದಾಗ ಆತನು ಸ್ವತಂತ್ರ ರಾಜ್ಯ ಸ್ಥಾಪನೆಯ ಉದ್ಯೋಗವನ್ನು ಆರಂಭಿಸಿದ ಕಾಲ." ಆದರೆ ಪದ್ಯದಲ್ಲಿ ಭೂವಲ್ಲಭ ಎಂದಿರುವದರಿಂದ ಪಟ್ಟವೇರಿದವನು ಎನ್ನುವುದರಲ್ಲಿ

ಅನುಮಾನವಿಲ್ಲ. ಕುಮಾರ ಎಂದಿರುವುದು ತೈಲಪನ ಮಗನಾದ ಇರಿವಬೆಡಂಗ ಸತ್ಯಾಶ್ರಯನೇ ಎಂದು ಭಾವಿಸುವುದು ಅತ್ಯಂತ ಸೂಕ್ತವೆನಿಸುತ್ತದೆ.

ಹೀಗೆ ಮಲ್ಲಪನ ಪರಾಕ್ರಮವನ್ನು ಚರಿತ್ರಾರ್ಹ ಸಂದರ್ಭವೊಂದರಲ್ಲಿ ಕವಿ ತಿಳಿಸಿದ್ದಾನೆ. ಅವನ ಹಾಗೆ ಅವನ ತಮ್ಮನಾದ ಪೊನ್ನಮಯ್ಯನು ಯುದ್ಧವೀರನೇ. ಅವನ ರಣಕಲಿತನವನ್ನು ಮತ್ತೊಂದು ಚಾರಿತ್ರಿಕ ಸಂದರ್ಭದ ಮೂಲಕ ಕವಿ ಹೇಳಿದ್ದಾನೆ.

ಪರಮದ್ರೋಹರೊಳೊಂದಿ ತನ್ನೊಳಿರಿಯಲ್ ಗೋವಿಂದರಂ ಬರ್ದ್ಯದುಂ
ಸೆರಗಂ ಪಾರದೆ ತಾಗಿ ತೈಲಪ ನೃಪಂ ಬಾಳ್ಗೆಂದು ಬಾಳ್ಗಿತ್ತು ಮ
ಚ್ಚರದಿಂ ಸಾರ್ಚಿದರಂ ಪಡಲ್ವಡಿಸಿ ಕಾವೇರೀಸರಿತ್ತೀರದೊಳ್
ಸುರಲೋಕಾತಿಥಿಯಾದ ಪೊನ್ನನೆ ವಲಂ ಗಂಡಂ ಪೆರರ್ ಗಂಡರೇ [೩]

ಪರಮದ್ರೋಹರೊಳ ಜತೆಗೂಡಿ ಗೋವಿಂದರ ಯುದ್ಧಕ್ಕೆ ಬಂದಾಗ ಸಹಾಯಕ್ಕಾಗಿ ನಿರೀಕ್ಷಿಸದೆ "ತೈಲಪ ನೃಪ ಬಾಳಲಿ" ಎಂದು ಹೇಳುತ್ತಾ ಕತ್ತಿಯನ್ನು ಹಿರಿದು ಮಚ್ಚರದಿಂದ (ಮತ್ಸರ) ಸಮೀಪಿಸಿದವರನ್ನು ನಾಶಪಡಿಸಿ ಕಾವೇರಿ ನದಿಯ ತೀರದಲ್ಲಿ ಹೋರಾಟ ಮಾಡಿದ ಪುನ್ನಮಯ್ಯನ ಚಿತ್ರವಿದು. ಇತಿಹಾಸಕ್ಕೆ ಸಂಬಂಧಪಟ್ಟ ಯುದ್ಧದ ಸಂದರ್ಭವೊಂದನ್ನು ತಿಳಿಸುತ್ತದೆ. ಹಾಗೆಯೇ ಪುನ್ನಮಯ್ಯನ ಪರಾಕ್ರಮ, ಕ್ಷಾತ್ರ ಗುಣವನ್ನೂ ತಿಳಿಸುತ್ತದೆ.

ಯುದ್ಧ ನಡೆದಿದೆ, ಅದರಲ್ಲಿ ಜೀವದ ಹಂಗು ತೊರೆದು ಹೋರಾಟ ಮಾಡುತ್ತಲೇ ಮಡಿದ ಪುನ್ನಮಯ್ಯನ ಚಿತ್ರವನ್ನು ಮೇಲಿನ ಪದ್ಯದಲ್ಲಿ ಕಾಣುತ್ತೇವೆ.

ಚಾವುಂಡರಾಯ ಪುರಾಣದಲ್ಲಿ "ಗೋವಿಂದರಸನ" ಉಲ್ಲೇಖವಿದೆ. ಚಾವುಂಡರಾಯನು ಸೋಲಿಸುವ ಶತ್ರುಗಳಲ್ಲಿ ಗೋವಿಂದರಸನೂ ಒಬ್ಬನೆಂದು ಹೇಳಲಾಗಿದೆ.[೪] ಹುಂಚ ೫ ಶಾಸನದಲ್ಲಿ ಗೋವಿಂದರಸ ಎಂಬವನು ಮಾರಸಿಂಹನ ಕಿರಿಯ ಸೋದರನೂ, ಬೂತುಗನ ಕಿರಿಯ ಮಗನೂ ಆಗಿದ್ದನೆಂದು ತಿಳಿದು ಬರುವುದು. ಶಾಸನೋಕ್ತ ಮತ್ತು ಪುರಾಣೋಕ್ತ ಗೋವಿಂದರು ಒಂದೇ ಆಗಿರಬೇಕೆನಿಸುತ್ತದೆ. ಹಾಗೆ ಒಂದೇ ಆಗಿದ್ದರೆ ಕೆಳಗಿನ ಊಹೆಯನ್ನು ಮಾಡಬಹುದಾಗಿದೆ. ಗಂಗ ಸಿಂಹಾಸನಕ್ಕಾಗಿ ರಾಚಮಲ್ಲ ಮತ್ತು ಗೋವಿಂದರಲ್ಲಿ ಸ್ಪರ್ಧೆ ಏರ್ಪಟ್ಟು, ಇಬ್ಬರೂ ಪ್ರಯತ್ನಪಟ್ಟು ಆ ಪ್ರಯತ್ನದಲ್ಲಿ ಬಹುತೇಕ ಯಶಸ್ವಿಯಾದ ಗೋವಿಂದರ ನಂತರ ತೈಲನ ರಾಜ್ಯ ವಿಸ್ತರಣೆಯನ್ನು ವಿರೋಧಿಸಿರಬೇಕು. ಈ ಕಾರಣದಿಂದಲೇ ನಡೆದಿರಬಹುದಾದ ಯಾವುದಾದರೊಂದು ಯುದ್ಧದಲ್ಲಿ ಮಡಿದಿರಬೇಕು.

ಈ ರೀತಿಯಾಗಿ ಅತ್ತಿಮಬ್ಬೆಯ ಅಪ್ಪ ಚಿಕ್ಕಪ್ಪಂದಿರು ಅಸಾಧಾರಣ ಪರಾಕ್ರಮಿಗಳಾಗಿದ್ದರು. ತಂದೆ ಮಲ್ಲಪನಂತೆ ಗುಂಡಮಯ್ಯನು ಸಹಿತ ಗೋನರರನ್ನು ಕಾದಿ ಗೆದ್ದು "ಮಲ್ಲಪತನಯ"ನೆಂಬ ಕೀರ್ತಿಯನ್ನು ಪಡೆದುಕೊಂಡನೆಂದು ಕವಿ ರನ್ನನು ಗುಂಡಮಯ್ಯನ ಸಾಹಸವನ್ನು ವರ್ಣಿಸುತ್ತಾನೆ.

ನರನೆನಿಪ ಶೌರ್ಯದಿಂ ಗೋ
ನರನಂ ಪೆಣೆದಿರಿದು ಗೆಲ್ದು ನಿಜ ವಿಜಯ ಯಶಂ.
ಪರೆಯೆ ನೆಗಳ್ಚಿದನವನೀ
ಧರೆಯೊಳ್ ಮಲ್ಲಪನ ತನಯನೆಂಬುನ್ನತಿಯಂ

ಅತ್ತಿಮಬ್ಬೆ ಬೆಳೆದಿರುವ ವಾತಾವರಣ ರಾಜಾಶ್ರಯವನ್ನು ಪಡೆದವರ ಕುಟುಂಬವಾಗಿರುವಂತೆ, ಸಾಹಸ, ಪರಾಕ್ರಮಗಳಿಂದ ತುಂಬಿತ್ತು. ಅದೇ ರೀತಿಯಾಗಿ ಅವಳ ಮಾವನ ಮನೆಯು ಸಾಹಸಾದಿಗಳಿಗೆ ಹೆಸರು ವಾಸಿಯಾಗಿತ್ತು. ಅಜಿತ ಪುರಾಣದಲ್ಲಿ ಅತ್ತಿಮಬ್ಬೆಯ ಮಾವನಾದ ಚಾಳುಕ್ಯ ಚಕ್ರವರ್ತಿಯ ಮುಖ್ಯ ಸಚಿವನಾಗಿದ್ದ ''ದಲ್ಲಪ''ನ ವಿಷಯವನ್ನು ''ಸಕಲ ಚಕ್ರವರ್ತಿಯ ಸಭಾ ಸಂವಾಸ ಚತುರ'', ''ಸಚಿವೋತ್ತಮ''ನೆಂದೂ ಕವಿ ಬಣ್ಣಿಸಿದ್ದಾನೆ. ಇದೇ ವಿಷಯ ಲಕ್ಕುಂಡಿ ಶಾಸನದಲ್ಲಿಯೂ ಇದೆ. ದಲ್ಲಪನ ಮಗನಾದ ನಾಗದೇವನೂ ಶೂರಾಗ್ರಣಿ, ಸುಭಟಚೂಡಾಮಣಿ, ಒರಟರಮಲ್ಲ ಎಂದು ಕವಿ ಕೊಂಡಾಡಿದ್ದಾನೆ. ಅಲ್ಲದೆ ಅವನ ಹೋರಾಟದ ಚಿತ್ರವನ್ನು ಕೊಟ್ಟಿದ್ದಾನೆ. ಅಜಿತ ಪುರಾಣದ ಮೊದಲ ಆಶ್ವಾಸದ ೪೨ನೆಯ ಪದ್ಯದಿಂದ ೫೫ನೆಯ ಪದ್ಯದವರೆಗೆ ನಾಗದೇವನ ಕುರಿತಾಗಿ ಹೇಳುತ್ತಾನೆ. ಕೆಳಗಿನ ಪದ್ಯಗಳಲ್ಲಿ ನಾಗದೇವನ ಹೋರಾಟದ ಚಿತ್ರಣ ಮತ್ತು ಅವನ ಸಾಹಸ ಪರಾಕ್ರಮಗಳನ್ನು ಕಾಣಬಹುದಾಗಿದೆ.

ಕುಮರರ ಕಾಳಗದೊಳ್ ಪತಿ
ಯ ಮುಂದೆ ತರೆಸಂದು ನಿಂದು ಕಡಿತಲೆಗೊಂಡ
ನ್ಯ ಮತಂಗಜಂಗಳಂ ವಿ
ಕ್ರಮ ಸಿಂಹಂ ದಲ್ಲನಂದನಂ ಪೊಣರ್ದಿರಿದಂ

ಕಳಕುಳಮಾಗೆ ಪಂಚಲನ ಬಲ್ಪಡೆ ಪಂಚಲನಶ್ವ ಸಂಕುಲಂ
ಕಳಕುಳಮಾಗೆ ಪಂಚಲನ ದಂತಿಘಟಾವಳಿ ಯುದ್ಧ ರಂಗದೊಳ್
ಕಳಕುಳಮಾಗೆ ಗಾತ್ರ ಕರದಂತಿ ವಿಘಾತದೊಳುಗ್ರದಂತಿ ಮ
ಕ್ಕಳ ಕರು ವಾಗರಂ ಪರಿದುದುದ್ಭಟನಿಂ ಸುಭಟ ತ್ರಿಣೇತ್ರನಿಂ

ಬಲ್ಲಹನ ಬೆಸದೊಳೊರಟರ
ಮಲ್ಲಂ ದಲ್ಲನ ತನೂಭವಂ ಕರಹಟದಿಂ
ಮಲ್ಲಮನಂ ಬೆನ್ನಟ್ಟಿದ
ಬಲ್ಲಾಳ್ತನದಿಂ ನಿಜೇಶನಂ ಮೆಚ್ಚಿಸಿದಂ

ಮೇಲಿನ ಪದ್ಯಗಳಲ್ಲಿ ನಾಗದೇವನು ಹೋರಾಡಿದ ಹೋರಾಟದ ವಿಷಯವಿದೆ. ಕುಮಾರರ ಕಾಳಗದಲ್ಲಿ ಒಡೆಯನ ಮುಂದೆಯೇ ವೈರಿಗಳ ಗಜಗಳನ್ನು ವಿಕ್ರಮಸಿಂಹನೆಂದು ಹೆಸರಾದ ದಲ್ಲಪನ ಮಗನಾದ ನಾಗದೇವನು ಇರಿದು ಕೊಂದನು. ಪಾಂಚಾಲ ತೈಲಪನ ಪದಾತಿ, ಅಶ್ವಸೈನ್ಯ ಮತ್ತು ಗಜಸೈನ್ಯವನ್ನು ಯುದ್ಧರಂಗದಲ್ಲಿ ಸುಭಟತ್ರಿಣೇತ್ರನಾದ ನಾಗದೇವನು ಸದೆಬಡಿದಿರುವ ವಿಷಯವನ್ನು ಕವಿ ಬಣ್ಣಿಸಿದ್ದಾನೆ. ಅದೇ ರೀತಿ ಮಲ್ಲಪನನ್ನು ಕರಹಾಟದಿಂದ ಪರಾಕ್ರಮದಿಂದ ಬೆನ್ನಟ್ಟಿದನಂತೆ. ಹೀಗೆ ಹಲವಾರು ಯುದ್ಧಗಳಲ್ಲಿ ನಾಗದೇವ ಪರಾಕ್ರಮದಿಂದ ಹೋರಾಡಿದ್ದಾನೆ.

ಅತ್ತಿಮಬ್ಬೆ ಹುಟ್ಟಿ ಬೆಳೆದ ವಾತಾವರಣ ಕ್ಷಾತ್ರಮಯವಾಗಿರುವಂತೆ, ಅತ್ತೆಮನೆಯು ಕೂಡ ಕ್ಷಾತ್ರ ತೇಜಿಸ್ಸಿನಿಂದ ತುಂಬಿ ತುಳುಕುತ್ತಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಅತ್ತಿಮಬ್ಬೆ ಕಾಲ ಕಳೆದ ಪ್ರತಿಯೊಂದು ವಾತಾವರಣವು ವೀರತನದಿಂದ ತುಂಬಿತ್ತು. ಅದು ಆಗಿನ ಯುಗಧರ್ಮವೂ ಆಗಿತ್ತು. ಅತ್ತಿಮಬ್ಬೆ ದಾನ ಚಿಂತಾಮಣಿ ಎಂದು ಹೆಸರು ಪಡೆದುಕೊಂಡಿದ್ದು ತನ್ನ ದಾನ ಗುಣದ ವ್ಯಕ್ತಿತ್ವದಿಂದ. ಅವಳ ವ್ಯಕ್ತಿತ್ವದಲ್ಲಿ ದಾನ ಗುಣದ ಜತೆಗೆ ಇನ್ನೊಂದು ಗುಣ ಅಡಕವಾಗಿತ್ತು. ಅದನ್ನೆ ಕವಿ ವಿಶಿಷ್ಟವಾಗಿ ಬಣ್ಣಿಸಿದ್ದಾನೆ.[೧೦]

ನಾಲ್ಕು ಸಾಲಿನ ಪದ್ಯವೊಂದು ಅತ್ತಿಮಬ್ಬೆಯ ಇಡಿ ವ್ಯಕ್ತಿತ್ವವನ್ನು ದರ್ಶಿಸುತ್ತದೆ. ಗುಣದಂಕಕಾರ್ತಿಯಾದ ಅತ್ತಿಮಬ್ಬೆಯು ಕಲಿಯಾಗಿರುವಂತೆ ಕಸವರಗಲಿಯಾಗಿದ್ದಳು. ತೈಲಪನ ತಾಯಿಯ ಪರಾಕ್ರಮಕ್ಕೆ ಮೀಸೆ ಹೊತ್ತ ಪುರುಷರು ಸರಿಯಾಗಲಾರರು ಎಂಬುದೇ ರನ್ನ ಕವಿಯ ಸ್ಪಷ್ಟ ಅಭಿಪ್ರಾಯ.

ಅತ್ತಿಮಬ್ಬೆಯು ಮನೆಯ ಒಳಗೂ ಹೊರಗೂ ಪ್ರಖ್ಯಾತಿಯನ್ನು ಪಡೆದುಕೊಂಡವಳು. ದಾನಿಯಾಗಿರುವಂತೆ ಕಲಿಯೂ ಆಗಿದ್ದವಳು. ಅತ್ತಿಮಬ್ಬೆಯು ವೀರರಮಣಿಯರಲ್ಲೊಬ್ಬಳು. ಆದುದರಿಂದಲೇ ರನ್ನ ಕವಿಯು ಗಂಡಸರೂ ನಾಚಿಕೊಳ್ಳುವಷ್ಟು ಕಲಿತನ ಅವಳಲ್ಲಿತ್ತು ಎಂದು ಅತಿಶಯವಾಗಿ ಹೇಳಿದ್ದಾನೆ.[೧೧]

ಅತ್ತಿಮಬ್ಬೆ ಬೆಳೆದ ಬಾಳಿದ ಮನೆತನಗಳೆರಡರ ಪರಿಸರ ಅಪೂರ್ವವಾದವುಗಳು. ಅವಳ ತಂದೆ, ಸಹೋದರ, ಚಿಕ್ಕಪ್ಪ, ಮಾವ, ಗಂಡ, ಮಗ ಹೀಗೆ ಪ್ರತಿಯೊಬ್ಬರೂ ಪ್ರಸಿದ್ಧರು. ಎರಡೂ ಮನೆತನಗಳಿಗೆ ಹಿರಿದಾದ ಪರಂಪರೆಯ ಹಿನ್ನೆಲೆಯಿದೆ. ಅತೀವ ಜಿನಧರ್ಮಶ್ರದ್ಧೆ ಇದೆ. ಅವಳ ಬದುಕಿನಲ್ಲಿರುವವರೆಲ್ಲರೂ ಅವಳ ಉದಾತ್ತ ಜೀವನಕ್ಕೆ ತಳಹದಿಯಾದರು.

ಅವಳ ಉದಾತ್ತ ವ್ಯಕ್ತಿತ್ವದಲ್ಲಿ ಜೈನ ಧರ್ಮದ ತತ್ವಗಳು ಅಡಕವಾಗಿದ್ದವು. ಯುದ್ಧಭೂಮಿಯಲ್ಲಿ ಖಡ್ಗಗಳ ಝಣತ್ಕಾರ ಮಾಡಬಲ್ಲ ಅತಿಮಬ್ಬೆ ಜೈನ ಧರ್ಮದ ಪಂಚ ನಮಸ್ಕಾರವನ್ನೂ ಬಲ್ಲವಳಾಗಿದ್ದಳು, ದಾನಿಯಾಗಿದ್ದರೂ ಜೈನ ಧರ್ಮದ ಎಲ್ಲ ತತ್ವಗಳನ್ನು ತನ್ನ ವ್ಯಕ್ತಿತ್ವದಲ್ಲಿ ಭಿನ್ನವಾಗದಂತೆ ನೋಡಿಕೊಂಡಿದ್ದಳು.

ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ವರ್ಣಿಸುವಲ್ಲಿ ಜೈನ ಧರ್ಮದ ಆಗು ಹೋಗುಗಳನ್ನು ತಿಳಿದುಕೊಳ್ಳುವುದು ಅಗತ್ಯವೆನಿಸುತ್ತದೆ.

ಧರ್ಮವೆಂದರೆ ಒಂದು ಪಂಗಡದವರು ಆಚರಣೆಯಲ್ಲಿ ತರುವ ಪದ್ಧತಿಗಳು, ನೀತಿ ನೇಮಗಳು, ಪೂಜೆ ಪುನಸ್ಕಾರಗಳು, ಶ್ರದ್ಧೆ ನಂಬಿಕೆಗಳು, ನಂಬಿ ಪೂಜಿಸುವ ದೈವಗಳು ಬಂದು ಸೇರಿಕೊಳ್ಳುತ್ತವೆ. ಆಯಾ ದೇವರನ್ನು ಪೂಜಿಸುವುದರ ಮೇಲೆಯೂ ಧರ್ಮವು ಅವಲಂಬಿತವಾಗಿರುವುದು ಕಂಡು ಬಂದಿದೆ. ಶಿವನನ್ನು ಆರಾಧ್ಯ ದೈವವನ್ನಾಗಿ ನಂಬಿ ಪೂಜಿಸುವವರು ಶೈವಧರ್ಮದವರಾದರೆ, ವಿಷ್ಣುವನ್ನು ಭಗವಂತನೆಂದು ನಂಬಿ ಪೂಜಿಸುವವರು ವೈಷ್ಣವರಾದರೆ, ಜಿನನನ್ನು ದೇವರೆಂದು ಶ್ರದ್ಧೆಯಿಂದ ಪೂಜಿಸುವವರು ಜೈನರಾಗುತ್ತಾರೆ. ಮಿರ್ಜಿ ಅಣ್ಣಾರಾಯರು ಹೇಳುವಂತೆ ಜೈನ ಧರ್ಮದ ಅರ್ಥ "ಜಿನನಿಂದ ಬೋಧಿಸಲ್ಪಟ್ಟ ಧರ್ಮವು ಜೈನ ಧರ್ಮವಾಗಿದೆ."[೧೨]

ಜಗತ್ತಿನಲ್ಲಿರುವ ಪ್ರತಿಯೊಂದು ಧರ್ಮದಲ್ಲಿ ತಾತ್ವಿಕ ವಿಚಾರ ಹಾಗೂ ಅವುಗಳ ಆಚರಣೆಗಳಿರುತ್ತವೆ. ಅದೇ ರೀತಿಯಾಗಿ ಜಿನನಿಂದ ಬೋಧಿಸಲ್ಪಟ್ಟ ಜೈನಧರ್ಮವು ಸಹಿತ ವಿಚಾರ, ಆಚಾರವೆಂಬ ಎರಡು ಭಾಗಗಳನ್ನು ಒಳಗೊಂಡಿದೆ. ಸ್ಥೂಲವಾಗಿ ಹೇಳಬೇಕೆಂದರೆ ಜೈನಧರ್ಮದ ವಿಚಾರ ಅನೇಕಾಂತ ಅಥವಾ ಸ್ಯಾದ್ ವಾದ ಮತ್ತು ಆಚಾರ, ಅಹಿಂಸೆ ಮತ್ತು ತಪಸ್ಸು. ಜೈನ ಧರ್ಮದ ಆಚಾರಕ್ಕೆ ಅಹಿಂಸೆಯೇ ಮೂಲವಾಗಿದೆ. ಈ ಕಾರಣದಿಂದಲೇ ಯಾರಿಗೂ ಅನ್ಯಾಯವಾಗಬಾರದು, ಯಾವ ಪ್ರಾಣಿಗೂ ಹಿಂಸೆಯಾಗಬಾರದು - ಎಂಬುದೇ ಜೈನ ಧರ್ಮದ ಉದ್ದೇಶವಾಗಿದೆ. ಎಲ್ಲ ಜೀವಿಗಳನ್ನು ರಕ್ಷಿಸುವುದು, ಅಹಿಂಸೆಯ ತತ್ವಗಳನ್ನು ಚಾಚೂ ತಪ್ಪದೆ ಪರಿಪಾಲಿಸುವುದು, ಆತ್ಮದ ಉನ್ನತಿಗಾಗಿ ಕಠಿಣವಾದ ವ್ರತ ನೇಮಗಳನ್ನು ಪರಿಪಾಲಿಸುವುದು, ಅನ್ನದಾನ, ಆಶ್ರಯ, ಔಷಧ ದಾನ - ಮೊದಲಾದವುಗಳು ಜೈನ ಧರ್ಮದ ಒಳ ತಿರುಳಿನ ಸ್ಥೂಲ ವಿಚಾರಗಳು. ಇಂತಹ ಜೈನ ಧರ್ಮದ ಪರಿಪಾಲಿಕೆಯಾಗಿ, ಕವಿಪೋಷಕಿಯಾಗಿ ಮಹಾದಾನಿಯಾಗಿ, ಬಸದಿಗಳ ನಿರ್ಮಾಪಕಿಯಾಗಿ ತುಂಬು ಜೀವನವನ್ನು ಅತ್ತಿಮಬ್ಬೆಯು ನಡೆಸಿದ್ದು ಕರ್ನಾಟಕದಲ್ಲಿ ಜೈನಧರ್ಮ ಉಚ್ಛ್ರಾಯ ಕಾಲದಲ್ಲಿರುವಾಗ. ಅತ್ಯಂತ ಪ್ರಾಚೀನ ಕಾಲದಿಂದಲೂ ಜೈನಧರ್ಮ ಭಾರತದಲ್ಲಿತ್ತು. ದಕ್ಷಿಣ ಭಾರತದಲ್ಲಂತೂ ಬಹಳಷ್ಟು ಪ್ರಚಾರವನ್ನು ಪಡೆದುಕೊಂಡಿತ್ತು. ಕರ್ನಾಟಕದಲ್ಲಂತೂ ಬಹಳ ಪ್ರಬಲವಾಗಿತ್ತು.

"ದಕ್ಷಿಣ ಭಾರತದ ಇತಿಹಾಸವೆಂದರೆ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆ."[೧೩] ಎಂಬ ಮಾತು ಅತಿಶಯೋಕ್ತಿಯೇನೂ ಅಲ್ಲ.

೧೫ನೆಯ ಶತಮಾನದ ಒಂದು ಶಾಸನವು ಕರ್ನಾಟಕವನ್ನು ವರ್ಣಿಸುತ್ತ ಅದು ಜೈನ ಧರ್ಮದ ವಾಸದ ಮನೆಯಾಗಿತ್ತು ಎಂದು ವರ್ಣಿಸುತ್ತದೆ.

"ಜಿನ ಧರ್ಮಾವಾಸಮಾದತ್ತಮಳ ವಿನಯದಾಗಾರಮಾದತ್ತು ಪದ್ಮಾ
ಸನನಿರ್ವಾಸದ್ಮಮಾದತ್ತತಿವಿಶದ ಯಶೋಧಾಮಮಾದತ್ತು ವಿದ್ಯಾ

ಧನ ಜನ್ಮಸ್ಥಾನಮಾದತ್ತಸಮ ತರಳ ಗಂಭೀರ ಸದೇಹಮಾದ

ತ್ತೆನಿಸಲ್ಕಂತುಳ್ಳ ನಾನಾ ಮಹಿಯೆಯೊಳೆಸಮಂ ಚಾರು ಕರ್ನಾಟಕದೇಶಂ''[೧೪]

ಈ ಶಾಸನ ಪದ್ಯವು ಜೈನ ಧರ್ಮವು ಕರ್ನಾಟಕದಲ್ಲಿ ಯಾವ ಕಾಲದಲ್ಲಿ ಪ್ರಚಲಿತದಲ್ಲಿತ್ತು ಎನ್ನುವುದನ್ನು ಹೇಳುತ್ತದೆ. ಕರ್ನಾಟಕದಲ್ಲಿ ಜೈನ ಧರ್ಮ ಹೆಚ್ಚು ಪ್ರಚಲಿತ ಇರುವ ಪ್ರದೇಶಗಳೆಂದರೆ ಕೊಪ್ಪಳ, ಮೂಡಬಿದರೆ, ಕಾರ್ಕಳ, ಧರ್ಮಸ್ಥಳ, ಮುಳಗುಂದ ಮೊದಲಾದವುಗಳು. ಆದರೂ ಇವುಗಳಿಗಿಂತ ಹೆಚ್ಚಾಗಿ ಜೈನ ಧರ್ಮದ ನೆಲೆವೀಡು ಎಂದು ಕರೆಯಿಸಿಕೊಂಡದ್ದು ಶ್ರವಣಬೆಳ್ಗೊಳ.

ಕರ್ನಾಟಕದ ಇತಿಹಾಸವನ್ನು ನೋಡಿದಾಗ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಶ್ರವಣ ಬೆಳ್ಗೊಳ ಹೆಸರು ಕಂಡು ಬರುತ್ತದೆ. ಭದ್ರಬಾಹುಸ್ವಾಮಿಗಳ ಶಿಷ್ಯನೇ ಚಂದ್ರಗುಪ್ತ ಮೌರ್ಯನು. ಇವರಿಬ್ಬರೂ ಕರ್ನಾಟಕಕ್ಕೆ ಆಗಮಿಸಿ ಶ್ರವಣಬೆಳ್ಗೊಳಕ್ಕೆ ಬಂದು ನೆಲೆಸಿರುವುದು ಭಾರತದ ಇತಿಹಾಸದಲ್ಲಿ ಒಂದು ಅಪೂರ್ವವಾದ ಸಂಗತಿ. ಸಾಮ್ರಾಟ ಚಂದ್ರಗುಪ್ತನು ಬಂದು ನೆಲೆಸಿರುವ ಕಾರಣದಿಂದಾಗಿ ಶ್ರವಣಬೆಳ್ಗೊಳದಲ್ಲಿರುವ ಚಿಕ್ಕ ಬೆಟ್ಟಕ್ಕೆ ''ಚಂದ್ರಗಿರಿ'' ಎಂಬ ಹೆಸರು ಬಂದಿದ್ದು, ಇದೇ ಕಾರಣಕ್ಕೆ ಇಲ್ಲಿನ ಬಸದಿಗೆ ''ಚಂದ್ರ ಗುಪ್ತ ಬಸದಿ'' ಯೆಂಬ ಹೆಸರು ಬಂದಿದೆ. ಈ ವಿಷಯವು ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.[೧೫]

ಇಲ್ಲಿರುವ ಚಿಕ್ಕಬೆಟ್ಟದ ಅತೀ ಪ್ರಾಚೀನವಾದ ಹೆಸರು ಕಳ್ಬಪ್ಪು ಎಂದು. ಐತಿಹ್ಯದಂತೆ ಚಂದ್ರಗುಪ್ತ ಮೌರ್ಯ ಹಾಗೂ ಅವನ ಗುರುವಾದ ಭದ್ರಬಾಹು ಚಿಕ್ಕಬೆಟ್ಟಕ್ಕೆ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಬಂದಿದ್ದರು. ಚಂದ್ರಗುಪ್ತ ಅರಸನು ಅರಸೊತ್ತಿಗೆಯನ್ನು ಬಿಟ್ಟು ಗುರುವಾದ ಭದ್ರಬಾಹುವಿನೊಂದಿಗೆ ಪಾಟೀಲಪುತ್ರದಿಂದ ಕ್ರಿ.ಪೂ. ಸುಮಾರು ೩ನೆಯ ಶತಮಾನದಲ್ಲಿ ಬಂದಿದ್ದರು.[೧೬] ಈ ಗುರು ಶಿಷ್ಯರಿಬ್ಬರೂ ಜೈನಧರ್ಮವನ್ನು ಉತ್ತರಭಾರತದಿಂದ ದಕ್ಷಿಣ ಭಾರತಕ್ಕೆ ಸುಮಾರು ಕ್ರಿ.ಪೂ.೩ನೆಯ ಶತಮಾನದಲ್ಲಿ ತಂದರು. ಈ ಕಾಲದಿಂದಲೇ ಜೈನಧರ್ಮವು ಕರ್ನಾಟಕದಲ್ಲಿ ಬೇರು ಬಿಟ್ಟಿದೆ. ಇದೇ ಕಾಲದಲ್ಲಿ ಮತ್ತೊಬ್ಬ ಪ್ರಮುಖ ಆಚಾರ್ಯರ ಹೆಸರು ಕೇಳಿ ಬರುತ್ತದೆ. ಅದು ಯಾವುದೆಂದರೆ ಸಮಂತಭದ್ರ. ಕ್ರಿ.ಶ. ೪ನೆಯ ಶತಮಾನದಲ್ಲಿ ಪಾಂಡ್ಯ, ಚೋಳ, ಚೇರ ಮುಂತಾದ ಅರಸು ಮನೆತನಗಳಲ್ಲಿ ಜೈನ ಧರ್ಮ ಪ್ರಬಲವಾಯಿತು. ಸಮಂತಭದ್ರರ ಹಾಗೆ ''ಸಿಂಹ ನಂದಿ'' ಎಂಬುವರು ಜೈನ ಧರ್ಮದ ಮತ್ತೊಬ್ಬ ಪ್ರಮುಖವಾದ ಜೈನ ಆಚಾರ್ಯರು. ಸಿಂಹನಂದಿ ಆಚಾರ್ಯರ ಹೆಸರು ಗಂಗರ ಅನೇಕ ಶಾಸನಗಳಲ್ಲಿ ಕಾಣಸಿಗುತ್ತದೆ.

ಕರ್ನಾಟಕದಲ್ಲಿ ಜೈನಧರ್ಮದಲ್ಲಿ ಉಜ್ವಲವಾದ ಗುರು ಪರಂಪರೆ ಆಗಿ ಹೋಗಿದೆ. ಆ ವಿಷಯದ ಸಂಗ್ರಹವನ್ನು ಹೀಗೆ ಹೇಳಬಹುದು. ಭದ್ರಬಾಹುಸ್ವಾಮಿ, ಸಮಂತಭದ್ರ, ಸಿಂಹನಂದಿ, ವಜ್ರನಂದಿ, ಈ ವಜ್ರನಂದಿಯು ''ನವಸ್ತೋತ್ರದ ರಚಕ'' ನಂತರದ ಆಚಾರ್ಯರು ತುಂಬಲಾಚಾರ್ಯರು. ಈ ತುಂಬಲಾಚಾರ್ಯರ

ಕುರಿತಾಗಿ ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ ಹೇಳಿದ್ದಾನೆ. ಅದು "ಚೂಡಾಮಣಿ" ಎಂಬ ೯೬೦೦೦ ಪದ್ಯಗಳ ಬೃಹತ್ ಗ್ರಂಥವನ್ನು ತುಂಬಲಾಚಾರ್ಯರು ರಚಿಸಿರುವುದೇ ಆಗಿದೆ. ಇದೇ ಕಾಲದಲ್ಲಿರುವ ಮತ್ತೊಬ್ಬ ಜೈನ ಗುರು ದೇವನಂದಿ. ದೇವನಂದಿಗೆ ಪೂಜ್ಯಪಾದ ಎಂಬ ಮತ್ತೊಂದು ಹೆಸರು ಇತ್ತು. ಇಂತಹ ಪರಂಪರೆ ಇದ್ದುದರಿಂದಲೇ ಜೈನ ಧರ್ಮವು ದಕ್ಷಿಣ ಭಾರತದ ರಾಜರ ಪ್ರೋತ್ಸಾಹ ಗೌರವವನ್ನು ಪಡೆದುಕೊಂಡಿತು. ಬನವಾಸಿಯ ಕದಂಬರಿಂದ ಮಾನ್ಯಖೇಟದ ರಾಷ್ಟ್ರಕೂಟದವರೆಗಿನ ರಾಜವಂಶಗಳೆಲ್ಲಾ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದುವು. ಜೈನ ಧರ್ಮಕ್ಕೆ ಮನ್ನಣೆ ನೀಡಿ ಗೌರವಿಸಿದ ರಾಜಮನೆತನಗಳೆಂದರೆ ಬನವಾಸಿಯ ಕದಂಬರು, ತಲಕಾಡಿನ ಗಂಗರು, ಕಂಚಿಯ ಪಲ್ಲವರು, ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು ಮುಂತಾದವರು. ಗಂಗವಂಶದ ಸ್ಥಾಪಕರಾದ ದೀಡಿಗ (ದಡಿಗ) ಮತ್ತು ಮಾಧವರಿಗೆ ಜೈನಾಚಾರ್ಯನಾದ ಸಿಂಹನಂದಿಯಿಂದಲೇ ಹರಕೆ, ಹಾರೈಕೆ, ಸಹಾಯಗಳು ದೊರೆತಿವೆ. ಗಂಗರು, ಪಲ್ಲವರು, ರಾಷ್ಟ್ರಕೂಟರು ಜೈನ ಭಕ್ತರಾಗಿದ್ದರು. ಗಂಗರಿಗೆ ರಾಜ್ಯ ದೊರಕಿರುವುದೇ ಜೈನ ಗುರುವಿನಿಂದ.[೭] ನೀತಿಮಾರ್ಗ, ಬೂತುಗ, ಮಾರಸಿಂಹನಂಥ ಗಂಗರಾಜರು ಪ್ರಖ್ಯಾತಿವೆತ್ತ ಅರಸರಾಗಿದ್ದರು. ಅನೇಕ ಪುಣ್ಯಕಾರ್ಯಗಳನ್ನು ಮಾಡಿದ ಇವರು ವಿದ್ವಾಂಸರುಗಳೂ ಆಗಿದ್ದರು. ಕೆರೆಕಟ್ಟೆಗಳ ನಿರ್ಮಾಣ, ಜೀರ್ಣೋದ್ಧಾರ, ಜನೋಪಕಾರಕ ಕಾರ್ಯಗಳಂತೆ ಬಸದಿಗಳ ನಿರ್ಮಾಣವನ್ನು ಇವರು ಮಾಡಿದ್ದಾರೆ. ಗಂಗರು "ಅವಸರ್ಪಿಣೀ" ಕಾಲದಲ್ಲೂ ಸಹಿತ ಧರ್ಮಕಾರ್ಯಗಳನ್ನು ಮಾಡಿದ್ದಾರೆ. ಮಾರಸಿಂಹನ ಮರಣದ ನಂತರ ರಕ್ಕಸಗಂಗನ ಕಾಲದಲ್ಲಿ ಮಾರಸಿಂಹ ನಿಗ್ರಹಿಸಿದ್ದ ವೈರಿಗಳು ಸಿಡಿದೆದ್ದು ಸ್ವಾತಂತ್ರ ಘೋಷಣೆ ಮಾಡಿದರೂ, ರಕ್ಕಸಗಂಗ, ನೀತಿಮಾರ್ಗರು ಅದುವರೆಗೂ ಜೈನ ಧರ್ಮಕ್ಕೆ ನೀಡುತ್ತಿದ್ದ ಆಶ್ರಯವನ್ನು ನಿಲ್ಲಿಸಲಿಲ್ಲ. ಗಂಗರ ಮಂತ್ರಿಯಾಗಿದ್ದ ಚಾವುಂಡರಾಯನು ಶ್ರವಣಬೆಳ್ಗೊಳದಲ್ಲಿ "ಚಾವುಂಡರಾಯ ಬಸದಿ"ಯನ್ನು ಕಟ್ಟಿಸಿರುವುದಲ್ಲದೆ; ಗೋಮಟೇಶ್ವರ ವಿಗ್ರಹವನ್ನು ಕಟ್ಟಿಸಿ ಇತಿಹಾಸ ಪ್ರಸಿದ್ಧನಾಗಿದ್ದಾನೆ.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ವೈದಿಕ ಧರ್ಮ ಪ್ರಬಲವಾಗಿತ್ತಾದರೂ ಜೈನ ಧರ್ಮಕ್ಕೂ ಅರಸರ ಪ್ರೋತ್ಸಾಹ ಸಾಕಷ್ಟಿತ್ತು. ಅನೇಕ ಜೈನ ದೇವಾಲಯಗಳನ್ನು ಅವರು ನಿರ್ಮಿಸಿದ್ದಾರೆ. ಇಮ್ಮಡಿ ಪುಲಿಕೇಶಿ ಜಿನೇಂದ್ರ ದೇವಾಲಯವನ್ನು ಕಟ್ಟಿಸಿದ್ದಾನೆ. ಬಾದಾಮಿ ಚಾಲುಕ್ಯ ರಾಜವಂಶದವರು ಜೈನ ಗುರುಗಳಿಗೆ ದಾನಗಳನ್ನು ನೀಡಿ ಗೌರವಿಸಿದ್ದಾರೆ. ಜೈನ ದೇವಾಲಯಗಳಿಗೆ ಮತ್ತು ಅವುಗಳ ಜೀರ್ಣೋದ್ಧಾರಕ್ಕಾಗಿ ಅನೇಕ ದತ್ತಿಗಳನ್ನು ಬಿಟ್ಟಿದ್ದಾರೆ.

ರಾಷ್ಟ್ರಕೂಟ ಅರಸು ಮನೆತನದವರೂ ಸಾಮಾನ್ಯವಾಗಿ ವಿಷ್ಣುಭಕ್ತರು ಮತ್ತು ಶಿವಭಕ್ತರು ಆಗಿದ್ದರೂ ಜೈನಧರ್ಮಕ್ಕೆ ಮನ್ನಣೆ, ಪ್ರೋತ್ಸಾಹಗಳನ್ನು ನೀಡಿದ್ದಾರೆ. ಒಂದನೆಯ ಅಮೋಘವರ್ಷನ ಕಾಲದಲ್ಲಿ ಜೈನ ಧರ್ಮಕ್ಕೆ ಹೆಚ್ಚಿನ ರಾಜಾಶ್ರಯ ದೊರಕಿದೆ. ಇವರ ಕಾಲದಲ್ಲಿ ಜಿನಸೇನಮುನಿ ಗುಣಭದ್ರಾಚಾರ್ಯ ಮುಂತಾದ ಖ್ಯಾತ ಜಿನಮುನಿಗಳಿದ್ದರು.

ರಾಷ್ಟ್ರಕೂಟರ ನಂತರ ಕರ್ನಾಟಕವನ್ನು ಆಳಿದ ಕಲ್ಯಾಣ ಚಾಲುಕ್ಯ ಅರಸ ತೈಲಪನ ಸೈನ್ಯದಲ್ಲಿ ಅನೇಕ ಸೇನಾಪತಿ, ಸೇನಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜೈನರೇ ಆಗಿದ್ದರು. ಮಂತ್ರಿ, ಸಾಮಂತ, ಮಂಡಲಾಧಿಪತಿ ಮುಂತಾದ ಪ್ರಮುಖ ಅಧಿಕಾರಿಗಳು ಜಿನಧರ್ಮವನ್ನು ಪೋಷಿಸಿಕೊಂಡು ಬಂದರು.

ಕರ್ನಾಟಕದಲ್ಲಿ ಜೈನ ಧರ್ಮವು ಗಂಗರು ಕೊಟ್ಟ ಅನನ್ಯ ರಾಜಾಶ್ರಯದಿಂದ, ಬಾದಾಮಿ ಚಾಲುಕ್ಯರ ನೆರವಿನಿಂದ, ರಾಷ್ಟ್ರಕೂಟರ ಪ್ರೋತ್ಸಾಹದಿಂದ ಅಭಿವೃದ್ಧಿ ಹೊಂದಿತ್ತು. ಕರ್ನಾಟಕಕ್ಕೆ ಜೈನಧರ್ಮ ಆಗಮಿಸಿದ್ದು ಉತ್ತರ ಭಾರತದಿಂದ. ಭದ್ರಬಾಹುಸ್ವಾಮಿ ಹಾಗೂ ಚಂದ್ರಗುಪ್ತ ಮೌರ್ಯನೆಂಬ ಗುರು ಶಿಷ್ಯರು ಕರ್ನಾಟಕಕ್ಕೆ ಬಂದು ಶ್ರವಣಬೆಳ್ಗೊಳಕ್ಕೆ ಬಂದು ನೆಲೆಸಿದ್ದು ಇತಿಹಾಸದ ಒಂದು ಅಪೂರ್ವ ಪ್ರಸಂಗ. ಈ ಘಟನೆಯಿಂದ ಜೈನ ಧರ್ಮವು ಕ್ರಿಸ್ತಪೂರ್ವದಿಂದಲೇ ಕರ್ನಾಟಕದಲ್ಲಿ ಪ್ರಚಲಿತವಿತ್ತೆಂಬ ಅಂಶ ತಿಳಿದುಬರುತ್ತದೆ.[೧೮]

ಕರ್ನಾಟಕದಲ್ಲಿ ಜೈನಧರ್ಮ ಹೆಚ್ಚು ಪ್ರಚಲಿತವಿದ್ದ ಪ್ರದೇಶಗಳೆಂದರೆ, ಮೂಡಬಿದರೆ, ಕಾರ್ಕಳ, ಧರ್ಮಸ್ಥಳ, ಕೊಪ್ಪಳ, ಮುಳಗುಂದ ಎಲ್ಲಕ್ಕಿಂತ ಹೆಚ್ಚಾಗಿ ಶ್ರವಣಬೆಳ್ಗೊಳ. ಹೀಗೆ ಉತ್ತರ ಕರ್ನಾಟಕದಲ್ಲಿ ಕೊಪ್ಪಳ, ದಕ್ಷಿಣ ಕರ್ನಾಟಕದಲ್ಲಿ ಶ್ರವಣ ಬೆಳ್ಗೊಳ - ಎರಡೂ ಸ್ಥಳ ಬಹಳ ಪ್ರಾಚೀನ ಕಾಲದಿಂದಲೂ ಜೈನ ಕೇಂದ್ರಗಳಾಗಿದ್ದವು. ಶ್ರವಣಬೆಳ್ಗೊಳದ ಪುರಾತನ ಹೆಸರು ಕಲ್ಬಪ್ಪು. ಉತ್ತರ ಭಾರತದಿಂದ ಭದ್ರಬಾಹು ಹಾಗೂ ಅವನ ಶಿಷ್ಯನಾದ ಚಂದ್ರಗುಪ್ತಮೌರ್ಯ ಶ್ರವಣಬೆಳ್ಗೊಳಕ್ಕೆ ಕ್ರಿ.ಪೂ. ೩ನೆಯ ಶತಮಾನದಲ್ಲಿ ಬಂದಿದ್ದರು. ಇಲ್ಲಿಯ ಗುಹೆ, ಶಾಂತವಾದ ವಾತಾವರಣ ಅವರಿಗೆ ಅನುಕೂಲಕರವಾಗಿತ್ತು. ಇವರ ವಿಷಯವೆಲ್ಲ ಶ್ರವಣಬೆಳ್ಗೊಳದ ಅತ್ಯಂತ ಪ್ರಾಚೀನ ಶಾಸನದಲ್ಲಿ ಉಲ್ಲೇಖಗೊಂಡಿದೆ.[೧೯] ೭ನೆಯ ಶತಮಾನದ ಶಾಸನದಲ್ಲಿ ವೆಳ್ಗೊಳ ಅದ್ರಿ ಎಂದು ಕರೆಯಲಾಗಿದೆ.[೨೦] ಈ ಚಿಕ್ಕ ಬೆಟ್ಟವು ತಪಸ್ವಿಗಳ ಸಾಧಕರ ನೆಚ್ಚಿನ ಸ್ಥಳವಾಗಿದೆ. ಮುಕ್ತಿಯೇ ಗುರಿಯಾಗಿದ್ದ ಶ್ರಮಣರಿಗೆ, ಸಮಾಧಿ ಮರಣವನ್ನು ಹೊಂದಲು ಇಚ್ಛಿಸುವ ಸನ್ಯಾಸಿಗಳಿಗೆ, ಈ ಸ್ಥಳ ಅತ್ಯಂತ ಪ್ರಿಯವಾಗಿರಬೇಕು. ಹೀಗಾಗಿ ಈ ಸ್ಥಳ ಅನೇಕ ಶ್ರಮಣ - ಕಂತಿಯರನ್ನು ಆಕರ್ಷಿಸಿತು. ಭದ್ರಬಾಹು ಮುನಿಗಳು ಇಲ್ಲಿಯೇ ಸಮಾಧಿ ಮರಣವನ್ನು ಹೊಂದಿ ಈ ಬೆಟ್ಟದ ಪಾವಿತ್ರ್ಯತೆಯನ್ನು ಹಿರಿಮೆಯನ್ನು ಹೆಚ್ಚಿಸಿದರು. ಅಲ್ಲದೆ ಅಧಿಕ ಸಂಖ್ಯೆಯಲ್ಲಿ ಭಕ್ತರನ್ನು ಬರಮಾಡಿಕೊಂಡರು. ಕ್ರಿ.ಶ. ೭ನೆಯ ಶತಮಾನದಿಂದ ಈ ಸ್ಥಳಕ್ಕೆ ತೀರ್ಥಗಿರಿ, ರಿಷಿಗಿರಿ ಎಂದು ಕರೆದಿದ್ದರೂ ಸಹಿತ "ಕಟವಪ್ರ" ಎಂದು ಕರೆದು ಈ ಹೆಸರೇ ಹೆಚ್ಚು ಬಳಕೆಯಲ್ಲಿದೆ. ೭ನೆಯ ಶತಮಾನದ ಶಾಸನದಲ್ಲಿ "ವೆಳ್ಗೊಳ ಅದ್ರಿ" ಎಂದು ಕರೆದಿದೆ.[೨೧] "ಜೈನ ಕೇಂದ್ರವಾಗಿ ಪ್ರಸಿದ್ಧವಾದ ಮೇಲೆ ಇದು ಶ್ರವಣಬೆಳ್ಗೊಳ ಎಂಬ ಹೆಸರನ್ನು ಪಡೆದಿರಬಹುದು[೨೨] ಎಂದು ಡಾ.ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ.

ಶಾಸನಗಳಲ್ಲಿ (ಶ್ರವಣ ಬೆಳ್ಗೊಳದ ಶಾಸನ) ಕೊಪ್ಪಳಕ್ಕೆ ಕುಪಣ, ಕೊಪಣ ಎಂಬ ಹೆಸರುಗಳಿವೆ. ಅಲ್ಲದೆ ಕುಪಿನತೀಥರ, ಮಹಾತೀರ್ಥ, ಆದಿತೀರ್ಥವೆಂದು ಕೊಪ್ಪಳವು ಪ್ರಸಿದ್ಧವಾಗಿತ್ತು. ಕನ್ನಡ ಸಾಹಿತ್ಯದಲ್ಲಿ

ಕವಿರಾಜಮಾರ್ಗಕಾರನು ತಿರುಳ್ ಕನ್ನಡದ ಪ್ರದೇಶಗಳಲ್ಲಿ "ವಿದಿತ ಮಹಾ ಕೊಪಣ ನಗರ" ಎಂದು ಕೊಪ್ಪಳವನ್ನು ಕೀರ್ತಿಸಿದ್ದಾನೆ.[೨೩] ಗಂಗರು ಹೆಚ್ಚಿನ ಗೌರವ ಪ್ರೋತ್ಸಾಹಗಳನ್ನು ಜೈನ ಧರ್ಮಕ್ಕೆ ನೀಡಿದ್ದಾರೆ. ದಂಡನಾಯಕನಾಗಿರುವ ಗಂಗರಾಜನು ಸಿಂಹನಂದಿಯ ನೆರವಿನಿಂದ ಗಂಗರಾಜ್ಯ ಸ್ಥಾಪನೆಯನ್ನು ಮಾಡಿ, ಅನೇಕ ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ; ಅನೇಕ ಬಸದಿಗಳನ್ನು ಜಿನಾಲಯಗಳನ್ನು ಹೊಸದಾಗಿ ಕಟ್ಟಿಸಿರುವುದರಿಂದ ಶಾಸನದಲ್ಲಿ "ಗಂಗವಾಡಿ ತೊಂಬತ್ತರೆಸಾಸಿರಂ ಕೊಪಣಮಾದುದು"[೨೪] ಕೊಪ್ಪಳವು ಗುಡ್ಡ ಬೆಟ್ಟಗಳಿಂದ ಕೂಡಿದ ಪ್ರದೇಶವಾಗಿದೆ. ಕೊಪ್ಪಳದ ಪಶ್ಚಿಮಕ್ಕೆ ಪಾಲ್ಕಿಗುಂಡು ಎನ್ನುವ ಬೆಟ್ಟಗಳ ಸಾಲು ಇವೆ. ಈ ಪಾಲ್ಕಿಗುಂಡು ಬೆಟ್ಟದ ಮೇಲೆ ಅಶೋಕನ ಶಾಸನವಿದೆ. ಈ ಪಾಲ್ಕಿಗುಂಡು ಬೆಟ್ಟದ ಮೇಲೆ ಅಶೋಕನ ಶಾಸನವಿದೆ. ಶಾಸನದ ತೀರ ಹತ್ತಿರದಲ್ಲಿ ಒಂದು ಜತೆ ಪಾದ ಚಿಹ್ನೆಗಳಿವೆ ಅವುಗಳ ಬಳಿಯಿರುವ

"ಜಟಾಸಿಂಹನಂದಿ ಆಚಾರ್ಯರ - - - - - ಪದವ

ಛಾಮಯ್ಯ ಮಾಡಿಸಿದಂ"- - - - - ಎಂಬ ಶಾಸನವಿದೆ. ಛಾಮವ್ಯ ಎಂಬುವನು ಜಟಾಸಿಂಹನಂದಿ ಆಚಾರ್ಯರ ಪಾದುಕೆಗಳನ್ನು ಕೊರೆಯಿಸಿದನೆಂದು ತಿಳಿದುಬರುತ್ತದೆ. ಹಿರಿಯ ವ್ಯಕ್ತಿಗಳು ಮೃತ ಹೊಂದಿದ ಸ್ಥಳ ಅಥವಾ ಪಾರ್ಥಿವ ಶರೀರವನ್ನು ದಹಿಸಿದ ಇಲ್ಲವೆ ಸಮಾಧಿ ಮಾಡಿದ ಸ್ಥಳಗಳಲ್ಲಿ ಪಾದಚಿಹ್ನೆಗಳನ್ನು ಕೊರೆಯಿಸಿ ಸ್ಮಾರಕವನ್ನು ಇಡುವುದು ಜೈನ ಧರ್ಮದ ಒಂದು ಪದ್ಧತಿಯಾಗಿದೆ.

ಜಟಾಸಿಂಹನಂದಿಯು ಕವಿಯೂ ಆಗಿದ್ದನೆಂದು ಅವನ ಕೃತಿ "ವರಾಂಗಚರಿತೆ" ಕೃತಿಯಿಂದ ತಿಳಿದುಬರುತ್ತದೆ. ಈತನು ದೇಶ ಪ್ರದೇಶಗಳನ್ನು ಸಂಚರಿಸಿ, ಧಾರ್ಮಿಕ ಜೀವನವನ್ನು ನಡೆಸಿ ಸಲ್ಲೇಖನ ವ್ರತದಂತೆ ಕೊಪ್ಪಳದಲ್ಲಿ ಮರಣ ಹೊಂದಿದನು. ಮುಳಗುಂದದ ಕುಮಾರ ಸೇನ ಮುನಿಗಳ ಜ್ಞಾನೋದಯದ ವಿಷಯವನ್ನು ಚಾವುಂಡರಾಯ "ತ್ರಿಷಷ್ಟಿ ಲಕ್ಷಣ ಮಹಾ ಪುರಾಣ" ಪೀಠಿಕಾ ಭಾಗದಲ್ಲಿ ಉಲ್ಲೇಖಿಸಿದ್ದಾನೆ.

ಸರ್ವನಂದಿ ಮನಿಯ ಜೈನ ಧರ್ಮದ ಪರಿಪಾಲನೆಯ ವಿಷಯವನ್ನು ಚಂದ್ರಾಮಬಂಡೆಯ ಶಾಸನ ತಿಳಿಸುತ್ತದೆ.[೨೫] ದೇವೇಂದ್ರ ಕೀರ್ತಿ ಮುನಿಗಳೂ ಇಲ್ಲಿಯೇ ಸಲ್ಲೇಖನ ವ್ರತದಿಂದ ಸಮಾಧಿ ಮರಣವನ್ನು ಹೊಂದಿದ್ದನ್ನು, ಅವರ ಸ್ಮರಣಾರ್ಥ ಅವರ ಶಿಷ್ಯನು (ವರ್ಧಮಾನದೇವರು) ಪಾದುಕೆಗಳನ್ನು ಕೆತ್ತಿಸಿದ್ದನ್ನು ಈ ಶಾಸನವು ತಿಳಿಸುತ್ತದೆ.[೨೬]

ಕೊಪ್ಪಳವು ಜೈನ ಧರ್ಮದವರ ಪುಣ್ಯ ಕ್ಷೇತ್ರವಾಗಿದ್ದು; ಆಚಾರ್ಯರು, ಮುನಿಪುಂಗವರು ಸನ್ಯಾಸ ಮರಣಕ್ಕಾಗಿ ಬೇರೆ ಬೇರೆ ಊರುಗಳಿಂದ ಕೊಪ್ಪಳಕ್ಕೆ ಆಗಮಿಸುತ್ತಿರುವುದಾಗಿ ಶಾಸನ ಮತ್ತು ಸ್ಮಾರಕಗಳಿಂದ ತಿಳಿದು ಬರುತ್ತದೆ. ಕೊಪ್ಪಳವು ಪ್ರಮುಖವಾದ ಜೈನ ಕೇಂದ್ರವಾಗುವುದಕ್ಕಿಂತ ಮುಂಚೆ ಒಂದು ಬೌದ್ಧ ಕೇಂದ್ರವಾಗಿತ್ತು. ಇದಕ್ಕೆ ಸಾಕ್ಷಿಯಾಗಿ ಗವಿಮಠ, ಪಾಲ್ಕಿಗುಂಡಿನಲ್ಲಿ ಅಶೋಕನ ಎರಡು ಶಾಸನಗಳು ದೊರೆತಿವೆ.[೨೭] ಅಶೋಕನ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿದ್ದು, ಪ್ರಾಕೃತ ಭಾಷೆಯಲ್ಲಿ ಅಶೋಕನು ನೀಡಿದ ಹಿತೋಪದೇಶಗಳಿಂದ

ಕೂಡಿವೆ. ೭ನೆಯ ಶತಮಾನದಲ್ಲಿ ಭಾರತದ ಪ್ರವಾಸವನ್ನು ಕೈಗೊಂಡ ಚೀನಿ ಯಾತ್ರಿಕ ಹ್ಯೂಯೆನ್ ತ್ಸಾಂಗನು ಬೌದ್ಧರ ದೊಡ್ಡ ಕೇಂದ್ರವೇ "ಕೊಂಕಿನಪುಲೊ" ಎಂದು ಹೇಳಿದ್ದಾನೆ. ಈ "ಕೊಂಕಿನಪುಲೊ" ರಾಯಚೂರು ಜಿಲ್ಲೆಯ ಕೊಪ್ಪಳವೆಂದು ಗುರುತಿಸಲ್ಪಟ್ಟಿದೆ.[೨೮] ಈ ರೀತಿಯಾಗಿ ಕೊಪ್ಪಳವು ಕ್ರಿ.ಪೂ. ೩ನೆಯ ಶತಮಾನದವರೆಗೆ ಬೌದ್ಧ ಧರ್ಮ ಕೇಂದ್ರವಾಗಿರುವ ಸಾಧ್ಯತೆಯಿದೆ. ೭ನೆಯ ಶತಮಾನದಿಂದ ಜೈನ ಧರ್ಮ ಕೇಂದ್ರವಾಗಿದೆ. ಇದು ೧೬ನೆಯ ಶತಮಾನದವರೆಗೂ ಮುಂದುವರೆದಿರುವುದನ್ನು ಇತಿಹಾಸ ಮತ್ತು ಶಾಸನಗಳು ಹೇಳುತ್ತವೆ.

ಈ ಎರಡೂ ಕೇಂದ್ರಗಳಲ್ಲಿ ಅನೇಕ ಬಸದಿಗಳು, ಶಾಸನಗಳು ಮತ್ತು ಮುನಿಪರಂಪರೆಯನ್ನು ತೋರುವ ಅನೇಕ ನಿಸಿಧಿ ಶಾಸನಗಳು ಇವೆ.

ಜೈನ ಮುನಿಗಳು ಅತ್ಯಂತ ಕಠಿಣವಾದ ವ್ರತನೇಮಗಳನ್ನು ಪರಿಪಾಲಿಸುತ್ತಿದ್ದರು. ಆ ನೇಮಗಳೇ ಅವರ ಗುಣಗಳಾಗಿದ್ದವು. ಆದುದರಿಂದಲೇ ರನ್ನ ಕವಿಯು ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ವರ್ಣಿಸುವಾಗ "ಅಜಿತ ಮುನಿಪತಿಯ ಗುಣಾವಳಿ"ಯನ್ನೇ ಅವಳ ವ್ಯಕ್ತಿತ್ವಕ್ಕೆ ಉಪಮೆಯಾಗಿ ಬಳಸಿಕೊಂಡಿದ್ದಾನೆ.[೨೯]

ಶ್ರೀ ಪಾಲದೇವ ಎಂಬ ಮುನಿಯ ಗುಣಾವಳಿಗಳನ್ನು ೧೨ನೆಯ ಶತಮಾನದ ಶಾಸನವು[೩೦] ಈ ರೀತಿಯಾಗಿ ಹೊಗಳಿದೆ. "ಜಗತ್ತಿನ ನೈರ್ಮಲ್ಯಕ್ಕಾಗಿ ಅವನು ಕೊಳಕ; ತ್ರೈಲೋಕ್ಯ ರಾಜ್ಯಶ್ರೀಯ ಲಾಭಕ್ಕಾಗಿ ಅವನು ಬಡವ; ಜಗತ್ತಿನ ತಾಪಹರಣಕ್ಕಾಗಿ ಬೆಂಕಿಯ ಮಧ್ಯ ತಪಸ್ವಿ." ಮಹಾಕವಿ ಪಂಪನು ಆದಿಪುರಾಣದಲ್ಲಿ ಹೇಳುವ ಜೈನ ಮುನಿಗಳ ಗುಣಗಳನ್ನು ಹೀಗೆ ಸಂಗ್ರಹಿಸಬಹುದು. "ಜೀವನದಲ್ಲಿ ಅತೀಂದ್ರಿಯ ಸುಖವೇ ಅತ್ಯಂತ ಮಹತ್ವಪೂರ್ಣವಾದದ್ದು. ಆ ಸುಖವನ್ನು ಪಡೆಯುವುದಕ್ಕಾಗಿ ದಿಗಂಬರ ಸನ್ಯಾಸಿಯು ಎಲ್ಲವನ್ನು ತ್ಯಾಗ ಮಾಡಿ ಅತ್ಯಂತ ಸಂಯಮವಾದ ಜೀವನವನ್ನು ಕಳೆಯಬೇಕಾಗುತ್ತದೆ. ಜೈನ ಮುನಿಯು ಪ್ರಾಣಿ ಹಿಂಸೆಯನ್ನು ಮಾಡುವುದಿಲ್ಲ. ಇದು ಅವನ ಒಂದು ಪರಮ ಗುಣ. ಈ ಗುಣವನ್ನು ಅವನು ಎಷ್ಟು ಕಾಪಾಡುತ್ತಾನೆಂದರೆ ಪ್ರಾಣಿಗಳಿಗೆ ಹಿಂಸೆಯಾದೀತೆಂದು ಸ್ನಾನವನ್ನೇ ಮಾಡುವುದಿಲ್ಲ."[೩೧]

ಜೈನ ಮುನಿ "ಮಲಧಾರಿ ದೇವ"ನನ್ನು ಶಾಸನಗಳಲ್ಲಿ ಕೊಂಡಾಡಿದ್ದು ಸ್ನಾನ ಮಾಡದೇ ಅಹಿಂಸೆಯನ್ನು ಕಾಪಾಡಿದ್ದಕ್ಕಾಗಿ. ಅದು ಹೀಗೆ "ಯಾವಾಗಲೂ ತಪೋಮಗ್ನನಾಗಿರುವ ಮಲಧಾರಿದೇವ ಬಾಗಿಲಿನಿಂದ ಈಚೆಗೆ ಬರುವುದೇ ಇಲ್ಲ. ಅವನು ಮೈಯನ್ನು ಒಮ್ಮೆಯೂ ತುರಿಸಿಕೊಳ್ಳುವುದಿಲ್ಲ. ನಿದ್ದೆ ಬಂದರೂ ಮಲಗುವುದಿಲ್ಲ. ಸ್ನಾನ ಮಾಡದೇ ಇರುವ ಕಾರಣದಿಂದಾಗಿ ಮೈಮೇಲೆ ಸಾಕಷ್ಟು ಹೊಲಸು ತುಂಬಿಕೊಂಡು ಅದು ಕವಚದಂತೆ ಇದ್ದಿತು.[೩೨] ಈ ಮಲಧಾರಿದೇವ ಎನ್ನುವ ಜೈನ ಮುನಿ ಅತ್ಯಂತ ಕಠೋರವಾದ ದಿಗಂಬರ ಸನ್ಯಾಸಿಯಾಗಿದ್ದರು. ಹೀಗೆ ಅಹಿಂಸೆ ಜೈನ ಮುನಿಗಳ ಗುಣಾವಳಿಗಳಲ್ಲಿ ಒಂದು. ಈ ಮುನಿಗಳ ಗುಣಾವಳಿಗಳು ಜನಸಾಮಾನ್ಯರಿಗೆ ವಿಚಿತ್ರವೆನಿಸುತ್ತವೆ. ಆದರೆ ಅವುಗಳನ್ನು ಬಲವಾಗಿ ಶ್ರದ್ಧಾ ಭಕ್ತಿಗಳಿಂದ ನಂಬಿ ಆಚರಣೆಯಲ್ಲಿ ತರುತ್ತಿದ್ದ ಮುನಿಗಳು ಅಪಾರವಾದ ವಿದ್ವತ್ತನ್ನು ಪಡೆದುಕೊಂಡವರಾಗಿದ್ದರು. ಅವರು ಹೊಟ್ಟೆ ತುಂಬ ಊಟ ಮಾಡುತ್ತಿದ್ದಿಲ್ಲ.

ಭಿಕ್ಷಾಟನೆಯಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಇಂತಹ ಮುನಿಗಳನ್ನು ಶಾಸನಗಳಲ್ಲಿ ತ್ರಿಮುಷ್ಟಿ ಮುನೀಂದ್ರ ಎಂದು ಕರೆದಿದ್ದಾರೆ.[೩೩] ಅತ್ಯಂತ ಕಠಿಣವಾದ ನಿಯಮಗಳ ಪರಿಪಾಲನೆಯನ್ನು ಜೈನ ಮುನಿಗಳು ಆಚರಿಸುತ್ತಿದ್ದರು. ಶಾಕಾಹಾರವನ್ನಷ್ಟೇ ತೆಗೆದುಕೊಳ್ಳಬೇಕೆನ್ನುವುದು ಜೈನ ಧರ್ಮದ ತತ್ವಗಳಲ್ಲಿ ಒಂದು. ಬ್ರಹ್ಮಚರ್ಯ ವಿಷಯದಲ್ಲಿಯೂ ಸಹಿತ ಅತ್ಯಂತ ಕಠಿಣವಾದ ನೀತಿ ನಿಯಮಗಳ ಪಾಲನೆಯನ್ನು ಮುನಿಶ್ರೇಷ್ಠರು ಮಾಡುತ್ತಿದ್ದರು.

ಇವರ ಗುಣಾವಳಿಗಳನ್ನು ಶಾಸನವೊಂದು ಉಪಮಾತ್ಮಕವಾಗಿ ಬಣ್ಣಿಸುತ್ತದೆ. ಜ್ಞಾನ, ತಪಸ್ಸು, ಕಠಿಣವಾದ ನಿಯಮಗಳ ಪರಿಪಾಲನೆಯಿಂದ ಮುನಿಗಳು ಅಲಂಕಾರರಹಿತರಾಗಿದ್ದರು. ನಗ್ನತೆಯೇ ಅವರ ಅಲಂಕಾರ, ಆಡುವ ಮಾತುಗಳೇ ಒಡವೆಗಳು. ಅವರ ಮನಸ್ಸೇ ರತ್ನಗಳನ್ನಿಟ್ಟಿರುವ ಕರಂಡಕ.[೩೪] ಕೂದಲನ್ನು ಕಿತ್ತುಕೊಂಡು, ಉಟ್ಟ ಬಟ್ಟೆಯನ್ನೇ ಬಿಟ್ಟು, ಸಹಜ ಕಾಮಾದಿ ಬಯಕೆಗಳನ್ನು ತ್ಯಜಿಸಿ, ಸಂಯಮಪೂರ್ಣವಾಗಿ ಬಾಳನ್ನು ಬಾಳಿದ ಜೈನ ಮುನಿಗಳ ಗುಣಗಳು ಅಚ್ಚರಿಯನ್ನು ಹುಟ್ಟಿಸುವಂತಹುದು. ಜೈನಮುನಿಗಳ ಇಂತಹ ಗುಣಾವಳಿಗಳೆಲ್ಲ ಅತ್ತಿಮಬ್ಬೆಯ ವ್ಯಕ್ತಿತ್ವದಲ್ಲಿದ್ದವು ಎಂದು, ಕಣ್ಣಾರೆ ಕಂಡ ರನ್ನ ಕವಿ - - - - - ಮುನಿಪತಿಯ ಗುಣಾವಳಿಯಂತೆ ಎಂದು ಅತ್ತಿಮಬ್ಬೆಯ - ಗುಣ, ಇತಿಹಾಸ ಪವಿತ್ರವಾದದ್ದು ಎಂದು ಬಣ್ಣಿಸಿದ್ದಾನೆ.

ಜೈನ ಧರ್ಮದ ತತ್ವಗಳನ್ನು ಶ್ರದ್ಧಾ ಭಕ್ತಿಯಿಂದ ಆಚರಣೆಯಲ್ಲಿ ತರುವವರೇ ಪುರುಷ ಸನ್ಯಾಸಿಗಳು. ಅವರನ್ನು ಮುನಿ, ಆಚಾರ್ಯ, ಸವಣರು ಎಂದು ಕರೆಯುತ್ತಾರೆ. ಅದೇ ರೀತಿಯಾಗಿ ಸ್ತ್ರೀಯರು ಕಠೋರವಾದ ನಿಯಮದ ಪಾಲನೆಯನ್ನು ಮಾಡುತ್ತಿದ್ದರೆ ಅವರನ್ನು ಕಂತಿ ಎಂದು ಕರೆಯುತ್ತಿದ್ದರು. ಜೈನ ಧರ್ಮಾಚರಣೆಯ ಸಂಪ್ರದಾಯದಲ್ಲಿ ಸ್ತ್ರೀಯರಿಗೂ ಸಹಿತ ಸಾಕಷ್ಟು ಧಾರ್ಮಿಕ ಸ್ವಾತಂತ್ರವಿದ್ದರೂ ಅವರು ಪುರುಷರ ಹಾಗೆ ಮೋಕ್ಷಕ್ಕೆ ಅರ್ಹರಾಗುತ್ತಿದ್ದಿಲ್ಲ. ಆದರೆ ಮೋಕ್ಷವನ್ನು ಪಡೆದುಕೊಳ್ಳಲೇಬೇಕು ಎನ್ನುವರ ಹಂಬಲಕ್ಕೆ ಲಿಂಗಭೇದವಿಲ್ಲ. ಅವರ ಮೋಕ್ಷದ ಹಂಬಲವೇ ಅವರನ್ನು ಧರ್ಮದ ಕಡೆಗೆ ಕೊಂಡೊಯ್ದಿದೆ. ಪಂಪನ ಆದಿಪುರಾಣದಲ್ಲೇ ಜೈನ ಸನ್ಯಾಸಿನಿಯರ ವಿಷಯ ತಿಳಿದುಬರುತ್ತದೆ. ಆದಿವೃಷಭನ ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಮೂರು ಲಕ್ಷ ಸನ್ಯಾಸಿನಿ ಶಿಷ್ಯರಿದ್ದರಂತೆ.[೩೫]

ಸಂಸಾರದಲ್ಲಿ ಅನಿತ್ಯತೆಯನ್ನು ಕಂಡ ಯಾವ ಮಹಿಳೆಯಾದರೂ ಕಂತಿಯಾಗುವ ನಿರ್ಧಾರ ತೆಗೆದುಕೊಳ್ಳುತ್ತಿದ್ದಳು. ಜೈನ ಮಹಿಳೆಯರಲ್ಲಿ ಉನ್ನತವರ್ಗದವರಿರಲಿ ಅಥವಾ ಜನಸಾಮಾನ್ಯರಿರಲಿ ಯಾರಾದರೂ ಕಂತಿಯಾಗಬಹುದಿತ್ತು. ಕಂತಿಯನ್ನು ಅಜ್ಜಿ ಎಂದು ಕೂಡ ಕರೆಯುತ್ತಿದ್ದರು. ಕಂತಿ - ಅಜ್ಜಿಯರು ಬೇರೆ - ಬೇರೆ ಎಂದು ಪಿ.ಬಿ. ದೇಸಾಯಿಯವರು ಅಭಿಪ್ರಾಯಪಡುತ್ತಾರೆ. ಆದರೆ ಯಾವುದೇ ಶಾಸನ ಈ ವ್ಯತ್ಯಾಸದ ಕುರಿತಾಗಿ ಹೇಳಿಲ್ಲ.

ಸನ್ಯಾಸತ್ವ ಆಧ್ಯಾತ್ಮಿಕ ಜೀವನದ ಪಕ್ವ ಸ್ಥಿತಿ. ಜೈನ ಧರ್ಮದಲ್ಲಿ ಸಂಸಾರದಲ್ಲಿಯ ಅನಿತ್ಯತೆಯನ್ನು ಅರ್ಥಮಾಡಿಕೊಂಡು; ಸಂಸಾರವನ್ನು ಸ್ವಇಚ್ಛೆಯಿಂದ, ಸಂತೋಷದಿಂದ ತ್ಯಜಿಸಿ ಮನಸ್ಸನ್ನು ಶಾಶ್ವತ ಸುಖದ

ಕಡೆಗೆ ಒಯ್ಯುತ್ತಿದ್ದರು. ಇದಕ್ಕೋಸ್ಕರವೇ ಅಂತರಂಗ, ಬಹಿರಂಗ ಶುದ್ಧತೆಗಳನ್ನು ಕೈಗೊಳ್ಳುತ್ತಿದ್ದರು. ಕೇಶೋತ್ಪಾಟನೆಯಂಥ ಕಠಿಣವಾದ "ರೋಮವಿಮೋಚನ"ವನ್ನು ಕಂತಿಯರು ಮಾಡಬೇಕಾಗುತ್ತಿತ್ತು. ಶ್ವೇತ ವರ್ಣದ ಬಟ್ಟೆಯನ್ನು ಧರಿಸಿ ಸ್ನಾನ ಮಾಡದೆ ಕಠಿಣವಾದ ತಪಸ್ಸಿನಿಂದ ಕರ್ಮಕ್ಷಯ ಮಾಡಿಕೊಳ್ಳಬೇಕಾಗುತ್ತಿತ್ತು. ಈ ರೀತಿಯಾಗಿ ಜೈನ ಮಹಿಳೆಯರು ಸನ್ಯಾಸತ್ವವನ್ನು ಸ್ವೀಕರಿಸಿದ ನಂತರ ಅವರಿಗೆ ಕಂತಿ ಎಂಬ ವಿಶೇಷಣ ದೊರೆತಿದೆ.

ಹೀಗೆ ಸನ್ಯಾಸತ್ವವನ್ನು ಒಪ್ಪಿಕೊಂಡು ಕಂತಿಯರಾದ ಜೈನ ಮಹಿಳೆಯರು ಸಮಾಜೋದ್ಧಾರಕ ಕೆಲಸವನ್ನು ಮಾಡಿದ್ದಾರೆ. ಧರ್ಮದ ಮೂಲಕವೇ ಮೃತ್ಯುವನ್ನು ಹೊಂದಲು ಈ ಕಂತಿಯರು ಜೈನ ಧರ್ಮದ ನೇಮಾಚರಣೆಯಂತೆ ಸಮಾಧಿ ಮರಣವನ್ನು ಹೊಂದಿದ್ದಾರೆ.

ಸಂಸಾರವನ್ನು ತ್ಯಾಗ ಮಾಡಿ ಸದ್ಗತಿಯನ್ನು ಪಡೆದವರು ಕಂತಿಯರಾದರೆ; ಸಂಸಾರದಲ್ಲಿದ್ದುಕೊಂಡೇ ಸದ್ಗತಿಯನ್ನು ಪಡೆದುಕೊಂಡು ಜೈನ ಧರ್ಮದ ಕೀರ್ತಿಯನ್ನು ಪ್ರಸರಿಸಿದವರು ಶ್ರಾವಕಿಯರು. ಕಂತಿಯರಿಗೆ ಇರುವಷ್ಟು ಕಠಿಣವಾದ ತಪಸ್ಸು, ವ್ರತ, ನೇಮಾಚರಣೆಗಳು, ಶ್ರಾವಕಿಯರಿಗೆ ಇಲ್ಲದಿದ್ದರೂ ಹಲವಾರು ನೀತಿ ನಿಯಮಗಳನ್ನು ಅವರು ಪಾಲಿಸಲೇಬೇಕಾಗುತ್ತಿತ್ತು. ಇಂತಹ ಹೆಣ್ಣುಮಕ್ಕಳಲ್ಲಿ ಶ್ರೀಮಂತ ಮನೆತನದ ಹೆಣ್ಣುಮಕ್ಕಳು ಬಸದಿಯನ್ನು ಕಟ್ಟಿಸಿದರೆ, ಸಾಮಾನ್ಯ ಕುಟುಂಬದಿಂದ ಬಂದ ಹೆಣ್ಣುಮಕ್ಕಳು ದೀಪ, ಧೂಪ, ಹಣ ಸಹಾಯ, ಬಸದಿಯ ಜೀರ್ಣೋದ್ಧಾರ ಹೀಗೆ ಸಣ್ಣ ಪುಟ್ಟ ಧಾರ್ಮಿಕ ಕಾರ್ಯಗಳನ್ನು ಮಾಡಿದರು.

ಜೈನ ಧರ್ಮವನ್ನು ವಿಕಾಸಗೊಳಿಸುವಲ್ಲಿ ಬಸದಿಗಳ ಪಾತ್ರ ಅತ್ಯಂತ ಹಿರಿದು. ಬಸದಿ ನಿರ್ಮಾಣವು ಜೈನ ಧರ್ಮದ ಪುಣ್ಯ ಕಾರ್ಯದಲ್ಲಿ ಒಂದಾಗಿದೆ. ಬಸದಿಗಳ ನಿರ್ಮಾಣ ಅದರ ಮೇಲ್ವಿಚಾರಣೆ ಮೊದಲಾದ ವ್ಯವಸ್ಥೆಗಳ ನಿರ್ವಹಣೆಗೆ ದಾನ - ದತ್ತಿಗಳನ್ನು ನೀಡುವುದರ ಮೂಲಕ ಈ ಚಟುವಟಿಕೆ ವಿಕಾಸಗೊಂಡವು. ಬಸದಿಗಳ ನಿರ್ಮಾಣಕ್ಕೆ ಅರಸು ಮನೆತನದವರು, ಶ್ರೀಮಂತ ಇಲ್ಲವೆ ರಾಜ ಮನೆತನದ ಹೆಣ್ಣುಮಕ್ಕಳು ಪ್ರೋತ್ಸಾಹ ನೀಡತೊಡಗಿದರು.

ಅತ್ಯಂತ ಪ್ರಾಚೀನ ಕಾಲದಿಂದಲೇ ಕನ್ನಡ ನಾಡಿನಲ್ಲಿ ಬಸದಿಗಳು ನಿರ್ಮಾಣಗೊಂಡಿವೆ. ತೀರ ಪ್ರಾಚೀನವಾದ ಬಸದಿ ನಿರ್ಮಾಣದ ವಿಷಯ ಗುಡಿಗೆರೆ ಶಾಸನದಲ್ಲಿ ದೊರೆಯುತ್ತದೆ.[೩೬]

ಬಾದಾಮಿ ಚಾಲುಕ್ಯ ೩ನೆಯ ವಿಜಯಾದಿತ್ಯನ ಸಹೋದರಿಯಾಗಿರುವ ಕುಂಕುಮ ಮಹಾದೇವಿಯು ಪುಲಿಗೆರಿಯಲ್ಲಿ ಬಸದಿಯನ್ನು ಕಟ್ಟಿಸಿದ್ದಾಳೆ. ಬಸದಿಯ ಹೆಸರು ಆನೆಸಜ್ಜೆ ಬಸದಿ ಇಲ್ಲಿಂದ ಆರಂಭವಾಗಿ ಬಸದಿ ನಿರ್ಮಾಣ ಕಾರ್ಯ ಮುಂದುವರೆಯಿತು. ತಮ್ಮ ಪೂರ್ವಜರು ಹಾಕಿಕೊಟ್ಟ ಧರ್ಮ ಪರಂಪರೆಯ ಮಾರ್ಗವನ್ನು ಜೈನ ಧರ್ಮದ ಮಹಿಳೆಯರು ಮುಂದುವರೆಸಿಕೊಂಡು ಬಂದಿದ್ದಾರೆ. ಇಂತಹ ಸ್ವತಂತ್ರ ಅನ್ಯಧರ್ಮದ ಮಹಿಳೆಯರಿಗೆ ದೊರೆತಿಲ್ಲದಿರುವದನ್ನು ಇತಿಹಾಸ ಸ್ಪಷ್ಟಪಡಿಸುತ್ತದೆ.

ಕಂತಿ ಇಲ್ಲವೆ ಶ್ರಾವಕಿಯರು ಜೈನ ಧರ್ಮದ ಯಾವುದೇ ನೀತಿ ನಿಯಮಗಳ ಅರಿವನ್ನು ಯೋಗ್ಯ ಗುರುಗಳಿಂದಲೇ ಅರಿತುಕೊಳ್ಳುತ್ತಿದ್ದರು.

ದಾನಚಿಂತಾಮಣಿ ಅತ್ತಿಮಬ್ಬೆ ಕಂತಿ ಅಲ್ಲದಿದ್ದರೂ ಜೈನ ಧರ್ಮದ ಕಂತಿ, ಶ್ರಾವಕಿಯರ ಸಾಲಿನಲ್ಲಿ ಅತ್ತಿಮಬ್ಬೆಯದು ಎದ್ದು ಕಾಣುವ ಹೆಸರು. ಈ ಅತ್ತಿಮಬ್ಬೆಗೆ ಗುರುಗಳಿದ್ದರೆ? ಇದ್ದರೆ ಅವರ ಹೆಸರುಗಳೇನು? ಅವರ ವಿವರಗಳೇನು? ಎನ್ನುವ ಪ್ರಶ್ನೆಗೆ ಲಕ್ಕುಂಡಿಯ ಶಾಸನದಲ್ಲಿ ಉತ್ತರ ಸಿಗುತ್ತದೆ. - - - - - ಮಹಾಭಿಷೇಕ ಮಹಾದಾನ ಧರಣಾನನ್ತರಂ ತಮ್ಮ ಗುರುಗಳು ಸೂರಸ್ತಗಣದ ಕಾರೂರ್ಗ್ಗಚ್ಛದ ಅರ್ಹನನ್ದಿಪಣ್ಡಿತದ್ದೇವರ್ಗ್ಗೆ ಶ್ರೀಲೊಕ್ಕಿಗುಣ್ಡಿಯೊಳ್ಬಸದಿಯಂ - - - - -[೩೭] ಲಕ್ಕುಂಡಿ ಶಾಸನದ ಈ ಸಾಲುಗಳಿಂದ ತಿಳಿದು ಬರುವ ಅಂಶವೇನೆಂದರೆ ಅತ್ತಿಮಬ್ಬೆಯ ಗುರುಗಳು ಸೂರಸ್ತಗಣದ ಕೌರೂರುಗಚ್ಛದ ಅರ್ಹನಂದಿ ಪಂಡಿತದೇವರು ಎಂಬುವರು. ಕೌರೂರು ಎನ್ನುವುದು ಯಾಪನೀಯ ಶಾಖೆಗೆ ಸೇರಿದ ಒಂದು ಪ್ರಬಲವಾದ ಗಣವಾಗಿದೆ.[೩೮]

ಅತ್ತಿಮಬ್ಬೆಯು ಯಾಪನೀಯ ಗುರುಗಳ ಶಿಷ್ಯಳಾಗಿದ್ದಳು. ಅವಳು ಬಾಲ್ಯಾವಸ್ಥೆಯಲ್ಲಿರುವಾಗಲೇ ಕಾಣೂರ್ಗಣ ಪರಂಪರೆಯ ಜಿನಚಂದ್ರಾಚಾರ್ಯರು ಗುರುಗಳಾಗಿದ್ದರು. ಈ ವಿಷಯವನ್ನು ಪೊನ್ನ ಕವಿಯು ಶಾಂತಿ ಪುರಾಣದಲ್ಲಿ ಹೇಳಿದ್ದಾನೆ. ಶಾಂತಿಪುರಾಣದ ಪ್ರಥಮ ಮತ್ತು ಕೊನೆಯ ಆಶ್ವಾಸಗಳಲ್ಲಿ ಜಿನಚಂದ್ರಮುನಿಗಳ ಪ್ರಸ್ತಾಪವನ್ನು ಸುಮಾರು ಪದ್ಯಗಳಲ್ಲಿ ಹೇಳಿದ್ದಾನೆ.

ಸೊರಟೂರಿನ ಶಾಸನದಲ್ಲಿರುವ ಪದ್ಯವು ಜೈನಧರ್ಮದ ಸೂರಸ್ಥಗಣದ ಕುರಿತಾಗಿ ಇದೆ. ಈ ಶಾಸನಪದ್ಯವು ಯಾಪನೀಯ ಸಂಘದಲ್ಲಿರುವ ಕೌರೂರುಗಚ್ಛವೂ ಸಹ ತುಂಬ ಪ್ರಸಿದ್ಧಿಯನ್ನು, ಮನ್ನಣೆಯನ್ನೂ ಪಡೆದುಕೊಂಡಿತ್ತು ಎನ್ನುವುದನ್ನು ಶಾಸನವು ಉಲ್ಲೇಖಿಸಿದೆ.[೩೯]

ಲಕ್ಕುಂಡಿ ಸಮೀಪ ಈಗಲೂ ಕೌಲೂರು ಎಂಬ ಹಳ್ಳಿಯಿದೆ. ಶಾಸನೋಕ್ತ ಕೌರೂರು ಈ ಕೌಲೂರೇ ಎಂದು ಹಂಪನಾ ಅಭಿಪ್ರಾಯಪಟ್ಟಿದ್ದಾರೆ.[೪೦]

ಲಕ್ಕುಂಡಿ ಶಾಸನದಿಂದ ಅತ್ತಿಮಬ್ಬೆಯ ವಿಷಯವಾಗಿ ತಿಳಿದು ಬರುವ ಅಂಶಗಳೆಂದರೆ ಅತ್ತಿಮಬ್ಬೆ ಬಾಲ್ಯದಲ್ಲಿದ್ದಾಗ ಜಿನಚಂದ್ರಾಚಾರ್ಯರು ಇವಳ ಗುರುಗಳಾಗಿದ್ದರು. ಮುಪ್ಪಿನಲ್ಲಿ ಅರ್ಹನಂದಿ ಆಚಾರ್ಯರು ಗುರುಗಳಾಗಿ ಅತ್ತಿಮಬ್ಬೆಗೆ ಆಶೀರ್ವದಿಸಿದ್ದರು.[೪೧]

ಶಾಸನಗಳಿಂದಲೇ ಅತ್ತಿಮಬ್ಬೆಯ ಗುರುಗಳಾದ ಅರ್ಹನಂದಿ ಮುನೀಂದ್ರ ಮತ್ತು ಅವರ ಗುರು ಶಿಷ್ಯ ಪರಂಪರೆಯ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ. ಹುನುಗುಂದದ ಶಾಸನವು ಈ ವಿಷಯವನ್ನು ವಿವರವಾಗಿ ದಾಖಲಿಸಿದೆ.[೪೨] ಸೊರಟೂರು ಶಾಸನದಲ್ಲಿಯೂ ಈ ಗುರು ಪರಂಪರೆಯ ವಿಷಯವನ್ನು ಹೇಳಿದೆ.[೪೩] ಎರಡೂ ಶಾಸನಗಳು ಹೇಳಿರುವ ಗುರುಪರಂಪರೆಯನ್ನು ಹೀಗೆ ಸಂಗ್ರಹಿಸಬಹುದು.

ಹುನಗುಂದದ ಮಧ್ಯದಲ್ಲಿರುವ ಅರಸರ ಬಸದಿ

↓

ಮೂಲಸಂಘದ ಸೂರಸ್ತಗಣದ ಶ್ರೀ ಚಿತ್ರಕೂಟಾನ್ವಯದ ಕನಕನಂದಿ ಭಟ್ಟಾರಕರು

↓

ಉತ್ತರಾ ಸಂಘದ ಭಟ್ಟಾರಕರು

↓

ಭಾಸ್ಕರನಂದಿ ಪಂಡಿತ ದೇವರು

↓

ಅರುಹಣಂದಿ ಭಟ್ಟಾರಕರು

↓

ಆಚಾರ್ಯಪಂಡಿತರು

ಇದೇ ಗುರುಪರಂಪರೆಯನ್ನು ಸೊರಟೂರು ಶಾಸನವು ಸಮರ್ಥಿಸಿದೆ.[೪೪]

ಭೂಭಾಗದಲ್ಲಿ ಸುಪ್ರಸಿದ್ಧವಾದ "ಸೂರಸ್ತ ಗಣಂ" - ದ

ಶ್ರೀ ಚಿತ್ರ ಕೂಟಾನ್ವಯದಲ್ಲಿ, → ಸಕಳಚಂದ್ರಮುನೀಂದ್ರ, ರಾವಣನ್ದಿಸಿದ್ಧಾನ್ತ ಮುನಿಶ್ವರ ಕನಕಣನ್ದಿಸೈದ್ಧಾನ್ತಿ ಮುನಿಗಳು

↓

ಸಿರಿಣಂದಿ ಪಂಡಿತದೇವರು (ಶ್ರೀನಂದಿ ಭಟ್ಟಾರಕ)

ಸಿರಿಣಂದಿ ಪಂಡಿತದೇವರ ಸಹಧರ್ಮೀಯರೇ ಅರುಹಣಂದಿ ಭಟ್ಟಾರಕರು.

ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಜಿನಾಲಯವನ್ನು ನಿರ್ಮಿಸಿ ಒಪ್ಪಿಸಿದ್ದು ಇದೇ "ಅರ್ಹನನ್ದಿ ಪಣ್ಡಿತದ್ದೇವರ್ಗ್ಗೆ"[೪೫]

ಶ್ರಾವಕಿಯಾಗಿರುವ ಅತ್ತಿಮಬ್ಬೆಯ ಪೂರ್ವಜರ ಗುರುಪರಂಪರೆಯು ಸಹಿತ ಕಾಣೂರ್ಗಣ ಪರಂಪರೆಯವರೇ ಆಗಿರುವುದನ್ನು ಪೊನ್ನ ಕವಿ ನಿಖರವಾಗಿ ಶಾಂತಿ ಪುರಾಣದಲ್ಲಿ ಹೇಳಿದ್ದಾನೆ.[೪೬]

ಅತ್ತಿಮಬ್ಬೆಯ ಗುರುಗಳು, ಅವಳು ಅಜ್ಜಂದಿರ ಗುರುಪರಂಪರೆಯವರೇ ಆಗಿದ್ದರು. ಇಂತಹ ಪ್ರಖ್ಯಾತ ಗುರು ಪರಂಪರೆ ಅವಳಿಗಿದ್ದುದರಿಂದಲೇ ಜೀವನದಲ್ಲಿ ದುರಂತ ಸಂಭವಿಸಿದಾಗ, ಸರಿಯಾದ ನಿರ್ಧಾರವನ್ನು ಅತ್ತಿಮಬ್ಬೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು.

ಕರ್ನಾಟಕದ ಇತಿಹಾಸವನ್ನು ನೋಡಿದಾಗ ರಾಷ್ಟ್ರಕೂಟರು ಅಗ್ರಮಾನ್ಯ ಅರಸು ಮನೆತನದವರೆಂದು ತಿಳಿದು ಬರುತ್ತದೆ. ಈ ರಾಜವಂಶದ ಸುಪ್ರಸಿದ್ಧ ಚಕ್ರವರ್ತಿಯಾಗಿರುವ ಮೂರನೆಯ ಕೃಷ್ಣನ - ಆಡಳಿತದಲ್ಲಿ ಹಿರಿಯ ಅಧಿಕಾರಿಗಳಾಗಿದ್ದವರ ಮನೆಯಲ್ಲಿ ಅತ್ತಿಮಬ್ಬೆ ಹುಟ್ಟಿದ್ದು.

[illegible]

ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವನ್ನು ನೆಲೆಗೊಳಿಸಿದ ಇಮ್ಮಡಿ ತೈಲಪನ ಬಲಗೈ ಹಾಗೆ ಇದ್ದವನು - ಮಂತ್ರಿ ಧಲ್ಲಪ. ಸಮರವೀರ, ಮುತ್ಸದ್ದಿ, ಕಟಕಾಚಾರ್ಯನೆನಿಸಿದ ಧಲ್ಲಪಯ್ಯನ ಮಗ ನಾಗದೇವನು ಕಲಿ; ಸ್ವಸಾಮರ್ಥ್ಯದಿಂದಲೇ ಚಾಲುಕ್ಯರ ಚಮೂಪತಿಯಾಗಿದ್ದವನು.[೪೭]

ಅತ್ತಿಮಬ್ಬೆ ರಾಷ್ಟ್ರಕೂಟ ರಾಜವಂಶದ ಹಿರಿಯ ಅಧಿಕಾರಿಗಳ ಮನೆಯಲ್ಲಿ ಹುಟ್ಟಿದರೆ, ಕಲ್ಯಾಣ ಚಾಲುಕ್ಯರ ಮಂತ್ರಿಗಳ ಮನೆಯನ್ನು ಮೆಟ್ಟಿದಳು. ಶ್ರೀಮಂತ, ಸಾಹಿತ್ಯ, ಸಾಹಸ, ಸಂಸ್ಕೃತಿಗಳಿಗೆ ಆವಾಸಸ್ಥಾನವಾಗಿರುವ, ಪಂಡಿತರಿಗೆ, ದೈವಭಕ್ತರಿಗೆ, ಆಶ್ರಯ ಕೊಡುವ ಪ್ರತಿಷ್ಠಿತ ಕುಟುಂಬದಲ್ಲಿ ಹುಟ್ಟಿ ಬೆಳೆದರೆ; ಮದುವೆಯಾಗಿ ಬಾಳಿದ್ದು ಕೂಡ ಅಂತಹದೇ ಪ್ರತಿಷ್ಠಿತ ಮನೆತನವೊಂದರಲ್ಲಿ ಚಾಲುಕ್ಯ ಕಟಕಾಚಾರ್ಯನೆನಿಸಿದ ಧಲ್ಲಪಯ್ಯನು ಶಾಸನದಲ್ಲಿ ವಿವೇಕ ಬೃಹಸ್ಪತಿ, ಸಭಾಸಂವಾದ ಚತುರ, ಎಂಬೆಲ್ಲ ವಿಶೇಷಣಗಳಿಂದ ಬಣ್ಣಿಸಿಕೊಂಡಿದ್ದಾನೆ. ಕರ್ನಾಟಕದಲ್ಲಿಯೇ ಹೆಗ್ಗಳಿಕೆಗೆ ಕಾರಣನಾಗಿದ್ದ ಧಲ್ಲಪನ ಮಗನೇನೂ ಕಡಿಮೆಯವನಲ್ಲ. ರಣೋತ್ಸಾಹಿಯಾಗಿರುವ ಇವನು ಚಾಲುಕ್ಯ ಪಡೆಯ ಸೇನಾಪತಿ ರನ್ನನ ಅಜಿತಪುರಾಣದಲ್ಲಿ ಮತ್ತು ಲಕ್ಕುಂಡಿಯ ಶಾಸನಗಳಲ್ಲಿ ನಾಗದೇವನ ಬಗೆಗೆ ಹಲವಾರು ಮಾಹಿತಿಗಳು ದೊರೆಯುತ್ತವೆ. ವಾಜಿಕುಳತಿಳಕನು, ತೇಜೋಭಾಸ್ಕರನು ಆದ ವೀರಾಗ್ರಣಿ ನಾಗದೇವನು ಆಂಧ್ರ, ಮಗಧ, ಪಾಂಡ್ಯ ದೇಶಾಧೀಶರನ್ನು ಸೋಲಿಸಿ ಕೀರ್ತಿವಂತನಾಗಿದ್ದನು.[೪೮]

ಪರಾಕ್ರಮ ಶೌರ್ಯದಿಂದಲೇ ಸುಭಟ ಚೂಡಾಮಣಿ, ಒರಟರಮಲ್ಲ, ವೀರತ್ರಿಣೇತ್ರ, ನನ್ನಿ ಮಹಾರ್ಣವ, ಕಂದುಕ ಪುರಂದರ ಮೊದಲಾದ ಪ್ರಶಸ್ತಿಯನ್ನು ರಾಜಮನ್ನಣೆಯನ್ನು ಪಡೆದುಕೊಂಡ ನಾಗದೇವನನ್ನು ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆಯೂ ಮದುವೆಯಾದಳು.

ಅತ್ತಿಮಬ್ಬೆಯ ಮದುವೆಯು ಯಾವಾಗ ಆಯಿತು? ಎಲ್ಲಿ ಆಯಿತು? ಎನ್ನುವ ವಿವರಗಳನ್ನು ರನ್ನನಾಗಲಿ, ಲಕ್ಕುಂಡಿಯ ಶಾಸನವಾಗಲಿ ಹೇಳುವದಿಲ್ಲ. ಆದರೆ ಅವಳ ಮದುವೆ ನಾಗದೇವನೊಂದಿಗೆ ಆಗಿದ್ದನ್ನು ಬೇರೊಂದು ಶಾಸನ ಮತ್ತು ಅಜಿತ - ಪುರಾಣ ಕೃತಿ ತಿಳಿಸುತ್ತವೆ.

ಅತ್ತಿಮಬ್ಬೆಯ ತೌರುಮನೆ ಹಾಗೂ ಗಂಡನಮನೆಯವರಲ್ಲಿ ಶ್ರೀಮಂತ, ಅಧಿಕಾರ, ಧರ್ಮಶ್ರದ್ಧೆ, ಶೌರ್ಯ, ಪ್ರೀತಿ ವಿಶ್ವಾಸಗಳು ತುಂಬಿ ತುಳುಕುತ್ತಿದ್ದವು;

ಹೀಗಾಗಿ ಅತ್ತಿಮಬ್ಬೆಯ ಮದುವೆ ಶಾಸ್ತ್ರೋಕ್ತವಾಗಿ ಸಂಭ್ರಮದಿಂದ ನಡೆದಿದೆ. ಡಾ.ಹಂಪನಾ ಅವರು ಹೇಳುವಂತೆ ಅತ್ತಿಮಬ್ಬೆಯ ವಿವಾಹ ಕ್ರಿ.ಶ. ೯೭೫ ರಲ್ಲಿ ನಡೆದಿದೆ.[೪೯] ಅತ್ಯಂತ ಸುಖಿಯಾಗಿರುವ ಅತ್ತಿಮಬ್ಬೆ ಮದುವೆಯಿಂದಾಗಿ ತುಂಬು ಜೀವನದ ಸಂತೋಷವನ್ನು ಪಡೆದಳು. ಮುಂದಿನ ಎರಡು ವರ್ಷಗಳಲ್ಲಿ ಅಣ್ಣಿಗದೇವನ ಜನನವಾಗಿರಬೇಕು. ಅತ್ತಿಮಬ್ಬೆಯ ಜೀವನದಲ್ಲಿ ಅತ್ಯಂತ ಸುಖವಾದ ಕಾಲವಿದು. ಇಲ್ಲಿಯವರೆಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ, ಅತ್ತಿಮಬ್ಬೆ ತುಂಬು ಜೀವನದ ಆನಂದಾಮೃತವನ್ನು ಸವಿದಳು. ಸಾಹಸದ ಗುಣವಿರುವ ತಂದೆ - ತಾಯಿಗಳಿಗೆ ಸಾಹಸಿಯಾದ ಮಗನು ಜನಿಸಿದನು. ಅತ್ಯಂತ ಸಂತೋಷದಿಂದ ಇಲ್ಲಿವರೆಗಿನ

ಜೀವನಾವಧಿ ಕಳೆಯಿತು. ಯಾವುದಕ್ಕೂ ತೊಂದರೆಯಿಲ್ಲ, ನಿರಾತಂಕವಾಗಿ ಅವಳ ಜೀವನ ಸಾಗಿತು. ತೃಪ್ತಿ, ನೆಮ್ಮದಿಯಿಂದ ಕೂಡಿದ ಅವಳ ಕೌಟುಂಬಿಕ ಜೀವನಕ್ಕೆ ಕೊಡಲಿಯೇಟು ಬಿತ್ತು. ಬಾಳಿನಲ್ಲಿ ಘಟಿಸಬಾರದ ದುರಂತ ಘಟಿಸಿ ಹೋಯಿತು. ಅವಳ ತುಂಬು ಬಾಳಿನ ದಾಂಪತ್ಯ ಜೀವನದ ಸಾರ್ಥಕ್ಯದಲ್ಲಿ ಪತಿ ನಾಗದೇವನ ವೀರ ಮರಣ ವಿಧಿ ಹೂಡಿದ ಆಟವೇ |

ಲಕ್ಕುಂಡಿಯ ಶಾಸನವು ಅಣ್ಣಿಗದೇವನನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ.

“ಆ ಪರಮೇಶ್ವರಿಗೆ ಬಗ
ದ್ವ್ಯಾಪಕ ಶುದ್ಧೇಂದ ಕೀರ್ತಿ ಪಿರಿಯ ಮಗಂ ಲ
ಕ್ಷ್ಮೀಪತಿ ಸಮಗ್ರ ವಿಜಯ
ಶ್ರೀ ಪತಿಯೆನೆ ಧರೆಗೆ ನೆಗಳ್ದ ಪಡೆವಳ ತೈಲಂ”[೨೦]

ಚರಿತ್ರ ಶುದ್ಧನಾದ, ಲಕ್ಷ್ಮೀ ಪತಿಯಾದ, ಧರೆಗೆ ಸಮಗ್ರವಿಜಯ ಶ್ರೀಪತಿಯಂತಿರುವವನೇ ಅತ್ತಿಮಬ್ಬೆ ನಾಗದೇವರೆಂಬ ಆದರ್ಶ ದಂಪತಿಗಳ ಮಗ. “ಪಡೆವಳ ತೈಲ” ಎಂದು ಬಿರುದಾಂಕಿತನಾದ ಈ ಅಣ್ಣಿಗದೇವ ಅತ್ಯಂತ ಉದಾರಿಯು, ಮನೋಜ್ಞನೂ, ಚಾರಿತ್ರ್ಯ - ಶುದ್ಧನೂ, ಎದ್ದು ಕಾಣುವ ಶೌರ್ಯ ಸಾಹಸಿಯೂ ಆಗಿದ್ದನು.[೨೧]

ಅತ್ತಿಮಬ್ಬೆಯ ಮಗನನ್ನು ರನ್ನ ಕವಿಯು ಮನದುಂಬಿ ವರ್ಣಿಸಿದ್ದಾನೆ. ಇವುಗಳನ್ನೆಲ್ಲಾ ಗಮನಿಸಿದಾಗ ಒಂದು ವಿಷಯ ಮನದಟ್ಟಾಗುತ್ತದೆ. ಅದೇನೆಂದರೆ ಕ್ರಿ.ಶ. ೯೯೩ರ ವೇಳೆಗೆ ಅಣ್ಣಿಗದೇವನು ಚಕ್ರವರ್ತಿ ಸೈನ್ಯಾಧೀಶನಾಗಿದ್ದನು. ಮಗನ ಈ ಪ್ರತಾಪವನ್ನು ತಂದೆ ನಾಗದೇವ ಕಣ್ಣಾರೆ ಕಂಡಿದ್ದಾನೆ. ಅತ್ತಿಮಬ್ಬೆಯ ಗಂಡ ಯಾವಾಗ ತೀರಿಕೊಂಡನು ಎಂಬ ಪ್ರಶ್ನೆಗೆ ಖಚಿತ ಉತ್ತರವಿಲ್ಲ. ಆದರೆ ಅತ್ತಿಮಬ್ಬೆ ಅತಿ ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗಿಲ್ಲ. ಅಜಿತಪುರಾಣದಲ್ಲಿ ನಾಗದೇವನ ಮರಣವನ್ನು ಚಿತ್ರಿಸಲಾಗಿದೆ. “ಪ್ರಸಿದ್ಧಿಯನ್ನು ಪಡೆದ ನನ್ನಿ ನಾರಾಯಣನೇ ತನಗೆ ಮಗನಾದಾಗ ನಾಗದೇವನು ತನ್ನಂತಹ ವೀರರಾಗಲಿ, ಸ್ವಾಮಿಭಕ್ತರಾಗಲಿ ಬೇರೊಬ್ಬರು ಇಲ್ಲ ಎಂಬಂತೆ “ಕುಮರರ ಕಾಳಗದೊಳ್ ” “ಕಳ ಕುಳಮಾಗೆ” ಪರಾಕ್ರಮವನ್ನು ಮೆರೆದು ದೊರೆಯನ್ನು ಮೆಚ್ಚಿಸಿ ದೇವಲೋಕಕ್ಕೆ ಹೋದನು” ಎಂಬುದಾಗಿದೆ.

ಕುಮರರ ಕಾಳಗದೊಳ್ ಪತಿ
ಯ ಮುಂದೆ ತರಿಸಂದು ನಿಂದು ಕಡಿತಲೆಗೊಂಡ
ನ್ಯ ಮತಂಗಜಂಗಳಂ ವಿ
ಕ್ರಮಸಿಂಹಂ ದಲ್ಲನಂದನಂ ಪೊಣರ್ದಿರಿದಂ

ಜನಪತಿ ಮೆಚ್ಚಿ ತನ್ನಯ ಚಮೂಪತಿ ಮಾಡಿದನಾಪ್ತ ಮಂತ್ರಿ ದ

ಲ್ಲನ ಮಗನೀತನಂತದಟರುಂ ಪತಿಭಕ್ತರುಮೀ ಗಳಾರುಮಿ
ಲ್ಲೆನಿಸಿದ ನಾಗದೇವನಣಿ ಮುಟ್ಟೆ ಧುರಂಧರ ನಾಗದೇವನೆಂ
ಬಮಿರಿದಿಕ್ಕಿದಂ ಸೆಣಸಿ ಪೊಕ್ಕರನಾಜಿಯೊಳಂಗರಕ್ಕಸಂ.

ಕಳಕುಳಮಾಗೆ ಪಂಚಲನ ಬಲ್ಪಡೆ ಪಂಚಲನಶ್ವ ಸಂಕುಲಂ
ಕಳ ಕುಳಮಾಗೆ ಪಂಚಲನ ದಂತಿ ಘಟಾವಳಿ ಯುದ್ಧರಂಗದೊಳ್
ಕಳ ಕುಳಮಾಗೆ ಗಾತ್ರಕರದಂತಿ ವಿಘಾತದೊಳುಗ್ರದಂತಿ ಮ
ಕ್ಕಳಕರು ವಾಗರಂ ಪರಿದುದುದ್ಭಟನಿಂ ಸುಭಟ ತ್ರಿಣೇತ್ರನಿಂ.

ಬಲ್ಲಹನ ಬೆಸದೊಳೊರಟರ
ಮಲ್ಲಂ ದಲ್ಲನ ತನೂಭವಂ ಕರಹಟದಿಂ
ಮಲ್ಲಮನಂ ಬೆನ್ನಟ್ಟಿದ
ಬಲ್ಲಾಳ್ತನದಿಂ ನಿಜೇಶನಂ ಮೆಚ್ಚಿಸಿ ದಂ [೫೨]

ಹೀಗಾಗಿ ಡಾ. ಹಂಪನಾ ಅವರ ಅಭಿಪ್ರಾಯವೇ ಸತ್ಯವೆನಿಸುತ್ತದೆ. ''- - - - - ಚಿಕ್ಕ ವಯಸ್ಸಿನಲ್ಲಿ ಎಂಬುದಕ್ಕಿಂತ, ಪ್ರೌಢವಯಸ್ಸಿನಲ್ಲಿ ಗಂಡ ನಾಗದೇವ ನಿಧನನಾದನೆಂಬುದು ಸಮಂಜಸ.''[೫೩]

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಪದ್ಧತಿಯು ಭದ್ರವಾದ ತಳಹದಿಯ ಮೇಲೆ ಬೆಳೆಯುತ್ತಾ ಬಂದಿದೆ. ಈ ಕೌಟುಂಬಿಕ ಬಂಧನದ ಗಾಢತೆಗೆ ಮದುವೆ ಮುಖ್ಯವಾದ ಸಾಮಾಜಿಕ ನಿಯಮವಾದರೆ; ಗಂಡ ಭಾವನಾತ್ಮಕ ಮತ್ತು ಅನಿವಾರ್ಯವಾದ, ಸಹಜವಾದ ಜತೆಗಾರನಾಗುತ್ತಾನೆ. ಇವೇ ಭಾವನೆಗಳನ್ನು ಮತ್ತು ಅನಿವಾರ್ಯವಾದ, ಸಹಜವಾದ ಜತೆಗಾರನಾಗುತ್ತಾನೆ. ಇವೇ ಭಾವನೆಗಳನ್ನು ಮುಂದುವರೆಸಿಕೊಂಡು ಹೋಗುವ ಪೀಳಿಗೆಯೇ ಮಕ್ಕಳಾಗುತ್ತಾರೆ. ಹೀಗೆ ಕುಟುಂಬವು ಗಂಡ, ಹೆಂಡತಿ, ಮನೆ, ಮಕ್ಕಳು ಎನ್ನುವ ಸಾರ್ಥಕ ಸಂಬಂಧಗಳಿಂದ ಹೆಣೆಯಲ್ಪಟ್ಟಿವೆ. ಒಂದರ ಕೊರತೆಯುಂಟಾದರೂ ಜೀವನದಲ್ಲಿ ಕಷ್ಟ, ನಷ್ಟಗಳನ್ನು ಎದುರಿಸಬೇಕಾಗುತ್ತದೆ.

ಹಿಂದೂ ಪರಂಪರೆಯ ವ್ಯವಸ್ಥೆಯಲ್ಲಿ ಮಕ್ಕಳಿಲ್ಲದ ಹೆಣ್ಣುಮಕ್ಕಳನ್ನು ಬಂಜೆಯೆಂದು ಕರೆದು ಅವಳನ್ನು ಇನ್ನಿಲ್ಲದ ದುಃಖಕ್ಕೆ ಗುರಿಮಾಡಿದ್ದಾರೆ. ಇನ್ನು ಗಂಡನನ್ನು ಕಳೆದುಕೊಂಡ ವಿಧವೆಯ ಸಂಕಟವಂತೂ ಅತ್ಯಂತ ಕರುಣಾಜನಕವಾದದ್ದು. ಗಂಡನೇ ದೇವರು, ಪತಿಯೇ ಪರದೈವವೆಂಬ ಸಾಮಾಜಿಕ ಕಲ್ಪನೆಯಲ್ಲಿ - - - - - ಗಂಡನ ಮರಣದಿಂದ ಹೆಂಡತಿಗೆ ಬಂದೊದಗುವ ಸ್ಥಿತಿ ಶೋಚನೀಯವಾದುದು. ಅಂಥವಳ ಬದುಕನ್ನು ಜನಪದ ಕವಯಿತ್ರಿಯರು ಸಾರ್ಥಕ ಉಪಮೆಗಳಿಂದ ಚಿತ್ರಿಸಿದ್ದಾರೆ.

"ಮುಗ್ಗಿಜ್ವಾಳಧಂಗ ಕಗ್ಗ ಬಿಸಿಲಿನ ಹಂಗ
ಹಗ್ಗಿಲ್ದ ಬಾವಿ ಕೊಡದಂಗ ಪತಿರಾಯ
ನೀ ಹೋದವುಣಕ ನನ ಜೀವ"
ಇನ್ನು ವಿಧವೆಯನ್ನು ಕಂಡರೆ ಇತರರ ವರ್ತನೆ
"ಗಂಡ ಹೆಂಡಿರು ಎಂದು ಕಂಡಾಡಿದವರಲ್ಲ
ಕಂಡರ ಮಾರಿ ತಿರುವೂರು| ಗಂಡಿಲ್ದ
ನಾರೆವ್ವ ನಾರೊ ಕೊಳಿ ನೀರ

ಮೇಲೆ ಉದಾಹರಿಸಲಾದ ತ್ರಿಪದಿಯಿಂದ ಸಮಾಜದಲ್ಲಿ ವಿಧವೆಯ ಸ್ಥಾನ ಹೇಗೆ ಕ್ರೌರ್ಯದಿಂದ ತುಂಬಿತ್ತು, ಅವಳು ದಾರುಣವಾದ ವೇದನೆಯನ್ನು ಅನುಭವಿಸಿದ್ದಳು ಎಂಬುದು ತಿಳಿದುಬರುತ್ತದೆ.

ಬಹುತೇಕ ಸಾಮಾನ್ಯ ವರ್ಗದ ಹೆಣ್ಣುಮಕ್ಕಳಿಗೆ ಮೇಲೆ ಹೇಳಿದ ಕಷ್ಟಗಳು ಬರುತ್ತಿದ್ದವು. ಆದರೆ ಮೇಲು ವರ್ಗದ, ಅಧಿಕಾರವರ್ಗದ, ರಾಜಮನೆತನದ ಹೆಣ್ಣುಮಕ್ಕಳು ವೈಧವ್ಯದ ದುಃಖ ದುಮ್ಮಾನಗಳನ್ನು ಮರೆಯಲು ತಮ್ಮ ಜೀವನಕ್ಕೆ ಹೊಸ ತಿರುವುಗಳನ್ನು ಕಂಡುಕೊಳ್ಳುತ್ತಿದ್ದರು.

ಪತಿಯ ಮರಣಾನಂತರ, ಅರಸು ಮನೆತನದ ಹೆಣ್ಣುಮಕ್ಕಳು ಅನಿವಾರ್ಯವಾಗಿ ರಾಜ್ಯ ರಕ್ಷಣೆ, ಪುತ್ರ ಪಾಲನೆಗಾಗಿ ತಮ್ಮನ್ನು ತಾವು ಒಪ್ಪಿಸಿಕೊಂಡು "ರಾಜ ಮಾತೆ" ಎಂದು ಕರೆಯಿಸಿಕೊಳ್ಳುತ್ತಿದ್ದರು. ಪತಿಯ ಸ್ಥಾನದಲ್ಲಿ ನಿಂತುಕೊಂಡು ೫ ವರ್ಷದವರೆಗೆ ತಾನೇ ರಾಜ್ಯಭಾರ ಮಾಡಿದ ಚಾಲುಕ್ಯ ಚಂದ್ರಾದಿತ್ಯನ ರಾಣಿ ವಿಜಯ ಮಹಾದೇವಿಯನ್ನು ಇಲ್ಲಿ ಸ್ಮರಿಸಬಹುದು.[೫೪]

ಮಗನಿಗೆ ಪೋಷಕಿಯಾಗಿ, ಮಾರ್ಗದರ್ಶಿಕೆಯಾಗಿ ವೈಧವ್ಯದ ಜೀವನವನ್ನು ಅತ್ತಿಮಬ್ಬೆಯು ಸಾರ್ಥಕ ಪಡಿಸಿಕೊಂಡಿದ್ದಾಳೆ. ಪತಿಯ ವೀರ ಮರಣ ವಿಧಿ ಹೂಡಿದ ಆಟ. ಒಮ್ಮಿಂದೊಮ್ಮೆಲೆ ಉಂಟಾದ ಪತಿ ವಿಯೋಗಕ್ಕೆ ಅತ್ತಿಮಬ್ಬೆ ಕಂಡುಕೊಂಡ ಪರಿಹಾರಮಾರ್ಗ ಅವಳ ಮನಸ್ಸಿನ ಶಕ್ತಿ, ಸ್ಥೈರ್ಯ ಎಂತಹದ್ದು ಎನ್ನುವುದನ್ನು ಸೂಚಿಸುತ್ತದೆ. ವೈಧವ್ಯದ ಯಾತನೆಯಿಂದ ಧರ್ಮ ವೈವಿಧ್ಯತೆ ಕಡೆ ತಿರುಗಿ ಆತ್ಮ ಕಲ್ಯಾಣ, ಜನ ಕಲ್ಯಾಣ, ಪುತ್ರ ಕಲ್ಯಾಣವನ್ನು ಕೈಗೊಂಡಳು.

ಪತಿ ನಾಗದೇವನ ಮರಣಕ್ಕೆ ಜತೆಗೂಡಿದವಳು ಸಹೋದರಿ ಗುಂಡಮಬ್ಬೆ. ಗುಂಡಮಬ್ಬೆ ಸತಿ ಹೋಗುತ್ತಾಳೆ. ಗಂಡನ ಯಾವುದೇ ಪ್ರಕಾರದ ಸಾವಿನ ಹಿಂದೆಯೇ ಚಿತೆಏರಿ ತನ್ನ ಪ್ರಾಣವನ್ನು ತ್ಯಜಿಸುವ ಹೆಣ್ಣುಮಗಳೇ ಮಹಾಸತಿ ಎಂದೆನಿಸಿಕೊಳ್ಳುತ್ತಿದ್ದಳು.

"ಮಹಾಸತಿ"ಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ದೈವಿಕ ಮೌಲ್ಯವಾಗಿದೆ. ಮಹಾಭಾರತದಲ್ಲಿ ಸಹಗಮನದ ವಿಷಯ ಬರುತ್ತದೆ. ಮಾದ್ರಿಯ ಸಹಗಮನದ ವಿಷಯವಿದೆ. ಮುಂದೆ ಸಹಗಮನದ ವಿಷಯ

ಹೆಚ್ಚಿನ ವ್ಯಾಪಕತೆಯನ್ನು ಪಡೆದುಕೊಂಡಿದೆ. ಸಹಗಮನಕ್ಕೆ ಹತ್ತು ಹಲವು ಕಾರಣಗಳಿದ್ದವು. - ''ಮರಣ ಹೊಂದಿದ ವ್ಯಕ್ತಿಯ ಜೊತೆಯಲ್ಲಿ ಅವನಿಗಿಷ್ಟವಾದ ವಸ್ತುಗಳನ್ನು ಇಡುವುದು.''

- ಹೀಗೆ ಸಾಯುವುದರಿಂದ ಗಂಡನಿಗೆ ಸ್ವರ್ಗಪ್ರಾಪ್ತಿಯಾಗುವುದಲ್ಲದೆ ತಾನೂ ಸ್ವರ್ಗ ಪಡೆದು ಮುಂದಿನ ಜನ್ಮದಲ್ಲಿ ಮತ್ತೆ ಪತಿ ಪತ್ನಿಯರಾಗಿ ಹುಟ್ಟುವುದು.
- ತಾನು ಮಡಿದ ನಂತರ ತನ್ನ ಮಡದಿ ಪರಪುರುಷನ ವಶವಾಗಬಾರದು ಅಥವಾ ತನ್ನಿಂದ ಅಗಲಿರಬಾರದೆಂಬ ಪುರುಷನ ಸ್ವಾರ್ಥಭಾವನೆ.
- ಗಂಡನ ಮರಣದ ತರುವಾಯ ಸ್ತ್ರೀ ಬದುಕಿನಲ್ಲಿ ಎದುರಿಸಬಹುದಾದ ಜೀವರಕ್ಷಣೆ, ಮಾನರಕ್ಷಣೆಗಳ ಭಯ.
- ಸತ್ತ ಪತಿಯೊಂದಿಗೆ ಪತ್ನಿಯನ್ನು ಮರಣಕ್ಕೆ ನೂಕಿ ಅವಳ ಆಸ್ತಿಯನ್ನು ಅಪಹರಿಸಿಕೊಳ್ಳುವ ಹಂಚಿಕೆ.[೫೫]

ಹೀಗೆ ಈ ಕಾರಣಗಳಿಂದಾಗಿ ವಿಧವೆ ಸತಿ ಹೋಗುವ ನಿರ್ಧಾರ ಮಾಡುತ್ತಿದ್ದಳು.

ಪತಿ ನಾಗದೇವ ರಣಾಂಗಣದಲ್ಲಿ ಹೋರಾಡುತ್ತ ವೀರಮರಣವನ್ನೈದಿದಾಗ, ಅವನ ಪತ್ನಿಯರಿಗೆ ಉಳಿದಿರುವ ದಾರಿಯನ್ನು ರನ್ನ ಮಹಾಕವಿ ಹೀಗೆ ಹೇಳಿದ್ದಾನೆ.

''ಎರಡೆ ವಲಂ ಕುಲವಧು ಗಾ
ಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನ ದೀಕ್ಷಾ
ಚರಣಂ ಶುಭಚರಿತದೆ
ಮರಣಂ ಮೇಣಳಿಪಿನಿಂದೆ ಬಾಳ್ವುದು ದೊರೆಯೇ [೫೬]

ಪತಿಯು ಮರಣವನ್ನೈದಿದಾಗ ಕುಲವಧುವಾದವಳಿಗೆ ಆಚರಿಸುವದಕ್ಕೆ ಎರಡೇ ಎರಡು ಕಾರ್ಯಗಳಿವೆ. ಜಿನ ದೀಕ್ಷೆಯನ್ನು ಕೈಗೊಳ್ಳುವುದು ಇಲ್ಲವೆ ಶುಭಚರಿತದಿಂದ ಸಾಯುವುದು.

ಶುಭಚರಿತದಿಂದ ಸಾಯುವದನ್ನು ಗುಂಡಮಬ್ಬೆ ವಹಿಸಿಕೊಂಡರೆ, ಪುತ್ರ ಪೋಷಣೆ ಹೊಣೆಗಾರಿಕೆಯನ್ನು ಹೊತ್ತುಕೊಂಡವಳು ಅತ್ತಿಮಬ್ಬೆ. ಹಾಗೆ ಅತ್ತಿಮಬ್ಬೆಯನ್ನು ಓಲೈಸಿದವಳು ಗುಂಡಮಬ್ಬೆಯೇ |

ಜೈನ ಧರ್ಮದಲ್ಲಿ ಸತಿ ಪದ್ಧತಿ ನಿಷಿದ್ಧವಾಗಿದೆ. ಆದರೂ ಪ್ರತಿಷ್ಠಿತ ಜೈನ ಕುಟುಂಬದ ಗುಂಡಮಬ್ಬೆ ಸತಿ ಹೋದಳೆಂದರೆ, ಹಿಂದೂ ಪರಂಪರೆಯ ಸಹಗಮನದ ಪ್ರಭಾವ ಬಲವಾಗಿತ್ತು. ಅಲ್ಲದೆ ಜೈನ ಸಾಮಾಜಿಕ ವ್ಯವಸ್ಥೆಯಲ್ಲಿ, ಸತಿ ಹೋಗುವ ಆಚರಣೆಯನ್ನು ಒಪ್ಪಿಕೊಂಡಿದ್ದಾರೆ. ಜಿನಾಸೇನಾಚಾರ್ಯರು ಪ್ರಖ್ಯಾತಿಯನ್ನು ಪಡೆದುಕೊಂಡಿರುವ ಶ್ರೇಷ್ಠ ಜೈನಾಚಾರ್ಯರು, - ಇವರು ರಾಷ್ಟ್ರಕೂಟ ಅರಸು ಮನೆತನದ ಪ್ರಸಿದ್ಧ ದೊರೆಯಾದ

ಅಮೋಘವರ್ಷನ ರಾಜಗುರುಗಳು. ಇವರು ರಚಿಸಿರುವ ಪೂರ್ವಪುರಾಣದಲ್ಲಿ ಸಹಗಮನ ಪದ್ಧತಿಯನ್ನು ಪತಿವ್ರತೆಯಾದ ಸ್ತ್ರೀಯ ಆಚರಣೆಯೆಂದು ಸಮರ್ಥಿಸಿದ್ದಾರೆ.

ಭಾರತೀಯ ಸಮಾಜ, ಪುರಾಣ, ಶಾಸ್ತ್ರಗಳು ಒಪ್ಪಿಕೊಂಡಿದ್ದ ಸಹಗಮನವನ್ನು ಗುಂಡಮಬ್ಬೆ ಹೊಂದಿದಳು. ಗುಂಡಮಬ್ಬೆ ಸಹಗಮನವನ್ನು ಅನುಸರಿಸಿ ಪತಿಯ ಜತೆ ಚಿತೆಯನ್ನೇರಿ ಮಹಾಸತಿಯಾದರೆ, ಅತ್ತಿಮಬ್ಬೆಯು

"ಪತಿಯೊಡನೆನ್ನ ತಂಗೆ ದಹನಾರ್ಚಿಯೊಳೊಂದೆ ಮುಹೂರ್ತದೊಳ್ ದಿವೋ
ದಿತ ತನುವಾದಳಾಂ ಪಿರಿಯೆನಪುದರಿಂ ಪಿರಿದಪ್ಪ ದಾರುಣ
ವ್ರತ ದಹನಾರ್ಚಿಯಿಂದನುದಿನಂ ತನುವಂ ತನುಮಾಡುತಿರ್ಪೆನೆಂ
ಬತನುವಿರೋಧಮುಂ ತನು ವಿರೋಧಮುಂ ತನುವಿರೋಧಮುಮೊಪ್ಪುಗುಮತ್ತಿಮಬ್ಬೆಯೊಳ್.

ಎಂದು ತೀರ್ಮಾನಿಸಿ ತನ್ನ ಮುಂದಿನ ಬಾಳಿನ ಉದ್ದಕ್ಕೂ ಕಠಿಣವಾದ ವ್ರತನೇಮಾಚಾರಣೆಗಳ ತಪಸ್ಸನ್ನು ಆರಿಸಿಕೊಂಡಳು. ಲೋಕವೆಲ್ಲ ತಂಗಿ ಗುಂಡಮಬ್ಬೆಯನ್ನು ಮಹಾಸತಿ ಎಂದು ಕರೆದರೆ, ಅಜಿತಪುರಾಣ ಮತ್ತು ಲಕ್ಕುಂಡಿಯ ಶಾಸನದಲ್ಲೂ ಅತ್ತಿಮಬ್ಬೆಯನ್ನು "ಮಹಾಸತೀ ತಿಲಕೆ" ಮತ್ತು "ಮಹಾಸತೀರತ್ನಂ" ಎಂದು ರನ್ನನು ಕರೆದಿದ್ದಾನೆ.[೫೮]

ಪತಿಯ ಮರಣದ ನಂತರ ಅತ್ತಿಮಬ್ಬೆಯ ಜೀವನ ಶೈಲಿಯೇ ಬದಲಾಯಿತು. ಗಂಡ ಹಾಗೂ ತಂಗಿಯನ್ನು ದಹಿಸಿದ ಚಿತಾಗ್ನಿಯಲ್ಲಿ ಅತ್ತಿಮಬ್ಬೆಯ ಆಸೆ, ಆಕಾಂಕ್ಷೆ, ಬಯಕೆ, ಭೋಗಾಸಕ್ತಿಗಳೆಲ್ಲವೂ ಇನ್ನಿಲ್ಲದಂತೆ ಸುಟ್ಟು ಹೋದವು. ಸಾವನ್ನೇ ಸ್ವಾಗತಿಸಿ ಗುಂಡಮಬ್ಬೆ ಮಹಾಸತಿಯಾದರೆ, ಸಾವಿನಿಂದುಳಿದ ಅತ್ತಿಮಬ್ಬೆ ಜೀವನವನ್ನು ಒಪ್ಪಿಕೊಂಡಿದ್ದು ಮಾತ್ರ "ಅತನು ವಿರೊಧಮಂ, ತನುವಿರೋಧಮಂ ಒಪ್ಪುಗುಂ ಅತ್ತಿಮಬ್ಬೆಯೊಳ್ " ಈ ಜೀವನದ ಅಶಾಶ್ವತತೆಯ ಅರಿವಿದ್ದರೂ, ಜೀವನಲದಲ್ಲಿದ್ದುಕೊಂಡೇ ಸಾಧಿಸುವ ಛಲತೊಟ್ಟಳು.

ಬದುಕಿನ ಅನಿಶ್ಚಿತತೆಯ ಸಂದರ್ಭದಲ್ಲಿ. ಧೃತಿಗೆಡದ ಅತ್ತಿಮಬ್ಬೆಯ ಧೈರ್ಯವನ್ನು ಯಾರೇ ಆಗಲಿ ಮೆಚ್ಚಿಕೊಳ್ಳಲೇಬೇಕು. ತಾನೇ ಸೃಷ್ಟಿಸಿಕೊಂಡ ಬದುಕಿನ ಪರಿಸರ ಅತ್ಯಂತ ವಿಶಿಷ್ಟವಾದದ್ದು. ವೈಯಕ್ತಿಕ ಕಲ್ಯಾಣವನ್ನು ಬದಿಗೊತ್ತಿ ಉನ್ನತವಾದ ವಿಚಾರಧೋರಣೆ, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಕಳಕಳಿಯಿಂದಾಗಿ, ಅತ್ತಿಮಬ್ಬೆಯು ಸಾಮಾನ್ಯತೆಯಿಂದ ಅಸಾಮಾನ್ಯಳಾಗಿದ್ದಾಳೆ.

ಅತ್ತಿಮಬ್ಬೆ ಶ್ರಾವಕಿಯಾಗಿ, ಶ್ರಾವಕ ವ್ರತ ಧರ್ಮಗಳನ್ನು ಪಾಲಿಸಿ, ಉಪವಾಸದಂತಹ ಕಠಿಣ ವ್ರತ, ಶಾಸ್ತ್ರದಾನ, ಆಹಾರದಾನ, ಔಷಧ ದಾನ ಮೊದಲಾದವುಗಳನ್ನು ಚಾಚೂ ತಪ್ಪದೆ ಪಾಲಿಸಿ ಆದರ್ಶಳಾದಳು. ಅಕಳಂಕ ಚರಿತ್ರೆ, ದಾನವಿನೋದೆ, ದಾನ ಚಿಂತಾಮಣಿ, ಕಟಕ ಪವಿತ್ರೆ, ಕವಿವರ ಕಾಮಧೇನು, ಗುಣದಂಕಕಾರ್ತಿ ಎಂಬೆಲ್ಲ ಬಿರುದುಗಳಿಗೆ ಪಾತ್ರಳಾದಳು.

ಅಕಳಂಕ ಚರಿತೆ : ಅತ್ತಿಮಬ್ಬೆಯ ಚರಿತ್ರೆ ಕಳಂಕ ರಹಿತವಾದದ್ದು. ಅದನ್ನೇ ಕವಿ ಬಿಳಿಯರಳೆಯಂತೆ, ಗಂಗಾಜಳದಂತೆ ಎಂದು ವ್ಯಕ್ತಿತ್ವವನ್ನು ವರ್ಣಿಸುವಾಗ ಹೋಲಿಸಿದ್ದಾನೆ.

'ಅಕಳಂಕ ಚರಿತೆ' ಎಂದು ಬ್ರಹ್ಮಶಿವ ಕವಿ "ಸಮಯ ಪರೀಕ್ಷೆ"ಯಲ್ಲಿ ಸ್ತುತಿಸಿದ್ದಾನೆ.

ಅಕಳಂಕ ಚರಿತೆ ಜಿನಚರ
ಣ ಕಂಜ ಕಿಂಜಲ್ಕಪುಂಜ ರಂಜಿತ ತನು ಸ
ರ್ವ ಕಳಾವಿದ ಶೌಚ ಘಟಾಂ
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಳ್ದ್ ಳ್ [೬೦]

ಚಾರಿತ್ರಿಕ ಮಹಿಳೆಯಾಗಿರುವ ಅತ್ತಿಮಬ್ಬೆಯನ್ನು ಬ್ರಹ್ಮಶಿವನು ಈ ಪದ್ಯದಲ್ಲಿ ಅಕಳಂಕ ಚರಿತೆ, ದಾನವಿನೋದೆಯೆಂಬ ಮೊದಲಾದ ಬಿರುದುಗಳಿಂದ ಗೌರವಿಸಿದ್ದಾನೆ.

ಗಂಡನ ಜತೆ ತಂಗಿ ಗುಂಡಮಬ್ಬೆಯು ಸತಿಹೋದರೆ ಅತ್ತಿಮಬ್ಬೆ ಅದಕ್ಕಿಂತಲೂ ಹಿರಿದಾದ ಕಠೋರವಾದ ವ್ರತನೇಮಾಚರಣೆಗಳಿಂದ ಅಕಳಂಕ ಚರಿತೆಯಾದಳು.

'ಅಭಿಲಷಿತಾರ್ಥ ದಾನವಿನೋದೆ' ಎಂದು ಲಕ್ಕುಂಡಿ ಶಾಸನ ಅವಳನ್ನು ಪರಿಚಯಿಸುತ್ತದೆ. ದಾನ ವಿನೋದೆ, ದಾನಚಿಂತಾಮಣಿ ಎಂಬ ಬಿರುದುಗಳು ಅವಳ ದಾನಗುಣದಿಂದಾಗಿ ಬಂದಂತವುಗಳು. ಗುಣದಂಕಕಾರ್ತಿಯಾದ ಅತ್ತಿಮಬ್ಬೆಯು ಪ್ರೀತಿ, ವಾತ್ಸಲ್ಯದಿಂದ ದಾನಮಾಡುವ ಗುಣವಂತೆ ಈಕೆಯು

"ಅಲಸುತಮೀವ ಚಿಂತಿಸುತಮೀವ ಮೊಗಂ ಮುರಿದೀವ ಮುಟ್ಟಿ ಮೂ
ದಲಿಸುತಮೀವ ಪೆರ್ಚನೊಸೆದೀವತಿ ಬೆಳ್ಮೊಗದಿಂದಮೀವ ಮ
ಮ್ಮಲ ಮರುಗುತ್ತಮೀವ ಕಡುಲೋಭಕದಾನ ಗುಣಗಳಂ ಪಟಿಂ
ಚಲೆ ದಪುದಾರ್ತು ಕೂರ್ತು ಪಿರಿದೀವಗುಣಂ ಗುಣದಂಕಕಾರ್ತಿಯಾ"[೬೧]

ಬೇಸರಪಟ್ಟುಕೊಂಡು, ಕೊರಗುತ್ತಾ, ಮುಖಭಂಗ ಮಾಡುತ್ತ ಮೂದಲಿಸುತ್ತಾ, ತನ್ನ ಹಿರಿಮೆ ಹೆಚ್ಚಾಗಲೆಂದು ಆಶಿಸುತ್ತ ಮಮ್ಮಲಮರುಗುತ್ತ ಪೆಚ್ಚು ಮುಖದಿಂದ ದಾನಮಾಡುವ ಕಡುಲೋಭಿಗಳ ದಾನವನ್ನು ಹೀಯಾಳಿಸುವಂತೆ ದಾನವಾಡುವ ಗುಣ ಅತ್ತಿಮಬ್ಬೆಯದು. ಆದುದರಿಂದಲೇ ದಾನವಿನೋದೆ, ದಾನಚಿಂತಾಮಣಿಯೆಂಬ ಬಿರುದುಗಳನ್ನು ಕಾವ್ಯ, ಶಾಸನಗಳು ಅವಳಿಗೆ ನೀಡಿವೆ.[೬೨]

ರನ್ನ ಕವಿಯು ಅತ್ತಿಮಬ್ಬೆಯ ದಾನಗುಣವನ್ನು ಭಾವಪರವಶವಾಗಿ ದಾನಚಿಂತಾಮಣಿಯೆಂದು ಬಿರುದನ್ನಿತ್ತು ಗೌರವಿಸಿದ್ದಾನೆ.

"ಈ ಮಹಿಗೆಲ್ಲಾಮಗ್ಗಳದ ದಾನಿಯನಗ್ರಣಿಮಾಡಿ ದಾನಚಿಂ
ತಾಮಣಿಯಂ ನೆಗರ್ತೆವಡೆದೊಪ್ಪಮೆ ಸಾಲ್ಗುಮದರ್ಕೆ ಮುನ್ನ ಚಿಂ
ತಾಮಣಿ ಕಾಮಧೇನು ಸುರಭೂರುಹಮೆಂಬಿವನೇಕೆ ಮಾಡಿದಂ
ತಾಮರಸೋದ್ಭವಂ ಜಡಜಜಂಗೆ ವಿವೇಕಮದಲ್ಲಿ ಬಂದುದೋ [೬೩]

ಈ ಮಹಿಮೆಯಲ್ಲಿ ಚಿಂತಾಮಣಿ, ಕಾಮಧೇನು, ಕಲ್ಪವೃಕ್ಷ ಎಂಬ ಅಪರೂಪವಾದ ವಸ್ತುಗಳಿದ್ದು ಅವುಗಳು ಬಯಸಿದ್ದನ್ನು, ಬೇಡಿದ್ದನ್ನು ಕೊಡುತ್ತವೆ ಎಂಬ ಪ್ರತೀತಿಯೂ ಇದೆ. ಆ ಅಪರೂಪದ ವಸ್ತುಗಳಂತೆ ಅತ್ತಿಮಬ್ಬೆಯು ಸಹಿತ ಬೇಡಿದ್ದನ್ನು ಕೊಡುವ ದಾನಚಿಂತಾಮಣಿಯಾಗಿದ್ದಾಳೆ. ಹೀಗಿರುವಾಗ ಬ್ರಹ್ಮನು ಆ ಅದ್ಭುತ ವಸ್ತುಗಳನ್ನು ಬಿಟ್ಟು ಅತ್ತಿಮಬ್ಬೆಯನ್ನು ಮಾತ್ರವೇ ಸೃಷ್ಟಿಸಿದ್ದರೂ ನಡೆಯುತಿತ್ತು ಎಂದು ಕವಿ ರನ್ನನು ಅವಳ ದಾನಗುಣವನ್ನು ಅತಿಶಯವಾಗಿ ಹೊಗಳಿದ್ದಾನೆ.

"ದಾನಚಿಂತಾಮಣಿ" ಎಂಬ ಬಿರುದು ಲಕ್ಕುಂಡಿಯ ಶಾಸನದಲ್ಲಿ ಆರು ಬಾರಿ ಪ್ರಕಟವಾಗಿದೆ. ಅತ್ತಿಮಬ್ಬೆಯ ದಾನ ಗುಣವೇ ಅಂತಹದ್ದು. ಅವಳಿಗೆ ಯಾರು ಸಾಟಿ ಇಲ್ಲ. ಪುರುಷರನ್ನು ಮೀರಿಸಿರಿದ ಅವಳ ಈ ಸ್ವಭಾವ ಅವಳನ್ನು ದಾನಚಿಂತಾಮಣಿಯನ್ನಾಗಿಸಿದೆ.

ಲಕ್ಕುಂಡಿ ಶಾಸನದಲ್ಲಿರುವ "ಕಟಕ ಪವಿತ್ರೆ" ಎನ್ನುವುದು ಅತ್ತಿಮಬ್ಬೆಯ ಮತ್ತೊಂದು ಬಿರುದು. ಕಟಕ ಎಂಬ ಶಬ್ದಕ್ಕೆ ನಿಘಂಟುವಿನಲ್ಲಿ ಸಿಗುವ ಅರ್ಥಗಳಲ್ಲಿ ಮುಖ್ಯವಾದದ್ದು ಸೈನ್ಯ ಬಿಲ್ಲಿನ ಹೆದೆ "ಕಟಕ ಪವಿತ್ರೆ" ಎಂಬ ಬಿರುದಿನ ಅರ್ಥವನ್ನು ಪರಿಭಾವಿಸಿದರೆ

"ಸಮಸ್ತ ಕಟಕ ಭಯಂಕರನದೀಶ್ರೋತ್ರೋ ವೇಗ ವಿಳಸನ ದಿಂ
ಕಟಕ ಪವಿತ್ರೆಯುಂ"[೬೪] ಎಂದಿದೆ.

ಅತ್ತಿಮಬ್ಬೆಯು ಬಾಲ್ಯದಲ್ಲಿಯೇ ರಾಜಧಾನಿಯಲ್ಲಿ ಇದ್ದವಳು. ಅವಳ ತಂದೆ ಚಿಕ್ಕಪ್ಪರು ರಾಜಾಶ್ರಯದ ಸನ್ಮಾನಿತ ಹುದ್ದೆಯಲ್ಲಿದ್ದವರು. ಅವಳ ಮಾವ, ಗಂಡ ಸಹಿತ ರಾಜಧಾನಿಯಲ್ಲಿಯೇ ಇದ್ದವರು. ಅವರು ಸಹಿತ ರಾಜಾಶ್ರಯದ ಬಹು ಮುಖ್ಯ ಹುದ್ದೆಯಲ್ಲಿದ್ದವರು. ಹೀಗಾಗಿ ಅತ್ತಿಮಬ್ಬೆಯು ಯಾವಾಗಲೂ ಕಟಕದಲ್ಲಿಯೇ ಇದ್ದವಳು. ಇದನ್ನೆಲ್ಲಾ ಗಮನಿಸಿದಾಗ ಅತ್ತಿಮಬ್ಬೆಯ ರಾಜಕೀಯ ರಾಜಕೀಯ ಪ್ರಭಾವವಿರುವುದು ಸ್ಪಷ್ಟವಾಗಿದೆ. ಆದುದರಿಂದಲೇ ರನ್ನ ಕವಿಯು ಅತ್ತಿಮಬ್ಬೆಯನ್ನು "ಚಕ್ರವರ್ತಿ ಕಟಕಕ್ಕಾರಾಧ್ಯೆ" ಎಂದು ರನ್ನ ಕವಿ ಬಿರುದಿಸಿದ್ದಾನೆ. ಇದೇ ವಿಷಯವನ್ನು ಡಾ.ಕಮಲಾ ಹಂಪನಾ ಚರ್ಚಿಸಿದ್ದಾರೆ. [೬೫]

ಘಟಾಂತಿಕೆ ಎಂಬುದು ಅತ್ತಿಮಬ್ಬೆಯ ಮತ್ತೊಂದು ಬಿರುದು. ದಾನಚಿಂತಾಮಣಿ ಗುಣದಂಕಕಾರ್ತಿ, ಜಿನಧರ್ಮಪತಾಕೆ, ಕವಿವರ ಕಾಮಧೇನು ಎಂಬ ಬಿರುದುಗಳಷ್ಟೆ ಪ್ರಖ್ಯಾತವಾಗಿದೆ. ಈ ಬಿರುದು ಲಕ್ಕುಂಡಿ

ಶಾಸನದಲ್ಲೂ ಮತ್ತು ಬ್ರಹ್ಮಕವಿಯು ಸಮಯ ಪರೀಕ್ಷೆಯಲ್ಲಿ ಅತ್ತಿಮಬ್ಬೆಯನ್ನು ಅಕಳಂಕ ಚರಿತೆ, ದಾನವಿನೋದೆ ಎಂದು ಗುರುತಿಸುವುದರ ಜತೆಗೆ ಘಟಾಂತಿಕೆಯೆಂದು ಬಿರುದಿಸುತ್ತಾನೆ. ''ಘಟಾಂತಿಕೆ'' ಎನ್ನುವ ಶಬ್ದಕ್ಕೆ ಶಬ್ದಕ್ಕೆ ಕನ್ನಡ ನಿಘಂಟುಗಳಲ್ಲಿ ಅರ್ಥ ಸೂಚಿತವಾಗಿಲ್ಲ. ಈ ವಿಷಯವನ್ನು ಡಾ.ಹಂಪನಾ ಅವರು ಪ್ರಸ್ತಾಪಿಸಿದ್ದಾರೆ.[೬೬] ಅದು ಹೀಗೆ ಘಟಾಂತಿಕೆ ಎನ್ನುವುದು ಚಾರಿತ್ರಿಕ, ಸಾಂಸ್ಕೃತಿಕ ಮಹತ್ವದ ಶಬ್ದವೆಂದು ತಿಳಿಸಿ, ಅದಕ್ಕೆ ಅರ್ಥವಾಗಿ ಜೈನ ಯಕ್ಷಿ, ಜಿನಶಾಸನದೇವತೆ, ಪದ್ಮಾವತಿ, ಅಂಬಿಕೆ, ಕೂಷ್ಮಾಂಡಿನಿಯೆಂದು ಸೂಚಿಸಿದ್ದಾರೆ. ಮುಂದಿನ ಕನ್ನಡ ನಿಘಂಟುವಿನ ಮುದ್ರಣದಲ್ಲಾದರೂ ಮೇಲೆ ಹೇಳಿರುವ ಅರ್ಥಗಳನ್ನು ದಾಖಲಿಸಿ ಜತೆಗೆ ''ಅತ್ತಿಮಬ್ಬೆ'' ಎನ್ನುವ ವಿಶೇಷ ಅರ್ಥವನ್ನು ಸೂಚಿಸಬೇಕೆಂದು ಸಲಹೆ ನೀಡಿದ್ದಾರೆ.

ಡಾ.ಹಂಪನಾ ಅವರ ಸಲಹೆ, ಚರ್ಚೆ, ವಿವರಣೆ ಸಮಂಜಸವಾಗಿದೆ. ''ಘಟಾಂತಿಕೆ'' ಎಂಬ ಶಬ್ದಕ್ಕೆ ಜೈನಯಕ್ಷಿ, ಜಿನಶಾಸನದೇವತೆ ಎಂಬ ಮೂಲಾರ್ಥವಿದೆ. ಜಿನಶಾಸನದೇವಿಯೆಂದರೆ ಪದ್ಮಾವತಿದೇವಿಯೆಂಬ ಯಕ್ಷಿ. ಅತ್ತಿಮಬ್ಬೆಯಾದರೋ ಜಿನಧರ್ಮ ಪತಾಕೆ ಎಂಬ ಬಿರುದಾಂಕಿತಳು. ಜೈನ ಧರ್ಮದ ಕಠಿಣವಾದ ವ್ರತ, ತಪಸ್ಸು, ಉಪವಾಸ ನೇಮಾಚರಣೆಗಳನ್ನು ಚಾಚೂ ತಪ್ಪದೆ ಪಾಲಿಸಿದವಳು. ಜೈನಧರ್ಮವು ದಾನದ ಸಾರ್ಥಕತೆಯನ್ನು ಮೈಗೂಡಿಸಿಕೊಂಡಿದೆ. ಅತ್ತಿಮಬ್ಬೆಯಂತೂ, ದಾನವಿನೋದೆ, ದಾನಚಿಂತಾಮಣಿಯೆಂಬ ಬಿರುದಾಂಕಿತಳು. ಹಾಗೂ ಜಿನಧರ್ಮ ಪತಾಕೆ, ಹೀಗೆ ಪದ್ಮಾವತಿದೇವಿ, ಯಕ್ಷಿಯ ಹಾಗೆ ಜಿನಶಾಸನ ದೇವಿಯಂತೆ ಪ್ರಭಾವಶಾಲಿಯಾಗಿದ್ದಳು. ಆದುದರಿಂದಲೇ ಅವಳಿಗೆ ''ಘಟಾಂತಿ''ಕೆ ಎಂಬ ಬಿರುದು ಉಚಿತವಾಗಿದೆ.

ಕವಿವರ ಕಾಮಧೇನು ಎನ್ನುವುದು ಅತ್ತಿಮಬ್ಬೆಯ ಮತ್ತೊಂದು ಮಹತ್ವಪೂರ್ಣವಾದ ಬಿರುದು. ಕವಿಗಳಾಗಿ ಶ್ರೇಷ್ಠವಾದ ಕಾಮಧೇನುವೆಂದರೆ ಅತ್ತಿಮಬ್ಬೆ. ಕವಿಗಳಿಗೆ ಆಶ್ರಯ ಕೊಡುವ ಪುಣ್ಯಕಾರ್ಯವನ್ನು ಆಕೆಯ ಪೂರ್ವಜರೇ ಮಾಡಿಕೊಂಡು ಬಂದಿದ್ದರು. ಆಕೆಯ ಅಪ್ಪ ಚಿಕ್ಕಪ್ಪಂದಿರ ಮನೆ ''ಪಂಡಿತ ಮಂಡಳಿಗೆ ತವರ್ಮನೆಯಂತೆ ಇತ್ತು.[೬೭] ಅದನ್ನೇ ಅತ್ತಿಮಬ್ಬೆ ಮುಂದುವರೆಸಿಕೊಂಡು ಬಂದಳು.''

ಹೀಗೆ ಅತ್ತಿಮಬ್ಬೆಗೆ ಇರುವ ಬಿರುದುಗಳಾದ ಜಿನಶಾಸನದೀಪಿಕೆ, ಅಕಳಂಕ ಚರಿತೆ, ಕವಿವರ ಕಾಮಧೇನು, ಗುಣದಂಕಕಾರ್ತಿ ಜಿನಧರ್ಮ ಪತಾಕೆ, ದಾನಚಿಂತಾಮಣಿ, ದಾನವಿನೋದೆ ಎನ್ನುವವುಗಳು ಅತ್ತಿಮಬ್ಬೆಯ ವ್ಯಕ್ತಿತ್ವಕ್ಕೆ ಸಂದ ಗೌರವವಾಗಿದೆ. ಇವುಗಳಲ್ಲದೆ ರನ್ನ ಕವಿಯು ಅಜಿತಪುರಾಣ ಕಾವ್ಯದಲ್ಲೂ, ಲಕ್ಕುಂಡಿಯ ಶಾಸನದಲ್ಲೂ ಕೂಡ ಅತ್ತಿಮಬ್ಬೆಯನ್ನು ''ಮಹಾಸತೀ ತಿಲಕೆ'' ಹಾಗೂ ಮಹಾ ಮಹಾಸತಿ ರತ್ನಂ'' ಎಂದು ಗೌರವಿಸಿದ್ದಾನೆ.[೬೮]

ಬ್ರಹ್ಮಶಿವನು ಸಮಯ ಪರೀಕ್ಷೆಯಲ್ಲಿ ಅತ್ತಿಮಬ್ಬೆಯನ್ನು ಗುಣದ ಕಣಿ, ದಾನಚಿಂತಾಮಣಿ, ವಿಮಳ ಚರಿತ್ರೆ, ಜೈನಶಾಸನ ರಕ್ಷಾಮಣಿ, ಸಜ್ಜನೈಕ ಚೂಡಾಮಣಿ, ಅಕಳಂಕ ಚರಿತೆ, ಜಿನಕರಣ ಕಂಜ, ಕಿಂಜಲ್ಕಪುಂಜ ರಂಜಿತೆ, ಸರ್ವಕಳಾವಿದೆ. ಘಟಾಂತಿಕೆ, ದಾನವಿನೋದೆಯೆಂಬ ನಾನಾ ಬಿರುದುಗಳನ್ನಿತ್ತು ಹೊಗಳಿದ್ದಾನೆ.[೬೯]

ಆ. ಪವಾಡಗಳು

ಇಂದಿನ ಯುಗದಲ್ಲಿ ಪವಾಡಗಳನ್ನು ವಸ್ತು ದೃಷ್ಟಿಯಿಂದ ಮತ್ತು ವೈಜ್ಞಾನಿಕ ಮನೋಭಾವದಿಂದ ನೋಡಲಾಗುತ್ತಿದೆ. ಇದು ಆರೋಗ್ಯಕರವೂ ಹೌದು. ಹೀಗಿದ್ದರೂ ಹಿಂದೂ ಪರಂಪರೆಯಲ್ಲಿ ಎಷ್ಟೋ ಪವಾಡ ಪುರುಷರನ್ನು ಕಂಡಿದ್ದೇವೆ. ಈ ಪವಾಡ ಪರುಷರು ಒಂದಲ್ಲ ಒಂದು ರೀತಿಯಲ್ಲಿ ಆಧ್ಯಾತ್ಮಿಕ ಸಾಧನೆ ಮಾಡಿಕೊಂಡು "ಕೊನರನ್ನು ಚಿಗುರಿಸಿದ, ಬರಡನ್ನು ಹೈನಿಸಿದ" ಮಹಾಮಹಿಮರು. ಹೀಗಾಗಿ ಪವಾಡವನ್ನು ಅತಿಮಾನುಷ ಶಕ್ತಿಯೆಂದು ಕರೆಯಬಹುದೆ? ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಧರ್ಮ ಮತ್ತು ವಿಜ್ಞಾನ ಇವರೆಡೂ ಮನುಷ್ಯನ ಬೌದ್ಧಿಕ ವಿಕಸನದಲ್ಲಿ ಜನ್ಮ ತಳೆದಿವೆ. ಬರು ಬರುತ್ತ ತನ್ನ ಕುತೂಹಲದ ಪ್ರಶ್ನೆಗಳಿಗೆ ಧರ್ಮಕ್ಕಿಂತ ಸ್ಪಷ್ಟವಾಗಿ ಉತ್ತರಿಸಬಲ್ಲದ್ದು ಕೇವಲ ವಿಜ್ಞಾನ ಮಾತ್ರ ಎಂಬುದನ್ನು ಮನುಷ್ಯ ಅರ್ಥೈಸಿಕೊಂಡನು. ಆದರೂ ಮನುಷ್ಯನಿಗೆ ಎರಡು ರೀತಿಯ ಆಲೋಚನಾ ಕ್ರಮಗಳಿವೆ. ಅಭೂತಪೂರ್ವವಾದ ಜ್ಞಾನವೆಂದು ಹೇಳಿದ ಯಾವುದೇ ಸಂಗತಿಯನ್ನು ಏನನ್ನೂ ಹೇಳಲಾರದೆ ಒಪ್ಪಿಕೊಳ್ಳುವುದು ಇದು ಧರ್ಮಶ್ರದ್ಧೆಯನ್ನು ಆಧರಿಸಿರುವ ಯೋಚನಾ ಪದ್ಧತಿ. ಆದರೆ ಮತ್ತೊಂದು ಆಲೋಚನಾಕ್ರಮ ವಿಜ್ಞಾನ ಆಧಾರವಾದದ್ದು. ಲಭ್ಯವಿರುವ ಸಾಕ್ಷಿ, ಆಧಾರ, ಪುರಾವೆಗಳಿಂದ ಯಾವುದೇ ಸಂಗತಿಯನ್ನು ತತ್‌ಕ್ಷಣ ನಂಬಲಾರದೆ, ತನ್ನಲ್ಲಿ ಅಂತರ್ಗತವಾಗಿರುವ ಪ್ರಶ್ನೆಗಳನ್ನು ನಿರ್ವಿಕಾರವಾಗಿ ಕೇಳುವ ಹಕ್ಕನ್ನು ವೈಜ್ಞಾನಿಕ ಆಲೋಚನಾ ಕ್ರಮ ಹೊಂದಿದೆ.

ಅದ್ಭುತ ವಿದ್ಯಾಮಾನಗಳನ್ನು ಅಚ್ಚರಿಯಾಗುವ ಹಾಗೆ ಪ್ರದರ್ಶಿಸುವುದೇ ಪವಾಡ. ಇದು ವಿಜ್ಞಾನದ ವ್ಯಾಪ್ತಿಗೆ ನಿಲುಕಲಾರದ್ದು. ಪೌರಾಣಿಕ ದೇವರೆಲ್ಲರೊಂದಿಗೆ ಈ ಪವಾಡಗಳನ್ನು ಬೆಸೆಯಲಾಗಿದೆ. ಒಂದು ಸತ್ಯವಾದ ಮಾತೆಂದರೆ ಪವಾಡ ಮಾಡುವ ಸಾಮರ್ಥ್ಯ ಶಕ್ತಿಯೆ ದೈವತ್ವ. ಅಥವಾ ದೈವತ್ವದ ಅಂತಿಮ ಪ್ರಮಾಣ. ಅತ್ತಿಮಬ್ಬೆಯನ್ನು ಅವಳ ಸಮಕಾಲೀನ ಜನರು ದೇವರೆಂದು ಭಾವಿಸಿದ್ದರು. ಅತ್ತಿಮಬ್ಬೆಯ ಉದಾತ್ತ ಬದುಕನ್ನು ಕಣ್ಣಾರೆ ಕಂಡ ರನ್ನ ಕವಿಯು ಅವಳ ದೈವೀಗುಣಗಳನ್ನು ಅಂದಿನ ಎಲ್ಲ ಜನರ ಪರವಾಗಿ ಗುಣಗಾನ ಮಾಡಿದ್ದಾನೆ.

"ಅಳುರದು ಕೀರ್ತು, ಮುಟ್ಟದು ವಿಷಾಹಿ ಮಹಾಸತಿಯಿರ್ದಮಂಡಲಂ
ಬೆಳೆವುದು ಬೇಡಿದಂತೆ ಮರೆಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ
ತಿಳಕ ಪವಿತ್ರೆಯಂ ಗಣಪವಿತ್ರೆಯನಾಸತಿಯಂ ಮಹಾಸತೀ
ತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯ ಕಾರಣಂ [೭೦]

ಈ ಪದ್ಯದಲ್ಲಿ ಅಡಕವಾಗಿರುವ ಭಾವಗಳನ್ನು ನೋಡಿದರೆ ರನ್ನನು ಅತ್ತಿಮಬ್ಬೆಗೆ ಕೊಟ್ಟಿರುವ ಮಹತ್ವಪೂರ್ಣವಾದ ಸ್ಥಾನ ಎಂತಹದ್ದೆಂದು ತಿಳಿದುಬರುತ್ತದೆ. "ಜಿನವಿಶುದ್ಧಿಯನೆ ನೆಗರ್ದಿ", "ಅಜಿತ ಜಿನಾಂಬಿಕೆ", "ವಿಜಯ ಸೇನಾದೇವಿ"ಗಿಂತ ಒಂದು ತೂಕ ಅತ್ತಿಮಬ್ಬೆಯೇ ಹೆಚ್ಚು ಎಂಬುದು ಕವಿಯ ಸ್ಪಷ್ಟ

[illegible]

ಭಾವವಾಗಿದೆ. ಆದುದರಿಂದಲೇ ಅವಳಿದ್ದ ನಾಡಿನಲ್ಲಿ ಕಿಚ್ಚು ಹರಡುವುದಿಲ್ಲ, ವಿಷಸರ್ಪ ಕಚ್ಚುವುದಿಲ್ಲ, ಬೇಡಿದಷ್ಟು ಬಯಸಿದಾಗ ಮಳೆ ಬೆಳೆ! ರಾಜ್ಯವಂತೂ ವಿಸ್ತರಿಸುತ್ತಲೇ ಇರುತ್ತದೆ. ಇಂತಹ ಕೀರ್ತಿಗೆ ಪಾತ್ರಳಾದವಳು ಅತ್ತಿಮಬ್ಬೆ. ಅವಳು ಭೂತಿಲಕ ಪವಿತ್ರೆ, ಗುಣ ಪವಿತ್ರೆ, ಅಂತಹ ಮಹಾಸತಿಯ ನಾಮಸ್ಮರಣೆಯೇ ಪುಣ್ಯಕಾರ್ಯವೆಂಬುದು ಮೇಲಿನ ಪದ್ಯದ ಭಾವ. ಯಾಕೆಂದರೆ ಅವಳು ದೈವೀ ಸ್ವರೂಪಳು ಎಂಬಂತೆ ಕವಿ ಭಾವಿಸಿದ್ದಾನೆ.

ಅತ್ತಿಮಬ್ಬೆಯ ಜೀವನ ವೈವಿಧ್ಯತೆಯಿಂದ ಕೂಡಿತ್ತು. ಅವಳು ರಣಕಲಿ, ಧರ್ಮಕಲಿ, ದಾನಕಲಿಯಾಗಿರುವದನ್ನು ಒಪ್ಪಿಕೊಂಡ ಹಾಗೆ, ಪವಾಡ ಸ್ತ್ರೀ ಎನ್ನುವುದನ್ನು ದಂತಕತೆಗಳೆಂದು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಅವಳು ಹಲವಾರು ಪವಾಡಗಳನ್ನು ಮಾಡಿದಳೆಂದು ಲಕ್ಕುಂಡಿಯ ಶಾಸನ ಮತ್ತು ರನ್ನ ಕವಿಯ ಅಜಿತಪುರಾಣ ಹೇಳುತ್ತವೆ. ಶಾಸನಗಳಲ್ಲಿ ಅತ್ತಿಮಬ್ಬೆಯು ಮಾಡಿದಳು ಎನ್ನಲಾದ ಏಳು ಪವಾಡಗಳ ದಾಖಲೆಯು ದೊರೆಯುತ್ತದೆ.

೧. ಅಕಾಲ ವೃಷ್ಟಿ
೨. ಮದ್ದಾನೆಯ ಸೊಕ್ಕನ್ನು ಇಳಿಸಿದ್ದು
೩. ಗೋದಾವರಿ ನದಿ ಹರಿಯುವುದನ್ನು ಬಿಟ್ಟು ದಾರಿ ಮಾಡಿಕೊಟ್ಟಿದ್ದು
೪. ಜಿನಮೂರ್ತಿ ಮರಳಿ ಕೈಗೆ ದೊರಕಿದ್ದು
೫. ಅಗ್ನಿಯನ್ನು ಜಿನಗಂಧೋದಕದಿಂದಲೇ ನಂದಿಸಿದ್ದು
೬. ಸವತಿಯಿಂದ ನೀರಿಗೆ ತಳ್ಳಲ್ಪಟ್ಟರೂ ಬದುಕಿ ಬಂದದ್ದು
೭. ಜಿನನನ್ನು ಕಾಣುವವರೆಗೂ ಆಹಾರವನ್ನು ತೊರೆದದ್ದು.

೧. ಅಕಾಲ ವೃಷ್ಟಿ

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತಪೋಗಿ ಕಾ
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇರೆ ತಜ್ಜಿನಾ
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾದುದಕಾಲವೃಷ್ಟಿಯಾ
ಯ್ತೆನ್ನದೊ ದೇವಭಕ್ತಿಗದು ಚೋದ್ಯಮೇ ಕೊಳ್ಳುವೆ ಪುಷ್ಪವೃಷ್ಟಿಗಳ್ [೧೧]

ಜಿನಶಾಸನ ದೀಪಿಕೆ ಎಂಬ ಕೀರ್ತಿಪಡೆದ ಅತ್ತಿಮಬ್ಬೆ, ಉನ್ನತ ಕುಕ್ಕಟೇಶ್ವರ ಎಂದರೆ ಎತ್ತರದ ಪರ್ವತ ಮೇಲಿರುವ ಬೆಳಗೊಳದ ಗೊಮ್ಮಟೇಶ್ವರನನ್ನು ಭಕ್ತಿಯಿಂದ ಕಾಣಲು ಬಂದಿದ್ದಳು. ಇಂದಿನ ಶ್ರವಣಬೆಳ್ಗೊಳದ ಗೊಮ್ಮಟೇಶ್ವರನೇ ಉನ್ನತ ಕುಕ್ಕುಟೇಶ್ವರ - ಇದನ್ನು ಬೊಪ್ಪಣ್ಣ ಕವಿಯ ಶಾಸನದಲ್ಲಿ[೨೨] ದಕ್ಷಿಣದ ಕುಕ್ಕುಟೇಶ್ವರ ಎಂದಿದೆ. ಈ ಜಿನೇಶ್ವರನನ್ನು ನೋಡುವವರೆಗೂ ಏನೊಂದೂ ಆಹಾರವನ್ನು ತೆಗೆದುಕೊಳ್ಳದಾಗ ಕುಕ್ಕುಟೇಶ್ವರನ ಬಳಿ ಅಕಾಲವೃಷ್ಟಿಯಾಗಿ ಅವಳ ಆಯಾಸವೆಲ್ಲ ಪರಿಹಾರವಾಯಿತು. ಅವಳದು ಪವಾಡಸದೃಶ ವ್ಯಕ್ತಿತ್ವ.

ಆದುದರಿಂದ ರನ್ನ ಕವಿಯು "ಅತ್ತಿಮಬ್ಬೆಯ ದೈವಭಕ್ತಿಗೆ ಪುಷ್ಪವೃಷ್ಟಿಯಾದರೂ ಅಚ್ಚರಿಯಿಲ್ಲ" ಎಂಬ ಉದ್ಗಾರವನ್ನು ತೆಗೆದಿದ್ದಾನೆ.

ಚಾವುಂಡರಾಯನು ಗೊಮ್ಮಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿ ಹಲವು ದಿನಗಳಾಗಿದ್ದವು. ಇದರ ಪ್ರಖ್ಯಾತಿ ಕನ್ನಡ ನಾಡಿನ ಮೂಲೆ ಮೂಲೆಗೂ ವ್ಯಾಪಿಸಿರಬೇಕು. ಈ ವಿಷಯವನ್ನು ಅತ್ತಿಮಬ್ಬೆಯು ಕೇಳಿ, ಆ ಕುಕ್ಕುಟೇಶ್ವರನ ದರ್ಶನ ಮಾಡಿಕೊಳ್ಳಬೇಕೆಂಬ ಉತ್ಕಟ ಬಯಕೆಯನ್ನು ಹೊಂದಿದ್ದಾಳೆ. ಅತ್ತಿಮಬ್ಬೆಯಂಥ ಶ್ರಾವಕಿಗೆ ಜಿನದರ್ಶನ ಬಯಕೆ ಸಹಜವಾದದ್ದು. ಹಾಗೆಯೇ ಜಿನದರ್ಶನವಾಗುವವರೆಗೆ ಅನ್ನ ನೀರು ಮುಟ್ಟಲಾರೆನೆಂಬ ಕಠಿಣ ನಿಯಮವನ್ನು ಅತ್ತಿಮಬ್ಬೆ ಪಾಲಿಸಿ, ಉತ್ತರದಲ್ಲಿರುವ ಚಾಳುಕ್ಯ ರಾಜಧಾನಿಯಿಂದ ಹಿಡಿದು ದಕ್ಷಿಣದಲ್ಲಿರುವ ಶ್ರವಣಬೆಳ್ಗೊಳದವರೆಗೆ ಪ್ರಯಾಣಿಸಿ ಬೆಟ್ಟವನ್ನೇರಿ ಹೋಗಿ ಗೊಮ್ಮಟೇಶ್ವರನ ಬಳಿ ಬಂದಳು. ಆಗ ಮಳೆಗಾಲವಾಗಿರಲಿಲ್ಲ. ಆದರೂ ಅತ್ತಿಮಬ್ಬೆಯ ಮಾರ್ಗಾಯಾಸ ಪರಿಹಾರವಾಗುವಂತೆ ಮಳೆ ಬಂದಿತು! ರನ್ನ ಕವಿಯು ಈ ಅಚ್ಚರಿಯನ್ನು ಕಣ್ಣಾರೆ ಕಂಡಿರಬೇಕು. ಆದುದರಿಂದಲೇ "ದೇವಭಕ್ತಿಗದು ಚೋದ್ಯಮೇ ಕೊಳ್ಳುವ ಪುಷ್ಪವೃಷ್ಟಿಗಳ್ ಎಂದು ಕೇಳಿಕೊಂಡಿದ್ದಾನೆ.

೨. ಮದ್ದಾನೆಯ ಸೊಕ್ಕನ್ನು ಇಳಿಸಿದ್ದು

"ಮದವತ್ಕರಿ ಸೆರೆಯಂ ಪರೆ
ದೊದವಿದ ಮುಳಸಿಂದೆ ಭೋರನೆಯ್ತಂದೊಡದ
ರ್ಕದಿರದಿರೆ ಭಕ್ತಿಯಿಂದದು
ಪದಯುಗಕೆರಿಗಿದುದು ದಾನಚಿಂತಾಮಣಿಯ.[೬೩]

ಬಂಧನದಿಂದ ತಪ್ಪಿಸಿಕೊಂಡ ಉನ್ಮತ್ತ ಆನೆಯೊಂದು, ಅತ್ತಿಮಬ್ಬೆಯ ಬಳಿ ಬಂದಾಗ ಅದು ಶಾಂತವಾಗಿ ಅವಳ ಪಾದಕ್ಕೆರುತ್ತದೆ. ಇದನ್ನು ರನ್ನ ಕವಿಯು ಅತ್ತಿಮಬ್ಬೆಯ ಮಹಿಮೆಯೆನ್ನುವಂತೆ ಸಂಗ್ರಹಿಸಿದ್ದಾನೆ. ಅದು ಪವಾಡವೇ ಎನ್ನುವಂತಿದೆ. ಆದರೆ ಮದವೇರಿದ ಆನೆ ಯಾವ ಸ್ಥಳದಲ್ಲಿ ಯಾವಾಗ ಎನ್ನುವುದು ಖಚಿತವಿಲ್ಲ.

೩. ಗೋದಾವರಿ ನದಿ ಹರಿಯುವದನ್ನು ಬಿಟ್ಟು ದಾರಿ ಮಾಡಿಕೊಟ್ಟಿದ್ದು

ನರಪನ ಬೆಸದಿಂ ಜಿನನಂ
ಶಿರದೊಳ್ ಸಲೆ ತಾಳ್ದಿ ದಾನಚಿಂತಾಮಣಿ ನಿ
ರ್ಭರ ಗೋದಾವರಿಯಂ ಪುಗೆ
ಪರಿಯುಡುಗಿದುದೆಂದೊಡೊಳ್ಪನಧನೇರ್ವೆಂ[೬೪]

ಜಿನಭಕ್ತೆಯಾದ ಅತ್ತಿಮಬ್ಬೆಯು ತಲೆಯಮೇಲೆ ಜಿನಬಿಂಬವನ್ನು ಹೊತ್ತು ಗೋದಾವರಿ ನದಿಯನ್ನು ದಾಟಬೇಕಾಗಿರುವಾಗ ನದಿ ಹರಿಯುವುದನ್ನೇ ನಿಲ್ಲಿಸಿ ದಾರಿ ಮಾಡಿಕೊಡುತ್ತದೆ. ಈ ಪವಾಡವನ್ನು "ಸಮಯ ಪರೀಕ್ಷೆ"ಯಲ್ಲಿ ಬ್ರಹ್ಮಶಿವನು ಸಹಿತ ವರ್ಣಿಸಿದ್ದಾನೆ.

ಭರದಿಂ ಬಂದೊತ್ತೆ ಮುಂದೆಮ್ಮಸಕದೆಸಕದಿಂ ತೀವಿ ಮುಂದೊತ್ತ ಗೋದಾ
ವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗಮಿನ್ನಬ್ಬ ನೀನೆಂ
ದೆರೆಯಲ್ಸರ್ವಜ್ಞನಂ ಪೊತ್ತಗಿಯದೆ ಪೊಕ್ಕುಡಾ ವಾರಿ ಪೂರಂ
ಬಂದತ್ತಾ ಚಕ್ರಿಪಾಯ್ದಂ ತೊರೆಯನಮಳ ಸಮ್ಯಕ್ತ್ವ ವಿಖ್ಯಾತಿಯಿಂದಂ [೭೫]

ತೈಲಪ ಚಕ್ರವರ್ತಿ ತನ್ನ ಸೈನ್ಯದ ಜತೆಗೂಡಿ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಗೋದಾವರಿಯು ತುಂಬಿ ಭರದಿಂದ ಭೋರ್ಗರೆಯುತ್ತಿತ್ತು. ಅತೀವ ಚಿಂತಾಕ್ರಾಂತನಾದ ಚಕ್ರವರ್ತಿಯು ಅತ್ತಿಮಬ್ಬೆಯನ್ನೇ ತಮ್ಮನ್ನೆಲ್ಲಾ ಕಾಪಾಡಬೇಕೆಂದು ಅತ್ತಿಮಬ್ಬೆಯನ್ನೇ ಕೇಳಿಕೊಂಡನಂತೆ ಅತ್ತಿಮಬ್ಬೆ ಜಿನಬಿಂಬವನ್ನು ತಲೆಯಲ್ಲಿ ಧರಿಸಿ ಜಿನ ನಾಮಸ್ಮರಣೆ ಮಾಡುತ್ತಾ ತುಂಬಿ ಹರಿವ ಗೋದಾವರಿಯಲ್ಲಿಳಿದಾಗ, ಸೈನ್ಯ, ಚಕ್ರವರ್ತಿ ಸಹಿತ ಅಚ್ಚರಿಯಾಗುವಂತೆ, ಹರಿವ ಪ್ರವಾಹ ಎರಡು ಭಾಗವಾಗಿ ದಾರಿಯನ್ನು ಮಾಡಿಕೊಡುತ್ತದೆ.

ಅಜಿತಪುರಾಣ ಸಮಪರೀಕ್ಷೆಯಲ್ಲಿ ವರ್ಣಿತವಾಗಿರುವ ಗೋದಾವರಿ ದಾರಿ ಮಾಡಿಕೊಟ್ಟಿರುವ ಈ ಪವಾಡವನ್ನು ಬೆಳ್ಗೊಳದ ಶಾಸನವು ಸಹಿತ ಹೇಳುತ್ತದೆ.[೭೬]

೪. ಜಿನಮೂರ್ತಿ ಮರಳಿ ಕೈಗೆ ದೊರಕಿದ್ದು.

ಮುದದರ್ಚಿಪ ಜಿನಬಿಂಬಂ
ನದಿಯೊಳ್ ಕಯ್ಬುರ್ದುಕಿ ಬಿರ್ದೊಡದು ಒಪ್ಪಿನಮು
ಣ್ಪುದನುರುತಿರುಲೆಂಟು ದಿನ
ಕ್ಕದು ಬಂದುದು ಕಯ್ಗೆ ದಾನಚಿಂತಾಮಣಿಯ [೭೭]

ಅತ್ತಿಮಬ್ಬೆ ಪೂಜಿಸುತ್ತಿದ್ದ ಜಿನಬಿಂಬ ನದಿಯೊಳಗೆ ಕೈ ಜಾರಿ ಬಿದ್ದಾಗ ಅದು ಸಿಗುವವರೆಗೆ ಅತ್ತಿಮಬ್ಬೆ ಆಹಾರವನ್ನು ತೊರೆಯುತ್ತಾಳೆ. ಎಂಟು ದಿನಗಳ ಬಳಿಕ ಆ ಜಿನಬಿಂಬ ಅವಳ ಕೈಗೆ ಮರಳಿ ದೊರೆಯುತ್ತದೆ.

೫. ಅಗ್ನಿಯನ್ನು ಜಿನ ಗಂಧೋಕದಿಂದಲೇ ನಂದಿಸಿದ್ದು

ಪ್ರಳಯಾಗ್ನಿಯಂತೆ ಕಟಕಮ
ನೊಳಕೊಂಡಳುರ್ವಗ್ನಿ ದಾನಚಿಂತಾಮಣಿ ನಿ
ರ್ಮಳ ಜಿನ ಗಂಧೋದಕಂ
ತಳಿಯಲ್ಕುಪಶಮಿಸಿತೆಂದೊಡೇಬಣ್ಣಿಸುವೆಂ [೭೮]

ಒಮ್ಮೆ ರಾಜಧನಿಯಲ್ಲಿ ಸೇನಾ ಬಿಡಾರಗಳ ಸುತ್ತ ಹಬ್ಬಿದ ಬೆಂಕಿಯ ಉರಿಯನ್ನು ಜಿನತೀರ್ಥ, ಗಂಧೋದಕಗಳಿಂದಲೇ ನಂದಿಸುತ್ತಾಳೆ.

೬. ಸವತಿಯಿಂದ ನೀರಿಗೆ ತಳ್ಳಲ್ಪಟ್ಟರೂ ಬದುಕಿ ಬಂದದ್ದು

ಒಡನೇಳು ಸವತಿ ನೂಂಕ
ಲ್ಕೊಡರಿಸೆ ತೊರೆಯೊಳಗೆ ಪರುಗಲತ್ತಿತ್ತಲಣಂ
ಮಿಡುಕದೆ ತಿರಿಯುತ್ತಿರೆ ಕಂ
ಡಡಿಗೆರಿಗಿದಳತ್ತಿಯಬ್ಬೆಗತಿ ಭಯವಶದಿಂ [೭೯]

ಸವತಿಯು ಅತ್ತಿಮಬ್ಬೆಯನ್ನು ನಾವೆಯಲ್ಲಿ ಕೆಳಗೆ ತಳ್ಳುವುದಕ್ಕೆ ಪ್ರಯತ್ನಿಸಿದಳು. ಕೂಡಲೆ ದೋಣಿ ಗಿರಕಿ ಹೊಡೆಯುವದಕ್ಕೆ ಆರಂಭಿಸಿತು. ತನ್ನ ತಪ್ಪಿನ ಅರಿವಾಗಿ ಭಯದಿಂದ ಅತ್ತಿಮಬ್ಬೆಗೆ ನಮಸ್ಕರಿಸುತ್ತಾಳೆ.

೭. ಜಿನನನ್ನು ಕಾಣುವವರೆಗೂ ಆಹಾರವನ್ನು ತೊರೆದದ್ದು.

ಜಿನಧರ್ಮಪತಾಕೆಗೆ ವಿಮ
ಳ ನರ್ಮದಾ ನದಿಯ ಕುರುಳ ಪಾವೆಯ ಜಿನನಂ
ವಿನುತಂ ಕಾಣೆನೆಗಂ ಕೂ
ಟಿನೆ ತೊರೆದುದು ಸಂದುದನ್ತದಾಜನ್ಮಾಂತಂ [೮೦]

ನರ್ಮದಾ ನದಿಯ ಕುರುಳಪಾವೆಯ ಜಿನನನ್ನು ಕಾಣುವವರೆಗೆ ಆಹಾರವನ್ನು ಅತ್ತಿಮಬ್ಬೆಯು ತೊರೆಯುತ್ತಾಳೆ.

ಈ ರೀತಿಯಾಗಿ ಕಂದ ಪದ್ಯಗಳಲ್ಲಿ ಅತ್ತಿಮಬ್ಬೆಯ ಜೀವನದಲ್ಲಿ ನಡೆದಿರುಬಹುದಾದ ಘಟನೆಗಳನ್ನು ಪವಾಡದಂತೆ ರನ್ನ ಕವಿಯು ಸಂಗ್ರಹಿಸಿದ್ದಾನೆ. ಅವುಗಳ ಶಾಸನೋಕ್ತವು ಆಗಿವೆ. ಈ ಏಳು ಪವಾಡಗಳು ವಿವಿಧ ಮೂಲಗಳಿಂದ ಅತ್ತಿಮಬ್ಬೆಯ ಜೀವನದಲ್ಲಿ ಬೆಸೆದುಕೊಂಡಿವೆ. ಮೇಲುನೋಟಕ್ಕೆ ಇವುಗಳು ಪವಾಡದಂತೆ ಅನ್ನಿಸಿದರೂ ಒಳಹೊಕ್ಕು ನೋಡಿದರೆ ಪವಾಡಗಳ ಬೆನ್ನಲ್ಲೆ ಸತ್ಯ ಘಟನೆಗಳಿವೆ. ಆದರೆ ಈ ಸತ್ಯ ಘಟನೆಗಳು ಪವಾಡದ ರೂಪ ತಳೆದದ್ದು ಒಂದು ಸೋಜಿಗವೇ ಸರಿ!

ಜಗತ್ತಿನಲ್ಲಿ ಹಲವರು ದಾನದಿಂದ, ಹಲವರು ಧರ್ಮದಿಂದ, ಹಲವರು ಶೌರ್ಯ ಸಾಹಸದಿಂದ ಇನ್ನೂ ಹಲವರು ಧರ್ಮ, ಸಮಯಪ್ರಜ್ಞೆಯಿಂದ ಕೀರ್ತಿಯನ್ನು ಸಂಪಾದಿಸಿಕೊಳ್ಳುತ್ತಾರೆ. ಆದರೆ ಅತ್ತಿಮಬ್ಬೆಯು ದಾನ, ಧರ್ಮ, ಶೌರ್ಯ, ಸಮಯಪ್ರಜ್ಞೆ, ಸಮ್ಯಕ್ತ್ವಭಾವನೆ, ಶೀಲವ್ರತಾಚಾರಣೆ ಇವುಗಳೆಲ್ಲದರಿಂದ ಕೀರ್ತಿಶಾಲಿಯಾಗಿರುವದನ್ನು ಅವಳಿಗೆ ಸಂದ ಬಿರುದುಗಳೇ ಹೇಳುತ್ತವೆ. ಅವಳ ವ್ಯಕ್ತಿತ್ವ ಅಚ್ಚರಿ ಮೂಡಿಸುವಂತಹದ್ದು. ಜನ ಸಾಮಾನ್ಯರಲ್ಲಿ ಇಷ್ಟು ಗುಣಗಳು ಒಬ್ಬನಲ್ಲಿರುವುದು ಅಸಾಧ್ಯವಾಗಿದೆ. ಆದುದರಿಂದ ಅವರು ಅತ್ತಿಮಬ್ಬೆಯನ್ನು ಅಸಾಮಾನ್ಯಳು ಎಂದು ಒಪ್ಪಿಕೊಂಡು ದೇವತೆಯೆಂದು ಕೊಂಡಾಡಿದ್ದು ತೀರ ಸಹಜವೇ ಆಗಿದೆ.

[illegible]

[illegible]

[illegible]

[illegible]

[illegible]

ಅತ್ತಿಮಬ್ಬೆಯ ಅನುಪಮ ವ್ಯಕ್ತಿತ್ವವನ್ನು ಕಂಡು ಅಚ್ಚರಿಗೊಂಡ ಅಂದಿನ ಜನತೆ ಅವಳ ಸಾಧನೆಗೆ ಅತೀಶಯದ ಬಣ್ಣವನ್ನು ಹಚ್ಚಿ, ಅವಳ ಸಾಧನೆಗಳನ್ನೇ ಪವಾಡಗಳನ್ನಾಗಿ ಪ್ರಚುರ ಪಡಿಸಿದ್ದಾರೆ. ಆದರೆ ಪವಾಡಗಳಾಗಿರುವ ಪ್ರಸಂಗಗಳು ಅತ್ತಿಮಬ್ಬೆಯ ಜೀವನದಲ್ಲಿ ನಡೆದ ಸತ್ಯ ಘಟನೆಗಳಾಗಿವೆ. ಅವಳ ಉದಾತ್ತ ಕಾರ್ಯಗಳ ಸಾಕ್ಷಿಗಳಾಗಿವೆ.

"ಗೋದಾವರಿ ನದಿ ಇಬ್ಭಾಗವಾಗಿದ್ದು" ಥಟ್ಟನೆ ಕೇಳಿದಾಗ ಪವಾಡದಂತೆ ಎನಿಸುತ್ತದೆ. ಇದು ಕೂಡ ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಹೇಳುವ ಒಂದು ಸತ್ಯಸಂಗತಿಯಾಗಿದೆ. ತುಂಬಿ ಹರಿಯುತ್ತಿರುವ ಗೋದಾವರಿ ಪ್ರವಾಹದ ಮುಂದೆ ಹೇಗೆ ದಾಟಬೇಕೆಂದು ತಿಳಿಯಲಾರದೆ ಚಕ್ರವರ್ತಿ ಅತ್ತಿಮಬ್ಬೆಯ ಸಲಹೆಯನ್ನು ಕೇಳಿದ್ದಾನೆ. ಅತ್ತಿಮಬ್ಬೆಯು ಆಳ, ಸುಳಿ, ಸೆಳೆತ, ಅಪಾಯರಹಿತವಾದ ಒಂದು ದಾರಿಯನ್ನು ತೋರಿಸಿದ್ದಾಳೆ. ಈ ಕಥೆ ಜನರ ಬಾಯಿಂದ ಬಾಯಿಗೆ ಸರಿದು ನದಿಯೇ ದಾರಿ ಮಾಡಿಕೊಟ್ಟಿತು ಎನ್ನುವಂತೆ ಪ್ರಚಾರವನ್ನು ಪಡೆದುಕೊಂಡಿತು. ಇಲ್ಲಿ ಗಮನಿಸಬಹುದಾದ ಅಂಶ ಯಾವುದೆಂದರೆ ಚಕ್ರವರ್ತಿಯೇ ಅತ್ತಿಮಬ್ಬೆಯ ಸಲಹೆಯನ್ನು ಕೇಳಿದ್ದು.

ಮದ್ದಾನೆಯನ್ನು ನೋಡಿದ ಜನ ಹುಚ್ಚೆದ್ದು ಹುಯ್ಲೆಬ್ಬಿಸಿದಾಗ ಆನೆಯ ಉನ್ಮತ್ತತೆ ಇನ್ನಷ್ಟು ಹೆಚ್ಚಾಗುತ್ತದೆ. ಆದರೆ ಜಿನ ಭಕ್ತಳು, ಶಾಂತ ಸ್ವಭಾವದ ಅತ್ತಿಮಬ್ಬೆ ಹಾಗೆ ಮಾಡದೆ ಸುಮ್ಮನಿದ್ದಾಗ, ಅವಳ ಗಂಭೀರ, ಶಾಂತ, ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಆನೆ ಸ್ತಿಮಿತಕ್ಕೆ ಬಂದಿದೆ. ಅಥವಾ ಆ ಆನೆಯು ಅತ್ತಿಮಬ್ಬೆಯ ಪೋಷಣೆಯೊಂದಿಗೆ ಬೆಳೆದಿರಲೂಬಹುದು. ಒಡತಿ ಎದುರಿಗೆ ಕಂಡಾಗ ಪ್ರೀತಿಯಿಂದ ಸುಮ್ಮನಾಗಿರಬಹುದು.

ಸೈನ್ಯವು ಬೀಡು ಬಿಟ್ಟಲ್ಲಿ ಆಕಸ್ಮಿಕವಾಗಿ ಭಯಂಕರವಾದ ಬೆಂಕಿ ಹೊತ್ತಿಕೊಂಡಾಗ ಅತ್ತಿಮಬ್ಬೆಯು ಅದನ್ನು ಜಿನ ಗಂಧೋದಕದಿಂದಲೇ ನಂದಿಸುತ್ತಾಳೆ. ಬೆಂಕಿಯನ್ನು ಕಂಡ ಜನಸ್ತೋಮ ಹಾಹಾಕಾರ ಮಾಡುತ್ತಿರುವಾಗ ಅಲ್ಲಿಗೆ ಬಂದ ಅತ್ತಿಮಬ್ಬೆಯು ವಿಚಲಿತಳಾಗದೆ ಜಿನನಾಮಸ್ಮರಣೆ ಮಾಡುತ್ತಾ ಜಿನ ಗಂಧೋದಕವನ್ನು ಚಿಮುಕಿಸಿದಾಗ ಬೆಂಕಿಯು ನಂದಿ ಶಾಂತವಾಗುತ್ತದೆ. ಹಾಹಾಕಾರ ಮಾಡುತ್ತಿದ್ದ ಜನತೆಗೆ ಅತ್ತಿಮಬ್ಬೆ ಸಮಾಧಾನ ಹೇಳಲಿಲ್ಲ. ಹೇಳಿದ್ದರೂ ಆ ಗದ್ದಲದಲ್ಲಿ ಅವರಿಗೆ ಅದು ಕೇಳಿಸುತ್ತಿರಲಿಲ್ಲ. ಆದುದರಿಂದ ಜನಕಲ್ಯಾಣದ ಭಾರವನ್ನು ಹೊತ್ತುಕೊಂಡ ಅತ್ತಿಮಬ್ಬೆಯು ಚತುರತೆಯಿಂದ ಜಿನಪೂಜೆಯ ಅಭಿಷೇಕಜಲವನ್ನು ಬೆಂಕಿಗೆ ಚಿಮುಕಿಸಿ ಅಲ್ಲಿದ್ದವರಿಗೆಲ್ಲ ನೀರು ಹಾಕಿರಿ ಎನ್ನುವಂತೆ ಪ್ರೇರೆಪಿಸಿದ್ದಾಳೆ. ಅವರೆಲ್ಲರೂ ಹಾಗೆಯೇ ಮಾಡಿರುವುದರಿಂದ ಬೆಂಕಿಯು ನಂದಿದೆ.

ಸವತಿಯೋರ್ವಳು (ಗುಂಡಮಬ್ಬೆ?) ಡೋಣಿಯಲ್ಲಿ ಪಯಣಿಸುತ್ತಿದ್ದಾಗ ಅತ್ತಿಮಬ್ಬೆಯನ್ನು ದಬ್ಬಬೇಕು ಎನ್ನುವಾಗ ಆ ನಾವೆಯೇ ಗಿರಕಿ ಹೊಡೆಯುವುದಕ್ಕೆ ಆರಂಭಿಸುತ್ತದೆ. ಯಾರೇ ಆಗಲಿ ಅವಳು ಸವತಿಯೇ ಆಗಿದ್ದರೆ ಸವತಿ ಮಾತ್ಸರ್ಯ ಸಹಜವಾದದ್ದೆ. ಸಹಜವಾದ ದ್ವೇಷದಿಂದಲೇ ಅತ್ತಿಮಬ್ಬೆಯನ್ನು ದಬ್ಬಬೇಕು ಎಂದಾಗ ದೋಣಿಯಲ್ಲಿ ಭಾರ ಒಂದು ಕಡೆ ಆದಂತಾಗಿ ಸಮತೋಲನ ತಪ್ಪಿ ಇನ್ನೇನು ಗಿರಕಿ ಹೊಡೆಯಬೇಕು ಅಷ್ಟರಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವದ ಅರಿವು ಇರುವ ಆ ಸವತಿ ಅವಳ ಪಾದಕ್ಕೆ ಒರಗಿ ಕ್ಷಮೆ ಯಾಚಿಸಿದ್ದಿರಬೇಕು.

ಹೀಗೆ ಬೇರೆ ಬೇರೆ ಕಡೆಗಳಿಂದ ಅತ್ತಿಮಬ್ಬೆಯ ಈ ಪವಾಡ ಪ್ರಸಂಗಗಳು ನಮಗೆ ದೊರೆಯುತ್ತವೆ. ಇಲ್ಲೆಲ್ಲಾ ಪವಾಡಕ್ಕಿಂತ ಹೆಚ್ಚಾಗಿ ಅತ್ತಿಮಬ್ಬೆಯ ಧಾರ್ಮಿಕ ಮನೋಭಾವನೆ, ಅವಳ ಸಮಯ ಪ್ರಜ್ಞೆಯೇ ಎದ್ದು ಕಾಣುತ್ತದೆ. ಅತ್ತಿಮಬ್ಬೆಯಿಂದ ಉಪಕೃತನಾಗಿ ಅವಳ ಗುಣಾತಿಶಯಗಳನ್ನು ಹೊಗಳಿದ ರನ್ನ ಕವಿಯು ಅಜಿತಪುರಾಣದ ಕಂದ ಪದ್ಯಗಳಲ್ಲಿ ಪವಾಡಗಳಂತೆ ಅವಳ ಮಹಿಮೆಯನ್ನು ವರ್ಣಿಸುತ್ತಾನೆ. ಇದು ಲಕ್ಕುಂಡಿ ಶಾಸನದಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ.

ಗುಣದಂಕಕಾರ್ತಿಯಾದ ಅತ್ತಿಮಬ್ಬೆ ಜನರನ್ನು ಅಪಾಯದಿಂದ ಪಾರುಮಾಡಿದ್ದಾಳೆ. ಕವಿಗಳಿಗೆ ಆಶ್ರಯವಿತ್ತಿದ್ದಾಳೆ, ದೇಹಿ ಎಂದವರಿಗೆ ಕೊಡುಗೈ ದಾನಿಯಾಗಿದ್ದಾಳೆ, ಏಕಾಗ್ರತೆಯಿಂದ ಉಪವಾಸದಂತಹ ಕಠಿಣವಾದ ವ್ರತ ನೇಮಾಚಾರಣೆಗಳನ್ನು ಮಾಡಿದ್ದಾಳೆ. ಇವನ್ನೆಲ್ಲಾ ಕಂಡ ಜನತೆ ಅವಳನ್ನು ದೇವತೆಯಂತೆ ಕಂಡು ಗೌರವಿಸಿದ್ದಾರೆ. ಈ ಗೌರವ ಬರು ಬರುತ್ತಾ ಪವಾಡಗಳಾಗಿವೆ. ಮಹಾಭಾರತ, ರಾಮಾಯಣದಂತಹ ಪವಾಡದಿಂದ ಕೂಡಿದ ಗ್ರಂಥಗಳಿಂದ ಪ್ರಭಾವಿತರಾದ ಪವಾಡಪ್ರಿಯ ಜನರ ಬಾಯಲ್ಲಿ ಅತ್ತಿಮಬ್ಬೆಯ ಅಪರೂಪದ ವ್ಯಕ್ತಿತ್ವ ಪವಾಡವಾಗಿ ಕಂಡಿದೆ. ಆದರೆ ಇದರಿಂದಾಗುವ ದುರಂತವೆಂದರೆ - ಇತಿಹಾಸದಲ್ಲಿ ಅತ್ತಿಮಬ್ಬೆಯು ದೊರೆಗೆ ಸಲಹೆ ಕೊಡವಷ್ಟು ಹಿರಿಯಳು, ಆಪ್ತಳು ಆಗಿದ್ದಳು ಎನ್ನುವ ವಿಷಯ ಪವಾಡದಂತೆ ರೂಪಿತವಾದದ್ದು. ಅವಳ ಧೀರ, ಗಂಭೀರ, ಆಲೋಚನೆ ನಿಲುವುಗಳು ಮುಂದಿನ ಯಾವತ್ತೂ ಪೀಳಿಗೆಗೆ ಉಪಯುಕ್ತ ಮಾರ್ಗದರ್ಶಿಕೆ ಯಾಗುವಂತಹವುಗಳು ಪವಾಡಗಳಾದದ್ದು! ಅವಳ ಏಕಾಗ್ರತೆ ಭಕ್ತಿಯ ಭಾವ, ಕಠಿಣ ನೇಮಾಚರಣೆಗಳಲ್ಲಿಯ ಶ್ರದ್ಧಾಸಕ್ತಿಗಳು ಪವಾಡಗಳಾಗಿ ದಂತಕತೆಯಾಗಿರುವುದೇ ಅಪಾಯಕಾರಿಯಾಗುತ್ತದೆ. ಸಾವಿರ ವರುಷಗಳ ನಂತರವೂ ಅತ್ತಿಮಬ್ಬೆ ಕನ್ನಡಿಗರ ಮನಸ್ಸಿನಲ್ಲಿ ಉಳಿದದ್ದು ಅವಳ ಸಾಹಿತ್ಯಿಕ, ಧಾರ್ಮಿಕ ಕಾರ್ಯಾಚರಣೆಗಳಿಂದಾಗಿ, ದಾನ ಗುಣದಿಂದಾಗಿಯೇ ಹೊರತು ಪವಾಡಗಳಿಂದಲ್ಲ. ಆಧುನಿಕರಂತೂ ವೈಜ್ಞಾನಿಕವಾಗಿ, ವೈಚಾರಿಕವಾಗಿ ಆಲೋಚನೆ ಮಾಡುವವರು ಪವಾಡಗಳನ್ನು ಅಂಗೀಕರಿಸದೆ ಜನರಿಗೆ ಅವಳ ಮಹತ್ವವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಅತ್ತಿಮಬ್ಬೆಯ ಕುರಿತಾಗಿ ಪ್ರಚುರದಲ್ಲಿರುವ ಪವಾಡಗಳು, ದಂತಕಥೆಯಾಗಿರಲಿ, ಆಗದೇ ಇರಲಿ, ಒಂದು ವಿಷಯವಂತು ಸತ್ಯವಾದದ್ದು. ಅತ್ತಿಮಬ್ಬೆಯು ತನ್ನ ಪರಿಸರದಲ್ಲಿ ದೈವೀಕತೆಯನ್ನು ನಿರ್ಮಿಸಿದ್ದಳು. ಅವಳ ನಾಮಸ್ಮರಣೆಯಿಂದಲೇ ಪುಣ್ಯ ದೊರೆಯುವದೆಂದು ಎಲ್ಲರ ಪರವಾಗಿ ಕವಿ ರನ್ನನೇ ಹೇಳಿದ್ದಾನೆ.

ಶೀಲಾಲಂಕೃತೆಯಂ ಗುಣ
ಮಾಲಲಂಕೃತೆಯನಾ ಮಹಾಸತಿಯಂ ಶ್ರೀ
ತೈಲಾಂಬಿಕೆಯಂ ಪೆಸರ್ಗೊಳೆ
ಬಾಲೆಯರಂ ಖಳಕಲಂಕಮೇಂ ಪೊರ್ದುಗುಮೆ.[೮೧]

ಜನಸಾಮಾನ್ಯರಿಗೆ ಅತ್ತಿಮಬ್ಬೆಯು ದೇವತೆಯಾಗಿದ್ದಳು. ಅವಳ ಸ್ಮರಣೆ ಪುಣ್ಯದಾಯಕವಾದದ್ದು,

ಪಾಪನಾಶಕರವಾದದ್ದು. ಅವಳ ನಾಮಸ್ಮರಣೆಯಿಂದ ಹೆಣ್ಣುಮಕ್ಕಳಿಗೆ ಶುಭವಾಗುತ್ತದೆ, ಅಪಾಯ ದೂರ ಸರಿಯುತ್ತದೆಯೆಂದು ಅವರು ನಂಬಿದ್ದರು.

೩. ಆಧುನಿಕ ಸಾಹಿತ್ಯದಲ್ಲಿ ಅತ್ತಿಮಬ್ಬೆ

ಅತ್ತಿಮಬ್ಬೆ ಬದುಕಿ ಬಾಳಿದ್ದು ಕ್ರಿ.ಶ. ೧೦ನೆಯ ಶತಮಾನದ ಕೊನೆಯ ಹಂತವಾಗಿತ್ತು. ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗಾಣಿಸಿ ಚಾಳುಕ್ಯ ಸಾಮ್ರಾಜ್ಯವನ್ನು ಎತ್ತಿ ಹಿಡಿದ ಆಹವಮಲ್ಲದೇವ ನೂರ್ಮಡಿ ತೈಲಪನ ಕಾಲವೇ ಅತ್ತಿಮಬ್ಬೆಯ ಕಾಲವಾಗಿತ್ತು. ಈ ಅತ್ತಿಮಬ್ಬೆಯನ್ನು ಕನ್ನಡಿಗರಿಗೆ ಪರಿಚಯಿಸಿದ ಕೀರ್ತಿ ಕವಿ ರನ್ನನಿಗೆ ಸಲ್ಲುತ್ತದೆ. ತನ್ನ ಆಶ್ರಯದಾತೆಯನ್ನು ಅಜಿತಪುರಾಣದಲ್ಲಿ ರನ್ನ ಕವಿಯು ಚಿರಸ್ಥಾಯಿಗೊಳಿಸಿದರೆ; ಹೊಸಗನ್ನಡದ ಸಾರಸ್ವತ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ತೀ.ನಂ.ಶ್ರೀಕಂಠಯ್ಯನವರಿಗೆ ಸಲ್ಲುತ್ತದೆ. "ಪ್ರಬುದ್ಧ ಕರ್ನಾಟಕ"ದಲ್ಲಿ ೨೯.೪.೧೯೪೪ರಲ್ಲಿ ಮೊದಲು ಪ್ರಕಟಗೊಂಡ "ದಾನಚಿಂತಾಮಣಿ ಅತ್ತಿಮಬ್ಬೆ" ಎಂಬ ಲೇಖನವು, 'ಸಮಾಲೋಕನ' ಎಂಬ ತೀ.ನಂ. ಶ್ರೀಯವರ ಲೇಖನಗಳ ಸಂಕಲನದಲ್ಲಿ ಕ್ರಿ.ಶ. ೧೯೫೪ರಲ್ಲಿ ಮರು ಪ್ರಕಟಗೊಂಡಿದೆ.

ತೀ.ನಂ. ಶ್ರೀಯವರು ಈ ಲೇಖನಕ್ಕೆ ಕ್ರಿ.ಶ. ೧೯೧೦ರಲ್ಲಿ ಪ್ರಕಟವಾಗಿರುವ, ಶ್ರೀ.ಮಂ.ಅ. ರಾಮಾನುಜಯ್ಯಂಗಾರ್ಯರು ಅಚ್ಚು ಮಾಡಿಸಿದ "ಅಜಿತಪುರಾಣ"ವನ್ನು ಅವಲಂಬಿಸಿದ್ದಾರೆ.[೨] ೧೫ ಪುಟಗಳ ಈ ಲೇಖನವು ದಾನಚಿಂತಾಮಣಿ ಅತ್ತಿಮಬ್ಬೆಯ ಸಂಪೂರ್ಣ ಚಿತ್ರವನ್ನು ಕೊಟ್ಟಿದೆ. ಅವಳ ವ್ಯಕ್ತಿತ್ವ, ಜಿನಧರ್ಮಶ್ರದ್ಧೆ, ದಾನಗುಣ, ಮಹಿಮೆ, ಪವಾಡ, ಪ್ರಶಸ್ತಿಗಳು ಕಣ್ಣಿಗೆ ಕಟ್ಟುವಂತೆ ಈ ಲೇಖನದಲ್ಲಿ ಮೂಡಿಬಂದಿದೆ.

ಇದರ ನಂತರ ಕನ್ನಡದ ಹಿರಿ ಕಿರಿ ಲೇಖಕರು ಅತ್ತಿಮಬ್ಬೆಯ ಕುರಿತಾಗಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವರಿಗೆಲ್ಲ ಶ್ರೀಯವರ ಲೇಖನವೇ ಸ್ಫೂರ್ತಿಯೆಂದರೆ ತಪ್ಪಾಗಲಾರದು.

೧೯೬೬ರಲ್ಲಿ ಅ.ರಾ. ಮಿತ್ರ ಹಾಗೂ ಎಂ.ಎಚ್.ಕೃಷ್ಣಯ್ಯ ಸಂಪಾದನೆ ಮಾಡಿದ ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರಿನಿಂದ ಪ್ರಕಟಗೊಂಡ ರನ್ನ ಕವಿಯ ಅಜಿತಪುರಾಣ ಸಂಗ್ರಹದಲ್ಲಿ ಅತ್ತಿಮಬ್ಬೆಗೆ ಸಂಬಂಧಪಟ್ಟ ಪದ್ಯಗಳು ಅವುಗಳ ಗದ್ಯಾನುವಾದವೂ ಪ್ರಕಟಗೊಂಡಿವೆ. ಅಲ್ಲದೆ ಪೀಠಿಕೆಯ ನಂತರ ಕೃತಿ ವಿಮರ್ಶೆಯಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವವು ಸ್ವಲ್ಪದರಲ್ಲಿಯೇ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಇದೇ ಕಾಲದಲ್ಲಿ ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ - ೨ ರಲ್ಲಿ "ಮಹಾಕವಿ ರನ್ನ ಹಾಗೂ ಅವನ ಕೃತಿಗಳು" ಎಂಬ ಪುಸ್ತಕದಲ್ಲಿರುವ ಆರು ಉಪನ್ಯಾಸಗಳಲ್ಲಿ ಪ್ರೊ. ವ್ಹಿ.ಜಿ.ಕುಲಕರ್ಣಿಯವರ "ರನ್ನರ ಕಾವ್ಯಗಳಲ್ಲಿ ಪಾತ್ರ ನಿರೂಪಣೆ" ಎಂಬ ಲೇಖನದಲ್ಲಿ, ಲೇಖಕರು ಕನ್ನಡಿಗರ ಮನಸ್ಸಿನಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವ ನೆಲೆ ನಿಲ್ಲುವಂತೆ ಸ್ವಲ್ಪದರಲ್ಲಿಯೇ ಸ್ಫುಟವಾಗಿ ನಿಲ್ಲುವಂತೆ ಮಾಡಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅತ್ತಿಮಬ್ಬೆಯ ಕುರಿತಾದ ಕೃತಿಗಳ ಕುರಿತಾಗಿ ಹೇಳಬೇಕಾಗಿರುವಾಗ ಪ್ರಧಾನವಾಗಿ ಬರುವ ಕೃತಿಗಳು ಯಾವವು ಎಂದರೆ, ಡಾ. ಕಮಲಾ ಹಂಪನಾ ಅವರ 'ಗುಣದಂಕಕಾರ್ತಿ ಅತ್ತಿಮಬ್ಬೆ' ಹಾಗೂ ಹಂಪನಾ ಅವರ "ಕವಿವರ ಕಾಮಧೇನು" ಇವೆರಡೂ ಈ ಶತಮಾನದ ಅತ್ತಿಮಬ್ಬೆ ಕುರಿತಾಗಿ ಇರುವ ಶ್ರೇಷ್ಠ ಪುಸ್ತಿಕೆಗಳಾಗಿವೆ.

ಡಾ.ಕಮಲಾ ಹಂಪನಾ ಅವರು "ಗುಣದಂಕಕಾರ್ತಿ ಅತ್ತಿಮಬ್ಬೆ" ಎಂಬ ಗ್ರಂಥವನ್ನು ಶ್ರೀ ಪದ್ಮಾಂಬ ಜೈನ ಮಹಿಳಾ ಸಮಾಜ, ಚಿಕ್ಕಪೇಟೆ, ತುಮಕೂರು ಪ್ರಕಾಶಕರಿಂದ ೧೯೯೪ರಲ್ಲಿ ಪ್ರಕಟಪಡಿಸಿದ್ದಾರೆ. ಅತ್ತಿಮಬ್ಬೆಯನ್ನು ಕುರಿತು ಹಲವಾರು ಮಹಾವಿದ್ಯಾಲಯ, ವಿಶ್ವವಿದ್ಯಾಲಯಗಳಲ್ಲಿ, ಸಂಘ - ಸಂಸ್ಥೆಗಳಲ್ಲಿ ಉಪನ್ಯಾಸ ನೀಡಿರುವ ಡಾ. ಕಮಲಾ ಹಂಪನಾ ಅವರು ಇದೇ ವಿಷಯವಾಗಿ ಆಕಾಶವಾಣಿಯಲ್ಲಿ ಮಾತನಾಡಿರುವರಲ್ಲದೆ, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಅವರು "ಗುಣದಂಕಕಾರ್ತಿ ಅತ್ತಿಮಬ್ಬೆ"ಯಲ್ಲಿ ಅತ್ತಿಮಬ್ಬೆಯ ಒಂದು ಸ್ಮೃತಿ ಚಿತ್ರವನ್ನು ಕೊಡುವುದರ ಜತೆಗೆ ಲಕ್ಕುಂಡಿಯ ಶಾಸನಗಳ ಕುರಿತಾಗಿ ಬರೆದಿದ್ದಾರೆ.

ರತ್ನತ್ರಯ ಪ್ರಕಾಶನ, ಮೈಸೂರು ಇವರು ಪ್ರಕಟಪಡಿಸಿದ ಡಾ.ಹಂಪನಾಗರಾಜ್ಯನವರು ರಚಿಸಿದ "ಕವಿವರ ಕಾಮಧೇನು ಅತ್ತಿಮಬ್ಬೆ"ಯು ಅತ್ತಿಮಬ್ಬೆಯ ಕುರಿತಾಗಿ ಇರುವ ಒಂದು ಉತ್ತಮ ಕೃತಿಯಾಗಿದೆ. ಸುಪ್ರಸಿದ್ಧ ಸಾಹಿತಿ ಹಾಗೂ ವಾಗ್ಮಿಯಾಗಿರುವ ಹಂಪನಾ ಅವರು ಅತ್ತಿಮಬ್ಬೆಯ ಸಾಧನೆ, ಅವಳ ಜೀವನದ ನಾನಾ ಮಗ್ಗಲುಗಳ ಚಿತ್ರಣವನ್ನು ಮಾಡಿದ್ದಾರೆ. ಲಕ್ಕುಂಡಿ ಶಾಸನದಿಂದ ಆಧರಿಸಿ ಅತ್ತಿಮಬ್ಬೆಯ ಪವಾಡ, ಜೀವನ, ಸಾಧನೆ, ಧಾರ್ಮಿಕ ವಿಷಯಗಳ ಕುರಿತಾಗಿ ಬರೆದಿದ್ದಾರೆ.

ಇವೆರೆಡು ಕೃತಿಗಳಿಗಿಂತ ಮುಂಚೆ ಅತ್ತಿಮಬ್ಬೆಯ ಕುರಿತಾಗಿ ಜಿ.ಬ್ರಹ್ಮಪ್ಪನವರು ಕಾದಂಬರಿಯೊಂದನ್ನು ರೂಪಿಸಿದ್ದಾರೆ. ಐತಿಹಾಸಿಕ ಕಾದಂಬರಿಯಾಗಿ ಮೂಡಿಬಂದಿರುವ ಈ ಪುಸ್ತಕವು ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರಿನಿಂದ ಪ್ರಕಟಿಸಲ್ಪಟ್ಟಿದೆ. ಅತ್ತಿಮಬ್ಬೆಯ ಜೀವನವನ್ನು 'ಕರತಲ ರಂಗಭೂಮಿ'ಯನ್ನಾಗಿಸಿದ್ದಾರೆ. ಕರ್ನಾಟಕದ ಇತಿಹಾಸ, ಜೈಧರ್ಮ, ಕನ್ನಡಸಾಹಿತ್ಯ ಈ ಮೂರರಲ್ಲಿ ವಿನ್ಯಾಸಗೊಂಡಿರುವ ಅತ್ತಿಮಬ್ಬೆಯ ಜೀವನ ಚಿತ್ರವನ್ನು ದಾನಚಿಂತಾಮಣಿ 'ಅತ್ತಿಮಬ್ಬೆ' ಕಾದಂಬರಿಯಲ್ಲಿ ಅತ್ಯಂತ ಸರಳ ಸುಂದರವಾಗಿ ಹಿಡಿದಿಟ್ಟಿದ್ದಾರೆ.

ಅತ್ತಿಮಬ್ಬೆ ಎನ್ನುವ ಕಾದಂಬರಿ ರೂಪ ಮತ್ತೊಂದು ಇದೆ. ಅದು ಸಮೇತನಹಳ್ಳಿ ರಾಮರಾಯರದು. ಲಕ್ಕುಂಡಿಯ ಶಾಸನಗಳನ್ನು ಆಧರಿಸಿ ೩೧೧ ಪುಟಗಳ "ಅತ್ತಿಮಬ್ಬೆ ಎನ್ನುವ ಕಾದಂಬರಿಯನ್ನು ರಚಿಸಿದ್ದಾರೆ. ಅತ್ಯಂತ ಸರಳ ಶೈಲಿಯ ಈ ಕಾದಂಬರಿ ಇಡಿಯಾಗಿ ಅತ್ತಿಮಬ್ಬೆಯ ಜೀವನವನ್ನು ದರ್ಶಿಸುತ್ತದೆ. ಇದು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರುನಿಂದ ಪ್ರಕಟವಾಗಿದೆ.

ಉಪನ್ಯಾಸ ಗ್ರಂಥಮಾಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ "ಅತ್ತಿಮಬ್ಬೆ" ಎನ್ನುವ ಪುಸ್ತಕ ಪ್ರಕಟವಾಗಿದೆ. ಈ ಕಿರು ಹೊತ್ತಗೆಯ ಹೊರತಂದವರು ಡಾ. ಮಧುವೆಂಕಾರೆಡ್ಡಿ. ಇದು ೧೯೯೫ರಲ್ಲಿ

ಪ್ರಕಟಗೊಂಡಿದೆ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರಸಾರಾಂಗದ ಮುಖಾಂತರ ಪ್ರಕಟಗೊಂಡ ಈ "ಅತ್ತಿಮಬ್ಬೆ"ಯಲ್ಲಿ ಅಪೂರ್ವ ಸ್ತ್ರೀ ರತ್ನವಾಗಿರುವ ಅತ್ತಿಮಬ್ಬೆಯ ಸಾಧನೆ ಜೀವನವಿಧಾನ, ಉದಾತ್ತತೆ ಕುರಿತಾಗಿ ಚಿಕ್ಕವಾಗಿ ಚೊಕ್ಕವಾಗಿ ಮೂಡಿಬಂದಿದೆ.

೧೯೯೩ರಲ್ಲಿ ಕರ್ನಾಟಕ ಜೈನ ಸೇವಾ ಪರಿಷತ್ ಹುಬ್ಬಳ್ಳಿ - ಧಾರವಾಡದಿಂದ "ದಾನ ಚಿಂತಾಮಣಿ ಅತ್ತಿಮಬ್ಬೆ" ಎಂಬ ೬೧ ಪುಟಗಳ ಪುಸ್ತಕ ಪ್ರಕಟಗೊಂಡಿದೆ. ಇದು ದಿನಾಂಕ ೨೮.೧೧.೧೯೯೩ರಂದು ಲಕ್ಕುಂಡಿಯಲ್ಲಿ ನಡೆದ ಸಹಸ್ರಮಾನೋತ್ಸವದಲ್ಲಿ ಅಂದಿನ ಧಾರವಾಡ ಜಿಲ್ಲಾ ಸಚಿವರಾದ ಸನ್ಮಾನ್ಯ ಶ್ರೀ ಗೋಪಿನಾಥ ಸಾಂಡ್ರಾ ಅವರಿಂದ ಮೇಲಿನ ಕೃತಿಯು ಬಿಡುಗಡೆಗೊಂಡಿದೆ.

ಡಾ.ಚೆನ್ನಕ್ಕ ಪಾವಟೆಯವರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕನ್ನಡ ಅಧ್ಯಯನಪೀಠದಲ್ಲಿ ಪ್ರವಾಚಕರು. 'ಚನ್ನಗಂಗಾ' ಪ್ರಕಾಶನ, ಧಾರವಾಡದಿಂದ ಪ್ರಕಟಗೊಂಡ 'ಅನುಗ್ರಹ'ವು ಸೃಷ್ಟಿ, ಮೈತ್ರಿ, ಸ್ಫೂರ್ತಿ ಎಂಬ ಮೂರು ಭಾಗಗಳನ್ನೊಳಗೊಂಡ ೨೮ ಲೇಖನಗಳ ಸಂಗ್ರಹ. ಮೈತ್ರಿಯ ಎರಡನೆಯ ಲೇಖನವೇ "ದಾನಚಿಂತಾಮಣಿ ಅತ್ತಿಮಬ್ಬೆ - ಚಿಂತನ" ಎಂಬುದು. ಈ ಲೇಖನದಲ್ಲಿ ಅವರು ಅತ್ತಿಮಬ್ಬೆಯ ಬದುಕಿನ ಲೌಕಿಕ ಬದುಕು, ಅವಳ ತೌರುಮನೆ, ಧಾರ್ಮಿಕ ಸಾಧನೆ, ಸಾಹಿತ್ಯಿಕ, ಶಾಸ್ತ್ರದಾನ, ಸತೀತ್ವ, ಪತಿಭಕ್ತಿ, ವಂಶಗೌರವದ ಸಂರಕ್ಷಣೆ ಮೊದಲಾದ ವಿಷಯಗಳನ್ನೊಳಗೊಂಡಿವೆ.

ಪಂಡಿತರತ್ನ ಎರ್ತೂರು ಶಾಂತಿ ರಾಜಶಾಸ್ತ್ರಿ ಟ್ರಸ್ಟ್ , ಬೆಂಗಳೂರು ಇವರು ಲಕ್ಷ್ಮಿ ಸರ್ವೀಸ್ ಟ್ರಸ್ಟ್ , ಬೆಂಗಳೂರು ಇವರ ಸಹಯೋಗದೊಂದಿಗೆ "ಕನ್ನಡ ನಾಡಿನ ವೀರ ಜೈನ ಮಹಿಳೆಯರು" ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಪುಸ್ತಕದ ಲೇಖಕರು ಶ್ರೀಮತಿ ಎಸ್ .ರತ್ನಮ್ಮ. ಇವರ ಪುಸ್ತಕವು ಹೆಚ್ಚಿನ ಸಂಖ್ಯೆಯಲ್ಲಿರುವ ಜೈನ ಮಹಿಳಾರತ್ನಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದೆ. ಸಾಮಾನ್ಯವಾಗಿ ಕನ್ನಡಿಗರಿಗೆ, ಅತ್ತಿಮಬ್ಬೆ, ಶಾಂತಲೆ, ಅಬ್ಬಕ್ಕ, ಮುಂತಾದವರು ಮಾತ್ರವೇ ಚಿರಪರಿಚಿತರಾಗಿದ್ದಾರೆ. ಈ ಪುಸ್ತಕದಲ್ಲಿ ಜಕ್ಕಿಯಬ್ಬೆ, ಸಾವಿಯಬ್ಬೆ, ಮಾಳಲದೇವಿ ಮುಂತಾದ ಹಲವಾರು ಸ್ತ್ರೀಯರನ್ನು ಬೆಳಕಿಗೆ ತಂದಿದ್ದಾರೆ. ಇದೇ ಪುಸ್ತಕದಲ್ಲಿ ಅತ್ತಿಮಬ್ಬೆಯ ಕುರಿತಾಗಿ "ಕವಿಚಕ್ರವರ್ತಿ ರನ್ನ ಕಂಡ ಅತ್ತಿಮಬ್ಬೆ" ಎಂಬ ಲೇಖನವಿದೆ. ಈ ಲೇಖನವು ರನ್ನ ಕವಿಯ ಪರಿಚಯದೊಂದಿಗೆ ಪ್ರಾರಂಭವಾಗಿ ಅತ್ತಿಮಬ್ಬೆಯ ಮಹತ್ವದೊಂದಿಗೆ ಮುಂದುವರೆಯುತ್ತದೆ. ಅತ್ತಿಮಬ್ಬೆಯ ಸಾಧನೆಗಳನ್ನು ಹೊಗಳುವುದರ ಮೂಲಕ ಲೇಖನ ಕೊನೆಗೊಳ್ಳುತ್ತದೆ.

೧೯೯೮ರ ಲಕ್ಕುಂಡಿ ಉತ್ಸವದ ಸವಿನೆನಪಿಗಾಗಿ ಪ್ರಕಟಗೊಂಡಿರುವ ಸ್ಮರಣ ಸಂಚಿಕೆಯೇ "ಲಕ್ಕುಂಡಿ: ಕಲೆಯ ಬಲೆ" ಎಂಬುದು. ಇದು ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಮಹಾವಿದ್ಯಾಲಯ, ಗದಗ,ದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರೂ, ಪ್ರಾಚಾರ್ಯರೂ ಆದ ಎಂ.ಎಚ್ .ಹರಿದಾಸ ಇವರಿಂದ ರಚಿಸಲ್ಪಟ್ಟಿದೆ. ಲಕ್ಕುಂಡಿಯ ಪೌರಾಣಿಕ ಹಿನ್ನೆಲೆ, ವಾಸ್ತುಶಿಲ್ಪ, ದೇವಾಲಯ ಶಾಸನದ ಲೇಖನಗಳನ್ನೊಳಗೊಂಡ ಈ ಲೇಖನಗಳ ಸಂಕಲನದಲ್ಲಿ

"ಅತ್ತಿಮಬ್ಬೆ - ದಾನಚಿಂತಾಮಣಿ" ಎಂಬ ಲೇಖನವಿದೆ. ಅತ್ತಿಮಬ್ಬೆಯ ಬದುಕಿನ ಕಾಲ, ಅತ್ತಿಮಬ್ಬೆಯ ತಂದೆ ತಾಯಿಯರ ವಿಷಯ ಲೇಖನದ ಆರಂಭಕ್ಕೆ ಬಂದಿದೆ. ಲೇಖನವು ಲಕ್ಕುಂಡಿ ಶಾಸನ, ಅಜಿತಪುರಾಣದ ಅತ್ತಿಮಬ್ಬೆಯ ಕುರಿತಾದ ಪದ್ಯ, ಬ್ರಹ್ಮಶಿವನ ಸಮಯಪರೀಕ್ಷೆಯಲ್ಲಿರುವ ಪದ್ಯವನ್ನು ತೆಗೆದುಕೊಂಡು ಅತ್ತಿಮಬ್ಬೆಯ ಪವಾಡಗಳನ್ನು ಹೇಳಿ, ಅವಳ ವ್ಯಕ್ತಿತ್ವವನ್ನು ಹೇಳುವ ಒಂದು ಪ್ರಬುದ್ಧ ಪ್ರಬಂಧವಾಗಿದೆ.

ಜುಲೈ ತಿಂಗಳಿನ ೩೦, ೩೧ನೆಯ ದಿನಾಂಕದ ೧೯೯೮ರಲ್ಲಿ ಲಕ್ಕುಂಡಿಯಲ್ಲಿ ಜರುಗಿದ ಅತ್ತಿಮಬ್ಬೆ ಸಹಸ್ರಮಾನೋತ್ಸವ ಹಾಗೂ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮಾವೇಶ, ಲಕ್ಕುಂಡಿ, ಗದಗ ತಾಲೂಕು, ಧಾರವಾಡ ಜಿಲ್ಲೆ. ಪ್ರಕಟಗೊಂಡ "ಸಂವೇದನೆ"ಯು ಶಶಿಕಲಾ ವೀರಯ್ಯಸ್ವಾಮಿಯವರಿಂದ ಸಂಪಾದನೆಗೊಂಡಿದೆ. ಇದು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಅಂದು ಜರುಗಿದ ಗೋಷ್ಠಿಗಳ ಪ್ರಕಟಣೆಯ ರೂಪಗಳು ಈ ಪುಸ್ತಕದಲ್ಲಿವೆ. ಗೋಷ್ಠಿ ೧ರಲ್ಲಿ ಎಂ.ಆರ್.ಲಕ್ಷ್ಮಿದೇವಿಯವರು 'ಅತ್ತಿಮಬ್ಬೆ ಮತ್ತು ಕನ್ನಡ ಸಾಹಿತ್ಯ' ಎಂಬ ಲೇಖನ ಪ್ರಕಟಿಸಿದ್ದಾರೆ. ರನ್ನ ಕವಿಯ ಅಜಿತ ಪುರಾಣವನ್ನು ಆಧರಿಸಿ ಅತ್ತಿಮಬ್ಬೆಯ ಬದುಕಿನ ಸಾಹಸಗಾಥೆಯನ್ನು ವಿವರಿಸಿದ್ದಾರೆ.

ಇದೇ ಪುಸ್ತಕದಲ್ಲಿ "ಅತ್ತಿಮಬ್ಬೆ ಮತ್ತು ಜೈನಧರ್ಮ" ಎಂಬ ಮತ್ತೊಂದು ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಲೇಖಕಿಯರು ಜೈನಧರ್ಮದ ಧೋರಣೆಯನ್ನು ಹೇಳುತ್ತಾ ಅತ್ತಿಮಬ್ಬೆಯ ಜೈನಧರ್ಮ ಶ್ರದ್ಧೆಯನ್ನು ಲಕ್ಕುಂಡಿಯ ಬ್ರಹ್ಮ ಜಿನಾಲಯ ನಿರ್ಮಾಣದಿಂದ ಗುರುತಿಸಿದ್ದಾರೆ. ಸುಮಾರು ೬೮ ವರ್ಷಗಳಷ್ಟು ಜೀವಿತಾವಧಿಯಲ್ಲಿ ಮಾಡಿರಬಹುದಾದ ಅತ್ತಿಮಬ್ಬೆಯ ಸಾಹಿತ್ಯಿಕ ಧಾರ್ಮಿಕ ಕಾರ್ಯಗಳನ್ನು ಅಜಿತಪುರಾಣ ಮತ್ತು ಲಕ್ಕುಂಡಿಯ ಶಾಸನಗಳಿಂದ ವಿವರಿಸಿದ್ದಾರೆ.

ಇದೇ ಪುಸ್ತಕದ ಗೋಷ್ಠಿ ೫ರ ಕಾವ್ಯಸಂಜೆಯಲ್ಲಿ ಗಂಗೂಮೂಲಿಮನಿಯವರು "ಅತ್ತಿಮಬ್ಬೆ" ಎಂಬ ಕವಿತೆಯ ರಚನೆಯನ್ನು ಮಾಡಿದ್ದಾ. ಕವಿತೆಯಲ್ಲಿ ಅತ್ತಿಮಬ್ಬೆಯ ಬಿರುದು, ಧರ್ಮಶ್ರದ್ಧೆಯನ್ನು ವರ್ಣಿಸಲಾಗಿದೆ.

೧೯೯೭ ಮತ್ತು ೬೮ರಲ್ಲಿ ಕ್ರಮವಾಗಿ "ಜೈನಧರ್ಮ ಸಾಹಿತ್ಯ ಚಿಂತನೆ ಮತ್ತು ಅತ್ತಿಮಬ್ಬೆ ಸ್ಮರಣೆ" ಸಂ. ಡಾ. ಕಮಲಾ ಹಂಪನಾ ಮತ್ತು "ಅತ್ತಿಮಬ್ಬೆ ಮತ್ತು ಸಮಕಾಲೀನ ಸ್ತ್ರೀ ಸಂಸ್ಕೃತಿ"ಗಳೆರಡು ಕರ್ನಾಟಕ ಸರ್ಕಾರ, "ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು" ನಿಂದ ಪ್ರಕಟಗೊಂಡಿದೆ. ಜೈನಧರ್ಮ ಸಾಹಿತ್ಯ ಚಿಂತನೆ ಮತ್ತು ಅತ್ತಿಮಬ್ಬೆ ಸ್ಮರಣೆಯಲ್ಲಿ ಅತ್ತಿಮಬ್ಬೆಯ ಕುರಿತಾಗಿ ನಾಲ್ಕು ಲೇಖನಗಳು ಪ್ರಕಟಗೊಂಡಿವೆ. ಅವು,

೧. ದೇಶಿ ಸ್ತ್ರೀವಾದದ ಉದ್ಘಾಟಕಿ ಅತ್ತಿಮಬ್ಬೆ	- ಡಾ.ಹಂಪ ನಾಗರಾಜಯ್ಯ
೨. ದಾನಚಿಂತಾಮಣಿ ಅತ್ತಿಮಬ್ಬೆ : ಒಂದು ಸ್ಮೃತಿಚಿತ್ರ	- ಡಾ.ಕಮಲಾಹಂಪನಾ
೩. ಅತ್ತಿಮಬ್ಬೆಯ ಜೀವನ ವಿಚಾರಗಳು	- ಡಾ.ಎಂ.ಎ.ಜಯಚಂದ್ರ
೪. ಅತ್ತಿಮಬ್ಬೆಯ ಸಾಂಸ್ಕೃತಿಕ ಸಾಧನೆ	- ಡಾ.ಸೂರ್ಯನಾಥ ಕಾಮತ್ ಎಂದಿವೆ.

ದೇಶಿ ಸ್ತ್ರೀ ವಾದದ ಉದ್ಘಾಟಕ ಅತ್ತಿಮಬ್ಬೆಯಲ್ಲಿ - ಬಾಲ್ಯದಲ್ಲಿ ಅತ್ತಿಮಬ್ಬೆಯ ಮೇಲಾಗಿರುವ ಪ್ರಭಾವ, ಅತ್ತಿಮಬ್ಬೆಯ ಜೀವನ, ದುರಂತ ಅವಳ ತೀರ್ಮಾನ, ಧರ್ಮಶ್ರದ್ಧೆ, ದಾನ ಬಸದಿಗಳ ನಿರ್ಮಾಣ, ಅವಳ ಮಾಡಿದಳೆನ್ನಲಾದ ೭ ಪವಾಡಗಳ ಸರಳ ನಿರೂಪಣೆಯಿದೆ. ಜತೆಗೆ ಅವಳ ವ್ಯಕ್ತಿತ್ವವನ್ನು ವರ್ಣಿಸಲಾಗಿದೆ. ಪುರುಷ ಪ್ರಧಾನತೆಯ ಸಂಸ್ಕೃತಿಯಲ್ಲಿ ಬದುಕಿದ ಅತ್ತಿಮಬ್ಬೆಯು ಪುರುಷನಿಗಿಂತ ಕಡಿಮೆಯಿಲ್ಲದಂತೆ ಬದುಕಿದ ಪ್ರಸ್ತುತತೆಯನ್ನು ಚರ್ಚಿಸಲಾಗಿದೆ.

''ದಾನಚಿಂತಾಮಣಿ ಅತ್ತಿಮಬ್ಬೆ ಒಂದು ಸ್ಮೃತಿ ಚಿತ್ರ''ದಲ್ಲಿ ಡಾ.ಕಮಲಾ ಹಂಪನಾ ಅವರು ಅತ್ತಿಮಬ್ಬೆಯ ಅಪೂರ್ವ ವ್ಯಕ್ತಿತ್ವವನ್ನು ೧೦ ಬಗೆಯಲ್ಲಿ ಅಧ್ಯಯನ ಮಾಡಬಹುದಾದ ಸೂಚನೆಯನ್ನು ನೀಡಿದ್ದಾರೆ. ಅವಳ ವ್ಯಕ್ತಿತ್ವ, ಧರ್ಮ ಶ್ರದ್ಧೆ, ಪವಾಡಗಳು ಲೇಖನದ ವಸ್ತುಗಳಾಗಿವೆ. ಭಾಗ - ೨ರಲ್ಲಿ ರನ್ನಕವಿಯ ಅಜಿತಪುರಾಣದ ಪದ್ಯದೊಂದಿಗೆ ಲಕ್ಕುಂಡಿ ಶಾಸನ ಹಾಗೂ ಇನ್ನಿತರ ಶಾಸನಗಳಲ್ಲಿ ಕಂಡುಬಂದಿರುವ ಅತ್ತಿಮಬ್ಬೆಯ ಗುಣಾವಳಿಯನ್ನು ಗಮನಿಸಿದ್ದಾರೆ.

ಅತ್ತಿಮಬ್ಬೆಯ ಜೀವನ ವಿಚಾರಗಳು - ಲೇಖನದಲ್ಲಿ ಡಾ.ಎಂ.ಎ.ಜಯಚಂದ್ರರು ಅತ್ತಿಮಬ್ಬೆಯ ಜೀವನವನ್ನು ಆರಂಭದಿಂದ ಅಂದರೆ ಶಾಂತಿಪುರಾಣದಲ್ಲಿ ವರ್ಣಿತಗೊಂಡ ಅವಳ ತಂದೆಯಾಗಿರುವ ಮಲ್ಲಪಯ್ಯನಿಂದ ಅವಳ ಧರ್ಮಶ್ರದ್ಧೆವರೆಗಿನ ಬದುಕನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅತ್ತಿಮಬ್ಬೆಯನ್ನು ಹಳೆ ಹೊಸ ಸಾಹಿತ್ಯದ ಸಂಬಂಧಸೂಚಿ ಎನ್ನುವಂತೆ ಚಿತ್ರಿಸಿದ್ದಾರೆ.

ಡಾ. ಸೂರ್ಯನಾಥ ಕಾಮತ್‌ರು ಅತ್ತಿಮಬ್ಬೆಯ ಸಾಂಸ್ಕೃತಿಕ ಸಾಧನೆ ಎಂಬ ಲೇಖನದಲ್ಲಿ ಅವಳ ಸಾಂಸ್ಕೃತಿಕ ಸಾಧನೆಗಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಅವಳ ಶಾಸ್ತ್ರದಾನ, ಮುದ್ರಣರಹಿತ ಕಾಲದಲ್ಲಿ ಶಾಂತಿಪುರಾಣದಂತಹ ಕೃತಿಯ ಮರುಲಿಪಿಕರಣ ಕಾರ್ಯ, ಬಸದಿಗಳ ನಿರ್ಮಾಣ ಕಾರ್ಯಗಳನ್ನು ಪ್ರಶಂಸಿಸುತ್ತಾ, ಅವಳ ಕವಿತಾಶ್ರಯದ ಗುಣವನ್ನು ಸಚ್ಚಾರಿತ್ರ್ಯದ ಪರಮೌದಾರ್ಯದ ಆದರ್ಶ ವ್ಯಕ್ತಿತ್ವವೆಂದು ಬಣ್ಣಿಸಿದ್ದಾರೆ.

ಅತ್ತಿಮಬ್ಬೆ ಮತ್ತು ಸಮಕಾಲೀನ ಸ್ತ್ರೀ ಸಂಸ್ಕೃತಿಯಲ್ಲಿ ಅತ್ತಿಮಬ್ಬೆಯ ಕುರಿತಾಗಿ ಇರುವ ಲೇಖನವೆಂದರೆ ''ಅತ್ತಿಮಬ್ಬೆ, ಜೈನಧರ್ಮ ಮತ್ತು ಸಾಹಿತ್ಯ ಪ್ರಸಾರ''ವೆಂಬುದು ಇದು. ಡಾ.ಎಸ್.ಪಿ.ಪದ್ಮಪ್ರಸಾದ್ ರಿಂದ ರಚಿಸಪ್ಪಟ್ಟಿದೆ. ಈ ಲೇಖನದಲ್ಲಿ ಅತ್ತಿಮಬ್ಬೆಯ ಕೊಡುಗೆ, ಸಾಹಿತ್ಯ ನಿರ್ಮಾಣ ಪ್ರಸಾರ, ಸಂರಕ್ಷಣೆ ಈ ಮುಂತಾದ ಅವಳ ವ್ಯಕ್ತಿತ್ವದ ಹಲವು ಮುಖಗಳನ್ನು ಪರಿಚಯಿಸಲಾಗಿದೆ.

ಈ ರೀತಿಯಾಗಿ ಅತ್ತಿಮಬ್ಬೆಯ ವ್ಯಕ್ತಿತ್ವವು ಆಧುನಿಕ ಸಾಹಿತ್ಯದಲ್ಲೂ ಪ್ರಕಟಗೊಂಡಿದೆ. ಅಲ್ಲದೆ ಹಲವಾರು ಪತ್ರಿಕೆಗಳಲ್ಲೂ ಸಹಿತ ಪ್ರಕಟವಾಗಿದೆ.

ಧರ್ಮಸ್ಥಳದಿಂದ ಪ್ರಕಟಗೊಳ್ಳುವ ಮಂಜುವಾಣಿ ಮಾಸಿಕ ಪತ್ರಿಕೆಯಲ್ಲಿ ೨೦೦೦ ರಿಂದ ೨೦೦೧ರಲ್ಲಿ ಪ್ರೇಮಾಭಟ್ ಎಂ.ಎ. ಇವರಿಂದ ಕಾದಂಬರಿ ರೂಪದಲ್ಲಿ "ದೇವರಾಣಿ" ಎಂಬ ತಲೆಬರಹದೊಂದಿಗೆ ಅತ್ತಿಮಬ್ಬೆ ಜೀವನ ಚರಿತ್ರೆ, ವ್ಯಕ್ತಿತ್ವ ಮೂಡಿಬಂದಿದೆ.

೧೯೯೪ರ ಮಾರ್ಚ್ ೯ ತಿಂಗಳಿನ ಮಂಜುವಾಣಿಯಲ್ಲಿ "ದಾನಚಿಂತಾಮಣಿ ಅತ್ತಿಮಬ್ಬೆ ಒಂದು ಸ್ಮೃತಿ ಚಿತ್ರ" ಎಂಬ ವಿಷಯ ಪ್ರಕಟಗೊಂಡಿದೆ. ಇದು ಧರ್ಮಸ್ಥಳದಲ್ಲಿ ನಡೆದ ಧರ್ಮಸಮ್ಮೇಳನದಲ್ಲಿ ಅತ್ತಿಮಬ್ಬೆಯ ಸ್ಮರಣೆಯ ಕಾರ್ಯಕ್ರಮಕ್ಕೆ ಅಧ್ಯಕ್ಷತೆವಹಿಸಿದ್ದ ಡಾ. ಕಮಲಾ ಹಂಪನಾ ಮಾಡಿದ ಭಾಷಣದ ಆಯ್ದ ಭಾಗವಾಗಿದೆ.

ದಿನಾಂಕ ಜುಲೈ ೪, ೨೦೦೨ರ ತರಂಗ, ಕನ್ನಡ ವಾರಪತ್ರಿಕೆಯಲ್ಲಿ, ಕೆ.ಶರಣಪ್ಪ ನಿಡಶೇಸಿಯವರ "ಲಕ್ಕುಂಡಿ ನೆನೆಗುದಿಯಲ್ಲಿ ನೆನೆಯುತ್ತಿರುವ ಶಿಲ್ಪ ಸಾಮ್ರಾಜ್ಯ" ಲೇಖನವು ಅತ್ತಿಮಬ್ಬೆ ನಿರ್ಮಿಸಿದ ಬ್ರಹ್ಮ ಜಿನಾಲಯ, ವಿಶ್ವನಾಥ ಹಾಗೂ ಸೂರ್ಯ ದೇಗುಲಗಳ ಸಚಿತ್ರವನ್ನು ಒಳಗೊಂಡಿದೆ. ಹಾಗೂ ೫.೫.೨೦೦೨ರ ಕರ್ಮವೀರ ಕನ್ನಡ ವಾರಪತ್ರಿಕೆಯಲ್ಲಿ ಎ. ಲೋಕೇಶಪ್ಪ ಅವರ "ಲಕ್ಕುಂಡಿಯ ದೇವಾಲಯಗಳು" ಎನ್ನುವ ಲೇಖನವು ಅತ್ತಿಮಬ್ಬೆ ನಿರ್ಮಿಸಿದ ಲಕ್ಕುಂಡಿಯ ಬ್ರಹ್ಮಜಿನಾಲಯ, ಹಲವು ದೇವಾಲಯಗಳ ಚಿತ್ರವನ್ನು ಒಳಗೊಂಡು ಅತ್ತಿಮಬ್ಬೆಯ ಬಸದಿ ನಿರ್ಮಾಣ ಕಾರ್ಯವನ್ನು ಪ್ರಸ್ತಾಪಿಸುತ್ತಾ ಬ್ರಹ್ಮ ಜಿನಾಲಯ ಕಟ್ಟಡದ ವರ್ಣನೆಯನ್ನು ಒಳಗೊಂಡಿದೆ.

ಮಂಜುವಾಣಿ ಮಾಸಪತ್ರಿಕೆ, ಮಾರ್ಚ್ ೧೯೯೪, ಪು. ೨೭ ರಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆ ಒಂದು ಸ್ಮೃತಿ ಚಿತ್ರ ಎಂಬ ಲೇಖನವಿದೆ. 'ಧರ್ಮಸ್ಥಳದ ಧರ್ಮಸಮ್ಮೇಳನವನ್ನು ಅತ್ತಿಮಬ್ಬೆಯ ಸ್ಮರಣೆ'ಯಂತೆ ಆಚರಿಸಿ ಗೌರವಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಡಾ. ಕಮಲಾ ಹಂಪನಾ ಮಾಡಿದ ಭಾಷಣದ ಆಯ್ದ ಭಾಗ ಈ ಲೇಖನದಲ್ಲಿದೆ.

ಸ್ಮರಣ ಸಂಚಿಕೆಗಳಲ್ಲಿ ಅತ್ತಿಮಬ್ಬೆ

ಜುಲೈ ತಿಂಗಳಿನ ೩೦, ೩೧ರ ೧೯೯೪ರಲ್ಲಿ ಅತ್ತಿಮಬ್ಬೆಯ ಸಹಸ್ರಮಾನೋತ್ಸವ ಹಾಗೂ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮಾವೇಶವನ್ನು ಲಕ್ಕುಂಡಿಯಲ್ಲಿ ಏರ್ಪಡಿಸಲಾಗಿತ್ತು. ಈ ಸಹಸ್ರಮಾನೋತ್ಸವದ ಸವಿ ನೆನಪಿಗಾಗಿ 'ಸ್ತ್ರೀ ಸಾಹಿತ್ಯ ಸೌರಭ'ವೆಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದೆ. ಪ್ರಧಾನ ಸಂಪಾದಕರು ಗದಗದಲ್ಲಿರುವ ಕೆ.ವ್ಹಿ.ಎಸ್.ಆರ್. ಕಾಲೇಜಿನ ಪ್ರಾಂಶುಪಾಲರಾದ ಕೆ.ಬಿ.ತಳಗೇರಿ ಅವರು, ಸಂಪಾದಕ ಮಂಡಳಿಯಲ್ಲಿ ಶ್ರೀಮತಿ ಭಾರತಿ ಮೋಹನ ಕೋಟಿ, ಶ್ರೀ ಜಿ.ಕೆ.ಜಮಾದಾರ, ಶ್ರೀ ನೀಲಕಂಠ ಮರಡಿ, ಶ್ರೀ ಶೇಖರ ಲದವಾ, ಶ್ರೀಮತಿ ಎಲ್.ಎಚ್.ದೂದಿಹಳ್ಳಿ, ಪ್ರೊ. ಸಿದ್ಧು ಯಾಪಲಪರ್ವಿಯವರು ಇದ್ದಾರೆ (ಸಮಾವೇಶದ ಸರ್ವಾಧ್ಯಕ್ಷೆ ಟಿ.ಸುನಂದಮ್ಮ).

ಈ ಸ್ಮರಣ ಸಂಚಿಕೆಯಲ್ಲಿ ಅತ್ತಿಮಬ್ಬೆಯ ಜೀವನ ದರ್ಶನ, ಕನ್ನಡ ಸಾಹಿತ್ಯಕ್ಕೆ ಅತ್ತಿಮಬ್ಬೆಯ ಕೊಡುಗೆ, ಅತ್ತಿಮಬ್ಬೆ ಮತ್ತು ಜೈನಧರ್ಮ ಎಂಬ ಲೇಖನಗಳನ್ನು ಕ್ರಮವಾಗಿ ಕೆ.ಬಿ.ತಳಗೇರಿ, ಶ್ರೀಮತಿ ಕೆ.ಡಿ.ಕಾಶಪ್ಪನವರ, ಡಾ. ಶಾಲಿನಿ ರಘುನಾಥ ರಚಿಸಿದ್ದಾರೆ. ಲೇಖನಗಳಲ್ಲದೆ ಅತ್ತಿಮಬ್ಬೆಯ ಕುರಿತಾಗಿ ಕವನಗಳು ಈ ಸ್ಮರಣ ಸಂಚಿಕೆಯಲ್ಲಿ ಪ್ರಕಟಗೊಂಡಿವೆ. ಜಿನಧರ್ಮದೇವತೆ, ಜಿನಜನನಿಗೆ ನಮನ ಮತ್ತು ದಾನಚಿಂತಾಮಣಿ ಎಂಬ ಕವನಗಳನ್ನು ಅನುಕ್ರಮವಾಗಿ ಶ್ರೀ ನೀಲಕಂಠಮರಡಿ, ಶ್ರೀ ಎ.ಯು.ತಂಡರ ಮತ್ತು ಡಿ.ಎಸ್.ಕರ್ಕಿಯವರು ರಚಿಸಿದ್ದಾರೆ.

ಲೇಖನಗಳು ಅತ್ತಿಮಬ್ಬೆಯ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಅತ್ತಿಮಬ್ಬೆಯ ಸಾಧನೆಗಳಾದ ಹಳೆಯ ಮೌಲಿಕ ಕೃತಿಗಳ ಪುನರ್ ಪ್ರಸಾರ ಮತ್ತು ಹೊಸ ಸಾಹಿತ್ಯ ಕೃತಿಗಳ ನಿರ್ಮಾಣಕ್ಕೆ ಪರಿಹಾರ ಮತ್ತು ಜೈನಧರ್ಮದಲ್ಲಿದ್ದ ಅತ್ತಿಮಬ್ಬೆಯ ಶ್ರದ್ಧೆಯ ವಿಷಯಗಳನ್ನು ಒಳಗೊಂಡಿವೆ. ದಾನಚಿಂತಾಮಣಿ ಎಂಬ ದಿ. ಡಾ.ಡಿ.ಎಸ್.ಕರ್ಕಿಯವರ ಕಥನ ಕವನವಾದರೆ ಇನ್ನೆರಡು ಕವಿತೆಗಳು ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಹಾಡಿಹೊಗಳಿವೆ.

ಲಕ್ಕುಂಡಿ ಉತ್ಸವ (೧೯೯೮)ರ ಸವಿನೆನಪಿಗಾಗಿ ಲಕ್ಕುಂಡಿ : ಕಲೆಯ ಬಲೆ ಎಂಬ ಪುಸ್ತಕವನ್ನು ಎಂ.ಎಚ್.ಹರಿದಾಸರು ರಚಿಸಿರುವರಷ್ಟೆ. ಇದೇ ೧೯೯೮ರ ಲಕ್ಕುಂಡಿ ಉತ್ಸವದಲ್ಲಿ "ಲೊಕ್ಕಿಗುಂಡಿ" ಎಂಬ ಸ್ಮರಣ ಸಂಚಿಕೆ ಬಿಡುಗಡೆಯಾಗಿದೆ. ಲಕ್ಕುಂಡಿ ಉತ್ಸವವು ದಿನಾಂಕ ೩ ಅಥವಾ ೪ ಏಪ್ರಿಲ್ ೧೯೯೮ರಲ್ಲಿ ನೆರವೇರಿದೆ. ಹಿರೇಗುಂಜಾಳದ ಸರಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಚಂದ್ರಶೇಖರ ವಸ್ತ್ರದ ಅವರು ಈ ಸ್ಮರಣಿಕೆಯ ಸಂಪಾದಕರಾಗಿ ಕೆಲಸ ನಿರ್ವಹಿಸಿದ್ದಾರೆ. ಇಲ್ಲಿ ಮುಂಡರಗಿಯ ಮಹಾಲಿಂಗ ಯಾಳಗಿಯವರು ದಾನಚಿಂತಾಮಣಿ ಅತ್ತಿಮಬ್ಬೆ ಎಂಬ ಲೇಖವೂ ಅತ್ತಿಮಬ್ಬೆಯ ಬದುಕಿನ ಸಾಧನೆಯನ್ನು ಚಿತ್ರಿಸುತ್ತದೆ.

ಗದಗ ಜಿಲ್ಲೆಯ ಲಕ್ಕುಂಡಿ ಉತ್ಸವ ೨೦೦೨ರ ಸ್ಮರಣ ಸಂಚಿಕೆಯ ಹೆಸರು ಕೀರ್ತಿಮುಖ ಎಂದು. ಈ ಉತ್ಸವ ದಿನಾಂಕ ೨ ಹಾಗೂ ೩ ಮಾರ್ಚ್ ೨೦೦೨ರಲ್ಲಿ ಜರುಗಿತ್ತು. ಗದಗ ಜಿಲ್ಲೆಯ ಉಪವಿಭಾಗಾಧಿಕಾರಿಗಳಾದ ಡಾ. ಸಿ.ಬಿ.ಬೆಟಸೂರಮಠ ಇವರು ಈ ಸ್ಮರಣ ಸಂಚಿಕೆಯ ಸಂಪಾದಕರು. ಸಂಪಾದಕರ ದಾನ ಚಿಂತಾಮಣಿ ಅತ್ತಿಮಬ್ಬೆಯೆಂಬ ಪರಿಚಯಾತ್ಮಕ ಲೇಖನದೊಂದಿಗೆ ಬಸವರಾಜ ಆಯ್. ಗಜಗಪ್ಪನವರ ಚಾರಿತ್ರ್ಯಮೇರು ದಾನ ಚಿಂತಾಮಣಿ ಅತ್ತಿಮಬ್ಬೆ ಎಂಬ ಲೇಖನವನ್ನೊಳಗೊಂಡಿದೆ. ಲೇಖನವು ಅತ್ತಿಮಬ್ಬೆಯ ಚರಿತ್ರೆ ಹಾಗೂ ಪವಾಡಗಳನ್ನೊಳಗೊಂಡಿದೆ. ಹಾಗೂ ಶ್ರೀ ಪಿ.ಎಲ್.ದಿಗಿದಿಗಿಯವರ 'ತ್ಯಾಗಮಯಿ ಜಿನಧರ್ಮದೇವತೆ ಅತ್ತಿಮಬ್ಬೆ' ಎಂಬ ಲೇಖನವೂ ಇದೆ.

ಸಂಶೋಧನ ಗ್ರಂಥಗಳಲ್ಲಿ

೧೯೬೬ರಲ್ಲಿ ಡಾ. ಚಿದಾನಂದಮೂರ್ತಿಯವರು ಮೈಸೂರು ವಿಶ್ವವಿದ್ಯಾಲಯಕ್ಕೆ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ವಿದ್ವಾತ್‌ಪೂರ್ಣ ಪ್ರಬಂಧವನ್ನು ಅರ್ಪಿಸಿದ್ದಾರೆ.

ಸಾಮಾಜಿಕ ವ್ಯವಸ್ಥೆಯೆಂಬ ಅಧ್ಯಾಯದಲ್ಲಿ ಸ್ತ್ರೀಯರು ಮತ್ತು ಧರ್ಮ ವಿಷಯವನ್ನು ವಿವರಿಸುವಾಗ ಅತ್ತಿಮಬ್ಬೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸಮಾಲೋಕನದ ನಂತರ ಅತ್ತಿಮಬ್ಬೆಯ ವಿಷಯ ಪ್ರಕಟಗೊಂಡಿದ್ದು ಇಲ್ಲಿಯೇ ಎಂದು ಕಾಣಿಸುತ್ತದೆ. ಚಿದಾನಂದಮೂರ್ತಿಯವರು ತಮ್ಮ ಸಂಶೋಧನಾ ಗ್ರಂಥದಲ್ಲಿ ಅತ್ತಿಮಬ್ಬೆಗೆ ಸಂಬಂಧಪಟ್ಟ ಎಲ್ಲ ಸಂಗತಿಗಳನ್ನು ಸಂಗ್ರಹ ರೂಪದಲ್ಲಿ ಪ್ರಕಟಿಸಿದ್ದಾರೆ. ಅತ್ತಿಮಬ್ಬೆಯ ತಂದೆ, ತಾಯಿ, ಮನೆತನ, ತಂಗಿ ಗುಂಡಮಬ್ಬೆಯ ಸಹಗಮನ, ಅತ್ತಿಮಬ್ಬೆಯ ನಿರ್ಧಾರ, ಉಗ್ರನಿಷ್ಠೆ, ಅಜಿತ ಪುರಾಣಕ್ಕೆ ಪ್ರೇರಣೆ, ಸಾವಿರ ಬಸದಿಗಳ ನಿರ್ಮಾಣ, ಜಿನಬೊಂಬೆಗಳ ದಾನ, ಬ್ರಹ್ಮಜಿನಾಲಯದ ನಿರ್ಮಾಣ ಮತ್ತು ಪವಾಡಗಳು ಈ ಎಲ್ಲ ವಿಷಯಗಳನ್ನು ಚೊಕ್ಕವಾಗಿ ಹೇಳಿದ್ದಾರೆ. ಅತ್ತಿಮಬ್ಬೆಯ ಸಾಧನೆಯನ್ನು ವೈಯಕ್ತಿಕವಾದ ತಪಸ್ಸು, ಕಠೋರ ನಿಯಮಾನುಸರಣೆ, ಜೈನಧರ್ಮದಲ್ಲಿ ಅದ್ಭುತವಾದ ವಿಶ್ವಾಸ, ಜೈನಧರ್ಮದ ಏಳಿಗೆಗಾಗಿ ಅತ್ತಿಮಬ್ಬೆಯು ಪಟ್ಟಶ್ರಮ, ಮಾಡಿದ ತ್ಯಾಗ, ಕನ್ನಡ ಸಾಹಿತ್ಯಕ್ಕಾಗಿ ಮಾಡಿದ ಸೇವೆಯೆಂದು ಭಾಗಗಳನ್ನಾಗಿ ಮಾಡಿದ್ದಾರೆ. ಚಿಕ್ಕದಾದರೂ ಚೊಕ್ಕವಾಗಿ ಅತ್ತಿಮಬ್ಬೆಯ ವ್ಯಕ್ತಿತ್ವದ ಸ್ಪಷ್ಟ ದರ್ಶನವನ್ನು ಸಂಶೋಧಕರು ಮಾಡಿಸಿದ್ದಾರೆ.[೧]

ಡಾ. ಬಿ.ವ್ಹಿ.ಶಿರೂರು ಅವರು ೧೯೭೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ, ಸಂಶೋಧನ ಗ್ರಂಥಮಾಲೆ ೨೬ ನೆಯದಾಗಿ "ಶ್ರವಣಬೆಳ್ಗೊಳ ರಾಜಕೀಯ ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ" ಎಂಬ ಕೃತಿಯನ್ನು ರಚಿಸಿದ್ದಾರೆ. ಸಾಂಸ್ಕೃತಿಕ ವಿಭಾಗದಲ್ಲಿ ಅತ್ತಿಮಬ್ಬೆಯು ಗೋದಾವರಿ ನದಿಯನ್ನು ನಿಲ್ಲಿಸಿದ ಪವಾಡವನ್ನು ಪ್ರಸ್ತಾಪಿಸಿದ್ದಾರೆ.[೨]

೧೯೯೦ರಲ್ಲಿ ಡಾ. ಚೆನ್ನಕ್ಕ ಎಲಿಗಾರ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸಂಶೋಧನೆ ಗ್ರಂಥಮಾಲೆ - ೫೧ನೆಯದಾಗಿ "ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ" ಎಂಬ ಸಂಶೋಧನಾತ್ಮಕ ಪ್ರಬಂಧವನ್ನು ರಚಿಸಿದ್ದಾರೆ. ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಹೇಳುವಾಗ, ಅವಳ ಜೀವನ ಪ್ರಸಂಗಗಳನ್ನು ವರ್ಣಿಸುತ್ತಾರೆ. ಜೈನಧರ್ಮದ ಕುರಿತು ಹೇಳುವಾಗ ಅತ್ತಿಮಬ್ಬೆಯ ಧರ್ಮನಿಷ್ಠೆಯನ್ನು ಹೇಳುವಾಗಲೂ ಅತ್ತಿಮಬ್ಬೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ.[೩]

ಅತ್ತಿಮಬ್ಬೆಯ ನಿರ್ಧಾರ, ಶಾಸ್ತ್ರದಾನ, ಧರ್ಮಶ್ರದ್ಧೆಯನ್ನು ಡಾ. ಚೆನ್ನಕ್ಕ ಎಲಿಗಾರ ಇವರು ಹೇಳಿರುವುದಲ್ಲದೆ, ಲಕ್ಕುಂಡಿಯಲ್ಲಿ ಅವಳು ಮಾಡಿದ, ಜಿನಾಲಯ ನಿರ್ಮಾಣ, ಹೊನ್ನಪುಥ್ಥಳಿಯ ದಾನ ಮತ್ತು ಬ್ರಹ್ಮ ಜಿನಾಲಯವನ್ನು ತನ್ನ ಗುರುವಾದ ಅರ್ಹನಬ್ಬಿ ಪಂಡಿತದೇವರಿಗೆ ಸಮರ್ಪಿಸಿದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅತ್ತಿಮಬ್ಬೆಯ ಕೊನೆಯ ದಿನಗಳ ಬಗ್ಗೆ ಪ್ರಸ್ತಾಪಿಸಿ ಬ್ರಹ್ಮಶಿವ ಸಮಯ ಪರೀಕ್ಷೆಯಲ್ಲಿ ಅತ್ತಿಮಬ್ಬೆಯನ್ನು ಕೊಂಡಾಡಿರುವುದನ್ನು ಹೇಳಿರುವರಲ್ಲದೆ, ಅತ್ತಿಮಬ್ಬೆಯ ನಂತರ ಅವಳ ಪ್ರಭಾವ ಯಾರ ಮೇಲೆ ಆಗಿದೆ ಎಂಬ ವಿಷಯದ ಬಗ್ಗೆಯೂ ಡಾ. ಚೆನ್ನಕ್ಕ ಎಲಿಗಾರ ಅವರು ಹೇಳಿದ್ದಾರೆ.

ಈ. ಅತ್ತಿಮಬ್ಬೆಯ ಪ್ರಭಾವ

ಪನ್ನೀರಿನಲ್ಲಿ ಒಂದು ವಸ್ತ್ರವನ್ನು ಅದ್ದಿತೆಗೆದರೆ, ಹಲವಾರು ಕಾಲದವರೆಗೆ ಆ ವಸ್ತ್ರವು ಪನ್ನೀರಿನ ಸುವಾಸನೆಯನ್ನು ಹೊಂದಿರುವಂತೆ, ಅರ್ಥಪೂರ್ಣವಾಗಿ ಬದುಕಿ ಬಾಳಿದ ವ್ಯಕ್ತಿಯ ವ್ಯಕ್ತಿತ್ವದ ಪ್ರಭಾವವು ಮುಂದಿನ ಹಲವಾರು ತಲೆಮಾರುಗಳಲ್ಲಿ ಕಂಡುಬರುತ್ತದೆ. ಅತ್ತಿಮಬ್ಬೆಯ ದೇಹ ಅಳಿದರೂ ಅವಳ ವ್ಯಕ್ತಿತ್ವ ಪ್ರಭಾವವು ಮುಂದಿನ ಹಲವಾರು ಸ್ತ್ರೀಯರ ಮೇಲೆ ಆಗಿರುವದನ್ನು ಶಾಸನಗಳು ತಿಳಿಸುತ್ತವೆ. ಅವಳ ವ್ಯಕ್ತಿತ್ವದ ಪ್ರಭಾವ ಅವಳ ಸಮಕಾಲೀನರ ಮೇಲೆ ಆದಂತೆ ಅವಳ ನಂತರದ ಕಾಲದಲ್ಲಿಯೂ ಗಾಢವಾದ ಪ್ರಭಾವವನ್ನುಂಟುಮಾಡಿದೆ. ರನ್ನು ಕವಿಯು ತನ್ನ ಮಗಳಿಗೆ ಅತ್ತಿಮಬ್ಬೆ ಎಂದು ಹೆಸರಿಟ್ಟದ್ದು, ಅರಸ ಆಹವಮಲ್ಲ ತೈಲಪನು ಗೋದಾವರಿ ನದಿಯನ್ನು ದಾಟುವ ಸಂದರ್ಭದಲ್ಲಿ ಅತ್ತಿಮಬ್ಬೆಯ ಸಹಾಯ ಯಾಚಿಸಿದ್ದು, ಲಕ್ಕುಂಡಿಯ ಶಾಸನದಲ್ಲಿ[೮೩] ದಾಖಲಿತ ಬಿರುದುಗಳು ಅವಳ ಸಮಕಾಲೀನ ಪ್ರಭಾವ ಎಷ್ಟು ದಟ್ಟವಾಗಿತ್ತು ಎನ್ನುವದನ್ನು ಸೂಚಿಸುತ್ತದೆ. ರನ್ನಕವಿಯಂತೂ ಅವಳ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಜಿನಪದ ಪಂಕಜ ಭ್ರಮರ ಎಂದೆಲ್ಲಾ ವರ್ಣಿಸಿದ್ದಾನೆ. ಬಹುಮುಖ ವ್ಯಕ್ತಿತ್ವವನ್ನು ಹೊಂದಿರುವ ಅತ್ತಿಮಬ್ಬೆಯನ್ನು ರನ್ನಕವಿಯು ಪುರಾಣಶ್ರೇಷ್ಠ ಸ್ತ್ರೀಯರಿಗೆ ಹೋಲಿಸಿದ್ದಾನೆ.

ಅತ್ತಿಮಬ್ಬೆಯ ದಾನಗುಣದಿಂದ ಪ್ರಭಾವಿತರಾಗಿರುವಂತೆ, ಅವಳ ''ದಾನಚಿಂತಾಮಣಿ''ಯೆಂಬ ಬಿರುದು ಉದಾರವಾಗಿ ದಾನಗೈಯುವವರ ಮನಸ್ಸೆಳೆದಿದೆ. ಆದುದರಿಂದಲೇ ಅತ್ತಿಮಬ್ಬೆಯ ತರುವಾಯ ದಾನಚಿಂತಾಮಣಿ ಎಂಬ ಬಿರುದನ್ನು ಹಲವಾರು ಮಹಿಳೆಯರು ಪಡೆದಿರುವುದನ್ನು ಶಾಸನಗಳು ಬಣ್ಣಿಸುತ್ತವೆ. ಶ್ರೀಮತಿ 'ಗಂತಿ' ಎನ್ನುವ ಜೈನಸನ್ಯಾಸಿನಿ ದಾನಚಿಂತಾಮಣಿ ಎಂಬ ಬಿರುದನ್ನು ಪಡೆದುಕೊಂಡಿದ್ದನ್ನು ಶ್ರವಣಬೆಳ್ಗೊಳದ ಶಾಸನವು ತಿಳಿಸುತ್ತದೆ.[೮೪]

ಆ ಮುನಿ ದೀಕ್ಷೆಯಂ ಕುಡೆ ಸಮಗ್ರ ತಪೋನಿಧಿಯಾಗಿ ದಾನ ಚಿಂ
ತಾಮಣಿಯಾಗಿ ಸದ್ಗುಣಗಣಾಗ್ರಣಿಯಾಗಿ ದಯಾದಮ ಕ್ಷಮಾ
ಶ್ರೀಮುಖ ಲಕ್ಷ್ಮಿಯಾಗಿ ವಿನಯಾರ್ಣ್ಣವ ಚಂದ್ರಿಕೆಯಾಗಿ ಸಂತತಂ
ಶ್ರೀಮತಿ ಗಂತಿಯರ್ನ್ನೆಗಳ್ದರುರ್ವ್ವಿಯೊಳುರ್ವ್ವರೆ ಕೂರ್ತ್ತು ಕೀರ್ತ್ತಿಸಲು.

ಏಚಿಕಬ್ಬೆಯ ದಾನಗುಣವನ್ನು ಅತ್ತಿಮಬ್ಬೆಯ ದಾನಗುಣದೊಂದಿಗೆ ಹೋಲಿಸಿ ಶಾಸನವೊಂದರಲ್ಲಿ ಸ್ತುತಿಸಲಾಗಿದೆ.

ಕುಡುವಳೆ ದಾನಮನೇ ಚಿಕಬ್ಬೆಯತ್ತಿ ಮಬ್ಬರಸಿಯವೋಲ್ ''[೮೫]

ಅದೇ ರೀತಿಯಾಗಿ ಮಾಚಲೆ ಎಂಬುವವಳನ್ನು ಅತ್ತಿಮಬ್ಬೆಗೆ ಸದೃಶಂ ಎನ್ನಲಾಗಿದೆ.

"ಮಾರನ ಸತಿಗಂ ಸೀತೆಗೆ

ರೇವತಿ ಗರುಸ್ಥಿತಿಗೆ ಅತ್ತಿಮಬ್ಬೆಗೆ ಸದೃಶಂ.[೮೭]

ಒಂದೇ ಒಂದು ತಿಂಗಳದ ಅವಧಿಯಲ್ಲಿ ಬಸದಿಯ ಪಟ್ಟಿಶಾಲೆಯನ್ನು ನಿರ್ಮಿಸಿರುವ ಪಂಪಾದೇವಿಯನ್ನು "ನೂತ್ನಾತ್ತಿಮಬ್ಬೆ" ಎಂದು ಕರೆಯಲಾಗಿದೆ.

"ಆ ನೂತ್ನಾತ್ತಿಮಬ್ಬೆಯ

ಭೂನುತ ಶೀಳವನೆ ತಳೆದು ಸೌಭೌಗ್ಯವಪು

ಶ್ರೀನಿಧಿ ಭೋಗ್ಯ ಶ್ಲಾಘ್ಯ

ಶ್ರೀನಿಧಿ ಪುಟ್ಟಿದಳುದಾತ್ತೆ ಬಾಚಲದೇವಿ

"ನೂತ್ನಾತ್ತಿಮಬ್ಬೆ"ಗೆ ಅಭಿನವ ಅತ್ತಿಮಬ್ಬೆಯೆಂಬ ಅರ್ಥವನ್ನು ಡಾ.ಹಂಪನಾ ಅವರು ಅರ್ಥೈಸಿದ್ದಾರೆ.[೮೮]

ಪ್ರಭುವಾದ ಮಲ್ಲಿಗಾವುಂಡನ ಪತ್ನಿಯಾದ ರೇವಕಬ್ಬೆ ಅತ್ತಿಮಬ್ಬೆಗೆ ಸರಿಸಾಟಿಯಾಗಿದ್ದಳೆನ್ನಲಾಗಿದೆ.

"ನಾಳ್ಪ್ರಭು ಮಲ್ಲಿಗಾವುಂಡನ ಮಡದಿ ರೇವಕಬ್ಬೆ ಶೀಲಪ್ರಭೆಯಿಂದತ್ತಿಮಬ್ಬೆಗಂ ರೇವಕಗಂ"[೮೯]

ಹೊನ್ನೆಯರಸನ ಮಡದಿ ಅಳಿಯಾದೇವಿಯನ್ನು ಅತ್ತಿಮಬ್ಬೆಯೋ ಎಂದು ಹೊಗಳಲಾಗಿದೆ.[೯೦]

ಅವರೊಡನೆ ಪುಟ್ಟಿದಳು ಭೂ

ಭುವನಂ ವಿತ್ತರಿಸುವತ್ತಿಮಬ್ಬೆಯೋ ಪೇಳ್ದಂ

ಬವೊಲೆಸೆದಳು ಅಳಿಯಾದೇ

ವಿ ವಿಶುದ್ಧಾಚಾರದಿಂ ವಿನಿರ್ಮ್ಮಳೆ ಗುಣದಿಂ

ಪರಿಸಣ್ಣನ ಮಡದಿ ಬಮ್ಮಲದೇವಿ ಜಿನಭಕ್ತಿಯಲ್ಲಿ ಅತ್ತಿಮಬ್ಬೆಯಂತೆ ಇದ್ದಳೆಂದು ಅರಸಿಕೆರೆ ಶಾಸನವು ಹೇಳುತ್ತದೆ.[೯೧]

ಲಕ್ಕುಂಡಿಯ ನಗರೇಶ್ವರ ಗುಡಿಯ ಒಡೆದು ಹೋದ ಜಿನಬಿಂಬ ಪೀಠದ ಮೇಲೆ ೧೩ನೆಯ ಶತಮಾನದ ಶಾಸನವು

"ಶ್ರೀ ಪರಮಾರ್ಹಂ ತನನಿಷ್ಪದೆಯಮಮಳ ಪ್ರಖ್ಯಾತನುರ್ವ್ವೀ

ನುತರ್ಗುರುತ್ರೈವಿದ್ಯ ನರೇಂದ್ರ ಸೇನಮುನಿಪಂ ವೈಶಾನ್ಯಯಾಂಬೋ

ಜಭಾಸ್ಕರನ್ನದ್ಯಮ್ಗಣಿ ಚೇಮಿಸೆಟ್ಟಿಯ ಮಗಳು ರಾಜವ್ವೆ ಬೋ

ಧೋದಯಾಕರನಂ ಕಳ್ಪಜಿನೇಂದ್ರನಂ ಪದಪಿನಿಂ ನಿರ್ಮ್ಮಾಪಣಂ

ಮಾಡಿದಳ್"

ಜೇಮಿಸೆಟ್ಟಿಯ ಮಗಳಾದ ರಾಜವ್ವೆ ಜಿನಬಿಂಬವನ್ನು ನಿರ್ಮಿಸಿದ ವಿಷಯ ನಗರೇಶ್ವರ ಗುಡಿಯೊಳಗಿನ ಜಿನಪೀಠದ ಶಾಸನದಿಂದ ತಿಳಿದು ಬರುತ್ತದೆ. ಈ ಜೇಮಿಸೆಟ್ಟಿಯು ನರೇಂದ್ರಸೇನ ಮುನಿಗಳ ಶಿಷ್ಯನೆಂದು ಶಾಸನವು ವರ್ಣಿಸುತ್ತದೆ. ಈ ರಾಜವ್ವೆಗೆ ಅತ್ತಿಮಬ್ಬೆಯ ವ್ಯಕ್ತಿತ್ವದ ಪ್ರಭಾವವಾಗಿದೆ.

ಕಲ್ಯಾಣ ಚಾಲುಕ್ಯರ ಅಪ್ರಕಟಿತ ಶಾಸನವೊಂದು ಗದಗ ಮ್ಯೂಸಿಯಂನಲ್ಲಿದೆ. ಹಿರಿಯಬ್ಬರಿಸಿ ಎಂಬುವವಳು ಬಸದಿಗೆ ದಾನ ಬಿಟ್ಟ ವಿಷಯ ತಿಳಿದುಬರುತ್ತದೆ. ಈ ಶಾಸನ ಒಡೆದು ಹೋಗಿರುವುದರಿಂದ ಮತ್ತು ಲಿಪಿ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿಷಯಗಳು ತಿಳಿದುಬರುವುದಿಲ್ಲ.

''ತೂಪಿಪತಿಚರಿಯೊಳತಿಯಬ್ಬೆ''ಯೆಂದು ಕಚವರ್ಗಡೆಯ ಕಿರಿಯ ಮಡದಿ ಬಾಚಲೆಯನ್ನು ಗೋರೂರು ಶಾಸನವು ಹೇಳುತ್ತದೆ.

ಆತನ ಕಿರಿಯ ಪೆಣ್ಡತಿ
ರತಿಯಂ ಪೋಲ್ವಳು ತೂಪಿಪತಿ ಚರಿಯೊಳತ್ತಿಯಬ್ಬೆ
ಪೋಲ್ವಳ ನಿದಿ ತತಯಶೋವಲ್ಲರಿಯ
ಮತಿಹೀನರರದೇನು ಬಣ್ಣಿಪರ್ಬ್ಬಾಚವೆಯಂ [೯೨]

ಅಲಹಳ್ಳಿಯ ಶಾಸನವು ಬಾಚಲದೇವಿಯನ್ನು ದಾನವಿನೋದೆ, ದಾನಚಿಂತಾಮಣಿ, ದಾನಕಲ್ಪಲತೆಯೆಂದು ಕರೆದಿದೆ.

ಸುದ್ಧಮತಿ ವರದಾನ ಗುಣಭೂಷಣೆ
ದಾನವಿನೋದೆ ದಾನಚಿನ್ತಾಮಣಿ
ದಾನಕಲ್ಪಲತೆಯೆಂಬಿದು ಬಾಚಲದೇವಿಗೊಪ್ಪದೇ.[೯೩]

ಅಲ್ಲದೆ ಸೋವಲದೇವಿಯಂಬುವವಳು ಅತ್ತಿಮಬ್ಬೆ ಎಂದೇ ಪ್ರಖ್ಯಾತಿಯನ್ನು ಪಡೆದಿದ್ದಾಳೆ.[೯೪] ರನ್ನ ಕವಿಯ ಅಜಿತಪುರಾಣದ

ಶ್ರಾವಕ ಧರ್ಮದೊಳ್
ಜನ್ಮಭೂಮಿಯಂ ಪದ್ಯಗಳನ್ನು

ಶ್ರವಣಬೆಳ್ಗೊಳದ ಶಾಸನ ಅಲ್ಪವ್ಯತ್ಯಾಸದಿಂದಲೇ ಸಾವಿಯಬ್ಬೆ ಎಂಬ ಮಹಿಳೆಯನ್ನು ಬಣ್ಣಿಸಿದೆ.

ಅತ್ತಿಮಬ್ಬೆಯು ಕಾಲವಾದ ಬಳಿಕವಂತೂ ಅವಳ ವ್ಯಕ್ತಿತ್ವ ಮತ್ತಷ್ಟು ಪೌರಾಣಿಕವಾಗಿ ರೂಪುಗೊಂಡಿತು. ಅತ್ತಿಮಬ್ಬೆಯ ಮತ್ತೊಂದು ಹೆಸರು ದಾನಚಿಂತಾಮಣಿ ಎನ್ನುವಷ್ಟರಮಟ್ಟಿಗೆ ಅವಳ ಬಿರುದು ಜನಪ್ರಿಯವಾಗಿ ಪ್ರಖ್ಯಾತಿಯನ್ನು ಪಡೆದುಕೊಂಡಿತು. ಈ ದಾನಚಿಂತಾಮಣಿಯೆನ್ನುವ ಬಿರುದನಷ್ಟೇ ಮತ್ತೊಂದು ಅವಳ ಬಿರುದು

ಪ್ರಸಿದ್ಧಿಯನ್ನು ಪಡೆದುಕೊಂಡಿತು. ಅದು ಯಾವುದೆಂದರೆ ಗುಣದಂಕಕಾರ್ತಿ ಎಂಬುದು. ಗುಣದಂಕಕಾರ್ತಿ ಎಂಬ ಬಿರುದನ್ನು ಚಂದಿಕಬ್ಬೆಗೆ ಅನ್ವಯಿಸಿ ವರ್ಣಿಸಲಾಗಿದೆ.[೯೫]

ಅತ್ತಿಮಬ್ಬೆಯ ಈ ಪ್ರಭಾವ ವಲಯವನ್ನು ಗಮನಿಸಿದಾಗ, ದಾನ, ಧಾರ್ಮಿಕತೆ, ಸಾಹಿತ್ಯಿಕ ಕೊಡುಗೆ, ಹೀಗೆ ಯಾವ ನಿಟ್ಟಿನಿಂದ ಅಳೆದರೂ ಅತ್ತಿಮಬ್ಬೆಯ ವ್ಯಕ್ತಿತ್ವ ಮಾಪನಕ್ಕೆ ಸಿಗಲಾರದಂತೆ ವರ್ಧಿಸುತ್ತಿದೆ. ದಾನ ಕ್ಷೇತ್ರದಲ್ಲಿ ಅತ್ತಿಮಬ್ಬೆಯನ್ನು ಹಿಂದೆ ಹಾಕಬಹುದಾದ ಮಹಿಳೆಯು ಪ್ರಾಚೀನ ಕರ್ನಾಟಕದಲ್ಲಿ ಯಾರೂ ಇಲ್ಲ. ಹಾಗೂ ಮುಂದಿನ ತಲೆಮಾರುಗಳ ಮೇಲೆ ಅತ್ತಿಮಬ್ಬೆಯಷ್ಟು ಪ್ರಭಾವ ಬೀರಿದ ವ್ಯಕ್ತಿಗಳು ಯಾರೂ ಇಲ್ಲ ಎನ್ನಬಹುದು.

ಮಹಿಚಕ್ರಕ್ಕು ಚೋದ್ಯಮತ್ತಿನಿಸುವಂತಾರ್ತೀವುದುಂ ಕಂಡು ಸ
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೆಂ ಚೋದ್ಯಮೀಗಳ ಜಗ
ನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿ
ಸ್ಪೃಹರುಂ ಬಣ್ಣಿಪರತ್ತಿ ನಿನ್ನ ಗುಣಮಂ ಶ್ರೀ ದಾನಚಿಂತಾಮಣೀ.


ಅಡಿಟಿಪ್ಪಣಿಗಳು

೧. ಅಜಿತ ಪುರಾಣ ಸಂಗ್ರಹ
೩. ಸಾಹಸಭೀಮ ವಿಜಯ, ರನ್ನ
೪. ಅಜಿತ ತೀರ್ಥಂಕರ ಪುರಾಣಂ, ಸಂ, ಬಿ.ಎಸ್.ಸಣ್ಣಯ್ಯ, ರಾಮೇಗೌಡ
೫. ಅಜಿತ ತೀರ್ಥಂಕರ ಪುರಾಣಂ
೩. ರನ್ನ ವಿರಚಿತ ಅಜಿತ ತೀರ್ಥಕರ ಪುರಾಣಂ, ಸಂ, ಬಿ.ಎಸ್.ಸಣ್ಣಯ್ಯ, ರಾಮೇಗೌಡ, ಮೊದಲನೆಯ ಆಶ್ವಾಸದ ೩೬ನೆಯ ಪದ್ಯ
೪. ಚಾವುಂಡರಾಯ ಪುರಾಣ, ಕರ್ನಾಟಕ ಸಾಹಿತ್ಯ ಪರಿಷತ್ತು (೧೯೨೮), ಪದ್ಯ ೧೦
೫. (E.C. XII, No.35)
೬. ಅಜಿತ ತೀರ್ಥಂಕರ ಪುರಾಣಂ, ಸಂ, ಬಿ.ಎಸ್.ಸಣ್ಣಯ್ಯ, ರಾಮೇಗೌಡ
೭. ಅಜಿತ ಪುರಾಣ ೧ - ೪೨
೮. ಅಜಿತ ಪುರಾಣ ೧ - ೪೪
೯. ಅಜಿತ ಪುರಾಣ ೧ - ೪೫
೧೦. ಅಜಿತ ಪುರಾಣ ೧ - ೬೫
೧೧. ಅಜಿತ ಪುರಾಣ ೧ - ೬೫
೧೨. ಜೈನ ಧರ್ಮ, ಮಿರ್ಜಿ ಅಣ್ಣಾರಾಯ
೧೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಚಿದಾನಂದಮೂರ್ತಿ,
೧೪. ಬಿ.ಎ. ಸಾಲೆತೊರೆ, ಮೀಡಿವಲ್ ಜೈನಿಸಂ, ಪು. ೨, ಶಾಸನ ಪದ್ಯಮಂಜರಿ, ೨೫೦
೧೫. ಎ.ಸಿ. ಕ್ರ.ಸಂ, ೨, ೧, ೩೧, ೬೪, ೬೭, ೧೭೬, ೨೫೮, ಎ.ಪಿ. ಕ್ರ.ಸಂ. ೩, ಎಚ್.ಆರ್. ೧೪೮೭, ೧೪೮
೧೬. ಬೃಹತ್ ಕಥಾ ಕೋಶ, ಹರಿಷೇಣ, ಭದ್ರಬಾಹುಚರಿತೆ ರತ್ನನಂದಿ
೧೭. ಮೀಡಿವಲ್ ಜೈನಿಸಂ, ಪು. ೧೬
೧೮. ಬಿ.ಎ. ಸಾಲೆತೊರೆ, ಮೀಡಿವಲ್ ಜೈನಿಸಂ, ಪು. ೨, ಶಾಸನ ಪದ್ಯಮಂಜರಿ, ೨೫೦
೧೯. E.C. II, I.C 600, A.D.

೨೦. E.C. II, ೩೧, C 650, A.D.
೨೧. E.C. II, ೩೧, C 650, A.D.
೨೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
೨೩. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಎಂ.ಎಂ.ಕಲ್ಬುರ್ಗಿ
೨೪. E.C. II. 127, 1115, A.D.
೨೫. ಶಾಸನ ಪರಿಚಯ, ಶಾಸನ ನಂ, ೧೨, ಪಿ.ಬಿ.ದೇಸಾಯಿ
೨೬. ಶಾಸನ ಪರಿಚಯ, ಶಾಸನ ನಂ, ೧೩, ಪಿ.ಬಿ.ದೇಸಾಯಿ
೨೭. INSP of Asoka, P. 26
೨೮. ಬಿ.ಎ. ಸಾಲೆತೊರೆ, ಮೀಡಿವಲ್ ಜೈನಿಸಂ, ಪು. ೧೮೮-೯೧
೨೯. ಅಜಿತ ಪುರಾಣ, ೧೨ - ೬
೩೦. E.C. IV, Ng, 100, 1145, A.D.
೩೧. ಪಂಪನ ಆದಿಪುರಾಣ, ಅನುವಾದಕರು ದಿ.ನಾಗರಾಜಶಾಸ್ತ್ರಿ, ಜಿ.ಬ್ರಹ್ಮಪ್ಪ.
೩೨. E.C. II, 351, 1119, A.D.i, 117, 1123, A.D
೩೩. E.C. 69, C 1000, A.D.
೩೪. E.C. VII, Sh, 4, 1122, A.D.
೩೫. ಪಂಪನ ಆದಿಪುರಾಣ (ಭಾವಾನುವಾದ) ಅನು, ದಿ.ಡಿ.ನಾಗರಾಜಶಾಸ್ತ್ರಿ, ಜಿ.ಬ್ರಹ್ಮಪ್ಪ
೩೬. SII, XX, 46, ಗುಡಿಗೆರೆ (ತಾ.ಶಿರಹಟ್ಟಿ) ಕ್ರಿ.ಶ. ೧೦೭೨
೩೭. SII, XI, i, No, 52-55 ನೆಯ ಸಾಲು
೩೮. ಹರಿತಿಸಿರಿ, ಕಾಣೂರ್ಗಣ, ಹಂಪ ನಾಗರಾಜಯ್ಯ, ಸಂ, ಲಕ್ಷ್ಮಣ ತೆಲಗಾವಿ
೩೯. SII, XI, i, 111, 1071
೪೦. ಕವಿವರ ಕಾಮಧೇನು, ಡಾ.ಹಂಪ ನಾಗರಾಜಯ್ಯ
೪೧. SII, XI, i, No, 52, 55 ನೆಯ ಸಾಲು.
೪೨. SII, XI, i, 113, 1074, ಪು, ೧೧೨, ಸಾಲು ೨೬ - ೨೯
೪೩. SII, XI, i, 111, 1071
೪೪. SII, XI, i, 111, 1071
೪೫. SII, XI, i, No, 52
೪೬. ಪೊನ್ನ ಕವಿ, ವಿರಚಿತ ಶಾಂತಿ ಪುರಾಣಂ, ಸಂ, ಅನುವಾದಕರು ಹಂಪನಾಗರಾಜಯ್ಯ
೪೭. SII, XI, No, 52, ಲಕ್ಕುಂಡಿ ಶಾಸನ
೪೮. SII, XI, i, No, 52, ಲಕ್ಕುಂಡಿ ಶಾಸನ, ೧೫ನೆಯ ಸಾಲು
೪೯. ಕವಿವರ ಕಾಮಧೇನು, ಡಾ.ಹಂಪನಾಗರಾಜಯ್ಯ
೫೦. SII, XI, i, No, 52
೫೧. SII, XI, i, No, 52-33, 34ನೆಯ ಸಾಲು
೫೨. ಅಜಿತ ಪುರಾಣ, ೧- ೪೨ ರಿಂದ ೪೫
೫೩. ಕವಿವರ ಕಾಮಧೇನು, ಡಾ.ಹಂಪನಾ ಪು.ಸಂಖ್ಯೆ - ೪೧
೫೪. I.E. Vii, ಪು, ೧೬೩, ನೇರೂರು, ಕ್ರಿ.ಶ. ೬೪೫
೫೫. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಡಾ.ಚೆನ್ನಕ್ಕ ಎಲಿಗಾರ, ಪು,ಸಂ, ೨೩೩
೫೬. ಅಜಿತ ಪುರಾಣ ಸಂಗ್ರಹ
೫೭. ಪೂರ್ವಪುರಾಣ, ಅನು, ಎರ್ತೂರು ಶಾಂತಿರಾಜ ಶಾಸ್ತ್ರಿಗಳು
೫೮. ಅಜಿತ ಪುರಾಣ, ೧ - ೭೫.
೫೯. ಲಕ್ಕುಂಡಿ ಶಾಸನ
ಅಜಿತಪುರಾಣ, ೧ - ೭೫

೬೦. ಬ್ರಹ್ಮಶಿವನ "ಸಮಯಪರೀಕ್ಷೆ, ಸಂ, ಡಾ.ಬಿ.ಎಸ್.ಕುಲಕರ್ಣಿ, ೧೯೫೭, ಪು. ೧ - ೪೦
೬೧. ಅಜಿತಪುರಾಣ ಸಂಗ್ರಹ, ಸಂ, ಅ.ರಾ.ಮಿತ್ರ, ಎಂ.ಎಚ್.ಕೃಷ್ಣಯ್ಯ
೬೨. ಅಜಿತಪುರಾಣ, ಸಮಯಪರೀಕ್ಷೆ, ಲಕ್ಕುಂಡಿ ಶಾಸನಗಳು
೬೩. ದಾನ ಚಿಂತಾಮಣಿ ಅತ್ತಿಮಬ್ಬೆ, ಡಾ.ಎಸ್.ಪಿ.ಪಾಟೀಲ, ಶ್ರೀ ಪ್ರಶಾಂತಕುಮಾರ ನಾಲವಾರ, ೧೯೯೩, ಕರ್ನಾಟಕ ಜೈನ ಸೇವಾ ಪರಿಷತ್ ಧಾರವಾಡ.
೬೪. SII XI, i No, ೫೨, ೪೯ ಮತ್ತು ೫೦ ನೆಯ ಸಾಲು.
೬೫. "ಗುಣದಂಕಕಾರ್ತಿ", ಡಾ.ಕಮಲಾ ಹಂಪನಾ
೬೬. ಕವಿವರ ಕಾಮಧೇನು, ಡಾ.ಹಂಪನಾ
೬೭. ರನ್ನ ಕವಿಯ ಅಜಿತಪುರಾಣ
೬೮. ರನ್ನ ಕವಿಯ ಅಜಿತಪುರಾಣ, ೧ - ೭೫, SII XI, ೫೨
೬೯. ಬ್ರಹ್ಮಶಿವನ ಸಮಯಪರೀಕ್ಷೆ, ೧ - ೩೮, ೪೦
೭೦. ಅಜಿತಪುರಾಣ ಸಂಗ್ರಹ, ಸಂ, ಅ.ರಾ.ಮಿತ್ರ, ಎಂ.ಎಚ್.ಕೃಷ್ಣಯ್ಯ, ಪು. ೧ - ೨೪
೭೧. ಅಜಿತಪುರಾಣ ಸಂಗ್ರಹ, ಸಂ, ಅ.ರಾ.ಮಿತ್ರ
೭೨. EC II, (R) ೩೩೬
೭೩. ಅಜಿತಪುರಾಣ
೭೪. ಅಜಿತಪುರಾಣ
೭೫. ಸಮಯಪರೀಕ್ಷೆ, ೧ - ೩೯
೭೬. EC II (R) ೮೨ (೭೩) ೧೧೧೮, P. ೬೫
೭೭. ಅಜಿತಪುರಾಣ
೭೮. ಅಜಿತಪುರಾಣ
೭೯. ಅಜಿತಪುರಾಣ
೮೦. ಅಜಿತಪುರಾಣ
೮೧. ಅಜಿತಪುರಾಣ ಸಂಗ್ರಹ, ೧ - ೭೪
೮೨. ಸಮಾಲೋಕನ ಕನ್ನಡ ಕವಿ ಕಾವ್ಯಮಾಲೆ, ತೀ.ನಂ.ಶ್ರೀ, ಶಾರದಾ ಮಂದಿರ ರಾಮಯ್ಯರ್ ರಸ್ತೆ, ಮೈಸೂರು - ೪, (೧೯೫೮)
೮೩. ..... ಜಿನಶಾಸನಮಂ ಬೆಳಗುತ್ತಮಿಳ್ದಪಳ್, SII, XI- i೫೩, ೧೦೦೭ ಲಕ್ಕುಂಡಿ ಶಾಸನದ ೨೬ - ೨೮ ಸಾಲುಗಳು
..... ಮಹಾಸತೀ ರತ್ನಮತ್ತಿ ಮಬ್ಬರಶಿಯರ್, SII, XI- i- ೫೨, ಲಕ್ಕುಂಡಿ, ೬೬ನೇ ಸಾಲು
೮೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಚಿದಾನಂದಮೂರ್ತಿ, ಪು. ೪೨೨, ೪೨೩, ೪೨೪
೮೫. ಶ್ರವಣಬೊಳ್ಗೊಳ ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ, ಡಾ. ಬಿ.ವ್ಹಿ.ಶಿರೂರು, ಪು.
೮೬. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ ಡಾ. ಚೆನ್ನಕ್ಕ ಎಲಿಗಾರ, ಪು. ೧೧೨, ೧೧೩, ೧೧೪
೮೪. ಎ.ಕ. ಶ್ರವಣಬೆಳ್ಗೊಳ, ೪೮೪ (ಕ್ರಿ.ಶ. ೧೧೧೯)
೮೫. ಎ.ಕ. II, ಶ್ರವಣಬೆಳ್ಗೊಳ, ೩೮೪, ೧೧೩೫
೮೬. ಎ.ಕ. IV, ನಾಗಮಂಗಲ, ೯೪, ೧೧೪೨
೮೭. ಎ.ಕ. VIII, ನಗರ ೩೨, ಹುಂಚ ೧೧೪೭
೮೮. ಕವಿವರ ಕಾಮಧೇನು, ಡಾ.ಹಂಪನಾ, ಪು. ೯೬
೮೯. ಎಸ್.ಆಯ್.ಆಯ್. XVIII, ೧೫೧, ನೀಲರಗಿ (ತಾ) ಹಾವೇರಿ, ೧೧೪೮
೯೦. ಎ.ಕ. VIII, ಸಾಗರ ೧೫೯, ೧೧೫೯, ಹೆರಕೆರೆ ಕ್ರಿ.ಶ. ೧೧೫೯, ೩೧ - ೩೨ ನೆಯ ಸಾಲು
೯೧. ಎ.ಕ.ವಿ. ಅರಸಿಕೆರೆ, ೧೪೧, ಕರಗುಂದ (ಕ್ರಿ.ಶ. ೧೧೫೯)
೯೨. ಎಂ.ಎ.ಆರ್. ೧೯೪೩, ೧೫ ಗೋರೂರು (ತಾ) ಬೇಲೂರು, (ಕ್ರಿ.ಶ. ೧೧೭೦)
೯೩. ಎ.ಕ. VII- i, ೯೭ - ೧೧೧೩ ಅಲಹಳ್ಳಿ
೯೪. ಎ.ಕ. VII, ಶಿಕಾರಿಪುರ, ೨೩೨, ಬಳ್ಳಿಗಾವೆ (ಕ್ರಿ.ಶ. ೧೨೦೦)
೯೫. ಎ.ಕ. II, ೧೭೬ (೧೪೩) ೧೧೨೩, ೧೪೦ - ೪೩ ನೆಯ ಸಾಲು

❑❑












ಅತ್ತಿಮಬ್ಬೆಯ ಕುರಿತು ಪ್ರಕಟಗೊಂಡ ಕೃತಿಗಳ ಮೇಲಿರುವ ಕಾಲ್ಪನಿಕ ಚಿತ್ರಗಳು

೪

ಅತ್ತಿಮಬ್ಬೆಯ ಕೊಡುಗೆ

೪

ಅತ್ತಿಮಬ್ಬೆಯ ಕೊಡುಗೆ

ಪಿರಿಯಂ ಬೂತುಗನಾತನಿಂ ಮಮಳನಾತಂಗಂ ನೊಳಂಬಾಂತಕಂ
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ
ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಬಾರಮಂ ಪೊತ್ತು ನಿ
ತ್ತರಿಸುತ್ತಿರ್ಪುದರೆಂದೆ ನೀನೆ ಪಿರಿಯೈ ಶ್ರೀ ದಾನ ಚಿಂತಾಮಣಿ [೧]

ಅತ್ತಿಮಬ್ಬೆಯ ಕೊಡುಗೆ ಪ್ರಮುಖವಾಗಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಬಹುದು. ತನ್ನ ವೈಯಕ್ತಿಕಕ್ಕಲ್ಲದೆ ಇತರರ ಕಲ್ಯಾಣಕ್ಕಾಗಿ ಯಾರು ಶ್ರಮಿಸಿದ್ದಾರೋ ಅಂತಹವರ ಕೀರ್ತಿ, ಕೊಡುಗೆಯು ಇಂದಿನವರೆಗೂ ಉಳಿದುಕೊಂಡು ಬಂದಿರುವುದನ್ನು ಅನೇಕ ಮೂಲದಲ್ಲಿ ಕಾಣಬಹುದು.

ಅತ್ತಿಮಬ್ಬೆಯು ಕೊಡುಗೈ ದಾನಿಯಾಗಿರುವ ಕಾರಣದಿಂದ ಇವಳ ದಾನಗುಣವನ್ನು ಎಷ್ಟು ಬಣ್ಣಿಸಿದರೂ ರನ್ನ ಕವಿಗೆ ತೃಪ್ತಿಯಿಲ್ಲ. ಅತ್ತಿಮಬ್ಬೆಯ ಗುಣವನ್ನು ತೀರ್ಥಂಕರರಂತೆ ಎಂದು ಪ್ರಶಂಸಿಸುತ್ತಾನೆ.

ಪುರುದೇವಾಜಿತದೇವರಿರ್ವರೆ ದಲಾಧ್ಯೋಪಾದ್ಯತೀರ್ಥೇಶ್ವರರ್
ಭರತೇಶಂ ಸಗರೇಶನಿರ್ವರೆ ದಲಾದ್ಯೋಪಾದ್ಯ ಚಕ್ರೇಶ್ವರರ್
ವರದಾನೋತ್ತಮನಾದನಾದಿ ಯುಗದೊಳ್ ಶ್ರೇಯಾಂಸನೀ ಕಾಲದೊಳ್
ಪರಮಶ್ರಾವಕಿ ನೀನೆ ದಾನಿಯೆ ವಲಂ ಶ್ರೀ ದಾನಚಿಂತಾಮಣೀ [೨]

ತೀರ್ಥಂಕರರಾದ ಪುರುದೇವ, ಅಜಿತನಾಥರಂತೆ, ಭರತ, ಸಗರ, ಚಕ್ರವರ್ತಿಗಳಂತೆ ದಾನಗೈಯುವದರಲ್ಲಿ ಶ್ರೇಷ್ಠನೂ ಪ್ರಥಮವಾಗಿ ಶ್ರೇಯಾಂಸನಾದರೆ ಈ ಕಾಲದಲ್ಲಿ ಪರಮ ಶ್ರಾವಕಿಯಾದ ಅತ್ತಿಮಬ್ಬೆಯೂ

ದಾನಿಯಾಗಿರುವಳೆಂದು ಕವಿಯು ಪ್ರಶಂಸಿಸುತ್ತಾನೆ. ಪೌರಾಣಿಕ ವ್ಯಕ್ತಿಗಳಾದ ಪುರುದೇವ, ಅಜಿತನಾಥರಂತೆ, ಐತಿಹಾಸಿಕವಾಗಿ ದಾನವೀರರೆಂದೆ ಪ್ರಖ್ಯಾತರಾದ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯ ಮತ್ತು ಶಂಕರಗಂಡರಿಗೆ ಹೋಲಿಸಿ - ಇವರೆಲ್ಲರಿಗಿಂತಲೂ ದಾನಗುಣದಲ್ಲಿ ಅತ್ತಿಮಬ್ಬೆಯೇ ಅಧಿಕ್ಯಳು ಎಂದು ಮೇಲಿನ ಪದ್ಯದ ವರ್ಣನೆ.

ಇಲ್ಲಿ ಹೆಸರಿಸಲಾಗಿರುವ ದಾನವೀರರು; ಶಂಕರಗಂಡನನ್ನು ಹೊರತುಪಡಿಸಿ ಉಳಿದವರೆಲ್ಲರೂ ಗಂಗರಾಜ ಮನೆತನಕ್ಕೆ ಸೇರಿದವರು. ಶಂಕರಗಂಡನು ರಾಷ್ಟ್ರಕೂಟ ಮನೆತನದವನು.

ಬೂತುಗ : ಗಂಗ ಅರಸುಮನೆತನವನ್ನು ೯೩೭ ರಿಂದ ೯೬೦ರವರೆಗೆ ಆಳಿದ್ದಾನೆ. ''ಗಂಗ ನಾರಾಯಣ'', ''ಗಂಗ ಗಾಂಗೇಯ'', ''ನನ್ನಿಯ ಗಂಗ'' ಎಂದು ಬಿರುದಾಂಕಿತನಾಗಿ ಇತಿಹಾಸದಲ್ಲ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾನೆ.[೩] ಬೂತುಗನು ರಾಜ್ಯಕ್ಕೆ ಬರುತ್ತಿರುವ ಹಾಗೆ ಹಲವಾರು ಬದಲಾವಣೆಗಳನ್ನು ತಂದನು. ತನ್ನಣ್ಣನ ದುರಾಡಳಿತವನ್ನು ಮಿತ್ರರಾಜರಾದ ರಾಷ್ಟ್ರಕೂಟರ ಸಹಾಯದಿಂದ ಸದೆಬಡಿದು ರಾಜ್ಯ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡನು. ರಾಷ್ಟ್ರಕೂಟದರಸು ಅಮೋಘವರ್ಷನ ಮಗಳಾದ ರೇವಕನಿರ್ಮಡಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಗಂಗ ಅರಸು ಮನೆತನದಲ್ಲಿ ಈ ಬೂತುಗನು ರಾಜ್ಯವಾಳಿದ ಕಾಲ ಅತ್ಯಂತ ಸುಭಿಕ್ಷವಾದ ಕಾಲವಾಗಿತ್ತು. ಅವನು ಶಾಂತಿಪ್ರಿಯನಾಗಿರುವಂತೆ; ಹೋರಾಟ ಪ್ರಿಯನೂ ಆಗಿದ್ದಾನೆ. ಚೋಳರಸನಾದ ''ರಾಜಾದಿತ್ಯನು ಗಜಾರೂಢನಾಗಿ ಯುದ್ಧ ಮಾಡುತಿದ್ದ ಕಾಲಕ್ಕೆ ಇಮ್ಮಡಿ ಬೂತುಗನು ಅವನನ್ನು ''ಒಂದೇ ಬಾಣ ಪ್ರಯೋಗದಿಂದ ಕೊಂದನೆಂದು ರಾಜಾದಿತ್ಯನ ಶಾಸನವೇ ಒಪ್ಪಿಕೊಂಡಿದೆ.''[೪] ಉತ್ತಮ ಆಡಳಿತಗಾರ, ಸುಯೋಧನನು ಆಗಿರುವಂತೆ ತನ್ನ ಪೂರ್ವಜರ ಹಾಗೆ ಜೈನ ಬಸದಿಗಳಿಗೂ ಇತರ ಧರ್ಮೀಯರ ಸಂಸ್ಥೆಗಳಿಗೂ, ಮುಕ್ತವಾಗಿ ದಾನ ಕೊಟ್ಟಿದ್ದನು. ಈತನು ಜೈನ ಧರ್ಮದ ರೀತಿ ನೀತಿಗಳನ್ನು ಕ್ರಮಬದ್ಧವಾಗಿ ನಡೆಸಿಕೊಂಡು ಬಂದಿರುವುದನ್ನು ಶಾಸನಗಳು ತಿಳಿಸುತ್ತವೆ. ಇವನ ಮಗನೇ ಮರುಳ (ಮಮಳ). ಈ ಮರುಳದೇವನು ಹೆಚ್ಚು ಕಾಲದವರೆಗೂ ಬದುಕಿಲ್ಲವಾದರೂ ಗಂಗಮಾರ್ತಾಡ ಗಂಗಾಚಕ್ರಾಯುಧ, ಕಲಿಯುಗ ಭೀಮ, ಕೀರ್ತಿ ಮನೋಭವ ಮೊದಲಾದ ಬಿರುದುಗಳನ್ನು ಪಡೆದುಕೊಂಡಿದ್ದನು. ಮರುಳನು ''ಜಿನವರ ಚರಣಾಂಬೋರುಹ ಮಧುಪಾಯ ಮಾನ'' ಎನಿಸಿದ್ದನು. ಮರಳನಿಗೆ ಪುಣ್ಯಸೆಯ ಎಂಬ ಹೆಸರಿತ್ತು ''ಶ್ರೀ ಪುಣ್ಯಸೆಯ ಗಂಗಪ್ರಥಮನಾಮಧೇಯ: ಕಲಿಯುಗ ಭೀಮಾಪರನಾಮಂ[೫]

ಮಮಳನ ತಮ್ಮನೇ ನೊಳಂಬಾತಕ. ನೊಳಂಬಾತಕ ಎನ್ನುವುದು ಮಾರಸಿಂಹನ ಬಿರುದು. ಈ ಬಿರುದಿನ ವಿಷಯವಾಗಿ ಶ್ರವಣಬೆಳಗೊಳದ ಶಾಸನದಿಂದಲೇ ತಿಳಿದುಬರುವುದು.[೬] ನೊಳಂಬಾತಕನಲ್ಲದೆ, ಗುತ್ತಿಯಗಂಗ, ಚಲದತ್ತರಂಗ, ಜಗದೇಕವೀರ, ಧರ್ಮಾವತಾರ, ಗಂಗರಸಿಂಹ, ಗಂಗವಜ್ರ, ಗಂಗಕಂದರ್ಪ, ಗಂಗಚೂಡಾಮಣಿ ಮತ್ತು ವಿದ್ಯಾಧರ ಎಂಬ ಬಿರುದುಗಳನ್ನು ಪಡೆದುಕೊಂಡಿದ್ದಾನೆ. ಇಷ್ಟೆಲ್ಲ ಬಿರುದುಗಳನ್ನು ಪಡೆದುಕೊಂಡು

ಗಂಗರಾಜ್ಯ ಪಟ್ಟಕ್ಕೇರಿದನೆಂದು ಹೆಬ್ಬಾಳ ಶಾಸನದಿಂದ ತಿಳಿದುಬರುವುದು. ಗಂಗರಾಜ ಚರಿತ್ರೆಯಲ್ಲಿಯೇ ಅಚ್ಚರಿ ಹುಟ್ಟಿಸುವಂತಹ ವ್ಯಕ್ತಿತ್ವ ಈ ಮಾರಸಿಂಹನದು. ಕಡಲೂರು ಶಾಸನದಿಂದ ಅವನ ಗುಣಗಳ ಪರಿಚಯವಾಗುವುದು. ''ಮಾರಸಿಂಹನು ಅಸದೃಶ ದೇಹದಾರ್ಢ್ಯವುಳ್ಳವನೆಂದೂ, ಅಸಮಾನ ಯುದ್ಧವೀರನೆಂದೂ, ಗುರುಪೂಜಕನೆಂದೂ, ಉದ್ದಾಮ ವಿದ್ವಾಂಸನೆಂದೂ ಉದಾರನೂ'' ಎಂದು ಕಡಲೂರು ಶಾಸನವು ವರ್ಣಿಸಿದೆ.[೬] ತಂದೆ ಬೂತುಗನ ಹಾಗೆ ಮಾರಸಿಂಹನು ರಾಷ್ಟ್ರಕೂಟರೊಡನೆ ಸ್ನೇಹಸಂಬಂಧವನ್ನು ಇಟ್ಟುಕೊಂಡಿದ್ದನು. ರಾಜಕೀಯ ಯುದ್ಧಗಳಲ್ಲಿ ರಾಷ್ಟ್ರಕೂಟರ ಸಹಾಯವನ್ನು ಪಡೆದುಕೊಂಡಿದ್ದನು. ಈತನು ರಾಷ್ಟ್ರಕೂಟ ಅರಸನಿಗೆ ಸಾಮಂತನಾಗಿದ್ದನು. ರಾಷ್ಟ್ರಕೂಟರ ರಾಜ್ಯ ಸಂಘಟನ ಕಾರ್ಯದಲ್ಲಿ ರಾಷ್ಟ್ರಕೂಟರಿಗೆ ಅಡ್ಡಿಯಾಗಿರುವ ಸಣ್ಣ, ಪುಟ್ಟ ರಾಜರನ್ನು ಸದೆಬಡೆದು ಆತಂಕ ನಿವಾರಣೆ ಮಾಡಿದನಾದರೂ ಬರುಬರುತ್ತ ರಾಷ್ಟ್ರಕೂಟ ಅರಸೊತ್ತಿಗೆ ಕ್ಷೀಣಿಸತೊಡಗಿತು.

ಮಾರಸಿಂಹನಿಗೆ ''ನೊಳಂಬ ಕುಲಾಂತಕ''ವೆಂಬ ಪ್ರಶಸ್ತಿ ಬಂದದ್ದು ಹೀಗೆ - ಮಾರಸಿಂಹನು ಕೊನೆಗಾಲದಲ್ಲಿ ಸಮಸ್ಯೆಯೊಂದನ್ನು ಎದುರಿಸಬೇಕಾಯಿತು. ರಾಷ್ಟ್ರಕೂಟರ ಸಾಮಂತರಾಗಿದ್ದ ನೊಳಂಬರು ನೊಳಂಬವಾಡಿಯನ್ನು ಗಂಗರಾಜರಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಮಾರಸಿಂಹನನ್ನು ಅಲಕ್ಷ ಮಾಡತೊಡಗಿದರು. ಜತೆಗೆ ಮೇಲಿಂದ ಮೇಲೆ ಗಂಗವಾಡಿಯ ಮೇಲೆ ಆಕ್ರಮಣ ಮಾಡತೊಡಗಿದರು. ಮಾರಸಿಂಹನು ಸೇನಾ ಸಹಿತನಾಗಿ ನೊಳಂಬರ ಆಕ್ರಮಣಕ್ಕೆ ತಕ್ಕ ಉತ್ತರವನ್ನು ಕೊಟ್ಟು, ನೊಳಂಬ ಕುಲದವರನ್ನೆಲ್ಲಾ ಸದೆಬಡಿದ ಕಾರಣ ''ನೊಳಂಬ ಕುಲಾಂತಕ''ನೆಂಬ ಬಿರುದನ್ನು ಗಳಿಸಿಕೊಂಡನು.

ಮಾರಸಿಂಹನು ವೀರನಲ್ಲದೆ ದಾನಿಯೂ ಕವಿ ಪೋಷಕನೂ ಆಗಿದ್ದನು. ಆತನು ಸದಾ ಮುನಿಜನರಿಗೂ, ಬ್ರಾಹ್ಮಣರಿಗೂ ದಾನವನ್ನು ನೀಡುತ್ತಿದ್ದನು. ಯೋಧಾಗ್ರಣಿ, ಚರಿತ್ರಾರ್ಹ ವ್ಯಕ್ತಿತ್ವ, ಸಂಘಟಕಾರನಾಗಿರುವ ಈತನನ್ನು ಶ್ರವಣಬೆಳ್ಗೊಳ ಶಾಸನವು ಹೀಗೆ ಸ್ತುತಿಸಿದೆ.

> ''ನುಡಿದನೆ ಕಾವುದೆನೇ ಎರ್ದೆ
> ಗಿಡದಿರು ಜವನಿಟ್ಟದಕ್ಕೆ ನಿನಗೀವುದನೇಂ
> ನುಡಿದನೆ ಅದು ಕಯ್ಯದು ಮೇಣ್
> ನುಡಿದುದು ತಪ್ಪುಗುಮೆ ಗಂಗಚೂಡಾಮಣಿಯಾ.

ಇಷ್ಟೆಲ್ಲ ಗುಣಗಳು ಅತ್ತಿಮಬ್ಬೆಯ ವ್ಯಕ್ತಿತ್ವದಲ್ಲಿರುವ ಕಾರಣ ರನ್ನ ಕವಿಯು ನೊಳಂಬಾತಕನಿಗೆ ಹೋಲಿಸಿರುವುದು ಯಥೋಚಿತವಾಗಿದೆ.

ಚಾವುಂಡರಾಯನಿಗೆ ಅಣ್ಣ ಮತ್ತು ರಾಯ ಎಂಬ ಹೆಸರುಗಳಿವೆ. ಈತನು ಮಾರಸಿಂಹ ಮತ್ತು ರಾಚಮಲ್ಲರಲ್ಲಿ ಮಂತ್ರಿಯೂ, ದಂಡಾಧಿಪತಿಯೂ ಆಗಿದ್ದವನು. ಮಾರಸಿಂಹನ ಜತೆ, ನೊಳಂಬ, ಪಲ್ಲವರೊಡನೆ

ಸಂಭವಿಸಿದ ಯುದ್ಧಗಳಲ್ಲಿ ಸಾಹಸದಿಂದ ಕಾದಾಡಿದವನು. ಅಪ್ರತಿಮ ಸಾಹಸಿಯಾದ ಚಾವುಂಡರಾಯನಿಗೆ ವೀರ ಮಾರ್ತಾಂಡ, ರಣರಂಗಸಿಂಹ, ಸಮರ ದುರಂಧರ, ವೈರಿಕುಲ ಕಾಲದಂಡ, ಭುಜವಿಕ್ರಮ ಎಂಬ ಬಿರುದುಗಳಿದ್ದವು.[೮]

ಚಾವುಂಡರಾಯನ ವ್ಯಕ್ತಿತ್ವವೇ ಅಚ್ಚರಿ ಹುಟ್ಟಿಸುವಂತಹದು. ಅವನು ಸಾಹಸಿ, ರಾಜನೀತಿಜ್ಞ, ಪಂಡಿತ, ಚಾವುಂಡರಾಯವೆಂಬ ಹಳಗನ್ನಡ ಗದ್ಯ ಗ್ರಂಥಕಾರ. ಕನ್ನಡ ಸಾಹಿತ್ಯದಲ್ಲಿ ವಡ್ಡಾರಾಧನೆಯ ನಂತರ ಚಾವುಂಡರಾಯ ಪುರಾಣ ಪ್ರಾಚೀನ ಗದ್ಯ ಗ್ರಂಥವಾಗಿದೆ.

ಚಾವುಂಡರಾಯನು ಸಹಿತ ಅದ್ವಿತೀಯ ಜಿನಭಕ್ತನೂ, ಅಜಿತಸೇನಾಚಾರ್ಯರ ಶಿಷ್ಯನೆಂದೂ ಚಾವುಂಡರಾಯ ಪುರಾಣದಿಂದ ತಿಳಿದುಬರುವುದು.[೯] ಮಂತ್ರಿ ಸೇನಾಧಿಪತಿಯಂತಹ ಉನ್ನತ ಅಧಿಕಾರದಲ್ಲಿದ್ದಾಗಲೂ, ಧರ್ಮಶೀಲನಾಗಿ, ವಿದ್ವಾಂಸ, ಸಾಹಸಿಯಾಗಿ, ಜಿನಭಕ್ತಿಯಲ್ಲಿ ಅಗ್ರಗಣ್ಯನಾಗಿದ್ದನು. ಚಾವುಂಡರಾಯನನ್ನು ಕನ್ನಡಿಗರು ಗುರುತಿಸುವುದೇ "ಗೊಮ್ಮಟೇಶ್ವರ ವಿಗ್ರಹ ಪ್ರತಿಷ್ಠಾಪಕನೆಂದು" ಹೀಗೆ ಶ್ರವಣಬೆಳ್ಗೊಳದಲ್ಲಿ ಗೊಮಟೇಶ್ವರ ವಿಗ್ರಹ ಪ್ರತಿಷ್ಠಾಪಿಸಿದ್ದಕ್ಕಾಗಿ ಗಂಗರ ಅರಸ ರಾಚಮಲ್ಲನು "ರಾಯ" ಎಂಬ ಬಿರುದನ್ನಿತ್ತು ಸನ್ಮಾಮಿಸಿದನು. ಈ ವಿಗ್ರಹ ಪ್ರತಿಷ್ಠಾಪನಾ ಕಾರ್ಯ ಚಾವುಂಡರಾಯನ ಧರ್ಮನಿಷ್ಠೆಗೆ ಸಾಕ್ಷಿಯಾಗಿದೆ.

ರನ್ನ ಕವಿಯು ಬಹು ಹತ್ತಿರದಿಂದ ಚಾವುಂಡರಾಯನ ಔದಾರ್ಯ, ಧರ್ಮಶ್ರದ್ಧೆ, ಉಪಕಾರಬುದ್ಧಿಯನ್ನು ಕಂಡಿದ್ದಾನೆ. ಹಾಗೆಯೇ ಅತ್ತಿಮಬ್ಬೆಯನ್ನು ಕಂಡಿದ್ದಾನೆ. ಇವರಿಬ್ಬರಿಂದಲೂ ಉಪಕೃತನಾಗಿದ್ದಾನೆ. ಆದುದರಿಂದಲೇ ದಾನಮಾಡುವುದರಲ್ಲಿ ರಾಯನಿಗಿಂತ ಅತ್ತಿಮಬ್ಬೆಯೇ ಅಧಿಕಳು ಎಂದು ಸರಿಯಾದ ಮಾಪನವನ್ನು ವರ್ಣನಾತ್ಮಕವಾಗಿ ಅಭಿವ್ಯಕ್ತಪಡಿಸಿದ್ದಾನೆ.

ಶಂಕರಗಂಡನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನಲ್ಲಿ ಮತ್ತು ಇಮ್ಮಡಿ ಕಕ್ಕನ ಕೈಕೆಳಗೂ ಮಹಾಸಾಮಂತಾಧಿ ಪತಿಯಾಗಿದ್ದನು. ಬನವಾಸಿಯು ಇವನ ಆಡಳಿತ ಪ್ರದೇಶವಾಗಿತ್ತು. ಇವನು ಸಾಹಸಿಯಾಗಿರುವಂತೆ ಜಿನಭಕ್ತನೂ, ಜಿನಧರ್ಮ ರಕ್ಷಕನೂ ಆಗಿದ್ದನೆಂದು ಶಾಸನದಿಂದ ತಿಳಿದುಬಂದಿರುವ ಅಂಶ.[೧೦] ಅನೇಕ ದಾನ ದತ್ತಿಗಳನ್ನು ನೀಡಿರುವ ಈತನು, ದಾನ ನೀಡಿದ ಸ್ಥಳಗಳಲ್ಲಿ ಬಸದಿಗಳನ್ನು ಕಟ್ಟಿಸಿದ್ದಾನೆ. ಕೊಪಣತೀರ್ಥದಲ್ಲಿ ಜಯಧೀರ ಜಿನಾಲಯವನ್ನು ಕಟ್ಟಿಸಿರುವನಲ್ಲದೆ, ಈಗಿನ ಆಂಧ್ರದಲ್ಲಿ ಬರುವ ಕೆಲವು ಸ್ಥಳಗಳಲ್ಲಿ ಬಸದಿಗಳನ್ನು ನಿರ್ಮಿಸಿ ಹಲವಾರು ದಾನ ದತ್ತಿಗಳನ್ನು ಕೊಟ್ಟು, ಜೈನ ಧರ್ಮದ ಪ್ರಚಾರ ಕಾರ್ಯಮಾಡಿದ್ದಾನೆ.

ಅತ್ತಿಮಬ್ಬೆಯ ದಾನಗುಣವನ್ನು ಕವಿ ಎಷ್ಟು ಕೊಂಡಾಡಿದರೂ ದಣಿಯಲಾರ. ಅವಳ ದಾನಗುಣವನ್ನು ಪುರಾಣ ವ್ಯಕ್ತಿಗಳಿಗೆ ಹೋಲಿಸಿರುವಂತೆ ಇತಿಹಾಸದಲ್ಲಿ ತಮ್ಮ ಶೌರ್ಯದ ಜತೆಗೆ ದಾನಗುಣದಿಂದ ಪ್ರಖ್ಯಾತರಾದ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯರಿಗಿಂತ ಅತ್ತಿಮಬ್ಬೆ ದಾನಗುಣದಲ್ಲಿ ಹಿರಿಯಳು ಎಂದು ಕವಿ ಕಂಡರಿಸಿದ್ದಾನೆ.

ಅ. ಧಾರ್ಮಿಕ ಕೊಡುಗೆ

ಕೊಡುಗೆ ಎಂದರೆ ಕೊಡುವಿಕೆ, ನೀಡುವಿಕೆ, ಕೊಟ್ಟ ವಸ್ತು ಕಾಣಿಕೆ ಎಂದು ಅರ್ಥವಾಗುತ್ತದೆ. ಜೈನ ಧರ್ಮಕ್ಕೆ ಅತ್ತಿಮಬ್ಬೆ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟಿದ್ದಾಳೆ. ಜೈನಧರ್ಮದಲ್ಲಿ ಅನೇಕಾಂತ (ಅತ್ಯುನ್ನತ ಸಿದ್ಧಾಂತ) ಅಹಿಂಸೆ, ತಪಸ್ಸು - ಸದಾಚಾರ, ಪ್ರಮುಖವಾಗಿವೆ. ಹಾಗೆಯೇ ಮೋಕ್ಷಕ್ಕೆ ಮೂರು ಸಾಧನಗಳಿವೆ. ೧. ಸಮ್ಯಕ್ ದರ್ಶನ ೨. ಸಮ್ಯಕ್ ಜ್ಞಾನ ೩. ಸಮ್ಯಕ್ ಚಾರಿತ್ರ್ಯವೆಂದು ಮತ್ತು ಪಂಚ ನಮಸ್ಕಾರಗಳು ಅತ್ಯಂತ ಮುಖ್ಯವಾದವುಗಳಾಗಿವೆ. ಪಂಚ ನಮಸ್ಕಾರಗಳನ್ನು ಹೇಳುವ ಮಂತ್ರ ಜೈನಧರ್ಮದ ಪವಿತ್ರ ಮಂತ್ರ

> "ಣಮೋ ಅರಿಹಂತಾಣಂ ಣಮೋ ಸಿದ್ಧಾಣಂ ಣಮೋ ಆಇರಿಯಾಣಂ |
> ಣಮೋ ಉವಝಾಯಾಣಂ ಣಮೋ ಲೋಏ ಸವ್ವಸಾಹೂಣಂ | ೧೧

ಪಂಚ ಪರಮೇಷ್ಠಿಗಳಾದ ಅರ್ಹಂತ, ಸಿದ್ಧ, ಆಚಾರ್ಯ, ಉಪಧ್ಯಾಯ ಮತ್ತು ಸಮಸ್ತ ಸಾಧುಗಳಿಗೆ ಮಾಡುವ ನಮಸ್ಕಾರವೇ ಜೈನಧರ್ಮದ ಪವಿತ್ರ ಮಂತ್ರವಾಗಿದೆ.

ಐದು ಬಗೆಯ ನಮಸ್ಕಾರಗಳಿರುವಂತೆ, ದಾನದಲ್ಲಿ ನಾಲ್ಕು ಪ್ರಕಾರಗಳಿವೆ.

> "ಅಭಯಾಹಾರ ಭೈಷಜ್ಯಶ್ರುತ ಭೇದಾಚ್ಚತುರ್ವಿಧ
> ದಾನಂ ಸುಧೀಭಿರಿತ್ಯುಕ್ತಂ ಭಕ್ತಿ ಶಕ್ತಿ ಸಮಾಶ್ರಿತಂ [೨]
> ಇದನ್ನೆ ಉಪಾಸಕಾಧ್ಯಾಯದಲ್ಲಿ
> ಆಹಾರೋ ಸಹ - ಸತ್ಥಾ ಭಯ ಭೇಜಜಂ ಚವಿವ್ವಿಹಂ ದಾಣಂ
> ತಂಬುಚ್ಚ ಇದಾಯ ವ್ವಂಣಿದ್ದಿಟ್ ಠಮು ವಾಸಯಜ್ಝಾಯಣೇ[೩] ಎಂದಿದೆ.

ಜೈನಧರ್ಮದಲ್ಲಿ ಅಗತ್ಯವಾಗಿ ನಾಲ್ಕು ಬಗೆಯ ದಾನವನ್ನು ಮಾಡಬೇಕು.

ಅವುಗಳು -

೧. ಭೋಜನ

೨. ಔಷಧಿ

೩. ಶಾಸ್ತ್ರ

೪. ಅಭಯ

ಅತ್ತಿಮಬ್ಬೆಯು ಜೈನಧರ್ಮದಲ್ಲಿ ವಿಶಿಷ್ಟವಾಗಿರುವ ದಾನಪ್ರಕಾರವನ್ನು ತನ್ನ ಜೀವಿತದ ಪರಮ ಗುರಿಯನ್ನಾಗಿ ಮಾಡಿಕೊಂಡಳು. ಕನ್ನಡಿಗರಿಗೆ ಅಪೂರ್ವವಾದ ಕೊಡುಗೆಗಳನ್ನು ನೀಡಿದಳು.

ಚಿಕ್ಕವಯಸ್ಸಿನಲ್ಲಿಯೇ ಧರ್ಮಶ್ರದ್ಧೆಯ ವಾತಾವರಣದಲ್ಲಿ ಬೆಳೆದ ಅತ್ತಿಮಬ್ಬೆಗೆ ಆ ವಾತಾವರಣದ ಪ್ರಭಾವ ಸಾಕಷ್ಟು ಆಗಿತ್ತು. ಲೌಕಿಕ ಬದುಕಿನಲ್ಲಿಯೂ ಅವಳು ಮುನಿ ಸೇವೆ ಪುರಾಣಪ್ರವಚನ, ಧರ್ಮಕಥಾ ಶ್ರವಣ, ಜಿನಪ್ರತಿಮೆಗಳ ದರ್ಶನ, ಜಿನಕ್ಷೇತ್ರಗಳ ಯಾತ್ರೆ ಇವುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಳು. ಪತಿವಿಯೋಗ, ತಂಗಿಯ ಸಹಗಮನ ಅವಳ ಮೇಲೆ ಪ್ರಭಾವ ಬೀರಿ ಅವಳ ಇಡೀ ಬದುಕೇ ಧರ್ಮಶ್ರದ್ಧೆಯಾಯಿತು. ಧರ್ಮ, ದಾನ ಕಾರ್ಯಗಳೇ ದಿನ ನಿತ್ಯದ ಚಟುವಟಿಕೆಗಳಾದವು. ಧರ್ಮಶ್ರದ್ಧೆಯನ್ನು ತೋರಿಸುವದಷ್ಟೆ ತನ್ನ ಕೆಲಸ ಎಂದು ಅತ್ತಿಮಬ್ಬೆ ಭಾವಿಸಲಿಲ್ಲ. ಧಾರ್ಮಿಕ ಕಾರ್ಯಗಳಿಗೆ ಅವಳು ಉದಾರವಾಗಿ ದಾನವನ್ನು ಮಾಡುತ್ತಿದ್ದಳು.

> ''ಜಿನಪೂಜೋತ್ಸವಕೆಲ್ಲಿಯುಂ ಜಿನಾಕಥಾಳಾಪೋತ್ಸವಕ್ಕೆಲ್ಲಿಯುಂ
> ಜಿನತೀರ್ಥೋತ್ಸವಕೆಲ್ಲಿಯುಂ ಜಿನಮುನಿವ್ರಾತೋತ್ಸವಕ್ಕೆಲ್ಲಿಯುಂ
> ಜಿನಗೇಹೋತ್ಸವಕೆಲ್ಲಿಯುಂ ಜಿನಮಹಾ ದಾನೋತ್ಸವಕ್ಕೆಲ್ಲಿಯುಂ
> ಧನಮಂ ಪತ್ತಿಸುತಿರ್ಪೆ ನೀನೆ ಪಿರಿಯ್ಯೆ ಶ್ರೀ ದಾನಚಿಂತಾಮಣೀ.''

ಜಿನನಪೂಜೋತ್ಸವ, ಜಿನಕಥಾ ಪ್ರವಚನೋತ್ಸವ, ಜಿನಮುನಿಗಳ ವ್ರತಾಚಾರಣೆ, ಜಿನ ಪೂಜಾಕಾರ್ಯಗಳಿಗೆ ಇನ್ನಾರೂ ಇಲ್ಲದಂತೆ ದಾನಮಾಡಿರುವ ದಾನಚಿಂತಾಮಣಿಯಾದ ಅತ್ತಿಮಬ್ಬೆಯೇ ಹಿರಿಯಳು ಎಂದು ರನ್ನ ಕವಿಯು ಧಾರ್ಮಿಕ ಕಾರ್ಯಗಳಿಗಾಗಿ ಅವಳು ದಾನವಿತ್ತುದ್ದುದನ್ನು ಹೇಳಿದ್ದಾನೆ.

ಜಿನಶಾಸನ ದೀಪಿಕೆಯಾದ ಅತ್ತಿಮಬ್ಬೆಯು ಒಂದು ಸಾವಿರದ ಐದನೂರು ಚಿನ್ನದ ಜಿನಬಿಂಬಗಳನ್ನು ಮಾಡಿಸಿ ದಾನಮಾಡಿದ್ದಾಳೆ. ಪೂಜೆಗೆ ಅವಶ್ಯವಾಗಿರುವ ಮಣಿ ಘಂಟೆ, ತೋರಣ, ಚಿನ್ನದ ದೀಪದ ಸರವನ್ನು ದಾನ ಮಾಡಿದ್ದಾಳೆ.

ಅದು ಹೀಗೆ,

> ಆಸನ್ನಭವ್ಯೆಯುಂ ಜಿನ
> ಶಾಸನ ದೀಪಿಕೆಯುಮೆನಿಸಿ ಮಣಿಕನಕ ಮಯೋ
> ದ್ಭಾಸಿ ಜಿನಪ್ರತಿಮೆಗಳಂ
> ಸಾಸಿರ ದೈನೂರನರ್ತಿಯಿಂ ಮಾಡಿಸಿದಳ್
>
> ಸ್ಫುರಿತೋದ್ಯನ್ಮಣಿ ಘಂಟೆಗಳ ಮಣಿವಿತಾನ ಶ್ರೇಣಿಗಳ ಸ್ವರ್ಣಭಾ
> ಸುರ ದೀಪಂಗಳ ಮಾಲೆ ದಿವ್ಯವಸನ ಪ್ರಾರಬ್ಧ ಶುಂಭ ಧ್ವಜೋ
> ತ್ಕರಮುದ್ಭಾಸಿತ ರತ್ನ ತೋರಣಗಣಂ ಮಾಡಿರ್ದುವೊಂದೊಂದು ಸಾ
> ಸಿರದೈನೂರನೆಯತ್ತಿಮಬ್ಬೆಗೆಣೆಯಲ್ಲೀ ಕಾಲದೊಳ್ ದಾನಿಗಳ್.

ಅತ್ತಿಮಬ್ಬೆಯ ದಾನಕಾರ್ಯವು ಜೈನಧರ್ಮ ಸಂಪ್ರದಾಯಕ್ಕನುಸಾರವಾಗಿದೆ. ಅವಳು ಪ್ರಕಾಶಮಾನವಾದ ಸಾವಿರದೈನೂರು ಜಿನಪ್ರತಿಮೆ, ಲಕ ಲಕನೆ ಹೊಳೆಯುವ ಘಂಟೆ, ತೋರಣಗಳಲ್ಲಿ ಪಂಚಶತವಧಿಕವಾಗುವಂತೆ ದಾನ ಮಾಡಿದ್ದಾಳೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಅತ್ತಿಮಬ್ಬೆ ದಾನ ಮಾಡಿರಬಹುದೇ ಎಂಬ ಅನುಮಾನ ಕಾಡುತ್ತದೆ. ಯಾಕೆಂದರೆ ಪುರುಷನೇ ಯಜಮಾನನೆಂದು ಒಪ್ಪಿಕೊಂಡ ಕುಟುಂಬ ವ್ಯವಸ್ಥೆಯಲ್ಲಿ ಒಬ್ಬ ಮಹಿಳೆಯ ಬೃಹತ್ ಪ್ರಮಾಣದ ಕೊಡುಗೆ ಅಚ್ಚರಿಯನ್ನುಂಟುಮಾಡುವುದು. ಪುರುಷನು ಕುಟುಂಬದ ಒಡೆಯನಾಗಿರುವ ಕಾರಣ, ಅವನೇ ಹೆಚ್ಚಿನ ಸಂಖ್ಯೆಯಲ್ಲಿ ದಾನಿಯಾಗಿರುವುದು ಕಂಡುಬರುತ್ತದೆ. ಅವಳು ಸಾವಿರದೈನೂರು ಜಿನಾಲಯಗಳನ್ನು ಕಟ್ಟಿಸಿರುವ ವಿಷಯ ಶಾಸನೋಕ್ತವಾಗಿದೆ.[೧೫]

> "..... ಪರಮ ಶ್ರೀ ಜಿನನಾಥಗೇಹ ವಿಳಸಚ್ಛಂದೋ ಹ ಸಂದೋಹ
> ಭಾಸುರ ಜೈನಪ್ರತಿಮಾ ವಿಚಿತ್ರಮಣಿಘಂಟಾ ಚಿತ್ರಮಣಿ ಘಂಟಾ
> ಮಾಳಿಕಾಸಂಖೆ ಸಾಯಿರದಯ್ನೂರಿವು ಬೇರೆವೇರಿನಿಪಿನ್ನಂ ನಿರ್ಮ್ಮಾಪಣಂಗೆಯ್ದು
> ಭೂಭರದೊಳ್ ಧರ್ಮಮನತ್ತಿಮಬ್ಬೆಯವೊಲಿನ್ನಾರುಜ್ಜಳಂ ಮಾಡಿದರ್ ||

ಹೀಗೆ ಅತ್ತಿಮಬ್ಬೆಯ ದೊಡ್ಡ ಸಂಖ್ಯೆಯ ದಾನ, ಕವಿಯ ಅತೀಶಯೋಕ್ತಿಯಲ್ಲ. ಅವಳು ಆ ಸನ್ನ ಭವ್ಯೆಯಾಗಿದ್ದಳು. ಆದುದರಿಂದಲೇ ಈ ಭೂಮಿಯಲ್ಲಿ ಅವಳ ಹಾಗೆ ಬೇರೆ ಯಾರು ಜೈನಧರ್ಮವನ್ನು ಉಜ್ವಲ ಮಾಡಬಲ್ಲರು? ಎಂದು ಶಾಸನ ಕವಿ ಪ್ರಶ್ನೆ ಮಾಡಿದ್ದಾನೆ. ೧೫೦೦ ಜಿನಬಿಂಬಗಳನ್ನು ದಾನ ಮಾಡಿದಳು ಎನ್ನುವ ವಿಷಯವೇ ರೋಚಕವಾದದ್ದು. ಅಧಿಕ ಸಂಖ್ಯೆಯಲ್ಲಿ ಬಡಗಿ ಕಮ್ಮಾರ, ಶಿಲ್ಪಿಗಳಿಗೆ ಕೆಲಸ ಕಾರ್ಯಗಳ ಅವಕಾಶ ಮಾಡಿಕೊಟ್ಟಿರುವುದು ಸಣ್ಣ ಮಾತಲ್ಲ.

ಇಂದಿನವರೆಗೂ ಶಾಸನಕವಿ ಕೇಳಿದ ಪ್ರಶ್ನೆ ಪ್ರಸ್ತುತವೆನಿಸಿದೆ. ಅರಿಷಡ್ವರ್ಗಗಳಲ್ಲಿ ಲೋಭ ನಿವಾರಣೆ ಕಷ್ಟಸಾಧ್ಯ. ಅತ್ತಿಮಬ್ಬೆ ಅಸಾಧ್ಯವಾದುದನ್ನು ಸಾಧ್ಯಮಾಡಿ ಜೈನಧರ್ಮಕ್ಕೆ ಅನುಪಮ ಕೊಡುಗೆಯನ್ನಿತ್ತಿದ್ದಾಳೆ. ಲೋಭಕರ್ಮ ಗೆದ್ದು ಅತ್ತಿಮಬ್ಬೆ ಜೈನಧರ್ಮದಲ್ಲಿ ಕರ್ಮ ಸಿದ್ಧಾಂತವನ್ನು ಬಹಳ ಒತ್ತಿ ಹೇಳಿದ್ದಾಳೆ. ಕರ್ಮ ಬಂಧನವನ್ನು ಬಿಡಿಸಿಕೊಳ್ಳುವುದೇ ಮುಕ್ತಿ ಎಂದು ಭಾವಿಸಿದ್ದಾರೆ.

ಅತ್ತಿಮಬ್ಬೆ ಕಟ್ಟಿಸಿದ ಜಿನಾಲಯಗಳ ಸಂಖ್ಯೆ ೧೫೦೧ ಎಂದು ಲಕ್ಕುಂಡಿ ಶಾಸನ ತಿಳಿಸುತ್ತದೆ. ಅಲ್ಲದೆ ಈ ಜಿನಗೃಹಗಳಿಗೆ ತೈಲಪರಸನು ನೆರವು ನೀಡಿದ್ದು, ದಾನ ದತ್ತಿಗಳ ವಿಚಾರವನ್ನು ಸಹಿತ ಶಾಸನ ತಿಳಿಸುತ್ತದೆ.[೧೬] ಈ ಬಸದಿಯನ್ನು ಕಟ್ಟಿಸಿ ಅದನ್ನು ತನ್ನ ಗುರುಗಳಾದ ಸೂರಸ್ತಗಣದ ಕೌರೂರಗಚ್ಛದ ಅರ್ಹನಂದಿದೇವನಿಗೆ ನೀಡಿ ಅದಕ್ಕೆ ಸುರುಕಿ ಎಂಬ ಗ್ರಾಮವನ್ನು ದತ್ತಿ ಬಿಟ್ಟಿದ್ದಾಳೆ.

ಅತ್ತಿಮಬ್ಬೆ ನೀಡಿದ ಧಾರ್ಮಿಕ ಕೊಡುಗೆ ಅನುಪಮವಾದದ್ದು. ಯಾಕೆಂದರೆ ೧೫೦೧ ಬಸದಿಗಳ ನಿರ್ಮಾಣ, ವಿಗ್ರಹ, ಮಣಿಘಂಟೆ, ತೋರಣ ಮುಂತಾದವುಗಳನ್ನು ನಿರ್ಮಿಸಬೇಕಾದರೆ ತೊಡಗಿರುವ ಶಿಲ್ಪಿ, ಬಡಗಿ, ಕಮ್ಮಾರ

ಮೊದಲಾದವರ ಕೆಲಸದ ಸಮಯ, ವ್ಯಯ ಮಾಡಿದ ಸಂಪತ್ತು ಇದನ್ನೆಲ್ಲ ಕಲ್ಪಿಸಿಕೊಂಡಾಗ ಅತ್ತಿಮಬ್ಬೆಯ ಧಾರ್ಮಿಕ ಕೊಡುಗೆಯ ಅರಿವಿನ ಊಹೆ ಸಾಧ್ಯವಾಗುತ್ತದೆ. ಅವಳ ಈ ಕೊಡುಗೆಯ ಗುಣವನ್ನು ರನ್ನ ಕವಿಯು ಮನದುಂಬಿ ವರ್ಣಿಸುತ್ತಾನೆ.[೧೭]

ಅಲಸುತಮೀವ ಚಿಂತಿಸುತಮೀವ ಮೊಗಂ ಮುರಿದೀವ ಮುಟ್ಟಿ ಮೂ
ದಲಿಸುತಮೀವ ಪೆರ್ಚನೊಸೆದೀವತಿ ಬೆಳ್ಳೊಗದಿಂದ ಮೀವ ಮ
ಮ್ಮಲ ಮರುಗುತ್ತಮೀವ ಕಡುಲೋಭಕದಾನ ಗುಣಗಳಂ ಪವಿಂ
ಚಲೆದಪುದಾರ್ತು ಕೂರ್ತು ಪಿರಿದೀವಗುಣಂ ಗುಣದಂಕಕಾರ್ತಿಯಾ.

ಅತ್ತಿಮಬ್ಬೆಯ ದಾನಗುಣ ಪ್ರೀತಿ ವಾತ್ಸಲ್ಯಗಳಿಂದ ಕೂಡಿದ ಉದಾರ ದಾನವಾಗಿತ್ತು. ಅವಳು ಕೊರಗುತ್ತಾ, ಮರಗುತ್ತಾ, ಬೇಸರದಿಂದ ದಾನ ಮಾಡಿದವಳಲ್ಲ. ಅವಳ ದಾನವು ಮೂದಲಿಸುತ್ತಾ ಮಾಡುವ ದಾನ, ಹಿರಿಮೆ ಹೆಚ್ಚಾಗಲೆಂದು ಮಾಡುವ ದಾನ, ಪೆಚ್ಚ ಮುಖದಿಂದ ಮಾಡುವ ದಾನ, ಲೋಭಗಳ ದಾನವನ್ನು ಹೀಯಾಳಿಸುವಂಥ ಉದಾರವಾದ ದಾನವಾಗಿತ್ತು.

ಆ. ಸಾಮಾಜಿಕ ಕೊಡುಗೆ

ತನ್ನ ವೈಯಕ್ತಿಕವಲ್ಲದೆ ಅನ್ಯರ ಕಲ್ಯಾಣಕ್ಕೆ ಶ್ರಮಿಸಿರುವವರ ಕೀರ್ತಿ ಇವತ್ತಿನವರೆಗೂ ಉಳಿದುಕೊಂಡು ಬಂದಿರುವದನ್ನು ಅನೇಕ ಮೂಲದಲ್ಲಿ ಕಾಣಬಹುದು. ಒಂದು ಸಮಾಜ ಅಂದರೆ ಸಮಾಜಶಾಸ್ತ್ರದ ದೃಷ್ಟಿಯಿಂದ ಹಾಗೂ ಧರ್ಮದ ದೃಷ್ಟಿಯಿಂದ ವಿಭಿನ್ನ ಅರ್ಥವನ್ನು ಪಡೆಯುತ್ತದೆ. ಸಮಾಜವೆಂದರೆ ಧರ್ಮದ ದೃಷ್ಟಿಯಲ್ಲಿ ಒಂದು ಕೋಮು ಅಥವಾ ಒಂದು ಧರ್ಮಕ್ಕೆ ಸೇರಿದ ಗುಂಪೇ ಆಗಿರಬಹುದು. ಸಮಾಜ ಶಾಸ್ತ್ರಜ್ಞರ ಪ್ರಕಾರ (ಸಂಕುಚಿತ ಅರ್ಥದಲ್ಲಿ ಅಲ್ಲ) ಸಮುದಾಯಕ್ಕೆ ಉಪಯುಕ್ತವಾದುದನ್ನು ಮಾಡಿದರೆ ಅದು ಸರ್ವಶ್ರೇಷ್ಠ ಕೊಡುಗೆ. ಪ್ರಾಚೀನ ಕಾಲದಲ್ಲಿ ತಾನು ಹುಟ್ಟಿದ ಧರ್ಮದ ಋಣವನ್ನು ತೀರಿಸಬೇಕು ಎಂಬ ಪ್ರಬಲ ನಂಬಿಕೆ ಇತ್ತು. ಹೀಗಾಗಿ ಅನೇಕ ಮೂಲಗಳಲ್ಲಿ ಉಲ್ಲೇಖವಾಗುವ ದಾನ ಪ್ರಕರಣ ಅಥವಾ ಸೇವಾ ಪ್ರಕರಣಗಳು ಈ ಸಂಕುಚಿತವಾದ ಅರ್ಥಕ್ಕೆ ಬಂದು ನಿಲ್ಲುತ್ತವೆ. ಇದನ್ನು ಮೀರಿ ಸಮಾಜಕ್ಕೆ ಸರ್ವಕಾಲಕ್ಕೂ ಉಪಯೋಗವಾಗುವಂತಹ ಸೇವೆಗಳನ್ನು ಕೆಲವೇ ಕೆಲವು ಮಂದಿ ಕೈಗೊಂಡಿರುವುದು ಇತಿಹಾಸದಲ್ಲಿ ಸಾಬಿತಾಗಿದೆ. ಈ ಗುಂಪಿಗೆ ಸೇರಿದವಳು ಅತ್ತಿಮಬ್ಬೆ.

ಅತ್ತಿಮಬ್ಬೆ ಜಿನಧರ್ಮ ಪತಾಕೆಯಲ್ಲಿ, ದಾನ ಚಿಂತಾಮಣಿಯಾಗಿ, ಕವಿವರ ಕಾಮಧೇನುವಾಗಿ ತನ್ನ ಸ್ಥಾನವನ್ನು ತೋರ್ಪಡಿಸಿದ್ದಾಳೆ.

ಶಾಂತಿಪುರಾಣದ ಲಿಪಿಕರಣ

ಕವಿಗಳಿಗೆ, ಕಾವ್ಯ ವಾಚನಕ್ಕೆ, ಶಾಸ್ತ್ರ ವಿಚಾರಾದಿಗಳ ಚರ್ಚೆಗೆ ಮತ್ತು ಸಾಹಿತ್ಯ ಕಲಾಪಗಳಿಗೆ ಅತ್ತಿಮಬ್ಬೆಯ ತೌರುಮನೆಯೇ ವಾಸಸ್ಥಾನವಾಗಿತ್ತು.[೧೮] ಅವಳ ಅಪ್ಪ ಚಿಕ್ಕಪ್ಪಂದಿರು ಪೊನ್ನ ಮಹಾಕವಿಯಿಂದ

“ಶಾಂತಿಪುರಾಣ”ವನ್ನು ಬರೆಯಿಸಿದ್ದರು. ಒಂದು ತಲೆಮಾರು ಕಳೆದು ಹೋಗುವಷ್ಟರಲ್ಲಿ ಅವರು ಬರೆಯಿಸಿದ ಶಾಂತಿಪುರಾಣದ ಪ್ರತಿಗಳು ನಶಿಸಿ ಓದುಗರಿಗೆ ದೊರೆಯದಂತಾದವು. ಇದೊಂದು ದೊಡ್ಡ ಕೊರತೆಯಾಯಿತು. ಅತ್ತಿಮಬ್ಬೆ ಈ ಕೊರತೆಯನ್ನು ಶಾಂತಿಪುರಾಣದ ಸಾವಿರ ಪ್ರತಿ ಮಾಡಿಸಿ, ನೀಗಿಸಿದಳು.

“ಪೊನ್ನಿಗನಿಂ ಮಲ್ಲಪನುಂ
ಪೊನ್ನನುಮರ್ತಿಯಿಂ ಪುರಾಣ ಚೂಡಾಮಣಿಯಂ
ಮುನ್ನಂ ಪೇಳಿಸಿದಂತೆ ಗು
ಣೋನ್ನತೆ ಕವಿರತ್ನ ನಿಂದಿದಂ ಪೇಳಿಸಿದಳ್.”[೧೯]

ಶಾಂತಿಪುರಾಣದ ಸಾವಿರ ಪ್ರತಿಯನ್ನು ಮುದ್ರಣ ವ್ಯವಸ್ಥೆಯಿಲ್ಲದ ಕಾಲದಲ್ಲಿ ತಾಳೆಗರಿಯಲ್ಲಿ ಲಿಪಿಕರಣವನ್ನು ಮಾಡಿದ್ದು ಒಂದು ಸಾಹಸದ ಸಾಮಾಜಿಕ ಕೊಡುಗೆಯಾಗಿದೆ. ಜೈನಧರ್ಮದಲ್ಲಿ ನಾಲ್ಕು ಬಗೆಯ ದಾನಗಳಿಗೆ ಅಂತ್ಯತ ಮಹತ್ವಪೂರ್ಣವಾದ ಸ್ಥಾನವನ್ನು ನೀಡಲಾಗಿದೆ. ಜೈನಶ್ರೇಷ್ಠರು ತಮ್ಮ ಬದುಕಿನಲ್ಲಿ ಶಾಸ್ತ್ರ ದಾನವನ್ನು ಮಾಡಿ ಮನುಷ್ಯ ಜನ್ಮದ ಸಾರ್ಥಕ್ಯವನ್ನು ಪಡೆದುಕೊಂಡಿದ್ದಾರೆ. ಅತ್ತಿಮಬ್ಬೆಯು ಸಹಿತ ಶಾಸ್ತ್ರದಾನವನ್ನು ಮಾಡಿದ ಮಹಿಳೆಯಾಗಿದ್ದಾಳೆ. ಶಾಂತಿಪುರಾಣ ಹಾಗೂ ಅಜಿತಪುರಾಣಗಳೆರಡನ್ನು ಕಾಪಾಡಿ ಕನ್ನಡಿಗರ ಕೈಗಿತ್ತು ಕೃತಾರ್ಥಳಾಗಿದ್ದಾಳೆ. ಶಾಂತಿಪುರಾಣದ ಪ್ರತಿಗಳು ಕೇವಲ ಕೆಲವೇ ಅಲ್ಲ, ಸಾವಿರ ಪ್ರತಿಗಳನ್ನು ಅತ್ತಿಮಬ್ಬೆಯು ಮಾಡಿಸಿ ಅದ್ಭುತ ಸಾಹಿತ್ಯ ಪ್ರಚಾರಕಿ ಎನ್ನುವ ಪ್ರಶಸ್ತಿಯನ್ನು ಪಡೆದುಕೊಂಡವಳಾಗುತ್ತಾಳೆ. ಅವಳ ಈ ಧರ್ಮಗಾಥೆಯನ್ನು ಲಕ್ಕುಂಡಿ ಶಾಸನವು ವರ್ಣಿಸಿ ಅವಳನ್ನು ಗುಣದಂಕಕಾರ್ತಿಯೆಂದು ಗೌರವಿಸಿದೆ.[೨೦] ಇದೇ ವಿಷಯವನ್ನು ಶಾಂತಿಪುರಾಣದ ಹಸ್ತಪ್ರತಿಯ ಕೊನೆಯಲ್ಲಿ ಏಳು ಪದ್ಯಗಳಲ್ಲಿ ವರ್ಣಿಸಲಾಗಿದೆ.[೨೧] ರನ್ನಕವಿಯ ಅಜಿತಪುರಾಣದಲ್ಲಿಯೂ ಸಹಿತ ಈ ಧಾರ್ಮಿಕ ಕೊಡುಗೆಯು ಪ್ರಸ್ತಾಪಿಸಲ್ಪಟ್ಟಿದೆ.[೨೨]

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣ ಯುಗವೆಂದು ಗುರುತಿಸಲ್ಪಡುವ ೧೦ನೆಯ ಶತಮಾನದ ಕೊನೆಯ ಘಟ್ಟದಲ್ಲಿ 'ದಾನ ಚಿಂತಾಮಣಿ' ಎಂದೇ ಪ್ರಖ್ಯಾತಿಯನ್ನು ಪಡೆದುಕೊಂಡಿರುವ ಅತ್ತಿಮಬ್ಬೆಯು ತನ್ನ ಬಳಿ ಇರುವ ಸಿರಿಯನ್ನು ತನಗೋಸ್ಕರ ಖರ್ಚು ಮಾಡದೆ ಸಮಾಜಕ್ಕೆ, ಕಾವ್ಯಗಳ, ಪುನರ್ ಲಿಪಿಕರಣಕ್ಕೆ, ಬಸದಿಗಳ ನಿರ್ಮಾಣಕ್ಕೆ, ದಾನ ಧರ್ಮಾದಿ ಕಾರ್ಯಗಳಿಗೆ ವಿನಿಯೋಗಿಸಿ ದಾನಚಿಂತಾಮಣಿ, ದಾನವಿನೋದೆ ಎಂಬ ಪರ್ಯಾಯ ಹೆಸರನ್ನು ಸಾರ್ಥಕಪಡಿಸಿದಳು.

ಅವಳ ಸಾಮಾಜಿಕ ಕಾರ್ಯಗಳನ್ನು ಹೀಗೆ ಗುರುತಿಸಬಹುದು.

೧. ಬಸದಿಗಳ ನಿರ್ಮಾಣ
೨. ಶಾಂತಿಪುರಾಣದ ಮರುಲಿಪಿಕರಣ
೩. ರನ್ನನಿಗೆ ಆಶ್ರಯ

ಭಾರತೀಯ ಪರಂಪರೆಯಲ್ಲಿ ದೇವಸ್ಥಾನಗಳ ನಿರ್ಮಾಣಕ್ಕೆ, ಜನೋಪಕಾರಿ ಸಾಮಾಜಿಕ ಕಾರ್ಯಗಳಿಗೆ ಮಹತ್ವಪೂರ್ಣವಾದ ಸ್ಥಾನವಿದೆ. "...... ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು ....." ಎಂದು ಮಹತ್ವಪೂರ್ಣವೆನಿಸುವ ಆದರ್ಶಗಳನ್ನು ಮಾತೆಯರಿಗೆ ಮಕ್ಕಳಿಗೆ ಹಾಲೂಡಿಸುವಾಗಲೇ ಹೇಳಿಕೊಡುವ ಪರಿಪಾಠ ಶಾಸನೋಕ್ತವಾಗಿದೆ.[೨೩] ಈ ಬಗೆಯ ಆದರ್ಶದ ಪರಂಪರೆ ಭಾರತೀಯರಲ್ಲಿ ಇದ್ದಿರುವ ಕಾರಣ ದೇಶದ ಮೂಲೆ ಮೂಲೆಗಳಲ್ಲಿ ದೇವಾಲಯಗಳು ತಲೆಯೆತ್ತಿದವು. ಈ ಪರಂಪರೆಗೆ ಕರ್ನಾಟಕವು ಹೊರತಾಗಿರಲಿಲ್ಲ. ಇಂತಹ ಪರಂಪರೆಯಲ್ಲಿ ಅತ್ತಿಮಬ್ಬೆಯದು ಎದ್ದುಕಾಣುವ ಹೆಸರು. ಆದುದರಿಂದಲೇ ಕವಿ ರನ್ನನು

ಮಹಿಚಕ್ರಕ್ಕಿದು ಚೋದ್ಯಮಲ್ತೆನಿಸುವವಂತಾರ್ತೀವುದುಂ ಕಂಡು ಸ
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೇಂ ಚೋದ್ಯಮೀಗಳ್ ಜಗ
ನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿ
ಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣಮಂ ಶ್ರೀ ದಾನಚಿಂತಾಮಣೀ.[೨೪]

ತನ್ನಲ್ಲಿರುವ ಸಂಪತ್ತನ್ನು ಬಸದಿಗಳ ನಿರ್ಮಾಣಕ್ಕಾಗಿ ಅತ್ತಿಮಬ್ಬೆಯು ವಿನಿಯೋಗಿಸಿದ್ದಾಳೆ. ಹೀಗೆ ದಾನ ದತ್ತಿಗಳಿಗಾಗಿ ಲೌಕಿಕ ಸಂಪತ್ತನ್ನು ವಿನಿಯೋಗಿಸುವುದೇ ಸಂಪತ್ತಿನ ಸಾರ್ಥಕತೆಯೆಂದು ಅತ್ತಿಮಬ್ಬೆ ಭಾವಿಸಿದ್ದಾಳೆ.

ಈ ಪದ್ಯವನ್ನು ಲಕ್ಕುಂಡಿ ಶಾಸನ ಪದ್ಯವೂ ಸಮರ್ಥಿಸುತ್ತದೆ.

ಆ ಸತಿ ಮು (ನ್) ಮಾಡಿಸಿದಾ
ಸಾಸಿರದಯ್ನೂರು ಬಸದಿಗಿದು ಕಳಶಮೆನರ್
ಭಾಸುರಮಾಯ್ತು ಜಿನೇಂದ್ರಾ
ವಾಸಂ ತೊಳಗುವ ಸುವರ್ಣ ಕಳಶೋನ್ನತಿಯಿಂ [೨೫]

ಅತ್ತಿಮಬ್ಬೆಯ ೧೫೦೦ ಬಸದಿಗಳ ನಿರ್ಮಾಣದಂತಹ ಅಪೂರ್ವ ಕಾರ್ಯವನ್ನು ಕೈಗೊಂಡಳು. ಇದು ಧರ್ಮದ ಕೆಲಸವಾದರೂ ಆ ಮೂಲಕ ಸಾಮಾಜಿಕ ಕಳಕಳಿಯನ್ನು ಹೊಂದಿದವಳು ಅತ್ತಿಮಬ್ಬೆ ಎನ್ನುವುದು ತಿಳಿದುಬರುತ್ತದೆ. ಆಧುನಿಕ ಸಲಕರಣೆಗಳಿಲ್ಲದೆ ಆ ಕಾಲದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರಿಗೆ ಉದ್ಯೋಗವಕಾಶ ಕಲ್ಪಿಸಿಕೊಟ್ಟದ್ದು. ಈ ಬಸದಿಗಳ ನಿರ್ಮಾಣ ಕಾಲದಲ್ಲಿಯೇ. ಇದನ್ನೇ ರನ್ನ ಕವಿಯ ಪದ್ಯವು ಬೆಂಬಲಿಸುತ್ತದೆ.

"ಸಮಯಕ್ಕೆ ಪಂಚಶತವಧಿ
ಕಮಾಗೆ ಸಮಯಿಸಿ ಸಹಸ್ರಕೂಟ ಸಹಸ್ರಾ
ಸ್ರಮುಮಂ ಸಮಯಿಸಲಾರ್ಗ
ಸಮಯಿಸಿದಳ್ ಸಮನೆ ದಾನಚಿಂತಾಮಣಿಯೊಳ್ [೨೬]

ಸಾವಿರದ ಐನೂರು ಬಸದಿಗಳ ಕಳಶವೆನ್ನಿಸುವಂತೆ ಮತ್ತೊಂದು ಬಸದಿಯನ್ನು ಲಕ್ಕುಂಡಿಯಲ್ಲಿ ಅವಳು ನಿರ್ಮಿಸಿದಳು. ಈ ಬಸದಿಗೆ ಬ್ರಹ್ಮ ಜಿನಾಲಯವೆಂಬ ಹೆಸರಿದೆ. ಈಗ ಈ ಬಸದಿ ಲಕ್ಕುಂಡಿಯಲ್ಲಿ ಉತ್ತಮ ಸ್ಥಿತಿಯಲ್ಲಿದ್ದು, ಒಂದು ಪ್ರೇಕ್ಷಣೆಯ ಸ್ಮಾರಕವಾಗಿದೆ. ಇದೇ ಅವಳು ಕಟ್ಟಿಸಿದ ಕೊನೆಯ ಬಸದಿಯಾಗಿದೆ.

ಈ ರೀತಿಯಾಗಿ ಅತ್ತಿಮಬ್ಬೆಯು ಸಮಾಜಕ್ಕೆ ಧರ್ಮದ ಮೂಲಕ ಅಮೂಲ್ಯವಾದ ಕೊಡುಗೆಯನ್ನಿತ್ತಿದ್ದಾಳೆ.

ಶಾಂತಿಪುರಾಣದ ಮರುಲಿಪಿಕರಣ ಕಾರ್ಯವಂತೂ ಅತ್ತಿಮಬ್ಬೆಯು ಖಂಡಿತವಾಗಿಯೂ ಅಕ್ಷರವಂತಳಾಗಿದ್ದಳು ಎಂಬ ಅನುಮಾನ ಕಾಡುವ ಹಾಗೆ ಮಾಡುತ್ತದೆ. ಮುದ್ರಣ ವ್ಯವಸ್ಥೆಯಿಲ್ಲದ ಕಾಲದಲ್ಲಿ ಎಷ್ಟೋ ವಿದ್ಯಾವಂತರಿಗೆ ಹಲವು ಕಾಲಗಳವರೆಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಅತ್ತಿಮಬ್ಬೆಯ ಸಾಹಿತ್ಯಿಕ ಹಸಿವನ್ನು ಸೂಚಿಸುತ್ತದೆ. ಇದು ಸಾಹಿತ್ಯ ಚರಿತ್ರೆಯಲ್ಲಿಯೇ ಅಸಾಮಾನ್ಯವಾದ ಕೆಲಸ, ಕೊಡುಗೆಯಾಗಿದೆ. ಈ ಬೃಹತ್ ಕಾರ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ಅತ್ತಿಮಬ್ಬೆ ಲಿಪಿಕಾರರನ್ನು ನಿಯೋಜಿಸಿದ್ದಾಳೆ. ಆದ್ದರಿಂದಲೇ ಹಸ್ತಪ್ರತಿ ಕಾರ್ಯ ಸಾಧ್ಯವಾಯಿತು. ಇದಕ್ಕಾಗಿ ಲೆಕ್ಕವಿಲ್ಲದಷ್ಟು ಹಣವನ್ನು ಆಕೆ ವಿನಿಯೋಗಿಸಿದ್ದಾಳೆ.

ಬಿಜಾಪುರ ಜಿಲ್ಲೆಯ ಮುದವೊಳಲಿನ ತೀರ ಸಾಮಾನ್ಯ ಬಳೆಗಾರರ ಮನೆಯಲ್ಲಿ ರನ್ನನು ಜನ್ಮ ತಳೆದಿದ್ದನು. ಆದರೆ ಈ ರನ್ನನಿಗೆ ಅದಮ್ಯವಾದ ವಿದ್ಯಾಕಾಂಕ್ಷೆಯಿತ್ತು. ಬಂಕಾಪುರದ ಗುರು ಅಜಿತಸೇನಾಚಾರ್ಯರ ಮೂಲಕ ರನ್ನನು ವಿದ್ಯಾವಂತನಾದನು. ಮುಂದೆ ಚಾವುಂಡರಾಯನ ನೆರವು, ಸ್ನೇಹ ರನ್ನ ಕವಿಗೆ ದೊರಕಿ ಅವನ ದಾರಿ ಸುಗಮವಾಯಿತು. ಆದರೆ ರಾಜಕೀಯದಲ್ಲಿನ ಏಳುಬೀಳುಗಳಿಂದಾಗಿ ಚಾವುಂಡರಾಯನ ರಾಜಕೀಯ ಮಹತ್ವ ಕುಸಿದು ರನ್ನನ ಸ್ಥಿತಿ ತೀರ ಸಂದಿಗ್ಧಕ್ಕೆ ಒಳಗಾಗಬೇಕಾಯಿತು. ಈ ಸಂದರ್ಭದಲ್ಲಿ ರನ್ನನಿಗೆ ಆಶ್ರಯದಾತೆಯಾದವಳು ಅತ್ತಿಮಬ್ಬೆ. ಅತ್ತಿಮಬ್ಬೆಯ ಆಶ್ರಯ, ನೆರವು ಇರದಿದ್ದರೆ ರನ್ನನ ಅಸ್ತಿತ್ವವೇ ಇಲ್ಲವಾಗುತ್ತಿತ್ತೇನೊ!

ಒಂದು ಮಹಾಕಾವ್ಯ ಆ ಭಾಷೆಯ ಆ ಸಂಸ್ಕೃತಿಯ ಆ ದೇಶದ ಪ್ರತೀಕವೆನಿಸಿ ಮಹಾನ್ ಎನಿಸಿಕೊಳ್ಳುತ್ತದೆ. ಆದರೆ ಒಬ್ಬನ ಜೀವನ ಅವನು ಹೇಗೆ ಬದುಕಿದ್ದನು? ಸಮಾಜಕ್ಕೆ, ಧರ್ಮಕ್ಕೆ ಎಷ್ಟು ಋಣಿಯಾಗಿದ್ದನು ಎನ್ನುವ ಪ್ರಶ್ನೆಗಳಿಗೆ ಉತ್ತರ ಪಡೆಯುವುದರ ಮೂಲಕ ಮಹತ್ತರವಾಗುತ್ತದೆ. ಆದುದರಿಂದ ಒಂದು ಮಹಾಕಾವ್ಯಕ್ಕಿಂತ, ಮಹಾನ್ ಜೀವನ ಮಹತ್ವಪೂರ್ಣವಾದದ್ದು ಎನಿಸುತ್ತದೆ. ಕಾವ್ಯ, ಮಹಾಕಾವ್ಯಗಳು ಕೇವಲ ಒಂದು ಸೃಷ್ಟಿಯಾದರೆ, ಜೀವನ ಒಂದು ಭವ್ಯ ಅನುಭವ. ಅನುಭವದಿಂದಾಗಿ ಆ ಜೀವನ ಮಹಾಜೀವನವಾಗಿ, ಮಹಾಜೀವನ ನಡೆಸಿದ ವ್ಯಕ್ತಿ ಹಿರಿಯ ಚೇತನೆಯಾಗುತ್ತದೆ.

ಅಂತಹ ಮಹಾ ಚೇತನೆಯನ್ನು ಪ್ರತ್ಯಕ್ಷವಾಗಿ ಕಂಡು ಅವಳಿಂದ ಉಪಕೃತನಾದ ಕವಿ ಅವಳಿಗೆ ಪ್ರಿಯವಾಗುವಂತೆ ಅಜಿತಪುರಾಣವನ್ನು ರಚಿಸುವುದಾಗಿ ಹೇಳಿದ್ದಾನೆ. ಅಲ್ಲದೆ

ಜಿನಪೂಜೋತ್ಸವಕೆಲ್ಲಿಯುಂ ಜಿನಕಥಾಳಾ ಪ್ರೋತ್ಸವಕ್ಕೆಲ್ಲಿಯುಂ
ಜಿನತೀರ್ಥೋತ್ಸವಕೆಲ್ಲಿಯುಂ ಜಿನಮುನಿವ್ರಾತೋತ್ಸವಕ್ಕೆಲ್ಲಿಯುಂ

ಜಿನಗೇಹೋತ್ಸವಕೆಲ್ಲಿಯುಂ ಜಿನಮಹಾ ದಾನೋತ್ಸವಕ್ಕೆಲ್ಲಿಯುಂ

ಧನಮಂ ಪತ್ತಿಸುತಿರ್ಪೆ ನೀನೆ ಪಿರಿಯೈ ಶ್ರೀ ದಾನಚಿಂತಾಮಣಿ[೨೭]

ಎಂದು ಮನದುಂಬಿ ಅವಳ ದಾನಗುಣವನ್ನು ಕೊಂಡಾಡಿದ್ದಾನೆ.

೩. ವಿಶೇಷ ಕೊಡುಗೆ

ಸಂಸ್ಕೃತಿಯನ್ನು ಬಿಟ್ಟು ಧರ್ಮವಿಲ್ಲ, ಧರ್ಮವನ್ನು ಬಿಟ್ಟು ಸಂಸ್ಕೃತಿಯಿಲ್ಲ. ಎರಡು ಒಂದೇ ನಾಣ್ಯದ ಎರಡು ಮುಖಗಳೆಂದರೂ ತಪ್ಪಾಗಲಾರದು. ನಮ್ಮ ಸಂಸ್ಕೃತಿಯಲ್ಲಿ ಧರ್ಮ ಹಾಸುಹೊಕ್ಕಾಗಿದೆ. ಮಾನವ ಬದುಕಿನ ಪ್ರತಿಯೊಂದು ಆಚಾರ - ವಿಚಾರ, ವ್ಯವಹಾರ - ನಡತೆಗಳಲಲ್ಲಾ ಧರ್ಮವು ಆವರಿಸಿಕೊಂಡಿದೆ. ವಂಶಪರಂಪರಾಗತವಾಗಿ ನಡವಳಿಕೆಯಲ್ಲಿ ಬಂದಿರುವ ಧಾರ್ಮಿಕಶ್ರದ್ಧೆಯೇ ಮನುಕುಲದ ಬಾಳಿನ ಊರುಗೋಲು. ಹುಟ್ಟಿನಿಂದ ಸಾಯುವವರೆಗಿನ ಜೀವನದ ಎಲ್ಲ ನಂಬಿಕೆ ನಡವಳಿಕೆಗಳನ್ನು ವ್ಯವಹಾರ ಚಲನವಲನಗಳಿನ್ನು ಧಾರ್ಮಿಕ ಶ್ರದ್ಧೆಯೇ ವ್ಯಾಪಿಸಿಕೊಂಡಿದೆ. ಮದುವೆ, ಸೀಮಂತ, ಮಗುವಿನ ಜನನ, ನಾಮಕರಣ, ಉಪನಯನ, ಮೊದಲಾದ ಸಂದರ್ಭಗಳಲ್ಲಿ ಧಾರ್ಮಿಕ ಶ್ರದ್ಧೆ ಹಾಸು ಹೊಕ್ಕಾಗಿದೆ. ಮನುಷ್ಯ ಜೀವನದ ಒಳಿತು - ಕೆಡಕುಗಳಲಲ್ಲಾ ಧರ್ಮದ ನಂಬಿಕೆ ಇದ್ದೇ ಇರುತ್ತದೆ. ಜನನ ಇಲ್ಲವೆ ಮರಣವಾಗಬಹುದು, ಮದುವೆ ಇಲ್ಲವೆ ಸಾವೂ ಆಗಬಹುದು. ಇಲ್ಲೆಲ್ಲಾ ಧಾರ್ಮಿಕ ದೃಷ್ಟಿಕೋನದ್ದೇ ಸಿಂಹಪಾಲು.

ಮದುವೆಯಾಗಿರುವ ಹೆಣ್ಣುಮಗಳಿಗೆ ಹಿರಿಯರು "ದೀರ್ಘ ಸುಮಂಗಲೀಭವ" ಎಂದು ಹರಸುವುದೇ ಪ್ರತೀತಿ. ಪಾತಿವ್ರತ್ಯ ಧರ್ಮವನ್ನು ಕಾಪಾಡಿಕೊಳ್ಳುವುದೇ ಸ್ತ್ರೀತ್ವದ ಪರಮಗುರಿಯಾಗಿತ್ತು. ಪತಿವ್ರತಾ ಶಿರೋಮಣಿಗಳು ಕೆಲವು ವ್ರತ ನೇಮಗಳನ್ನು ಕೈಗೊಳ್ಳುತ್ತಿದ್ದರು. ಇಂಗಳಿಗೆಯ ಶಾಸನವು ಚಾಲುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಪತ್ನಿಯಾಗಿರುವ ಜಾಕಲದೇವಿಯು ನಡೆಸಿದ ವ್ರತ ಮತ್ತು ಆ ವ್ರತವನ್ನು ಪರೀಕ್ಷೆ ಮಾಡಲು ಹೋಗಿ ಸೋತು ಹೋಗಿರುವದನ್ನು ಹೇಳುತ್ತದೆ. ಹೆಣ್ಣುಮಕ್ಕಳು ಸುಮಂಗಲಿಯರಾಗಿರಲಿ ಎನ್ನುವುದೇ ಕುಟುಂಬದ ಹಿರಿಯರ ಹರಕೆ ಹಾರೈಕೆಯಾಗಿದೆ. ಆದರೆ ಈ ಹರಕೆ ಎಲ್ಲ ಸ್ತ್ರೀಯರ ಬದುಕಿನಲ್ಲಿ ಹರಕೆಯ ಅರ್ಥದಂತೆ ಇರುವದಿಲ್ಲ. ಕೆಲವರ ಗಂಡ ಸತ್ತು ವಿಧವೆರೆನಿಸಿಕೊಳ್ಳಬೇಕಾಗುತ್ತದೆ. ವೈಧವ್ಯವನ್ನು ಯಾರೂ ಬಯಸುವದಿಲ್ಲ. ಆದರೆ ವೈಧವ್ಯದ ಸಂಸ್ಕಾರಗಳು, ವಿಧವೆಯರನ್ನು ನೋಡುವ ರೀತಿ ರಿವಾಜುಗಳು ಅತ್ಯಂತ ಹೀನಾಯವಾಗಿವೆ. ಗಂಡನೇ ದೇವರು, ಪತಿಯೇ ಪರದೈವ ಎಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡನ ಸಾವು, ಸಾವಿನಿಂದ ಆ ಹೆಣ್ಣುಮಗಳಿಗೆ ಒದಗುವ ಪರಿಸ್ಥಿತಿ ಅತ್ಯಂತ ದಾರುಣವಾದದ್ದು. ಈ ಪರಂಪರೆಯ ಹಿಡಿತದೊಳಗೆ ಹಲವಾರು ವಿಧವೆಯರು ಅಂತಹ ದಾರುಣವಾದ ಬದುಕನ್ನು ಬಾಳಿದ್ದಾರೆ. ಆದರೆ ಅತ್ತಿಮಬ್ಬೆ ಪರಂಪರೆಯ ಚೌಕಟ್ಟನ್ನು ಮೀರಿದವಳಾಗಿದ್ದಾಳೆ. ಆದರೆ ಅವಳು ಯಾವುದಾದರೂ ಒಂದು ಸಂಘಟನೆಯನ್ನು ಮಾಡಿ ಪ್ರಾಚೀನ ಮೌಲ್ಯಗಳ ವಿರುದ್ಧ ಹೋರಾಟ ಮಾಡಿಲಿಲ್ಲ. ವಿಧವೆಯರನ್ನು ನಡೆಸಿಕೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಯ

ವಿರುದ್ಧ ಧ್ವನಿ ಎತ್ತಿಲ್ಲ. ಸ್ತ್ರೀಯಾದವಳು ಯಾವುದೇ ಸ್ಥಿತಿಯಲ್ಲಿರಲಿ, ಮಗಳು, ಮಡದಿ, ಮಾತೆ, ಸಹೋದರಿ, ವಿಧವೆ ಹೀಗೆ ಯಾವುದೇ ಘಟ್ಟದಲ್ಲಿರುವಾಗಲೂ ಅವಳಿಗೂ ತನ್ನದೆ ಆದ ವ್ಯಕ್ತಿತ್ವವಿದೆ. ಅವಳು ಇತರರಂತೆ ತನಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಮುಂದುವರಿದರೆ ಯಾವ ಪಾಪವನ್ನು ಗೈದಂತೆ ಆಗುವದಿಲ್ಲ. ಅವಳಿಗೆ ತಕ್ಕ ಅದರ ಅವಕಾಶಗಳ ಅವಶ್ಯಕತೆ ಬೇಕೆ ಬೇಕಾಗುತ್ತದೆ. ಆದರೆ ಇಂತಹ ಆದರ್ಶದ ವಿಚಾರಗಳು ಕೇವಲ ಪುಸ್ತಕಗಳಲ್ಲಿ ಅಚ್ಚಾಗಿ ಕುಳಿತಿವೆ. ಅವುಗಳನ್ನು ಪ್ರಯೋಗದಲ್ಲಿ ತರಲು ಯಾರೂ ಪ್ರಯತ್ನ ಪಡುವದಿಲ್ಲ. ಬೇರೆ ಯಾರಾದರೂ ಅಂತಹ ಮೌಲ್ಯಗಳನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಳ್ಳಲಿ, ಬೇರೆ ಯಾರಾದರೂ ಅವರಿಗೆ ಸಹಾಯಕರಾಗಿರಲಿ ಎಂದು ಎಲ್ಲರೂ ಭಾವಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯೇ ಮಾದರಿಯಾಗುವಂತಹ ಬದುಕನ್ನು ನಡೆಸಿದಳು. ಅವಳು ಯಾರ ಸಹಾಯವನ್ನು ನಿರೀಕ್ಷಿಸಲಿಲ್ಲ. ಅವಳಿಗೆ ಸಹಾಯದ ಅವಶ್ಯಕತೆಯೂ ಇದ್ದಿಲ್ಲ. ತಾನು ವಿಧವೆಯಾಗಿದ್ದೇನೆಂದು ಮೂಲೆ ಹಿಡಿದು ಕುಳಿತುಕೊಳ್ಳಲಿಲ್ಲ. ಗಂಡನನ್ನು ತಂಗಿ ಗುಂಡಮಬ್ಬೆಯನ್ನು ಚಿತೆ ಸುಟ್ಟು ಬೂದಿ ಮಾಡಿದರೆ ಅವಳು ಜೈನ ಧರ್ಮದ ವ್ರತ ನೇಮ ನಿಷ್ಠೆಗಳಲ್ಲಿ ತನ್ನ ಅತನುವ ಬೂದಿ ಮಾಡಿ, ಮನವನ್ನು ದಾನಕ್ಕೆ ಹರಿಯಬಿಟ್ಟಳು. ಅತ್ತಿಮಬ್ಬೆಯ ಕಾರ್ಯವೈಖರಿ ಅಚ್ಚರಿಹುಟ್ಟಿಸುತ್ತದೆ. ಅವಳ ಬದುಕಿದ ರೀತಿಯೇ ಒಂದು ಕೊಡುಗೆಯಾಗಿದೆ. ಜೀವನದ ಕಷ್ಟಗಳಲ್ಲಿ ನೊಂದು ದಾರಿ ತೋಚದೆ ಇದ್ದವರಿಗೆ, ಸಾಕಷ್ಟು ಧನ, ಆಸ್ತಿಪಾಸ್ತಿಯಿದ್ದು ಏನು ಮಾಡಲಾರೆ, ಮಾಡಲಾಗುವದಿಲ್ಲ ಎಂಬ ನಿರಾಶೆಯನ್ನು ಹೊಂದಿದವರಿಗೆ ಅತ್ತಿಮಬ್ಬೆಯ ಸಾರ್ಥಕ ಮಾದರಿ ಬದುಕೇ ಒಂದು ವಿಶೇಷ ಕೊಡುಗೆಯಾಗಿದೆ. ಯಾವುದೇ ಕಾಲಕ್ಕೂ ಅತ್ತಿಮಬ್ಬೆಯು ಬಾಳಿದ ತುಂಬು ಬಾಳುವೆ, ಸರಳ ಸಜ್ಜನಿಕೆಯ ಬದುಕೇ ವಿಶೇಷವಾದ ಕೊಡುಗೆಯಾಗಿದೆ ಎಂದು ಹೇಳಬಹುದು.

ಪುರುಷರನ್ನು ಮೀರಿಸಿದ ದಾನಗುಣ

ಹತ್ತು ಹಲವಾರು ಒಳ್ಳೆಯ ಗುಣಗಳು ಅತ್ತಿಮಬ್ಬೆಗೆ ಇದ್ದರೂ ಅವಳು ಪ್ರಖ್ಯಾತಿಯನ್ನು ಪಡೆದುಕೊಂಡದ್ದು ದಾನಚಿಂತಾಮಣಿಯೆಂದು. ಶಾಸನದಲ್ಲಿ[೨೯] ಹಾಗೂ ಕಾವ್ಯಗಳಲ್ಲಿ[೩೦] ಅತ್ತಿಮಬ್ಬೆಯು ದಾನಚಿಂತಾಮಣಿಯೆಂದು ವರ್ಣಿತಳಾಗಿದ್ದಾಳೆ. ಅಧ್ಯಾಯದ ಆರಂಭದಲ್ಲಿ ಹೇಳಿದ ಹಾಗೆ ರನ್ನ ಕವಿಯ ಮಾತಿನಂತೆ ಅತ್ತಿಮಬ್ಬೆ, ತನ್ನ ಸಮಕಾಲೀನ ಹಿರಿಯ ದಾನಿಗಳಾದ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯ, ಶಂಕರ ಗಂಡನಿಗಿಂತ ದಾನಗುಣದಲ್ಲಿ ಅತ್ತಿಮಬ್ಬೆಯೇ ಆಧಿಕ್ಯಳಾಗಿದ್ದಾಳೆ. ಅತ್ತಿಮಬ್ಬೆಗಿಂತ ಪೂರ್ವದಲ್ಲಿಯೂ ಕೂಡ ಅತ್ತಿಮಬ್ಬೆಯ ಹಾಗೆ ದಾನಗುಣವುಳ್ಳವರು ಇಲ್ಲವೆಂದೇ ಹೇಳಬಹುದು. ಅತ್ತಿಮಬ್ಬೆಯ ನಂತರವೂ ಅತ್ತಿಮಬ್ಬೆಯಂತಹ ದಾನಗುಣವುಳ್ಳವರನ್ನು ಇತಿಹಾಸ ಕಂಡಿಲ್ಲವೆಂದೇ ಹೇಳಬಹುದು.

ವಾಸ್ತು ನಿರ್ಮಾಣದಲ್ಲಿ ಪುರುಷ ಸಮಾನೆ

ಕನ್ನಡ ಶಾಸನಗಳಲ್ಲಿ ಒಂದಲ್ಲ ಒಂದು ಬಗೆಯ ದಾನಶಾಸನಗಳ ಸಂಖ್ಯೆಯೇ ಅತ್ಯಧಿಕ. ನೂರಕ್ಕೆ ೯೫ರಷ್ಟು ದಾನಶಾಸನಗಳೇ ಇವೆಯೆನ್ನಬಹುದು.[೩೧] ಎಂಬ ಮಾತು ನಮ್ಮ ನಾಡಿನ ಸಂಸ್ಕೃತಿಯ ಪ್ರಧಾನತೆಯನ್ನು ಎತ್ತಿ ಹಿಡಿಯುತ್ತದೆ. ನಮ್ಮ ನಾಡಿನವರ ಸತ್ ಸಂಸ್ಕೃತಿಯನ್ನು ಈ ದಾನ ಶಾಸನಗಳು ಸ್ಪಷ್ಟವಾಗಿ ತೋರಿಸುತ್ತವೆ. ಮಠಮಾನ್ಯಗಳನ್ನು ಕಟ್ಟಿಸುವುದು ಕನ್ನಡಿಗರ ಧಾರ್ಮಿಕ ಶ್ರದ್ಧೆಗೊಂದು ಉದಾಹರಣೆಯಾಗಿದೆ. ತಾವು ಅಳಿದರೂ ತಾವು ಕಟ್ಟಿಸಿದ ದೇವಾಲಯ, ಅಳಿಯದೆ ಶತ ಶತಮಾನದವರೆಗೆ ಹಾಗೆ ಉಳಿಯಬೇಕೆಂಬ ಹಿರಿದಾದ ಬಯಕೆ ಅವರದು. ಅದಕ್ಕೋಸ್ಕರವೇ ಕುಶಲ ಶಿಲ್ಪಿ ಸ್ಥಪತಿಗಳ ಸಹಾಯದಿಂದ ದೇವಾಲಯಗಳನ್ನು ಕಟ್ಟಿಸುವುದಕ್ಕಾಗಿ ಗಳಿಸಿಟ್ಟ ಧನವನ್ನು ಯಾವ ಎಗ್ಗಿಲ್ಲದೆ ವಿನಿಯೋಗಿಸಿದ ರಾಜ ಮಹಾರಾಜರುಗಳು ಕನ್ನಡ ನಾಡಿನಲ್ಲಿ ಆಗಿಹೋಗಿದ್ದಾರೆ.

ಕನ್ನಡ ನಾಡಿನ ಸುಪ್ರಸಿದ್ಧ ಅರಸು ಮನೆತನಗಳಾದ ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳರು ಇಂದಿಗೂ ಜನಮನ ಸೂರೆಗೊಳ್ಳುವಂತಹ ವಾಸ್ತು ನಿರ್ಮಾಣವನ್ನು ಮಾಡಿದ್ದಾರೆ. ಇಂದಿಗೂ ಈ ಅರಸು ಮನೆತನಗಳ ಅರಸರುಗಳು ನಿರ್ಮಿಸಿದ ಕಟ್ಟಡ, ದೇವಾಲಯಗಳೆಲ್ಲಾ ದಕ್ಷಿಣ ಭಾರತದ ಗುಡಿ ಗೋಪುರಗಳೆಂದೇ ಕನ್ನಡಿಗರ ಬಾಯಿಮಾತಿನಲ್ಲಿಯೂ ಕೂಡ ಕಂಡುಬರುತ್ತವೆ.

ಗಂಗವಂಶ ಸ್ಥಾಪಕನಾದ ಮಾಧವನು ಪಲ್ಲವ ವಾಸ್ತುರೀತಿಯ ಮರದ ಬಸದಿಯೊಂದನ್ನು ಕಟ್ಟಿಸಿದ್ದಾನೆ. ಗಂಗರಸರಲ್ಲಿ ಪ್ರಖ್ಯಾತಿ ಪಡೆದ ಮಾರಸಿಂಹನ ಸೇನಾಪತಿಯಾದ ಶ್ರೀವಿಜಯನು ಭವ್ಯವಾದ ಜಿನೇಂದ್ರಾಲಯವೊಂದನ್ನು ನಿರ್ಮಿಸಿದ್ದಾನೆ.[೩೨]

ಕ್ರಿ.ಶ. ೧೧೮೦ರ ಶಾಸನದ ಉಲ್ಲೇಖದಂತೆ ಶ್ರವಣಬೆಳ್ಗೊಳದ ಗೊಮಟೇಶ್ವರ ಮೂರ್ತಿಯೂ ನಾಡಿನಲ್ಲಿಯೇ ಪ್ರಖ್ಯಾತಿಯನ್ನು ಪಡೆದುಕೊಂಡಿರುವ ವಿಗ್ರಹವಾಗಿದೆ. ಗಂಗರಸ ರಾಚಮಲ್ಲನ ಮಂತ್ರಿ, ಸೇನಾನಿಯು ಆಗಿರುವ ಚಾವುಂಡರಾಯನಿಂದ ಈ ವಿಗ್ರಹ ನಿರ್ಮಾಣಗೊಂಡಿದೆ.[೩೩]

ಬಾದಾಮಿ ಹಾಗೂ ಪಟ್ಟದಕಲ್ಲಿನಲ್ಲಿ ಚಾಲುಕ್ಯರ ವಾಸ್ತು ಶಿಲ್ಪಕಲೆ ನಿರ್ಮಾಣಗೊಂಡಿದೆ. ಒಂದನೆಯ ಪುಲಿಕೇಶಿಯ ಮಕ್ಕಳಾದ ಕೀರ್ತಿವರ್ಮ ಮತ್ತು ಮಂಗಲೀಶರಿಬ್ಬರೂ ಒಂದು ಜಿನಾಲಯವನ್ನು, ಮೂರು ವಿಷ್ಣು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಒಂದನೆಯ ಪುಲಿಕೇಶಿಯ ಮಗನಾದ ಮಂಗಲೀಶನೇ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವ ಕಾರಣದಿಂದಾಗಿ, 'ಚಾಲುಕ್ಯ ವಾಸ್ತುಶಿಲ್ಪದ ಪಿತಾಮಹ'ನೆಂಬ ಬಿರುದನ್ನು ಪಡೆದುಕೊಂಡಿದ್ದಾನೆ.[೩೪]

ಇಟಗಿಯ ಮಹಾದೇವ ದೇವಾಲಯವು ಕ್ರಿ.ಶ. ೧೧೧೨ರಲ್ಲಿ ನಿರ್ಮಾಣಗೊಂಡಿದೆ. ಹಳೆಬೀಡಿನ ಹೊರತುಪಡಿಸಿದರೆ ಇಟಗಿ ಮಹಾದೇವ ದೇವಾಲಯದಂತಹ ದೇವಾಲಯವು ಕನ್ನಡನಾಡಿನಲ್ಲಿಯೇ ಇಲ್ಲವೆಂದು[೩೫] ಕಸಿನ್ಸ್ ಅವರ ಅಭಿಪ್ರಾಯವಾಗಿದೆ. ಅದಕ್ಕೆಂದೇ ಇಟಗಿಯಲ್ಲಿರುವ ಮಹಾದೇವ ದೇವಾಲಯವನ್ನು ಆರನೆಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಮಹಾದೇವನು ಇಟಗಿಯಲ್ಲಿ ಕಟ್ಟಿಸಿ ಅದನ್ನು ಶಾಸನದಲ್ಲಿ "ದೇವಾಲಯ ಚಕ್ರವರ್ತಿ" ಎಂದು ಬಣ್ಣಿಸಿದ್ದಾನೆ.[೩೬]

ನಕ್ಷತ್ರಾಕಾರದ ಜಗಲಿಯ ಮೇಲೆ ನಿರ್ಮಾಣಗೊಂಡ ಹೊಯ್ಸಳರ ವಾಸ್ತುಶಿಲ್ಪ ದಕ್ಷಿಣ ಭಾರತದಲ್ಲಿಯೇ ಹೆಸರುವಾಸಿಯಾದಂತವುಗಳು. "ಬೇಲೂರು ಮತ್ತು ಹಳೇಬೀಡು ದೇವಾಲಯಗಳು ಕಲ್ಪನಾ ವೈಖರಿಯಲ್ಲೂ ನಿರ್ಮಾಣ ಚಾತುರ್ಯದಲ್ಲೂ ಬೇರೆಲ್ಲ ದೇವಾಲಯಗಳನ್ನು ಮೀರಿಸಿವೆ"[೩೭] ಚೆನ್ನಕೇಶವ ದೇವಾಲಯ (ಬೇಲೂರು)ವಂತೂ ಹೊಯ್ಸಳ ವಾಸ್ತುಶಿಲ್ಪಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

ಶಿಲೆಯಲ್ಲಿ ಮಹಾತತ್ವವನ್ನು ದರ್ಶಿಸುವುದೇ ಶಿಲ್ಪಕಲೆ. ಕರ್ನಾಟಕದ ವಾಸ್ತುಶಿಲ್ಪಕಲೆಯ ಇತಿಹಾಸವನ್ನು ನೋಡಿದಾಗ ಕನ್ನಡ ನಾಡಿನ ಅರಸು ಮನೆತದ ಪ್ರಭುಗಳು, ಮಾಂಡಲಿಕರು, ಸೇನಾಪತಿಗಳು ಹೀಗೆ ಹಲವಾರು ವ್ಯಕ್ತಿಗಳು ಶಿಲ್ಪಕಲೆಯಲ್ಲಿ ಚೇತನೆ, ಮಹೋನ್ನತಿಗಳ ನಿರ್ಮಾಣವನ್ನು ಮಾಡಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವೇ ಕೆಲವನ್ನೆ ಮಾತ್ರ ನಾನು ಮೇಲಿನ ವಿವರಣೆಯಲ್ಲಿ ದಾಖಲಿಸಿದ್ದೇನೆ. ದೇವಾಲಯ ಧರ್ಮದ ಪ್ರತೀಕವಾದರೆ ಶಿಲ್ಪಕಲೆ ಪ್ರತಿಭೆ, ಮನೋಧರ್ಮ, ಸಂಸ್ಕೃತಿ, ಚಾಣಾಕ್ಷತನದ ಮೊತ್ತವೇ ಆಗಿರುತ್ತದೆ. ಕನ್ನಡ ನಾಡಿನ ವಾಸ್ತು ಶಿಲ್ಪ ಕಲೆಯ ಇತಿಹಾಸದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರ ಕೊಡುಗೆ ಇರುವದನ್ನು ಅಲ್ಲಗಳೆಯಲಾಗದು.

ಮಹಿಳೆಗೆ ಬೇಕಿರಲಿ, ಬೇಡವಾಗಿರಲಿ ಕುಟುಂಬವೆ ಅವಳ ಕ್ಷೇತ್ರವಾಗುತ್ತದೆ. ಹಾಗೆಯೇ ಅವಳು ಇಷ್ಟಪಟ್ಟರೆ ಧಾರ್ಮಿಕ ಸಾಮಾಜಿಕ ಕ್ಷೇತ್ರದಲ್ಲೂ ಆಕೆ ಮುಂದುವರಿಯಬಹುದು. ಆದರೆ ರಾಜಕೀಯ, ಆಡಳಿತ, ದೇವಾಲಯಗಳ ನಿರ್ಮಾಣದಂತಹ ಕಾರ್ಯದಲ್ಲಿ ಮಹಿಳೆ ಪಾಲ್ಗೊಳ್ಳಬೇಕಾದರೆ ಹೆಚ್ಚು ತೊಂದರೆಯನ್ನು ಅವಳು ಎದುರಿಸಬೇಕಾಗುತ್ತದೆ. ಕುಟುಂಬದಷ್ಟು ನಿರಾತಂಕವಾದ ಕ್ಷೇತ್ರಗಳು ಇವು ಅಲ್ಲ. ಆದರೂ ಎಷ್ಟೋ ಮಹಿಳೆಯರು ಆಡಳಿತವನ್ನು ಕೈಗೆತ್ತಿಕೊಂಡಿದ್ದಾರೆ. ವಾಸ್ತುಶಿಲ್ಪ ಕಲೆಯ ನಿರ್ಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಇತಿಹಾಸ ಮತ್ತು ಶಾಸನಗಳು ಹೇಳುತ್ತವೆ. ಸಹಜವಾಗಿ ರಾಜರ ಜತೆಗೆ ರಾಣಿಗೂ ಮಾನ ಮರ್ಯಾದೆಗಳು ಸಲ್ಲುತ್ತಿದ್ದವು. ಪ್ರಜೆಗಳು ರಾಜನನ್ನು ಪ್ರತ್ಯಕ್ಷ ದೈವದ ಹಾಗೆ ಕಂಡರೆ ರಾಣಿಯನ್ನು ಮಾತೃಸ್ವರೂಪಿಣಿಯಂತೆ ಕಾಣುತ್ತಿದ್ದರು.

ಮಂಗಳೇಶನ ಶಾಸನದಲ್ಲಿ ದುರ್ಲಭದೇವಿಯನ್ನು ರಾಜಕಾರಣ ನಿಪುಣೆ ಎನ್ನುವ ಅರ್ಥದ ಹಾಗೆ ಹೊಗಳಿದೆ.[೩೮] ಹೀಗೆ ಕನ್ನಡ ನಾಡಿನಲ್ಲಿ ಮಹಿಳೆಯರು ಸಹಿತ ರಾಜಕೀಯದಲ್ಲಿ ಪಾಲ್ಗೊಂಡಿರುವದಕ್ಕೆ ದಾಖಲೆಗಳಿವೆ. ಅನೇಕ ಕವಿಗಳು, ಶಾಸನ ಕವಿಗಳು ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸಿರುವದನ್ನು ಕಾಣಬಹುದು.

ಈ ಪುರುಷ ಪ್ರಧಾನ ನಿರ್ಮಾಣಕ್ಕೆ ನಮ್ಮ ಅತ್ತಿಮಬ್ಬೆಯು ಸಮಾನಳಾಗಿದ್ದಾಳೆ. ಅತ್ತಿಮಬ್ಬೆಯು ನೂರಾರು ಬಸದಿಗಳನ್ನು ನಿರ್ಮಿಸಿರುವುದು ಈಗ ಇತಿಹಾಸವಾಗಿದೆ. ನಿರ್ಮಾಣ ಚಟುವಟಿಕೆಯೆಂದರೆ ಸಾಮಾನ್ಯವಲ್ಲ. ಅದಕ್ಕೆ ಜನಸಮೂಹದ ಬೆಂಬಲ, ಅಪಾರವಾದ ಸಿದ್ಧತೆ, ಅಪಾರವಾದ ದ್ರವ್ಯ, ಧಾರ್ಮಿಕ ಮನೋಭಾವ ಇವೆಲ್ಲವೂ ಅವಶ್ಯವಾಗಿ ಬೇಕು. ಇವೆಲ್ಲ ಗುಣಗಳನ್ನು ಹೊಂದಿರುವ ಅತ್ತಿಮಬ್ಬೆ ಬಸದಿಗಳನ್ನು ನಿರ್ಮಾಣ ಮಾಡಿದ್ದಾಳೆ. ಮತ್ತು ಜಿನಬಿಂಬಗಳನ್ನು ಸ್ಥಾಪಿಸಿ ದಿನನಿತ್ಯದ ಪೂಜೆಗಾಗಿ ಬೇಕಾಗುವ ಪರಿಕರಗಳನ್ನು ಕೊಡಿಸಿದ್ದಾಳೆ. ಬ್ರಹ್ಮಜಿನಾಲಯದ ನಿರ್ಮಾಣ, ಮತ್ತು ದಾನ ಮೊದಲಾದವುಗಳು ಶಾಸನೋಕ್ತವಾಗಿವೆ. ಅಲ್ಲದೆ ಈ ಶಾಸನವು ಅಜಿತಪುರಾಣದ ಪದ್ಯಗಳನ್ನು ಒಳಗೊಂಡಿದೆ.[೩೯]

ಲಕ್ಕುಂಡಿಯ ಪಶ್ಚಿಮ ದಿಕ್ಕಿನ ಭಾಗದಲ್ಲಿ ಬರುವ ಜಿನಾಲಯವೇ ಬ್ರಹ್ಮ ಜಿನಾಲಯ. ಬ್ರಹ್ಮ ಜಿನಾಲಯದಲ್ಲಿ ೨೨ನೆಯ ತೀರ್ಥಕರನಾದ ನೇಮಿನಾಥ ವಿಗ್ರಹವಿದೆ. ನೇಮಿನಾಥನ ವಿಗ್ರಹವಿರುವ ಜಿನಾಲಯಕ್ಕೆ ಬ್ರಹ್ಮಜಿನಾಲಯವೆಂದು ಹೆಸರು ಬಂದಿರುವುದಕ್ಕೆ ಕಾರಣವನ್ನು ಈ ರೀತಿ ತರ್ಕ ಮಾಡುತ್ತಾರೆ. ಅದೇನೆಂದರೆ ಜೈನ ಹಾಗೂ ಬ್ರಾಹ್ಮಣರಲ್ಲಿ ಘರ್ಷಣೆ ನಡೆದು ಕೊನೆಗೆ ಒಪ್ಪಂದ ಮಾಡಿಕೊಂಡಿರಬಹುದೆಂದು ಡಾ. ಎಂ.ಎಂ. ಕಲಬುರ್ಗಿಯವರು ತರ್ಕ ಮಾಡಿದ್ದಾರೆ. ಅದನ್ನೇ ಡಾ. ಮಧು ವೆಂಕಾರೆಡ್ಡಿಯವರು ಸಮರ್ಥಿಸುತ್ತಾರೆ.[೪೦] ಆದರೆ ಡಾ.ಹಂಪನಾ ಲಕ್ಕುಂಡಿಯ ಬಸದಿಗೆ ಬ್ರಹ್ಮ ಜಿನಾಲಯ ಎಂಬ ಹೆಸರನ್ನು ಇಟ್ಟಿದ್ದು ಅತ್ತಿಮಬ್ಬೆಯಲ್ಲ. ಅದು ಲಕ್ಕುಂಡಿಯ ಸಾಸಿರ್ವ ಮಹಾಜನರು ಮುದದಿಂದ ಕೊಟ್ಟಿದ್ದು ..... ಈ ಪುನರ್ ನಾಮಕರಣವು ಜೈನ ದೇವಾಲಯಗಳ ಚರಿತ್ರೆಯಲ್ಲಿ ಒಂದು ಮಾದರಿಯಾಗಿ ಪರಿಣಮಿಸಿದ ಪ್ರಭಾವಶಾಲಿ ಘಟ್ಟ ಬಸದಿಗಳಿಗೆ ಬ್ರಹ್ಮ ಜಿನಾಲಯವೆಂದು ಹೊಸ ಹೆಸರಿಡುವ ಪದ್ಧತಿಗೆ ನಾಂದಿಯಾಯಿತು. ಅಲ್ಲದೇ ಈ ಮಾತಿಗೆ ಪುರಾವೆಯಾಗಿ ಶಿಕಾರಿಪುರ, ಪಾವಗಡ, ಶಿರಾ, ಸೇಡಂ, ಬೆಳವತ್ತಿ, ಬಾಡ್ಲಿ, ಬಾಗಳಿ ಶಾಸನಗಳ ಉಚಿತ ಮಾಹಿತಿಯನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ಜೈನರು ಸಹಿತ ಬ್ರಹ್ಮನ ಆರಾಧಕರಾಗಿವುದನ್ನು ಇಲ್ಲಿ ಗಮನಿಸಬೇಕು.

ಹೆಸರಿನ ಕುರಿತು ಏನೇ ವಾದ ಅಥವಾ ತರ್ಕಗಳಿರಲಿ, ಬ್ರಹ್ಮಜಿನಾಲಯ ಮಾತ್ರ ಅತ್ತಿಮಬ್ಬೆಯ ಕಾರ್ಯಕ್ಷಮತೆಯ ಜೀವಂತ ಉದಾಹರಣೆಯಾಗಿದೆ. ಲಕ್ಕುಂಡಿಯ ಸಾವಿರ ಮಹಾಜನರ ಸಾಕ್ಷಿಯಾಗಿ ಇಂತಹ ಗುರುತರವಾದ ಕಾರ್ಯಕ್ಕೆ ಕೈ ಹಾಕಿ, ವಾಸ್ತು ಶಿಲ್ಪಕ್ಕೆ ಆ ಕಾಲದಲ್ಲಿ ಒಂದು ಕೊಡುಗೆಯನ್ನು ಅತ್ತಿಮಬ್ಬೆ ನೀಡಿದ್ದಾಳೆ. ಈ ಬ್ರಹ್ಮ ಜಿನಾಲಯವು ಕಲ್ಯಾಣಿ ಚಾಲುಕ್ಯ ಶೈಲಿಯ ವಾಸ್ತು ಶಿಲ್ಪವಾಗಿದೆ. ಅಲ್ಲದೆ ಕರ್ನಾಟಕದ ಜೈನ ವಾಸ್ತುಶೈಲಿಯಲ್ಲಿ ಇರುವುದು ಕಂಡುಬಂದಿದೆ.

ಕಲ್ಯಾಣಿ ಚಾಲುಕ್ಯ ವಾಸ್ತುಶೈಲಿ, ಚೆನ್ನಾಗಿ ಕಟೆದು, ನುಣುಪು ಮಾಡಲಾಗಿರುವ ಕಪ್ಪು ಬಣ್ಣದ ಶಿಲೆಯ ಸ್ತಂಭಗಳು, ಸುಂದರವಾದ ಮೂರ್ತಿಗಳು ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸಗಳು ಬ್ರಹ್ಮ ಜಿನಾಲಯಗಳಲ್ಲಿ ಕಂಡುಬರುತ್ತವೆ.

ಬ್ರಹ್ಮಜಿನಾಲಯವು, ಲಕ್ಕುಂಡಿಯಲ್ಲಿ ದೊರಕಿರುವ ಅತ್ತಿಮಬ್ಬೆ ಕಟ್ಟಿಸಿದಳೆನ್ನಲಾದ ಜಿನಾಲಯಗಳಲ್ಲಿಯೇ ಅತ್ಯಂತ ವಿಶಾಲವಾದದ್ದಾಗಿದೆ ಹಾಗೂ ಸುಸ್ಥಿತಿಯಲ್ಲಿದೆ. ಈ ಜಿನಾಲಯದ ಎಡಬದಿಗೆ ಇನ್ನೊಂದು ಬಸದಿ ಇದೆ. ಈ ಬಸದಿಯ ಪಕ್ಕದಲ್ಲೇ ಮತ್ತೆರೆಡು ಬಸದಿಗಳು ಇದ್ದಿರುವುದಕ್ಕೆ ತುಂಡಾದ ಕಂಬಗಳು, ತೀರ್ಥಕರರ ತುಂಡಾದ ಪಾದಗಳು ಹೀಗೆ ಅವಶೇಷಗಳು ಕಂಡುಬರುತ್ತವೆ. ಅಂದರೆ ಈ ಬಸದಿಗಳು ಪೂರ್ಣ ನೆಲಸಮವಾಗಿವೆ. ಆದರೆ ಮಹಾದ್ವಾರವು ಇದ್ದು, ಅದು ಐದು ಬಸದಿಗಳಿಗೂ ಪ್ರವೇಶ ದ್ವಾರದಂತೆ ತೋರುತ್ತದೆ. ಅಂದರೆ ಇದು ಐದು ಬಸದಿಗಳ ಸಂಕೀರ್ಣ ಕಟ್ಟಡದಂತಿದೆ.

ಪೂರ್ವದಿಕ್ಕಿಗೆ ಮುಖಮಾಡಿದ ಬ್ರಹ್ಮ ಜಿನಾಲಯದ ತಳಪಾಯವು ಸಾದಾ ರೀತಿಯದ್ದಾಗಿದೆ. ಮೇಲೆ ಇರುವ ಕಂಬಗಳ ಅಂದರೆ ಮಹಾಮಂಟಪ ಮುಖಮಂಟಪದಲ್ಲಿರುವ ಕಂಬಗಳು ಕುಸುರಿ ಕೆತ್ತನೆಯನ್ನೊಳಗೊಂಡಿವೆ. ಮುಖಮಂಟಪದಲ್ಲಿ ೨೮ ಬೇರೆ, ಬೇರೆ ಬಗೆಯ ಕಂಬಗಳಿರುವುದು ತಿಳಿದು ಬರುತ್ತದೆ. ಕಂಬಗಳ ಮೂರು ನಾಲ್ಕು ಭಾಗಗಳನ್ನು ಪ್ರತ್ಯೇಕವಾಗಿ ಕೆತ್ತಿ ಅದನ್ನು ಒಂದರ ಮೇಲೊಂದು ಪೇರಿಸಿ ಇಟ್ಟಂತೆ ಕಾಣುವ ಈ ಕಂಬಗಳು ನಿಜಕ್ಕೂ ಅಚ್ಚರಿಯನ್ನು ಹುಟ್ಟಿಸುತ್ತವೆ. ಗರ್ಭಗುಡಿಯಲ್ಲಿ ತೀರ್ಥಂಕರನ ಮೂರ್ತಿ ಪ್ರತಿಷ್ಠಾಪಿಸಲ್ಪಟ್ಟಿದೆ. ಜಿನದೇವನ ಎರಡೂ ಬದಿಗೆ ಚವರಿ ಹಿಡಿದು ನಿಂತುಕೊಂಡ ಗಂಧರ್ವರಿದ್ದಾರೆ. ಅವರಿಬ್ಬರ ಒಂದು ಕೈಯ್ಯಲ್ಲಿ ಚವರಿಯಿದ್ದರೆ, ಮತ್ತೊಂದು ಕೈಯ್ಯಲ್ಲಿ ಮಾದಳ ಫಲವಿದೆ. ಗರ್ಭಗುಡಿಯ ಮೇಲೆ ಮತ್ತೊಂದು ಗರ್ಭಗುಡಿಯಿದ್ದು, ಅದನ್ನು ಶಿಖರದಲ್ಲೇ ಅಳವಡಿಸಲಾಗಿದೆ. ಗರ್ಭಗೃಹದ ದ್ವಾರಗಳು ಸುಂದರವಾಗಿ ಕೆತ್ತಲ್ಪಟ್ಟು, ಅತ್ಯಂತ ಆಕರ್ಷಕವಾಗಿವೆ. ನವರಂಗದಲ್ಲಿ ಒಂದು ಬದಿಗೆ ಚತುರ್ಮುಖಿ ಬ್ರಹ್ಮ ಹಾಗೂ ಮತ್ತೊಂದು ಬದಿಗೆ ಪದ್ಮಾವತಿಯ ವಿಗ್ರಹಗಳು ವಿರಾಜಮಾನವಾಗಿವೆ. ಸುಖನಾಶಿಯಲ್ಲಿ ಉತ್ಸವಮೂರ್ತಿಯಿದೆ. ಅದನ್ನು ಸ್ಥಳಿಕ ಅನಂತರಾಜ ಬಸ್ತಿಯವರು ಎಂಬ ಪೂಜೆಮಾಡುವ ಅರ್ಚಕರಾಗಿದ್ದಾರೆ. ಜಿನಮೂರ್ತಿಯನ್ನು ಸಹಿತ ಪೂಜಿಸುತ್ತಾರೆ. ಮತ್ತೆ ಯಾವುದೇ ಬಸದಿಗಳಲ್ಲಿ ಪೂಜೆಯ ಕಾರ್ಯವಿಲ್ಲ. ಅವು ಕೇವಲ ಪ್ರೇಕ್ಷಣೀಯ ಸ್ಥಳಗಳಾಗಿವೆ. ಸುಖನಾಶಿಯ ದ್ವಾರದ ಮೇಲೆ ಗಜಲಕ್ಷ್ಮಿ ಕೆತ್ತಲಾಗಿದೆ. ಸುಖನಾಶಿಯ ದ್ವಾರಕ್ಕೆ ಅಂಟಿಕೊಂಡಿರುವ ಗೋಡೆಯ ಕಂಬದ ಮೇಲೆ ಒಂದು ಶಾಸನವಿದೆ. ಆ ಶಾಸನದಲ್ಲಿ ಈ ವಿವರಗಳು ಕಂಡುಬರುತ್ತವೆ. ''ಬಲ್ಲೆಯ ಜೇಮಯ್ಯನ ಬಸದಿಯ ದೇವರಿಗೆ ಗುಣನಿಧಿ ಮತ್ತು ಆಣೆಕಾರ ನಾಗಶೆಟ್ಟಿ ಎಂಬುವನು ದಾನಕೊಟ್ಟ ವಿಷಯಗಳಿವೆ.[೪೨] ಜಿನಾಲಯದ ಹೊರಗಿನ ಗೋಡೆಗಳ ತುಂಬಾ ಕೆತ್ತನೆ ಕೆಲಸ ಅತ್ಯಂತ ಸುಂದರವೂ ಆಕರ್ಷಕವೂ ಆಗಿದೆ.

ಬ್ರಹ್ಮ ಜಿನಾಲಯದ ಪಕ್ಕದಲ್ಲಿ ಮತ್ತೊಂದು ಬಸದಿ ಇದೆ. ಆ ಬಸದಿಯ ಮುಂದೆ ರುಂಡವಿರದ ಪದ್ಮಾಸನದಲ್ಲಿರುವ ವಿಗ್ರಹವೊಂದಿದೆ. ಅತ್ತಿಮಬ್ಬೆಯು ಒಂದು ಸಾವಿರದ್ಯೆನೂರು ಬಸದಿಗಳನ್ನು ಕಟ್ಟಿಸಿದ್ದಾಳೆ. ಅಷ್ಟೇ ಸಂಖ್ಯೆಯಲ್ಲಿ ಮಣಿ ಖಚಿತ ಜಿನಪ್ರತಿಮೆಗಳನ್ನು ಮಾಡಿಸಿ ದಾನಗೈದಿರುವ ವಿಷಯವು ಶಾಸನೋಕ್ತವಾಗಿದೆಯಷ್ಟೆ.[೪೩] ಆದರೆ ೧೫೦೧ನೆಯ ಬ್ರಹ್ಮ ಜಿನಾಲಯವೊಂದೆ ಸುಸ್ಥಿತಿಯಲ್ಲಿದೆ. ಇಲ್ಲಿಯೇ

ಇನ್ನುಳಿದೆರಡು ಜಿನಾಲಯಗಳು ನೆಲಸಮವಾಗಿ ಅವಶೇಷಗಳನ್ನು ಮಾತ್ರ ಉಳಿಸಿಕೊಂಡಿದೆ. ಸಮುಚ್ಚಯ ಕಟ್ಟಡವಾಗಿರುವ ಇದು ದಾನಶಾಲೆಯನ್ನು ಒಳಗೊಂಡಿರುವುದನ್ನು ಅವಶೇಷಗಳಿಂದ ಗುರುತಿಸಬಹುದಾಗಿದೆ.

ನಾವು ಗುರುತಿಸಬಹುದಾದ ಅತ್ತಿಮಬ್ಬೆಯು ನಿಯೋಜಿಸಿಕೊಂಡಿರುವ ಕೊಡುಗೆಗಳೆಂದರೆ ಪೊನ್ನ ಕವಿಯ ಶಾಂತಿಪುರಾಣದ ಹಸ್ತಪ್ರತಿಯ ಮರುಲಿಪಿಕರಣ. ಒಂದು ಸಾವಿರದಾ ಐದನೂರಾ ಒಂದು ದೇವಾಲಯಗಳ ನಿರ್ಮಾಣ, ಒಂದು ಸಾವಿರದಾ ಐದನೂರು ಹೊನ್ನಿನ ಜಿನಬಿಂಬ, ಅಷ್ಟೇ ಸಂಖ್ಯೆ ಮಣಿಮಯ ಘಂಟೆಗಳ ದಾನ. ಅಂದರೆ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅತ್ತಿಮಬ್ಬೆಯು ವಾಸ್ತುಶಿಲ್ಪಕಲೆ ಹಾಗೂ ಶಿಲ್ಪಕಲೆಗಳೆರಡನ್ನೂ ಧಾರ್ಮಿಕ ಹಿನ್ನೆಲೆಯಲ್ಲಿ ಆಯೋಜಿಸಿಕೊಂಡಿದ್ದಾಳೆ. ಅವಳ ಕೊಡುಗೆಗಳು ಅಪೂರ್ವವಾದವುಗಳಾಗಿವೆ. ಆದುದರಿಂದಲೇ ರನ್ನಕವಿಯು

ನೆಗಳ್ದರ್ ದಾನದಿನೊರ್ವರರಿವಂ ತಾಳ್ದಿರ್ದ ಸಮ್ಯಕ್ತ್ವದಿಂ
ನೆಗಳ್ದರ್ ಧರ್ಮದ ಪೆರ್ಮೆಯಿಂ ಕೆಲ ಕೆಲರ್ ಶೀಲವ್ರತಾಚಾರದಿಂ
ನೆಗಳ್ದೈನೀನೆ ಜಗಕ್ಕೆ ದಾನಗುಣದಿಂ ಸಮ್ಯಕ್ತ್ವದಿಂ ಧರ್ಮದಿಂ
ಮಿಗೆ ಶೀಲವ್ರತದಿಂ ಸದಾಚರಣದಿಂ ಶ್ರೀ ದಾನ ಚಿಂತಾಮಣೀ.

ಎಂದು ಮನದುಂಬಿ ಹೇಳಿದ್ದಾನೆ.

ಅಡಿಟಪ್ಪಣಿ

೧. ಅಜಿತಪುರಾಣ ಸಂಗ್ರಹ
೨. ಅಜಿತಪುರಾಣ ಸಂಗ್ರಹ
೩. ಕರ್ನಾಟಕದ ಇತಿಹಾಸದ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ
೪. ಕರ್ನಾಟಕದ ಇತಿಹಾಸದ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ
೫. ಮಾರ್ಚ್ ೧೯೨೧, ೧೦, ೯೬೭ ಸಾಲು ೧೨೧ WG, ೧೯೮೪, Pp. ೪೨೮, ೪೪
೬. EC, Vol, V
೭. ಕರ್ನಾಟಕ ಇತಿಹಾಸ ದರ್ಶನ
೮. ಕರ್ನಾಟಕ ಇತಿಹಾಸ ದರ್ಶನ
೯. ಚಾವುಂಡರಾಯ ಪುರಾಣ
೧೦. JSI, No. ೪೬, A.D. ೯೬೪
೧೧. ಜೈನಧರ್ಮ, ಶ್ರೀ ಕೃಷ್ಣದತ್ತ ಭಟ್ಟ, ಪು. ೫
೧೨. ಕವಿವರ ಕಾಮಧೇನು, ಹಂಪನಾ, ಪು. ೪೮
೧೩. ಜೈನಧರ್ಮ, ಶ್ರೀ ಕೃಷ್ಣದತ್ತ ಭಟ್ಟ, ಪು. ೫೧
೧೪. ಅಜಿತಪುರಾಣ ಸಂಗ್ರಹ
೧೨ನೆಯ ಆಶ್ವಾಸ, ೧೬ನೆಯ ಪದ್ಯ
೧೫. SII, XI, i No. ೫೨, ೩೦, ೩೨ನೆಯ ಸಾಲು
೧೬. SII, XI, i No. ೫೨, ೫೨, ೫೩ನೆಯ ಸಾಲು
೧೭. ಅಜಿತಪುರಾಣ ಸಂಗ್ರಹ, ಸಂ, ಅ.ರಾ.ಮಿತ್ರ, ಎಂ.ಎಚ್ .ಕೃಷ್ಣಯ್ಯ, ೧ - ೩೪

೧೮. ಅಜಿತಪುರಾಣ ಸಂಗ್ರಹ, ೧ - ೨೮
೧೯. ಅಜಿತಪುರಾಣ, ೧ - ೭೭
೨೦. ..... ಆಹಾರಾಭೈಷಜ್ಯ ಶಾಸ್ತ್ರಾಭಿದಾನ ದಾನಪೂಜಾ ಶೀಳೋಪವಾಸಾದ್ಯಶೇಷಗುಣ ವಿಭಾಸುರತೆಯಿಂ ಗುಣದಂಕಕಾರ್ತ್ರಿಯುಂ, SII, XI, i No. ೫೨, ೪೮ನೆಯ ಸಾಲು
೨೧. ಶ್ರೀ ಮದಶೇಷ ಜೈನಸಮಯಯೈಕ ಶಿರೋಮಣಿ ಸರ್ವಜೀವರ
ಕ್ಷಾಮಣಿಯೆಂದು ಭವ್ಯತತಿ ಬಿಟ್ಟಳಿಸುತ್ತಿರೆ ಸಂದದಾನ ಚಿಂ
ತಾಮಣಿ ತನ್ನಗೊಂದು ಪಿತೃಭಕ್ತತೆಯಂಮೆಯಲ್ ಪುರಾಣ ಚೂ
ಡಾಮಣಿಯಂ ನಿಮಿರ್ಚಿದಳಿಳಾಗ್ರದೊಳಿಂತು ಜನಕ್ಕೆ ನೋಂತರಾರ್
ಎಸೆಯದೆ ಪೂರ್ದ ಕೆಟ್ಟಪುದು ಶಾಂತಿಪುರಾಣಮದಂ ನೆಗರ್ಚವೆಂ
ವಸುಧೆಯೊಳನ್ನ ತಂದೆಯ ಪರೋಕ್ಷದೆ ಒಂದು ಸಹಸ್ರ ಪುಸ್ತಕ
ಪ್ರಸರ ಮನತ್ತಿಮಬ್ಬೆ ಪರಮಾದಿದರದಿಂ ಬರೆಯಲ್ಕೆ ವೇರ್ದಿ ಪೆಂ
ಪಸದಳಮ ದ್ವಿತೀಯ ಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್.
೨೨. ಅಜಿತಪುರಾಣ, ೧ - ೫೭, ೧ - ೫೮, ೧ - ೫೯
೨೩. ಅಜಿತಪುರಾಣ, ೧೨ - ೧೨
೨೫. SII, IX, No. ೫೨
೨೬. ಅಜಿತಪುರಾಣ, ೧ - ೫೯
೨೭. ಅಜಿತಪುರಾಣ ಸಂಗ್ರಹ, ೧೨ - ೧೬
೨೮. ಶಾಸನ ಸಾಹಿತ್ಯ ಸಂಬಯ ೪೪, ಇಂಗಳಗಿ (ಕ್ರಿ.ಶ. ೧೧೯೪)
೨೯. SII, IX, ೫೨
೩೦. ಅಜಿತಪುರಾಣ
೩೧. ಪಿ.ಬಿ.ದೇಸಾಯಿ, ಕನ್ನಡ ನಾಡಿನ ಶಾಸನಗಳು
೩೨. ಕರ್ನಾಟಕ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಹಾಗೂ ಎಂ.ಕೇಶವಭಟ್ಟ, ಪು. ೧೧೨೫
೩೩. ಕರ್ನಾಟಕ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಹಾಗೂ ಎಂ.ಕೇಶವಭಟ್ಟ, ಪು. ೧೧೩೨
೩೪. ಕರ್ನಾಟಕ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಹಾಗೂ ಎಂ.ಕೇಶವಭಟ್ಟ, ಪು. ೧೧೩೫
೩೫. ಕರ್ನಾಟಕ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್ ಹಾಗೂ ಎಂ.ಕೇಶವಭಟ್ಟ, ಪು. ೧೧೩೯ ೩೬. ಇಟಗಿ ದೇವಾಲಯಗಳು, ಬಿ.ಸಿ.ಪಾಟೀಲ
೩೭. ಕರ್ನಾಟಕ ಇತಿಹಾಸ ದರ್ಶನ, ಎಂ.ವಿ.ಕೃಷ್ಣರಾವ್, ಎಂ.ಕೇಶವಭಟ್ಟ, ಪು. ೧೧೪೧
೩೮. ಆಯ್.ಎ.ನಂ. ೧೯, ಪು. ಮಹಾಕೂಟ (ತಾ) ಬದಾಮಿ, ಕ್ರಿ.ಶ. ೬೦೧
೩೯. SII, IX, ಲಕ್ಕುಂಡಿ, ೫೨
೪೦. ಲಕ್ಕುಂಡಿ ಕಲೆಯಬಲೆ, ಪ್ರೊ.ಎಂ.ಎಚ್.ಹರಿದಾಸ
೪೧. ಕವಿವರ ಕಾಮಧೇನು, ಡಾ.ಹಂಪನಾ, ಪು. ೩೩
೪೨. ಲಕ್ಕುಂಡಿ ಕಲೆಯಬಲೆ, ಪ್ರೊ.ಹರಿದಾಸಭಟ್ಟ, ಪು. ೪೩
೪೩. SII, No. ೫೨, ಲಕ್ಕುಂಡಿ
೪೪. ಅಜಿತಪುರಾಣ ಸಂಗ್ರಹ, ಆಶ್ವಾಸ ೧ - ೬೨ನೆಯ ಪದ್ಯ.

❑❑

೫

ಅತ್ತಿಮಬ್ಬೆ ಮತ್ತು ಸ್ತ್ರೀ ಚಿಂತನೆ

೨೫

ಅತ್ತಿಮಬ್ಬೆ ಮತ್ತು ಸ್ತ್ರೀ ಚಿಂತನೆ

ಹೆಣ್ಣು ಆಗೋದಕ್ಕಿಂತ ಮಣ್ಣು ಆಗೋದು ಲೇಸು
ಮಣ್ಣಿನ ಮ್ಯಾಲೆ ಮರವಾಗಿ ಇದ್ದರ
ದಾರಿ ಹೋಕರಿಗೆಲ್ಲಾ ನೆರಳಾಗಿ.

ಇದೊಂದು ಜಾನಪದ ತ್ರಿಪದಿ. ಪರಂಪರೆಯಿಂದ ಮಹಿಳೆ ಅನುಭವಿಸುತ್ತಿರುವ ನಾನಾ ಕಷ್ಟ, ದುಸ್ಥಿತಿ ಇಲ್ಲಿ ಧ್ವನಿತವಾಗಿದೆ. ತನ್ನ ಸಂಸಾರಕ್ಕೆ ಮಾತ್ರ ಸೀಮಿತವಾಗಿರುವ ಕಷ್ಟಗಳನ್ನು ಅನುಭವಿಸಿದ ಸ್ತ್ರೀಯೋರ್ವಳು ಮೇಲಿನಂತೆ ಮನಬಿಚ್ಚಿ ಹಾಡಿದ್ದಾಳೆ.

\ಅತ್ತಿಮಬ್ಬೆಯನ್ನು ನಾವು ಸ್ತ್ರೀವಾದಿಯೆಂದು ಕರೆಯುವುದು ಉಚಿತವೆ? ಎಂಬ ಪ್ರಶ್ನೆ ಮೊದಲಿಗೆ ನಮ್ಮನ್ನು ಕಾಡುತ್ತದೆ. ಯಾವ ಕಾರಣಕ್ಕೂ ಅವಳು ಪುರುಷರ ಜತೆ ಪೈಪೋಟಿಗೆ ಇಳಿದವಳಲ್ಲ. ಅದೇ ರೀತಿ ಪುರುಷರ ಜತೆ ಸಮಾನತೆಯನ್ನು ಕೇಳಿದವಳಲ್ಲ. ಸ್ತ್ರೀಗೂ ಒಂದು ವ್ಯಕ್ತಿತ್ವವಿದೆ. ಅವಕಾಶ ದೊರೆತರೆ ಅವಳು ಯಾವ ಪುರುಷನಿಗಿಂತ ಹಿಂದೆ ಬೀಳಲಾರಳು ಎಂಬ ಮಾತಿಗೆ ಅತ್ತಿಮಬ್ಬೆಯೇ ಸಾಕ್ಷಿಯಾಗಿದ್ದಾಳೆ. ತನ್ನ ಕಾಲದಲ್ಲಿದ್ದ ಪುರುಷ ಮಹಾದಾನಿಗಳಿಗಿಂತ ಇವಳು ಮುಂದೆ ಇದ್ದಾಳೆ. ಬೂತುಗ, ನೊಳಂಬಾಂತಕ, ಚಾವುಂಡರಾಯ, ಶಂಕರಗಂಡರಿಗಿಂತ ಅವಳು ದಾನಗುಣದಲ್ಲಿ ಹಿರಿಯಳೆನಿಸಿದ್ದಾಳೆ. ದಾನಗುಣವೊಂದೇ ಅತ್ತಿಮಬ್ಬೆಯ ಹೆಗ್ಗಳಿಕೆಯಲ್ಲ. ಅವಳು ಅಕ್ಷರ ಪಕ್ಷಪಾತಿ. ಆದುದರಿಂದಲೇ ಶಾಂತಿಪುರಾಣ ಕೃತಿಯ ಮರುಲಿಪಿಕರಣದಂತಹ ಉತ್ತಮ ಕಾರ್ಯವೆಸಗಿದ್ದಾಳೆ. ಅವಳದು ಮೇರುಸದೃಶ ವ್ಯಕ್ತಿತ್ವ. ಈ ಶತಮಾನದ ಸ್ತ್ರೀಯರು ಹೋರಾಟ ಮಾಡಿ ತನಗೆ ಬೇಕೆನ್ನುವ ಸ್ಥಾನ - ಮಾನಗಳನ್ನು ಅತ್ತಿಮಬ್ಬೆ ತನ್ನ ವ್ಯಕ್ತಿತ್ವ ಮಾತ್ರದಿಂದಲೇ ಪಡೆದುಕೊಂಡಿದ್ದಳು. ಅತ್ತಿಮಬ್ಬೆಗೂ ಸ್ತ್ರೀ ಚಿಂತನೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬಹುದು.

ಈ ಕಾರಣಗಳಿಂದಾಗಿ ಸಹಜವಾಗಿಯೇ ಇತಿಹಾಸದ ಪುಟಗಳನ್ನು ತೆರೆದುನೋಡಿದಾಗ ಭಾರತೀಯ ಪರಂಪರೆಯಲ್ಲಿ ಸ್ತ್ರೀತ್ವದ ಆದರ್ಶವು ಪುರಾಣದಲ್ಲಿರುವ ಅಹಲ್ಯೆ, ಸೀತೆ, ದ್ರೌಪದಿ, ತಾರಾ, ಮಂಡೋದರಿ ಮೊದಲಾದವರಿಂದ ಕಲ್ಪಿತಗೊಂಡು ಬಂದಿರುವಂತಹದು ಎಂದು ತಿಳಿದುಬರುತ್ತದೆ. ಅಲ್ಲದೆ ಗಂಡು - ಮಗುವಿನಿಂದಲೇ ಮುಕ್ತಿ ಎಂಬ ಬಲವಾದ ನಂಬುಗೆ ಇತ್ತು. ಸ್ತ್ರೀಯನ್ನು ಬಾಲಕಿಯಾಗಿರುವಾಗಲೇ ಪರಕೀಯಳು, ಇನ್ನೊಂದು ಮನೆಗೆ ಹೋಗುವವಳು ಎಂಬ ಭಾವನೆಯಿಂದ ಕಾಣಲಾಗುತ್ತಿತ್ತು. ಕೌಟುಂಬಿಕ ಸೀಮಿತ ವಲಯದಲ್ಲಿ ಬದುಕು ನಡೆಸುವ ಹೆಣ್ಣು ಬಯಸಿ ಪಡೆಯುವ ಮಗುವಾಗಿರಲಿಲ್ಲ. ಭಾರತೀಯ ಸಮುದಾಯಗಳಲ್ಲಿ ಹಾಸು ಹೊಕ್ಕಾಗಿರುವ ಈ ಭಾವನೆಗಳು ಕನ್ನಡಿಗರಲ್ಲಿಯೂ ಇದ್ದವು. ಆದರೆ ಅತ್ತಿಮಬ್ಬೆ ತನ್ನ ತವರುಮನೆ, ಗಂಡನಮನೆಯವರ ಸುಸಂಸ್ಕೃತ ವಿಚಾರಗಳನ್ನು ಯಾವಾಗಲೂ ಮುನ್ನಡೆಸಿಕೊಂಡು ಬಂದವಳು. ಅವಳು ಬೆಳೆದ ವಾತಾವರಣ ಪ್ರಗತಿಪರವಾಗಿತ್ತು. ಸ್ತ್ರೀಯು ಎಷ್ಟೇ ಪ್ರತಿಭಾವಂತಳಿರಲಿ, ಅಥವಾ ಅವಳಲ್ಲಿ ಪುರುಷನಷ್ಟೇ ಕಾರ್ಯಕ್ಷಮತೆ ಇದ್ದಾಗಲೂ ಆಕೆ ನಂಬಿಕೆಗೆ ಅನರ್ಹವಾಗುತ್ತಾಳೆ. ವಿದ್ಯಾಭ್ಯಾಸಕ್ಕೆ ಶೂದ್ರಳಾಗುತ್ತಾಳೆ. ಆದರೆ ಅತ್ತಿಮಬ್ಬೆಯು ತಾನು ಬದುಕಿರುವ ಕಾಲದಲ್ಲಿ, ಇವತ್ತಿನ ಸಮಾಜಕ್ಕೂ ಅಚ್ಚರಿ ಹುಟ್ಟಿಸುವ ಹಾಗೆ ವೈಧವ್ಯ ದೇವರು ಕೊಟ್ಟ ಶಾಪ, ವಿಧವೆ ಪರಮ ಪಾಪಿ, ಅಶುಭಸೂಚಕಿ ಎನ್ನುವ ಕೀಳುರಿಮೆಯಿಂದ ಪಾರಾಗಿ, ಕಟ್ಟುಪಾಡಿನ ನಾಲ್ಕು ಗೋಡೆಗಳ ಮಧ್ಯ ಜೀವನ ಸಾಗಿಸಬೇಕೆಂಬ ಹುರುಳಿಲ್ಲದ ವಿಚಾರಗಳ ಮೌಲ್ಯವನ್ನು ಬದಿಗೊತ್ತಿ ಸರಳ ಸಜ್ಜನಿಕೆಯ ಜೀವನವನ್ನು ನಡೆಸಿದಳು. ಅವಳು ಭಾರತೀಯ ಪರಂಪರೆಯನ್ನು ವಿರೋಧಿಸಲಿಲ್ಲ ಸ್ತ್ರೀ ಸಮಾನತೆಯನ್ನು ಕೇಳಲಿಲ್ಲ. ತನ್ನ ನಡೆ ನುಡಿಗಳಿಂದ ಸ್ತ್ರೀಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆ. ಅವಳು ಯಾವುದೇ ರೀತಿಯ ಸಾಧನೆಯನ್ನು ಮಾಡಬಲ್ಲಳು ಎಂಬುದನ್ನು ಅತ್ತಿಮಬ್ಬೆಯು ತೋರಿಸಿಕೊಟ್ಟಳು. ಅವಳದು ಪ್ರಗತಿಪರ ಧೋರಣೆಯಾಗಿತ್ತು. ಅವಳು ಈ ಧೋರಣೆಯನ್ನು ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಅಭ್ಯಸಿಸುವುದು ಈ ಅಧ್ಯಾಯದ ಆಶಯವಾಗಿದೆ.

ಭಾರತೀಯ ಸಂಸ್ಕೃತಿ ಕಂಡಿರುವಂತೆ ಸ್ತ್ರೀ ಎನ್ನುವುದ ಸೂತ್ರಿ, ಸೋತ್ರ ಎಂಬ ಧಾತುವಿನಿಂದ ಉಂಟಾಗಿರುವುದಾಗಿದೆ. ಆ ಧಾತು ಹೆರುವ ಪ್ರಾಣಿ ಎಂಬ ಅರ್ಥವನ್ನು ಒಳಗೊಂಡಿದೆ. ಹಾಗೂ "ಸ್ತ್ರೀ" ಎನ್ನುವ ಶಬ್ದಕ್ಕೆ ಗರ್ಭಕೋಶ, ಹೆರುವವಳು ಎನ್ನುವ ಅರ್ಥಗಳು ಇವೆ.[೧]

ಮಹಿಳೆ ಎನ್ನುವುದು ಸ್ತ್ರೀ ಶಬ್ದಕ್ಕೆ ಸಮಾನಾರ್ಥಕ ಪದವಾಗಿದೆ. ಮಹಿಳೆ ಎಂಬ ಶಬ್ದದಲ್ಲಿಯೂ ಮಹಾ + ಇಳೆ ಎಂಬೆರಡು ಶಬ್ದಗಳಿದ್ದು ಇಳೆಗೆ ಭೂಮಿ ಎನ್ನುವ ಅರ್ಥವಿದೆಯಾದರೂ ಫಲದತೆ (ಹೆರುವವಳು) ಎನ್ನುವುದೇ ಸೂಚಿತವಾಗುತ್ತದೆ.

ಸ್ತ್ರೀ ಮತ್ತು ಪುರುಷರಲ್ಲಿ ವ್ಯತ್ಯಾಸವನ್ನು ಗುರುತಿಸುವುದು ದೇಹರಚನೆಯಿಂದ. ವಯಸ್ಕರಾಗುವವರೆಗೆ ಸ್ತ್ರೀ - ಪುರುಷರಿಬ್ಬರೂ ಸಮಾನವಾಗಿ ಬೆಳೆದರೂ ನಂತರದ ಕಾಲದಲ್ಲಿ ನೈಸರ್ಗಿಕವಾಗಿ ಅವರಲ್ಲಿ ವ್ಯತ್ಯಾಸಗಳು

ಕಂಡುಬರುತ್ತದೆ. ಜೈವಿಕ ಶಾಸ್ತ್ರವೂ ಈ ವ್ಯತ್ಯಾಸವನ್ನು ಪರಿಗಣಿಸುತ್ತದೆಯಾದರೂ ಎಂದೂ ಸ್ತ್ರೀಯರನ್ನು ಅಸಮಾನತೆಯಿಂದ ಕಂಡಿಲ್ಲ. "ಸ್ತ್ರೀ ಹೆರುವವಳು ಸಂತಾನವನ್ನು ಗರ್ಭದಲ್ಲಿಟ್ಟುಕೊಂಡು ಪೋಷಿಸುವ ಅವಳ ಪಾತ್ರ ಅಗಣ್ಯ" ಎಂಬಂತಹ ತೀರಾ ಸಾಮಾನ್ಯವೆನಿಸುವ ಅಭಿಪ್ರಾಯಗಳನ್ನು ಇಂದಿನ ವೈಜ್ಞಾನಿಕಯುಗದ ಸಂಶೋಧನೆಗಳು ತಿರಸ್ಕರಿಸಲ್ಪಟ್ಟಿವೆ. Mendel ಎಂಬ ಜೀವ ವಿಜ್ಞಾನಿಯು[೧೮] ಸಂಶೋಧಿಸಿ ಸಾಬೀತುಪಡಿಸಿರುವಂತೆ ಆನುವಂಶಿಕದ ಗುಣ ಲಕ್ಷಣಗಳನ್ನು ಮುಂದಿನ ಪೀಳಿಗೆಗೆ ರವಾನಿಸುವಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನ ಪಾತ್ರವನ್ನು ವಹಿಸುತ್ತಾರೆ. ಆದರೂ ನೈಸರ್ಗಿಕವಾಗಿ ಸ್ತ್ರೀಯು ಮಾಸಿಕ ಋತುಸ್ರಾವ, ಗರ್ಭಧರಿಸುವಿಕೆ, ಹೆರಿಗೆಬೇನೆ, ಹರಿಗೆ ಇಂತಹ ಸಂಕಟಗಳನ್ನು ಎದುರಿಸಲೇಬೇಕಾಗುತ್ತದೆ. ಸೃಷ್ಟಿಯಲ್ಲಿ ಸ್ತ್ರಿ ಪುರುಷರಿಬ್ಬರೂ ಸಮಾನ ಪಾತ್ರವಹಿಸಿದರೂ ಪುರುಷನಷ್ಟು ಸ್ತ್ರೀ ನಿರಾತಂಕವಾಗಿರುವುದಿಲ್ಲ. ನಿಸರ್ಗ ಸ್ತ್ರೀಗೆ ಸಾಕಷ್ಟು ಅನ್ಯಾಯ ಮಾಡಿದೆ. ಅಥವಾ ಸ್ತ್ರೀ ನಿಸರ್ಗಶಪಿತಳೆಂದರೂ ತಪ್ಪಾಗಲಾರದು. ಯಾಕೆಂದರೆ ಅತ್ಯಂತ ಶ್ರಮದ ಕೆಲಸವನ್ನು ಸ್ತ್ರೀ ಪುರುಷನಷ್ಟು ಸಮರ್ಥವಾಗಿ ಮಾಡಲಾರಳು. ತೀರಾ ವೇಗದ ನಡಿಗೆ, ಅತಿಯಾದ ಭಾರ ವಸ್ತುವಿನ ಎತ್ತುವಿಕೆ, ಮಾನಸಿಕ ಸಂಕಲ್ಪಶಕ್ತಿ ಇವು ಯಾವುವು ಪುರುಷನಿಗಿರುವಷ್ಟು ಸ್ತ್ರೀಗಿಲ್ಲ. ಈ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಪ್ರಖ್ಯಾತಿವೆತ್ತ ಸ್ತ್ರೀ ಚಿಂತಕಿ ಸಿ.ಮೋನ್‌ದ ಬೋವಾ ಅವರ ವಿಚಾರಗಳು ಗಮನೀಯವಾಗಿವೆ. "ಪುರುಷ ತನ್ನನ್ನು ತಾನು ಮಾನವನೆಂದು ಗುರುತಿಸಿಕೊಳ್ಳುತ್ತಾನೆ. ಆದರೆ ಸ್ತ್ರೀಯು ತಾನು 'ಹೆಣ್ಣು' ಎಂದು ಹೇಳಿ ಮುಂದುವರಿಯ ಬೇಕಾಗುತ್ತದೆ. ತೀರಾ ಆರಂಭ ಕಾಲದ ಗಣಿತ ಶಾಸ್ತ್ರಜ್ಞರು ಪ್ರಪ್ರಥಮವಾಗಿ ಒಂದು ಲಂಬರೇಖೆಯನ್ನು ಸ್ಥಾಪಿಸಿ ನಂತರ ಅದಕ್ಕೆ ಸಂಬಂಧಪಟ್ಟ ಬೇರೆ ಬೇರೆ ರೇಖೆಗಳನ್ನು ಗುರುತಿಸುತ್ತಿರುವಂತೆ ಪುರುಷನನ್ನು ಮಾತ್ರವೇ ಮಾನವತೆಯ ಪರಿಪೂರ್ಣವಾದ ಪ್ರತೀಕವೆಂದು ಸಮ್ಮತಿಸಿ, ಆ ಪುರುಷ ತತ್ವದ ಆಧಾರದ ಮೇಲೆ ಸ್ತ್ರೀ ತನ್ನನ್ನು ತಾನು ಗುರುತಿಸಬೇಕಾಗಿದೆ"[೨] ಎಂದು ಹೇಳಿದ್ದಾರೆ.

ಜಗತ್ತಿನ ಚರಿತ್ರೆಯ ಪುಟಗಳನ್ನು ತೆರೆದುನೋಡಿದಾಗ 'ಸ್ತ್ರೀ'ಯ ದಯನೀಯವಾದ ಪರಾಧೀನ ಪರಿಸ್ಥಿತಿಯನ್ನು - ದೈವಸಹಜವಾದದ್ದೆಂದು ಮತ್ತು ಮಾನವ ಸಮಾಜ ಅದನ್ನು ಒಪ್ಪಿಕೊಳ್ಳಲೇಬೇಕೆಂದು ಶಾಸಕರು, ಪುರೋಹಿತರು, ತತ್ವಜ್ಞಾನಿಗಳು, ಚಿಂತಕರು, ಸಾಹಿತಿಗಳು ಪ್ರಯತ್ನ ಪಟ್ಟಿರುವುದು ತಿಳಿದುಬರುತ್ತದೆ.

"ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು. ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ" - ಯುರೋಪಿನ ಧರ್ಮಬೋಧಕ.

"ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು" - ಚೀನಿಯ ಗಾದೆ.

"ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು, ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು, ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ ಅವರ ಮುಕ್ತಿಗೆ ಉಪಾಯವೇ ಇಲ್ಲ" - ಸೇಂಟ್ ಪಾಲ್

"ಸ್ತ್ರೀ ಕಿರುಬನ ಹೃದಯದವಳು" - ಋಗ್ವೇದ

"ಅವಳು ಎಲ್ಲ ಕೆಡುಕಿನ ಮೂಲ" - ಮಹಾಭಾರತ

"ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು, ಬಿರುಗಾಳಿಯಂತೆ ಅಸ್ಥಿರಳು" - ರಾಮಾಯಣ

"ಸ್ತ್ರೀ ಒಂದು ವಸ್ತು ಪದಾರ್ಥ" - ಶಾಕ್ತ[೩]

"ಅಶುಭದ್ವೇಷಿಣ: ಸ್ತ್ರೀಷು ನವಿಶ್ವಸೇತ್ " - ಕೌಟಿಲ್ಯ[೪]

ಗ್ರೀಕ್ ದಾರ್ಶನಿಕ ಅರಿಸ್ಟಾಟಲ್‌ನು "ಹೆಣ್ಣು ತನ್ನಲ್ಲಿರುವ ಕೊರತೆಗಳಿಂದಾಗಿ ಹೆಣ್ಣಾಗಿದ್ದಾಳೆ ಮತ್ತು ಹೆಣ್ಣಿನ ಸ್ವಭಾವವು ಕೆಲವು ನಿಸರ್ಗದತ್ತ ಮಿತಿಗಳಿಂದ ರೂಪಿಸಲ್ಪಟ್ಟಿದೆ"[೫] ಎಂದಿದ್ದಾನೆ.

ಚಾರಿತ್ರಿಕ ದೃಷ್ಟಿಕೋನದಿಂದ ನೋಡಿದಾಗಲೂ ಸ್ತ್ರೀಯು ಸ್ವಾತಂತ್ರವನ್ನು ಕಳೆದುಕೊಂಡಿರುವ ವಿಷಯ "ತಂತ್ರಜ್ಞಾನ ನೂತನ ಆವಿಷ್ಕಾರದ ಇತಿಹಾಸ"ವನ್ನು ಅವಲಂಬಿಸಿದೆ.[೬] ಮಾನವನ ಇತಿಹಾಸವನ್ನು ಗಮನಿಸಿದಾಗ ಶಿಲಾಯುಗದಲ್ಲಿ ಭುಮಿಯ ಯಜಮಾನಿಕೆ ಎಲ್ಲರಿಗೂ ಸೇರಿತ್ತು. ಆ ಭೂಮಿಯಲ್ಲಿ ಸ್ತೀ ಪುರುಷರಿಬ್ಬರೂ ಸಮಾನವಾಗಿ ಕಾರ್ಯ ಕೆಲಸಗಳ ವಿಭಜನೆಯನ್ನು ಮಾಡಿಕೊಂಡು ಇಬ್ಬರೂ ಸಮಾನರಾಗಿದ್ದರು. ಭೂಮಿಯನ್ನು ಗೇಯುವ, ಕಾಡಿನಲ್ಲಿ ಬೇಟೆಯಾಡುವ ಕೆಲಸವನ್ನು ಪುರುಷನು ನಿರ್ವಹಿಸಿದರೆ, ಸ್ತ್ರೀಯು ಮನೆಯೊಳಗಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದಳು. ಶಿಲಾಯುಗದ ನಂತರ ಕಬ್ಬಿಣದ ಬಳಕೆ ಆರಂಭವಾಗುತ್ತಲೇ ಕೃಷಿಯ ಬದುಕು ಬಳಕೆ ವ್ಯಾಪಕತ್ವ ಪಡೆದುಕೊಂಡ ಮೇಲೆ ಕೃಷಿ ಕೆಲಸದಲ್ಲಿ ಸಹಾಯ ಮಾಡಲು ಹೆಚ್ಚು ಹೆಚ್ಚು ಜನರ ದುಡಿಮೆ ಅವಶ್ಯಕವಾಗತೊಡಗಿತು. ಆಗ ವೈಯಕ್ತಿಕ ಆಸ್ತಿ ಪಾಸ್ತಿಯ ಕಲ್ಪನೆಯು ಆರಂಭವಾಗಿ ಬರುಬರುತ್ತಾ ನಿಧಾನವಾಗಿ ಪುರುಷನು ಭೂಮಿಗೂ ಯಜಮಾನನಾದಂತೆ, ಸ್ತ್ರೀಗೂ ಯಜಮಾನನಾದನು. ಸಹಾಯಕ ಕೆಲಸಗಾರರು ಹಾಗೂ ಹೊಸ ಹೊಸ ಉತ್ಪಾದನಾ ಸಾಧನ ಸಲಕರಣೆಗಳ ಸಹಾಯದಿಂದ ಪುರುಷ ಹೆಚ್ಚು ಹೆಚ್ಚು ಉತ್ಪಾದನೆಯಲ್ಲಿ ತೊಡಗಿದನು. ಆದರೆ ಸ್ತ್ರೀಯು ಮನೆಯೊಳಗಣ ಕೆಲಸ ಕಾರ್ಯವು ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲಿಲ್ಲ. ಹಾಗೆಯೇ ಸ್ತ್ರೀಯ ಹಕ್ಕು ತಂದೆಯ ಹಕ್ಕಾಗಿ ಪರಿವರ್ತನೆಗೊಂಡು ತಂದೆಯಿಂದ ಮಗನಿಗೆ ಮಾತ್ರವೇ ವರ್ಗಾವಣೆಯಾಗುವ ವ್ಯವಸ್ಥೆ ಹುಟ್ಟಿಕೊಂಡಿತು. ಇದನ್ನೇ ಸಮಾಜಶಾಸ್ತ್ರಜ್ಞರು ಪಿತೃಪ್ರಧಾನ ಕುಟುಂಬವೆಂದು ಕರೆದಿದ್ದಾರೆ. ಈ ಪಿತೃಪ್ರಧಾನ ವ್ಯವಸ್ಥೆಯ ಪರಿಣಾಮವಾಗಿ ಸ್ತ್ರೀ ತನ್ನೆಲ್ಲ ಸ್ವಾತಂತ್ರ್ಯವನ್ನು ಕಳೆದುಕೊಂಡಳು.

ಅ. ಸ್ತ್ರೀ ಚಿಂತನೆಯ ಇತಿಹಾಸ

ಸ್ತ್ರೀ ಚಿಂತನೆ, ಸ್ತ್ರೀವಾದ ಎನ್ನುವುದು Feminisim (ಫೆಮಿನಿಸಂ) ಎಂಬ ಆಂಗ್ಲ ಪದಕ್ಕೆ ಸಂವಾದಿ ಪದವಾಗಿದೆ. ಸ್ತ್ರೀ ಚಿಂತನೆ ಒಂದು ಸಿದ್ಧಾಂತ. ಸ್ತ್ರೀ ಮತ್ತು ಪುರುಷರ ನಡುವಿನ ಅಸಮಾನತೆಯನ್ನು ಪ್ರಶ್ನಿಸುತ್ತದೆ

ಮತ್ತು ಪರಂಪರಾಗತ ಪ್ರಚಲಿತ ಪರಿಸ್ಥಿತಿಯನ್ನು ಸೃಷ್ಟೀಕರಿಸಿ ಸ್ತ್ರೀಯರಿಗಿರುವ ಹಕ್ಕು ಅಧಿಕಾರಕ್ಕೆ ಬರುವಂತೆ ಒತ್ತಾಯಿಸುತ್ತದೆ. ಅದು ಯಾವುದೇ ಕ್ಷೇತ್ರವಾಗಿರಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಕೌಟುಂಬಿಕ, ಆಡಳಿತಾತ್ಮಕ, ಸಾಂಸ್ಕೃತಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀ ಪುರುಷರಿಬ್ಬರನ್ನು ಸಮಾನವಾಗಿ ಕಾಣಬಹುದಾದ ಒಂದು ದೃಷ್ಟಿಕೋನಕ್ಕಾಗಿ ನಡೆಸುವ ಹೋರಾಟವೇ ಸ್ತ್ರೀ ಚಿಂತನೆಯ ಬಹುಮುಖ್ಯ ಆಶಯಗಳಲ್ಲೊಂದು. ಮೂಲಭೂತವಾಗಿ ಸಮಾಜದಲ್ಲಿ ನಡೆದಿರಬಹುದಾದ ಸ್ತ್ರೀ ಶೋಷಣೆ, ಸ್ತ್ರೀ ದಮನಕಾರಿ ವ್ಯವಸ್ಥೆಯ ಕುರಿತು ಪ್ರಾಮಾಣಿಕವಾದ ಪ್ರಜ್ಞಾಪೂರ್ವಕವಾದ ಕಳಕಳಿಯ ಎಚ್ಚರಿಕೆಯಾಗಿದೆ. ಲಿಂಗ ತಾರತಮ್ಯದ ಈ ಅಸಹಜ ಅಸಮಾನತೆಯನ್ನು ಹೊಸ ತಿಳುವಳಿಕೆಯಿಂದ ಅರ್ಥೈಸಿಕೊಂಡು, ಪ್ರಶ್ನಿಸಿ, ಉತ್ತರ ಕಂಡುಕೊಳ್ಳಲು ನಡೆಸುವ ಚಿಂತನೆಯೇ ಸ್ತ್ರೀವಾದಕ್ಕೆ ಅತ್ಯಂತ ಮಹತ್ವದ್ದು. ಪುರುಷ ಮೇಲು, ಸ್ತ್ರೀ ಕೀಳು, ಪುರುಷನ ಸಾಧನೆಗೆ ಅವಳು ಅಡ್ಡಿ, ಸ್ತ್ರೀ ಮಾಯೆ, ಮೋಹ ಎಂಬಂತಹ ಪಟ್ಟಭದ್ರ ಆಲೋಚನೆ, ಅಭಿಪ್ರಾಯಗಳ ಸಂಕೋಲೆಗಳೊಳಗಿಂದ ಮುಕ್ತವಾಗಲು ಸ್ತ್ರೀ ಚಿಂತನೆ ಒಂದು ಕಾರ್ಯತಂತ್ರವಾಗಿದೆ.] ಸ್ತ್ರೀ ಚಿಂತನೆಯ ಅರ್ಥವನ್ನು ಹೀಗೆ ಸಂಗ್ರಹಿಸಬಹುದು.

ಇದುವರೆಗಿನ "ಸ್ತ್ರೀ"ಯ ಬಗ್ಗೆ ಇರುವ ಅಭಿಪ್ರಾಯವನ್ನು ಮತ್ತೊಮ್ಮೆ ಮೌಲ್ಯೀಕರಿಸುವ ಅತ್ಯಂತ ಯೋಗ್ಯವಾದ ಪ್ರಯತ್ನವೇ ಸ್ತ್ರೀ ಚಿಂತನೆ. ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯೊಳಗಣ ಸ್ತ್ರೀ ಶೋಷಣೆ ಪರತೆಯನ್ನು ಪ್ರತಿಭಟಿಸಿ ತನ್ನ ವ್ಯಕ್ತಿತ್ವದ ನಿಜರೂಪವನ್ನು ಪ್ರತಿಯೊಬ್ಬ ಸ್ತ್ರೀಗೆ ಅರ್ಥೈಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಸ್ತ್ರೀ ಚಿಂತನೆ ಮಾಡುತ್ತದೆ. ಸ್ತ್ರೀ ಚಿಂತನೆಯೆಂದರೆ ಸ್ತ್ರೀವಾದವು ಎಂದೂ ಅರ್ಥೈಸಬಹುದಾಗಿದೆ. ಸ್ತ್ರೀ ಚಿಂತನೆಯ ಅರ್ಥವನ್ನು ಈ ವ್ಯಾಖ್ಯಾನವು ಹೇಳುತ್ತದೆ "ಸ್ತ್ರೀವಾದ ಮಾನವತಾವಾದದ ಒಂದು ಭಾಗವೇ ಆಗಿದೆ. ಮತ್ತೊಬ್ಬ ವ್ಯಕ್ತಿಯ ಘನತೆ, ಅಂತಸ್ಸತ್ವ, ಸ್ವಾತಂತ್ರ್ಯವನ್ನು ತಕ್ಕ ವಿಶ್ವಾಸ ಗೌರವದಿಂದ ಮಾನ್ಯ ಮಾಡಬೇಕೆಂಬುದೇ ಆ ವಾದದ ಒಳ ತಿರುಳೂ ಆಗಿದೆ."

ಸ್ತ್ರೀ ಚಿಂತನೆಗೆ ಸುಮಾರು ೨ ಶತಮಾನಗಳಷ್ಟು ರೋಚಕ ಇತಿಹಾಸವಿದೆ. ಇದು ಆಧುನಿಕ ಕಾಲದಲ್ಲಿ ಮಹಿಳಾ ವಿಮೋಚನೆಗೋಸ್ಕರ ಒಮ್ಮಿಂದೊಮ್ಮೆಲೇ ಹುಟ್ಟಿಕೊಂಡದ್ದಲ್ಲ. ಪಾಶ್ಚಾತ್ಯರಲ್ಲಿ ನಡೆದಿರುವ ಕೈಗಾರಿಕಾ ವಿಚಾರ ಕ್ರಾಂತಿಗಳ ಫಲವಾಗಿ ಬಂಡವಾಳಷಾಹಿ ಎಂದೆನ್ನಬಹುದಾದ ಪರಂಪರೆಯೊಂದು ಪ್ರಾರಂಭವಾಯಿತು. ಈ ಕಾಲಘಟ್ಟದಲ್ಲಿ ಸ್ತ್ರೀಯರು ಅನಿವಾರ್ಯವಾಗಿ ಅಡುಗೆಮನೆಯಿಂದ ಹೊರಗಿನ ಪ್ರಪಂಚಕ್ಕೆ ಬರಬೇಕಾಯಿತು. ಈ ಸಂದರ್ಭದಲ್ಲಿ ಸ್ತ್ರೀಯರು ಮನೆ ಒಳಗೆ ಹೊರಗಿನ ಕೆಲಸದಿಂದಾಗಿ ತೀವ್ರವಾದ ಒತ್ತಡ ತುಳಿತಕ್ಕೆ ತುತ್ತಾದರು. ಜತೆಜತೆಗೆ ಆರ್ಥಿಕ ಸ್ವಾವಲಂಬಿಗಳಾಗುವ ಅವಕಾಶ ದೊರೆಯಿತಾದರೂ, ಈ ಅವಕಾಶ ಸಂಪೂರ್ಣವಾಗಿ ದೊರೆಯಲಿಲ್ಲ. ಸ್ತ್ರೀಯರಿಗೆ ಇರುವ ನಿಗದಿತ ಅವಕಾಶಗಳಿಂದಾಗಿ ಪುರುಷರಿಗೋಸ್ಕರವೇ ಇದ್ದ ದುಡಿಮೆಗಳು ಸ್ತ್ರೀಯರಿಗೆ ಕೊಡಲ್ಪಡಲಿಲ್ಲ. ಹೀಗಾಗಿ ಸ್ತ್ರೀ ಸಂಪೂರ್ಣ ಆರ್ಥಿಕ ಸ್ವಾವಲಂಬಿಯಾಗಲಿಲ್ಲ.

ಒಂದಿಲ್ಲ ಒಂದು ಬಗೆಯಲ್ಲಿ ಪುರುಷರ ಸಹಾಯ ಸಹಕಾರಗಳನ್ನು ಸ್ತ್ರೀ ಕೇಳಲೇಬೇಕಾಯಿತು. ಇದೇ ಸಮಯದಲ್ಲಿ ಪ್ರಚಲಿತಕ್ಕೆ ಬಂದ ರಾಜಕೀಯ ಆದರ್ಶಗಳೂ ಸ್ತ್ರೀಪರ ಯೋಚನೆಗಳು ಸ್ತ್ರೀ ಚಿಂತನೆಯು ಹುಟ್ಟಿಕೊಳ್ಳಲು ಕಾರಣಗಳಾದವು.

೧೮ನೆಯ ಶತಮಾನವು ಹಲವಾರು ಬಗೆಯ ಪ್ರತಿಭಟನೆಯ ಕಾಲವಾಗಿದ್ದಿತು. ಆಳುವ ಅರಸರ, ಹಣವಂತರ, ಆಡಳಿತಾಧಿಕಾರಿಗಳ ಅನ್ಯಾಯ, ಅಕ್ರಮ, ಕ್ರೌರ್ಯದ ವಿರುದ್ಧ ಜನರು ಪ್ರತಿಭಟನೆಯನ್ನು ಮಾಡುತ್ತಿದ್ದ ಕಾಲವಾಗಿತ್ತು. ಅವರ ಅನ್ಯಾಯ, ಕ್ರೌರ್ಯವನ್ನು ಜನರು ಪ್ರಶ್ನೆ ಮಾಡಬಲ್ಲವರಾಗಿದ್ದರು. ಅಹಿತವಾದದ್ದು ಏನಾದರೂ ಇದ್ದರೆ ತಿರಸ್ಕಾರವನ್ನು ಮಾಡುತ್ತಿದ್ದರು. ಐರೋಪ್ಯ ದೇಶಗಳಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಗಳ ಆಶಯವಾಗಿರುವ ಔದಾರ್ಯ ಸಮಾನತೆಗಳೇ ಸ್ತ್ರೀ ಚಿಂತನ ಹುಟ್ಟಿಕೊಳ್ಳುವುದಕ್ಕೆ ಮುಖ್ಯ ಕಾರಣಗಳಾಗಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ ಹಕ್ಕುಗಳಿಗಾಗಿ ಪುರುಷರು ಹೋರಾಡುತ್ತಲೇ ಬಂದಿದ್ದಾರೆ. ಪ್ರತಿಯೊಂದು ವಿಷಯದಲ್ಲಿ ಸಮಾನತೆಯ ತತ್ವಗಳು ತಮ್ಮ ಮೊದಲು ಅವಶ್ಯಕತೆಗಳೆಂದು ಪುರುಷರು ಭಾವಿಸಿದರು. ಹೀಗೆ ಬರುಬರುತ್ತಾ ''ಮಾನವಹಕ್ಕು'' ಎನ್ನುವುದು ಒಂದು ರಾಜಕೀಯ ಅತ್ಯಂತ ಅವಶ್ಯಕ ಪರಿಕಲ್ಪನೆಯಾಗಿ ರೂಢಿಗತವಾಗತೊಡಗಿತು. ದುರಂತವೆಂದರೆ, ಈ ಹಕ್ಕುಗಳಲ್ಲಿ ಸ್ತ್ರೀ ಹೊರತಾಗಿದ್ದಳು. ವೈಚಾರಿಕ ನೆಲೆಯಲ್ಲಿ ಸ್ತ್ರೀ ಹೇಗೆ ಶೂದ್ರಳೋ ಅದೇ ರೀತಿಯಲ್ಲಿ ಮಹಿಳೆಯು ಮಾನವ ಹಕ್ಕುಗಳನ್ನು ಪಡೆದುಕೊಳ್ಳಲು ಅಸಮರ್ಥಳು ಎಂಬ ತಪ್ಪು ಕಲ್ಪನೆ ಗಾಢವಾಗಿತ್ತು. ಈ ಅಭಿಪ್ರಾಯ ಸರಿಯಲ್ಲವೆಂಬುದು ಮತ್ತು ಇಂತಹ ವ್ಯವಸ್ಥೆಯನ್ನು ಸರಿಪಡಿಸುವ ಆಶಯವನ್ನು ಸ್ತ್ರೀ ಚಿಂತನೆಯು ಹೊಂದಿರುತ್ತದೆ.

ಧಾರ್ಮಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯ ಗುಣಧರ್ಮಗಳನ್ನೇ ಸ್ತ್ರೀ ಪುರುಷರಿರ್ವರಿಗೂ ಬೇರೆ ಬೇರೆಯಾಗಿ ವಿಂಗಡಿಸಿದ್ದನ್ನು ಕಾಣುತ್ತೇವೆ. ಸೂಕ್ಷ್ಮತೆ, ದುರ್ಬಲತೆ, ಭಯ, ಸಂಕೋಚ ಮೊದಲಾದವುಗಳು ಸ್ತ್ರೀಯರ ಗುಣಗಳಾದರೆ ಸಾಹಸ, ಸಬಲತೆ, ಧೈರ್ಯ, ವೈಚಾರಿಕತೆ ಮೊದಲಾದವುಗಳು ಗಂಡಸಿನ ಸ್ವಭಾವಗಳೆಂದು ಪರಿಗಣಿಸಲಾಗುತ್ತದೆ. ಈ ತೆರನಾದ ಗುಣಗಳು ಇಬ್ಬರಲ್ಲಿಯೂ ಇರಬಹುದು. ಈ ಗುಣಧರ್ಮಗಳು ಅವರು ಬೆಳದಿರಬಹುದಾದ ಕುಟುಂಬದ ಪರಿಸರ, ಕೌಟುಂಬಿಕ ವ್ಯಕ್ತಿಗಳ ಪ್ರಭಾವದಿಂದಾಗಿ ರೂಪುಗೊಳ್ಳುತ್ತವೆ. ಆದುದರಿಂದ ಸ್ತ್ರೀ ಪುರುಷರಿಬ್ಬರೂ ಸಮಾನ ಎಂಬ ನಿಲುವನ್ನು ಚಿಂತನೆಯು ಹೊಂದಿರುತ್ತದೆ. ಹೀಗೆ ವೈಚಾರಿಕವಾಗಿ ಸಿದ್ಧವಾಗಿರುವ ಈ ಸಮಾನತೆಯ ಸಿದ್ಧಾಂತವನ್ನು ಪ್ರಕಟಪಡಿಸಿದ ಜಗತ್ತಿನ ಆರಂಭದ ಸ್ತ್ರೀ ಚಿಂತಕಿಯರೆಂದರೆ ಮೇರಿವುಲ್ ಸ್ಟನ್ ಕ್ರಾಪ್ಟ್, ವರ್ಜಿನಿಯಾ ವೂಲ್ಫ್, ಸಿಮೋನ್‌ದ ಬೋವಾ, ಬೆಟ್ಟಿಫ್ರಿಡನ್, ಮೇರಿ ಎಲ್ಮನ್, ಶುಲಾಮತ್, ಫೈರ್ ಸ್ಟೋನ್, ಕೇಟ್ ಮಿಲೆಟ್ ಇವರುಗಳು ಜಗತ್ತಿನ ಇತಿಹಾಸದಲ್ಲಿ ಪ್ರಥಮ ಸ್ತ್ರೀ ಚಿಂತಕಿಯರಾಗಿದ್ದಾರೆ. ಸ್ತ್ರೀ ಚಿಂತನೆ ಮೊದಲು ಆರಂಭವಾದದ್ದು ಯುರೋಪ ರಾಷ್ಟ್ರಗಳಲ್ಲಿ ಮತ್ತು ಮಹಿಳೆಯರಿಂದ. ಆದರೆ ಈ ಸ್ತ್ರೀ ಚಿಂತಕಿಯರು ಪುರುಷರ ವಿಚಾರಗಳಿಂದ ಪ್ರಭಾವಿತರಾಗಿದ್ದರು ಎಂಬುದು

ಗಮನಾರ್ಹವಾಗಿದೆ. ಅಂದು ಅತ್ಯಂತ ಪ್ರಚಲಿತದಲ್ಲಿದ್ದ ರುಸೋ, ಸಾರ್ತ್ರ್, ಕಾರ್ಲ್‌ಮಾರ್ಕ್ಸ್ ಮತ್ತು ಫ್ರಾಯ್ಡ್‌ರ ತಾತ್ವಿಕವಾದ ವಿಚಾರಗಳಿಂದ ಪ್ರಚೋದನೆಯನ್ನು ಪಡೆದುಕೊಂಡಿದ್ದಾರೆ.

ಆ. ಆರಂಭದ ಸ್ತ್ರೀ ಚಿಂತಕಿಯರು

ಮೇರಿ ವುಲ್ ಸ್ಟನ್ ಕ್ರಾಫ್ಟ್ - ರುಸೊನ ವಿಚಾರಗಳಿಂದ ಪ್ರಭಾವಿತಳಾಗಿದ್ದಾಳೆ. ೧೭೫೯ - ೧೭೯೭ರ ಕಾಲಘಟ್ಟದಲ್ಲಿ ಬದುಕಿದ ಆಕೆ ಪ್ರತಿಯೊಬ್ಬರ ಪ್ರತಿಭಾ ವಿಕಾಸಕ್ಕೆ ಅವಕಾಶವಿರಬೇಕೆಂಬ ಫ್ರೆಂಚ್ ಕ್ರಾಂತಿಕಾರಕ ಸಮಾನತೆಯ ವಿಚಾರಗಳ ಪರವಾಗಿದ್ದಾಳೆ. ಕ್ರಾಫ್ಟ್ ತನ್ನ ಗ್ರಂಥದಲ್ಲಿ[೮] ತತ್ಕಾಲೀನ ಸಮಾಜ ವ್ಯವಸ್ಥೆಯಲ್ಲಿ ಬರುವ ಸ್ತ್ರೀ ವಿರೋಧಿ ಸಿದ್ಧಾಂತಗಳನ್ನೆಲ್ಲಾ ವಿಶ್ಲೇಷಿಸಿ, ಸ್ತ್ರೀ ಚಿಂತನೆಯ ವಿಚಾರಗಳನ್ನು ಪ್ರಕಟಿಸಿದ್ದಾಳೆ. "ಮಾನವ ಹಕ್ಕುಗಳಲ್ಲಿ ಸ್ತ್ರೀಯರು ಯಾಕೆ ಬರುವುದಿಲ್ಲ ಎಂಬ ಪ್ರಶ್ನೆಯನ್ನು ಆಕೆ ಕೇಳಿದ್ದಾಳೆ.

ವರ್ಜೀನಿಯಾ ವೂಲ್ಫ್ ಮತ್ತೊಬ್ಬ ಆರಂಭದ ಸ್ತ್ರೀ ಚಿಂತಕಿಯಾಗಿದ್ದಾಳೆ. ಈಕೆ ಸಮಾಜ ಮತ್ತು ಸ್ತ್ರೀ ಎರಡನ್ನು ಬೆಸೆದ ಪ್ರಬುದ್ಧ ಸ್ತ್ರೀ ಚಿಂತಕಿ. ಮುಂದೆ ಬರುವ ಸ್ತ್ರೀ ಚಿಂತಕಿಯರಿಗೆ ದಟ್ಟವಾದ ಪ್ರಭಾವ ಬೀರಿದ್ದಾಳೆ.[೯] ಇವಳು ಮೂರು ಕೃತಿಗಳಲ್ಲಿ[೧೦] ಸ್ತ್ರೀ ಚಿಂತನೆಯ ಸಮಗ್ರ ತಾತ್ವಿಕ ವಿಚಾರಗಳನ್ನು ಹೇಳಿದ್ದಾಳೆ.

ಸಿಮೋನ್‌ದ ಬೋವಾ ಜಗತ್ಪ್ರಸಿದ್ಧ ಸ್ತ್ರೀ ಚಿಂತಕಿ. ಅವಳ ಕೃತಿಯ ಇಂಗ್ಲೀಷ್ ಅನುವಾದದಲ್ಲಿ[೧೧] ಸ್ತ್ರೀ ಎರಡನೆ ದರ್ಜೆಯ ಪ್ರಜೆಯಾಗುವ ಕಾರಣಗಳನ್ನು ಸ್ಪಷ್ಟಪಡಿಸಿದ್ದಾಳೆ. ಅಂತರ್ ರಾಷ್ಟ್ರೀಯ ಪ್ರಖ್ಯಾತಿವೆತ್ತ ಲೇಖಕಿಯಾದ ಬೋವಾ ಸ್ತ್ರೀ ವಿರೋಧಿ ನಿಲುವುಗಳನ್ನು, ತಾತ್ವಿಕ ಅಪನಂಬಿಕೆಗಳನ್ನು ತನ್ನ ವಿಚಾರಗಳಿಂದ ಪ್ರತಿಭಟಿಸುತ್ತಾಳೆ. ಸ್ತ್ರೀಯು ವೈಚಾರಿಕ ನೆಲೆಯಲ್ಲಿ ಪುರುಷನಿಗಿಂತ ಕೆಳಮಟ್ಟದಲ್ಲಿರುವದನ್ನು ಬೋವಾ ಒಪ್ಪಿಕೊಂಡರೂ, ಅದಕ್ಕೆ ಸಾಮಾಜಿಕ ವ್ಯವಸ್ಥೆಯ ಮಿತಿಗಳೇ ಕಾರಣವೆಂದು ತಿಳಿಸುತ್ತಾಳೆ. ಸ್ತ್ರೀಯು ಪುರುಷರಿಗಿಂತ ವೈಚಾರಿಕತೆಯಲ್ಲಿ ಮೇಲುಮಟ್ಟದಲ್ಲಿ ಬರದೆ ಇರುವುದಕ್ಕೆ, ಶಿಕ್ಷಣಕ್ಕೆ ಸ್ತ್ರೀಯನ್ನು ದೂರಮಾಡಿ ಅವಳು ವೈಚಾರಿಕವಾಗಿ ಬೆಳೆಯಲಾರದಂತಹ ಪರಿಸ್ಥಿತಿ, ಒತ್ತಡಗಳನ್ನು, ಸಾಮಾಜಿಕ ವ್ಯವಸ್ಥೆಯೊಳಗಿನ ಬದುಕಿನ ಪರಿಮಿತಿಗಳು ಕಾರಣವಾಗಿರುವದರಿಂದ ಸ್ತ್ರೀ, ಪುರುಷ ಯಾರೇ ಆಗಲಿ ವೈಚಾರಿಕತೆಯಿಂದ ಮಾತ್ರವೇ ವ್ಯಕ್ತಿತ್ವದ ಪೂರ್ಣತೆಯನ್ನು ಪೂರೈಸಬಹುದೆಂದು ಅಭಿಪ್ರಾಯ ಪಡುತ್ತಾಳೆ.

ಬೋವಾಳ ಫ್ರೆಂಚ್ ಕೃತಿಯನ್ನು ಬೆಟ್ಟಿ ಫ್ರೈಡನ್ನಳು ರೂಪಾಂತರಿಸಿದ್ದಾಳೆ.[೧೨] ಇದು ಅಮೆರಿಕಾದ ರೂಪಾಂತರವೆಂದೇ ತುಂಬಾ ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಲೇಖಕಿ ಮತ್ತು ಪತ್ರಕರ್ತೆಯಾಗಿರುವ ಫ್ರೈಡನ್ನಳು ಅಮೇರಿಕದಲ್ಲಿ ರಾಷ್ಟ್ರೀಯ ಮಹಿಳಾ ಸಂಘಟನೆಯನ್ನು ಕಟ್ಟಿದ ಸಾಮಾಜಿಕ ಕಾರ್ಯಕರ್ತೆಯೂ ಆಗಿದ್ದಾಳೆ. ಸೀಮಿತ ಚೌಕಟ್ಟಿನೊಳಗೆ ಫ್ರೈಡನ್ನಳು ಸ್ತ್ರೀಯರ ಶಿಕ್ಷಣ, ಉದ್ಯೋಗ, ಧಾರ್ಮಿಕ, ಆರ್ಥಿಕ ನೆಲೆಗಳಲ್ಲಿ ಸಾಕಷ್ಟು ಬದಲಾವಣೆಗಳಾಬೇಕೆಂಬ ಹಕ್ಕಿನ ಧೋರಣೆಯನ್ನು ತಳೆದಿದ್ದಾಳೆ.

ಕೇಟ್ ಮಿಲೆಟ್ಟಳು ಪಿತೃಪ್ರಧಾನ ವ್ಯವಸ್ಥೆಯಿಂದಾಗಿ ಸ್ತ್ರೀಯರನ್ನು ಅಧೀನತೆಗೆ ಪುರುಷ ಪ್ರಾಬಲ್ಯದಿಂದಾಗಿ ಬಳಸಿಕೊಳ್ಳುತ್ತಾರೆ ಎಂದು ಆಲೋಚಿಸಿದ್ದಾಳೆ. ಆದುದರಿಂದಲೇ 'ಕೇಟ್'ಳು ಪಿತೃಪ್ರಧಾನ ವ್ಯವಸ್ಥೆಯ ಪ್ರಜ್ಞೆಯೇ ಸ್ತ್ರೀ ಶೋಷಣೆಗೆ ಕಾರಣವೆಂದು ಬಗೆದು ಅದನ್ನೇ ಅವಳು ಪ್ರತಿಭಟಿಸುತ್ತಾಳೆ. ಈ ಸಂಬಂಧವಾಗಿ ಆಕೆ ಮೂರು ಮುಖ್ಯ ಅಪಾದನೆಗಳನ್ನು ತನ್ನ ಕೃತಿಯಾದ The Sexual Politics ನಲ್ಲಿ ಮಾಡಿದ್ದಾಳೆ.[೧೪]

ಯುರೋಪ ರಾಷ್ಟ್ರಗಳ ಈ ಸ್ತ್ರೀ ಚಿಂತಕಿಯರ ವಿಚಾರಗಳನ್ನು ಅವಲೋಕಿಸಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದು ಏನೆಂದರೆ ಮಹಿಳೆಯರು ತಮ್ಮನ್ನು ತಾವು ಕೀಳು ಅಥವಾ ಜಡವಸ್ತುಗಳೆಂದು ಭಾವಿಸಿಕೊಳ್ಳುವದನ್ನು ಬಿಟ್ಟು, ಸಮಾಜದಲ್ಲಿ ಯಾವತ್ತೂ ಕ್ರಿಯಾಶೀಲರಾಗಿರುವದಕ್ಕೆ ಪ್ರಯತ್ನಿಸುವುದು ಅತಿ ಅವಶ್ಯಕವಾಗಿದೆ. ಈ ಪ್ರಯತ್ನದಿಂದ ಸ್ತ್ರೀಯರು ತಮ್ಮನ್ನು ತಾವು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬ ಬಲವಾದ ಭರವಸೆಯನ್ನು ಇಡಿ ಮಹಿಳಾ ಪ್ರಪಂಚಕ್ಕೆ ಅವರು ಕೊಡುವ ಯತ್ನವನ್ನು ಮಾಡಿದ್ದಾರೆ. ತತ್ಕಾಲೀನ ರಾಜಕೀಯ, ಸಾಮಾಜಿಕ ತಾತ್ವಿಕ ಚಿಂತನೆಗಳೊಂದಿಗೆ ಪರವಾಗಿ ಮತ್ತು ವಿರೋಧಗಳುಳ್ಳ ದ್ವಂದ್ವಾತ್ಮಕ ನಿಲುವನ್ನು ಸಹಿತ ಅವರು ಹೊಂದಿದ್ದರು. ಶುಲಾಮಿತ್ ಫೈರ್‌ಸ್ಟೋನ್ ಎನ್ನುವ ಸ್ತ್ರೀ ಚಿಂತಕಿಯು ಮಹಿಳೆಯು ತಾಯಿಯಾಗುವವರೆಗೆ ಅನಿವಾರ್ಯವಾಗಿ ಹಿಂಸೆ ಮತ್ತು ತುಳಿತಕ್ಕೆ ಈಡಾಗುತ್ತಾಳೆ. ಆದುದರಿಂದ ಅವಳು ಗರ್ಭಧಾರಣೆಯನ್ನು ಹೊರತುಪಡಿಸಿ, ಬೇರೆ ರೀತಿಯ ಬದುಕಿನ ಮೂಲಕ ಶತ ಶತಮಾನಗಳ ಹೇರುವ ತಾಯ್ತನದ ಪಾತ್ರವನ್ನು ಅವಳು ವಿರೋಧಿಸುತ್ತಾಳೆ. ಜೆಫನರ್ ಅಲೆನ್ ಎನ್ನುವ ಸ್ತ್ರೀ ಚಿಂತಕಿ ಮಹಿಳೆಯರು ತಾಯಿಯಾಗುವದರ ಮೂಲಕ ಪಿತೃಪ್ರಧಾನ ವ್ಯವಸ್ಥೆಗೆ ತನ್ನನ್ನು ತಾನು ಅರ್ಪಿಸಿಕೊಂಡಂತೆ ಎಂದು, ತಾಯಿಯಾಗುವುದೇ ಅಪಾಯಕಾರಿ ಯಾದದ್ದು ಎಂದು ಮಹಿಳಾಲೋಕವನ್ನೇ ಎಚ್ಚರಿಸುತ್ತಾಳೆ. ಆದರೂ ಸ್ತ್ರೀಯರು ಮದುವೆಯೇ ಬಾಳಿನ ಗುರಿ, ತಾಯ್ತನವೇ ಪರಮಗುರಿ ಎಂದು ಭಾವಿಸಿ, ಬಲವಾದ ನಂಬಿಗೆಯನ್ನಿಟ್ಟುಕೊಂಡಿದ್ದರು. ಒಂದು ಅಚ್ಚರಿಯೇನಂದರೆ ಸ್ತ್ರೀ ಚಿಂತಕಿಯರೆಲ್ಲರಿಗೂ ತಮ್ಮದೇ ಆದ ಮಗುವಿರಬೇಕೆಂಬ ಹಂಬಲವುಳ್ಳವರಾಗಿದ್ದರು.

ಸ್ತ್ರೀ ಚಿಂತನೆಗೆ ಒಂದು ಹೊಸ ತಿರುವನ್ನು ಕೊಟ್ಟ ಚಿಂತಕಿ ಎಂದರೆ ಮೇರಿ ಎಲ್‌ಮನ್ ಎಂಬುವಳು. ಈಕೆ ದೀರ್ಘಾವಧಿಯವರೆಗೆ ಅಧ್ಯಯನ ನಡೆಸಿ ತನ್ನ ಕೃತಿಯನ್ನು ಪ್ರಕಟಿಸಿದ್ದಾಳೆ.[೧೨] ಅದರಂತೆ ಶುಲಾಮಿತ್ ಫೈರ್‌ಸ್ಟೋನ್, ಕೇಟ್‌ಮಿಲೆಟ್ ಮೊದಲಾದ ಸ್ತ್ರೀ ಚಿಂತಕಿಯರು ಲಿಂಗ ತಾರತಮ್ಯದ ಅಭಿಪ್ರಾಯಗಳೇ ಸ್ತ್ರೀ ಶೋಷಣೆಗೆ ಕಾರಣವೆಂದು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಆರಂಭದ ಸ್ತ್ರೀ ಚಿಂತಕಿಯರೆನಿಸಿಕೊಂಡ ಈ ಚಿಂತಕಿಯರು, ಸ್ತ್ರೀಯರ ಶೋಷಣೆ, ಶೋಷಣೆಗೆ ಕಾರಣ, ವಿಮೋಚನೆಯ ದಾರಿ ಪುರುಷ ಪ್ರಧಾನತೆಯ ತಾತ್ವಿಕತೆ, ಲಿಂಗ ತಾರತಮ್ಯ ಭಿನ್ನಾಭಿಪ್ರಾಯಗಳ ವಿಚಾರಗಳಿಗೆ ಮೊದಲು ರೂಪವನ್ನು ಕೊಟ್ಟವರಾಗಿದ್ದಾರೆ. ಮುಂದಿನ ಸ್ತ್ರೀ ಚಿಂತಕಿಯರಿಗೆ ತಕ್ಕುದಾದ ಒಂದು ವೇದಿಕೆಯನ್ನು ಇವರು ಸಿದ್ಧಮಾಡಿಕೊಟ್ಟಿದ್ದಾರೆ.

೩. ವೇದಗಳ ಕಾಲದಲ್ಲಿ ಸ್ತ್ರೀ

ಭಾರತೀಯ ಸಂಸ್ಕೃತಿಯನ್ನು ವೇದಗಳಿಂದ ತಿಳಿದುಕೊಳ್ಳಬಹುದಾಗಿದೆ. ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಗೌರವಯುತವಾದ ಸ್ಥಾನ - ಮಾನಗಳಿದ್ದವು. ಪುರುಷರಿಗೆ ಯಾವ ರೀತಿಯಾಗಿ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಲು ಅವಕಾಶವಿರುತ್ತಿತ್ತೊ, ಅದೇ ಪ್ರಕಾರವಾಗಿ ಸ್ತ್ರೀಯರು ವಿದ್ಯಾಭ್ಯಾಸವನ್ನು ಪಡೆದುಕೊಳ್ಳಬಲ್ಲವರಾಗಿದ್ದರು. ಸ್ತ್ರೀ ಪುರುಷರಿಬ್ಬರಿಗೂ ಅಷ್ಟೇ ಪ್ರಾಧಾನ್ಯತೆಯಿತ್ತು. ಪುರುಷರಂತೆ ಹಲವಾರು ಸ್ತ್ರೀಯರು ಸಾಕಷ್ಟು ಶಿಕ್ಷಣವನ್ನು ಪಡೆದುಕೊಂಡು, ಪುರುಷರಿಗೆ ಸಮಾನವಾದ ಸ್ಥಾನವನ್ನು ಪಡೆದುಕೊಂಡದ್ದು ವೇದಗಳ ಅಧ್ಯಯನದಿಂದ ತಿಳಿದುಬರುತ್ತದೆ. ಕೆಲವು ಸ್ತ್ರೀಯರು ಮಂತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ. ವಿಶ್ವವಾರಾ, ಅಪಾಲಾ, ಘೋಷಾ, ಗೋಧಾ, ಲೋಪಾಮುದ್ರಾ, ಶಾಶ್ವತಿ ಮತ್ತು ರೋಮಷಾ ಎಂಬ ಹಲವಾರು ಸ್ತ್ರೀಯರು ಬ್ರಹ್ಮವಾದಿನಿಯರಾಗಿದ್ದರು ಎಂಬ ವಿಷಯ ತಿಳಿದುಬರುತ್ತದೆ. "ಋಗ್ವೇದ V ೨೮ನೆಯ ಮಂತ್ರವು ವಿಶ್ವವಾರಾ ಎಂಬುವಳಿಂದಲೂ, ಋಗ್ವೇದ VIII. ೯೧ನೆಯ ಮಂತ್ರವು ಅಪಾಲಾ ಎಂಬುವಳಿಂದಲೂ ರಚಿತವಾಗಿದೆ." ಋಗ್ವೇದ X ೩೯ನೆಯ ಮಂತ್ರವು ಘೋಷಾಕಾಕ್ಷಿವತಿ ಎಂಬವಳಿಂದಲೂ ರಚಿತವಾಗಿದೆ.[೧೪] (History of Dharmastastra, II, I.P. ೩೬೫)

ಋಗ್ವೇದದಲ್ಲಿ ಹೆಸರಿಸಲಾದ ಬ್ರಹ್ಮವಾದಿನಿಯರಲ್ಲಿ "ವಾಕ್" ಎಂಬುದೊಂದು ಮುಖ್ಯವಾದ ಹೆಸರಾಗಿದೆ. ಋಗ್ವೇದದ ಹತ್ತನೆಯ ಮಂಡಲದಲ್ಲಿರುವ "ದೇವೀ" ಶ್ಲೋಕದ ನಿರ್ಮಾಪಕಿ ಈ ಮಹಿಳೆಯೆಂದೂ, ಮುಂದೆ ಈ ಮಹಿಳೆಯನ್ನೇ ಸರಸ್ವತಿ ಎಂದು ಸ್ತುತಿಸಿರುವುದನ್ನು ಬೃಹದಾರಣ್ಯಕ ಉಪನಿಷತ್ತಿನ ಕೆಲವು ಶ್ಲೋಕಗಳಿಂದ ಸ್ಪಷ್ಟಪಡಿಸಲಾಗಿದೆ.[೧೫]

ವೇದಕಾಲದ ವೈಚಾರಿಕ ವಲಯದಲ್ಲಿ 'ಸ್ತ್ರೀ'ಯು ವಿದ್ಯೆಯ ಅಧಿದೇವತೆಯಂತೆ ಕಾಣಲಾಗಿದೆ. ವೇದಕಾಲದಲ್ಲಿ ಅಷ್ಟೇ ಅಲ್ಲ ಇಂದಿನ ಕಾಲದಲ್ಲಿಯೂ ಸಹಿತ 'ಸ್ತ್ರೀ'ಯನ್ನು ವಿದ್ಯಾಧಿದೇವತೆ, ಶಕ್ತಿ ಸ್ವರೂಪಿಣಿ ಎಂಬಂತೆ ಕಾಣಲಾಗುತ್ತಿದೆ. ಇದನ್ನು ಡಾ.ಎ.ಎಸ್ .ಅಲ್ಟೇಕರ್ ಸಹಿತ ಒಪ್ಪಿಕೊಂಡಿದ್ದಾರೆ. "ವೇದ ಕಾಲದಿಂದ ಹಿಡಿದು ಆಧುನಿಕ ಯುಗದವರೆಗಿನ ವೈಚಾರಿಕ ವಲಯದಲ್ಲಿ ಹೆಣ್ಣು ಶಕ್ತಿಸ್ವರೂಪಿಣಿಯಾಗಿ, ಕುಟುಂಬ ವತ್ಸಲೆಯಾಗಿ ಚಿತ್ರಿಸಲ್ಪಟ್ಟ ಸಂದರ್ಭಗಳು ಅನೇಕ"[೧೬]

ವೇದಗಳ ಕಾಲದಲ್ಲಿ, ನಂತರದ ಕಾಲದಲ್ಲಿ, ಆಧುನಿಕ ಕಾಲದಲ್ಲಿ ಗಂಡುಮಗುವಿಗಾಗಿ ಹಂಬಲಿಸುವುದು, ಪ್ರಾರ್ಥಿಸುವುದು ಕಂಡುಬರುತ್ತದೆ. ಆದರೆ ಇಲ್ಲಿ ಕಂಡುಬರುವ ಉಲ್ಲೇಖದಿಂದ ಪಂಡಿತಳಾದ ಮಗಳನ್ನು ಬಯಸಬಹುದಾದ ಒಂದು ವಿಧಿ ಕರ್ಮವಿರುವುದು ತಿಳಿದುಬರುತ್ತದೆ.[೧೭] ಭಾರತದಲ್ಲಿ ತೀರಾ ಪ್ರಾಚೀನ ಕಾಲದಲ್ಲಿ ಅಂದರೆ ವೇದಗಳ ಕಾಲದಲ್ಲಿ ಸ್ತ್ರೀಯರ ಸ್ಥಾನ - ಮಾನಗಳು ಉತ್ತಮವಾಗಿದ್ದವು. ವೇದಗಳ ಕಾಲದಲ್ಲಿ ಸ್ತ್ರಿಯರ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರಬೇಕು. ಆದುದರಿಂದಲೇ ಮೈತ್ರೇಯಿಯೂ ಆಧ್ಯಾತ್ಮಿಕ

ಚರ್ಚೆಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ಯಾಜ್ಞವಲ್ಕ್ಯನ ಇಬ್ಬರು ಪತ್ನಿಯರಲ್ಲಿ ಮೈತ್ರೇಯಿ ಒಬ್ಬಳು. ಇವಳು ಆಧ್ಯಾತ್ಮಿಕ ಚರ್ಚೆಗಳಲ್ಲಿ ಭಾಗವಹಿಸಿರುವುದು ತಿಳಿದುಬರುತ್ತದೆ.[೧೮] ಈ ರೀತಿಯಾಗಿ ಪತ್ನಿಯಾದ ಯಜ್ಞಗಳಲ್ಲಿ ಭಾಗವಹಿಸಲು ಯೋಗ್ಯಳನ್ನಾಗಿ ಮಾಡಬೇಕೆಂದರೆ ವಿದ್ಯಾವಂತಳನ್ನಾಗಿ ಮಾಡಿರಬೇಕೆಂದು ಗೋಬಿಲ ಗೃಹ್ಯ ಸೂತ್ರವು ತಿಳಿಸುತ್ತದೆ.[೨೦] ಬ್ರಹ್ಮಜ್ಞಾನವನ್ನು ಅರಿತುಕೊಳ್ಳಲು ಬೇಕಾಗಬಹುದಾದ ಉಪನಯನ ವಿಧಿಯಿಂದ ಸ್ತ್ರೀಯರು ಸಂಸ್ಕಾರಗೊಳ್ಳುತ್ತಿದ್ದರು.[೨೧] ಪುತ್ರ ಸಂತಾನವನ್ನು ಇಷ್ಟಪಡುತ್ತಿದ್ದರಾದರೂ ಪುತ್ರಿಯರನ್ನು ಅಷ್ಟೇ ಗೌರವದಿಂದ ಸ್ವಾಗತಿಸುವ ಆರೋಗ್ಯಪೂರ್ಣ ಸಮಾಜವಿದ್ದುದು ಆ ಕಾಲದ ಒಂದು ವಿಶೇಷ. ಅಥರ್ವ ಸಂಹಿತೆಯು ವೇದ ವಿದ್ಯಾಸಂಪನ್ನೆಯಾದ ಸ್ತ್ರೀಯು ಚಿಕ್ಕವಯಸ್ಸಿನ ತರುಣ ಗಂಡನನ್ನು ಪಡೆಯುತ್ತಾಳೆ ಎನ್ನುತ್ತದೆ.[೨೨]

ವೈದಿಕ ಯುಗದಲ್ಲಿ ಸ್ತ್ರೀಯರು ಶಾಸ್ತ್ರ ಅಧ್ಯಯನವನ್ನು ಮಾಡುತ್ತಿದ್ದರೆಂಬುದು, ಮಂತ್ರಗಳನ್ನು ಸಹಿತ ರಚಿಸಿರುವರೆಂಬುದು ಮೇಲೆ ಹೇಳಿರುವ ವಿಷಯಗಳಿಂದ ತಿಳಿದುಬರುತ್ತದೆ. ಉಪನಿಷತ್ತುಗಳು ಗಾರ್ಗಿ, ಮೈತ್ರೇಯಿಯಂತಹ ಮೇಧಾವಿ ಸ್ತ್ರೀಯರನ್ನು ಗುರುತಿಸಿದೆ. ಸ್ತ್ರೀಯರನ್ನು ದೇವತೆಯಂತೆ ಕಂಡಿದ್ದಾರೆ. ಉಷ:ಕಾಲದ ಅಧಿದೇವತೆಯಾದ ಉಷೋದೇವಿಯನ್ನು ಗ್ರಂಥಗಳ ಅಧಿದೇವತೆಯೆಂದು ಗುರುತಿಸಿ ಆ ದೇವತೆಯನ್ನು "ನಾಮಾ" ಎಂಬ ಹೆಸರಿನಿಂದ ಕರೆದಿರುವುದು ತಿಳಿದುಬಂದಿದೆ. ಪೃಥ್ವಿಯ ಅಧಿದೇವತೆ ಧರಾದೇವಿಯೆಂದು, ಹೃದಯವು ಸತ್ಯದ ತಾಣ, ಹೃದಯಾಭಿಮಾನಿ ಪಾರ್ವತಿದೇವಿಯೆಂದು ಸಂಕೇತಿಸಿ ಕಲ್ಪಿಸಿಕೊಂಡಿದ್ದಾರೆ. ಈ ಕಲ್ಪನೆ ಸಂಕೇತದ ಹಿಂದೆ ಸ್ತ್ರೀಯರ ಕುರಿತಾಗಿರುವ ಗೌರವವನ್ನು ಕಾಣುತ್ತೇವೆ. ಮತ್ತು ಆ ಕಾಲದಲ್ಲಿ ಗಾರ್ಗಿ ಮೈತ್ರೇಯಿಯಂತಹ ಜ್ಞಾನದಿಂದ ಗೌರವ ಸಂಪಾದಿಸಿದ ಮೇಧಾವಿಗಳು ಇದ್ದದ್ದು ಕಂಡುಬರುತ್ತದೆ. ಉಪನಿಷತ್ತಿನ ಈ ಅಧ್ಯಾಯವು ಅತ್ಯಂತ ಅಪೂರ್ವವಾದದ್ದು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಈ ಅಧ್ಯಾಯವು ಅತ್ಯಂತ ಅಪೂರ್ವವಾದದ್ದು. ಬೃಹದಾರಣ್ಯಕ ಉಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯರ ವಾದದ ಸನ್ನಿವೇಶ ಅರ್ಥವತ್ತಾದ ಒಂದು ಭಾಗವಾಗಿದೆ. ಕೇವಲ ಸಂಪತ್ತು ಮಾತ್ರದಿಂದಲೇ ಇಡೀ ಪ್ರಪಂಚವೇ ತನ್ನ ಕೈವಶವಾಗುವದಾದರೆ ತಾನು ಚಿರಂಜೀವಿಯಾಗಿರಬಲ್ಲನೇ ಎಂಬ ಪ್ರಶ್ನೆಯನ್ನು ಮೈತ್ರೇಯಿಯು ಕೇಳಿದಾಗ ಉತ್ತರವಾಗಿ "ಮುಮುಕ್ಷುವಿನ ಸಾಧನಾ ಮಾರ್ಗವು ಸುಖದ ಅನಿತ್ಯತೆಯನ್ನು ದರ್ಶಿಸುವಂತಹದು ಎಂಬ ವಿಷಯಗಳು ಗೋಚರವಾಗುತ್ತದೆ. ಇದೆಲ್ಲವೂ ಶಾಸ್ತ್ರ ಅಧ್ಯಯನದಿಂದ ಮಾತ್ರವೇ ಸಾಧ್ಯವೆಂದು ತಿಳಿದುಕೊಂಡಿರುವ ಮೈತ್ರೇಯಿ, ತನ್ನ ಜ್ಞಾನಲೋಕವನ್ನು ವಿಸ್ತರಿಸಿಕೊಳ್ಳುತ್ತಾಳೆ.[೨೩] ಹಾಗೆ ವಿಸ್ತರಿಸಿಕೊಳ್ಳುವ ತಕ್ಕುದಾದ ವಾತಾವರಣವು ಸ್ತ್ರೀಯರಿಗೆ ಆ ಕಾಲದಲ್ಲಿ ಲಭ್ಯವಾಗಿತ್ತು.

ಈ ಸಂದರ್ಭದಲ್ಲಿ ಸತ್ಯಕಾಮ ಜಾಬಾಲಿಯ ವಿಷಯವನ್ನು ಹೇಳುವುದು ತೀರಾ ಪ್ರಸ್ತುತವೆನಿಸುತ್ತದೆ. ಸತ್ಯಕಾಮನಲ್ಲಿ ಆತನ ತಂದೆಯ ಕುರಿತಾಗಿ ತಾಯಿಯಾದ ಜಾಬಾಲಿಯು ಪ್ರಾಮಾಣಿಕತೆಯನ್ನು ಮನ್ನಿಸಿದರೂ, ಗುರು ಗೌತಮನಿಗೆ ಸತ್ಯಕಾಮನ ಸತ್ಯ, ಸರಳತನಗಳಲ್ಲಿಯೇ ಬ್ರಾಹ್ಮಣತತ್ವವನ್ನು ಕಂಡಿದ್ದು ಒಂದು ವಿಪರ್ಯಾಸವೇ

ಆಗಿದೆ. "ಸತ್ಯ ಕಾಮನು ಬ್ರಾಹ್ಮಣಪುತ್ರನೇ ಇರಬೇಕು"[೨೪] ಎನ್ನುವ ತರ್ಕ ಸ್ತ್ರೀ ಪರವಾಗಿಲ್ಲ. ಹೀಗೆ ಈ ಕಾಲದ ಸ್ತ್ರೀಯರ ಬಗೆಗಿರುವ ಸ್ಥಾನ - ಮಾನಗಳಲ್ಲಿ ಇದು ಒಂದು ವಿಪರ್ಯಾಸವಾಗಿರುವುದು ಮುಂದಿನ ಯುಗದಲ್ಲಿ ಕಾಣಬಹುದಾದ ಬದಲಾವಣೆಯನ್ನು ಸೂಚಿಸುವಂತಿದೆ.

ಈ. ಪುರಾಣಗಳಲ್ಲಿ ಸ್ತ್ರೀ

ಪುರಾಣಗಳೆಂದರೆ ರಾಮಾಯಣ, ಮಹಾಭಾರತಗಳು. ವೇದಗಳ ಕಾಲದಲ್ಲಿರುವಂತೆ ಪುರಾಣಗಳಲ್ಲಿಯೂ ಸ್ವಲ್ಪಮಟ್ಟಿಗೆ ಮಾತ್ರವೇ ಸ್ತ್ರೀಯನ್ನು ವೈಚಾರಿಕ ನೆಲೆಯಲ್ಲಿ ಗುರುತಿಸಿಕೊಂಡ ಹಲವಾರು ಸಂದರ್ಭಗಳು ಮಾತ್ರ ಕಾಣಸಿಗುತ್ತವೆ. ಸ್ವಯಂವರ ಪದ್ಧತಿಯಿಂದ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡು, ಬದುಕು ನಿರ್ಧರಿಸುವ ಮನೋಧರ್ಮದಲ್ಲಿ ಮಹಿಳೆಯರಿಗೆ ಕೊಡಮಾಡಿರುವ ಸ್ವಾತಂತ್ರ್ಯ ಎದ್ದುಕಾಣುತ್ತದೆ. ರಾಮಾಯಣದಲ್ಲಿ ಕೈಕೇಯಿ ಶಸ್ತ್ರಾಭ್ಯಾಸವನ್ನು ಮಾಡಿ ಬೇಟೆಯಲ್ಲಿ ದಶರಥನಿಗೆ ಸಹಾಯ ಮಾಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆದರೆ ಈ ಸ್ವಯಂವರಗಳು ರಾಜ, ಮಹಾರಾಜ, ಮಾಂಡಲಿಕರಂತಹ ಮೇಲುವರ್ಗದವರಲ್ಲಿ ಮಾತ್ರ ನಡೆಯುತ್ತಿದ್ದವು ಎನ್ನುವದನ್ನು ಮರೆಯಲಾಗದು.

ರಾಮಾಯಣದಲ್ಲಿ ಶ್ರೀರಾಮನು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂತಿರುಗಿದಾಗ ಅವನನ್ನು ಸ್ವಾಗತಿಸಿದವರು ಅವಿವಾಹಿತ ಸ್ತ್ರೀಯರಾಗಿದ್ದಾರೆ. ಸ್ತ್ರೀಯರಿಂದಲೇ ಮಂಗಳಸ್ನಾನವನ್ನು ಮಾಡಿಸುವುದು ಶುಭಕರ, ಶ್ರೇಯಸ್ಸು, ಎಂದು ತಿಳಿದುಕೊಂಡಿದ್ದ ಆ ಯುಗದ ವ್ಯವಸ್ಥೆಯ ಬಗ್ಗೆ ಸಂಶೋಧಕರಾಗಿರುವ ಅಲ್ತೇಕರರು "ಸ್ವಯಂವರ ಪದ್ಧತಿಯಿಂದ ಬದುಕನ್ನು ನಿರ್ಧರಿಸುವ ಮನೋಭಾವದಲ್ಲಿಯ ಸ್ವಾತಂತ್ರ್ಯಪ್ರಿಯತೆ ಹಾಗೂ ಸತಿಪದ್ಧತಿಯ ಅವಗಣನೆ, ವಿಧವೆಯರ ರಕ್ಷಣೆ ಇವು ಆಕಾಲದ ಮಹತ್ವದ ಸಂಗತಿಗಳಾಗಿ ನಮ್ಮ ಗಮನಕ್ಕೆ ಬರುತ್ತವೆ" ಎಂದಿದ್ದಾರೆ.[೨೫]

ಉ. ಧರ್ಮಗಳಲ್ಲಿ ಸ್ತ್ರೀ

ಕ್ರಿ.ಪೂ. ೩ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಬೌದ್ಧಧರ್ಮದ ಅಸ್ತಿತ್ವವನ್ನು ಭಾರತದಲ್ಲಿ ಕಾಣುತ್ತೇವೆ. ಗೌತಮಬುದ್ಧ ಬೌದ್ಧಧರ್ಮದ ಸಂಘಕ್ಕೆ ಸ್ತ್ರೀ ಭಿಕ್ಷುಣಿಯರನ್ನು ನಿಯಮಿಸಿಕೊಳ್ಳಬೇಕೆಂದರೆ ಬಹಳ ಕಟ್ಟುನಿಟ್ಟನ್ನು ನಿಯಮಿಸಿದ್ದನು. ಆದರೆ ಕಾಲಾನುಕ್ರಮದಲ್ಲಿ ವಜ್ರ ಯಾನವೆಂಬ ಬೌದ್ಧಿಕಪಂಥವು ಬಂದ ಮೇಲೆ ಗೌತಮಬುದ್ಧನು ನಿಯಮಿಸಿದ ಕಠಿಣವಾದ ಕಟ್ಟುಪಾಡುಗಳು ಸಡಿಲಗೊಂಡವು. ಹೀಗೆ ಸಡಿಲಗೊಂಡುದರ ಪ್ರತಿಫಲವೇ ತಾರಾಭಗವತಿಯ ಆರಾಧನೆ. ಈ ಕಾರಣದಿಂದಾಗಿ ಬೌದ್ಧಧರ್ಮದಲ್ಲಿ ಸ್ತ್ರೀ ದೇವತೆಯ ಪೂಜೆಯು ಆರಂಭವಾಯಿತು. ರೂಪಭಟ್ಟಯ್ಯನು ನಿರ್ಮಿಸಿದ ಜಯಂತಿ ಪ್ರಬೌದ್ಧ ವಿಹಾರದಲ್ಲಿ ಯೋಗಿನಿಯರು, ಕುಸಳಿಯರು, ಸನ್ಯಾಸಿಗಳಿದ್ದರು.[೨೬]

ಬೌದ್ಧಧರ್ಮದ ಹಾಗೆ ಜೈನಧರ್ಮವು ಭಾರತದ ಬಹುಮುಖ್ಯ ಧರ್ಮಗಳಲ್ಲಿ ಒಂದು. ಭದ್ರಬಾಹುಮುನಿಗಳು ಕ್ರಿ.ಶ.ಪೂ. ೩ನೆಯ ಶತಮಾನದಲ್ಲಿ ಉತ್ತರದಲ್ಲಿ ಬರಗಾಲ ತಲೆದೋರಲು, ತಮ್ಮ ಶಿಷ್ಯರ ಗುಂಪಿನೊಂದಿಗೆ ದಕ್ಷಿಣ ಭಾರತಕ್ಕೆ ಬಂದು ಇಲ್ಲಿಯೂ ಮೌರ್ಯ ಚಂದ್ರಗುಪ್ತನ ಸಹಾಯದೊಂದಿಗೆ ಜೈನಧರ್ಮವನ್ನು ಸ್ಥಾಪಿಸಿದ್ದಾನೆ.

ಕದಂಬರ ಕಾಲಕ್ಕೇನೆ ಜೈನಧರ್ಮ ಪ್ರಚಾರದಲ್ಲಿತ್ತು. ಜೈನಧರ್ಮದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರವಿದ್ದರೂ ಮೋಕ್ಷವಿಲ್ಲ. ದೀಕ್ಷೆಯನ್ನು ತೆಗೆದುಕೊಂಡ ಸ್ತ್ರೀಯರು ದೇಶ ಸುತ್ತಿ ವೇದಾಂತ ಚರ್ಚೆಗಳನ್ನು ಮಾಡುತ್ತಿದ್ದರು. ಜೈನ ಧರ್ಮದಲ್ಲಿ ಸ್ತ್ರೀಯರು ಸಂಸಾರದಲ್ಲಿದ್ದುಕೊಂಡೇ, ಧರ್ಮಶ್ರದ್ಧೆಯ ದೀಕ್ಷೆಯನ್ನು ತೆಗೆದುಕೊಂಡ ಶ್ರಾವಕಿಯರು, ಧರ್ಮ ಪ್ರಸಾರದ ಜವಾಬ್ದಾರಿಯನ್ನು ಹೊತ್ತುಕೊಂಡ ಸನ್ಯಾಸಿಯರು ಇರುವುದು ಕಂಡುಬಂದಿದೆ. ಈ ಜೈನ ಸನ್ಯಾಸಿಯರನ್ನು ಗುರುವಡಿ, ಕಂತಿ, ಅಜ್ಜಿ ಎಂದು ಪಾರಿಭಾಷಿಕ ಪದಗಳಿಂದ ಗುರಿತಿಸಿದ್ದಾರೆ.[೨೭]

ವೈದಿಕ ಧರ್ಮ ಪ್ರಬಲವಾಗಿರುವಾಗಲೇ ವೈದಿಕಯುಗದಲ್ಲಿ ಹಲವಾರು ಸ್ತ್ರೀಯರು ಶಿಕ್ಷಣವನ್ನು ಪಡೆದುಕೊಂಡುದಲ್ಲದೆ ಪುರುಷರ ಹಾಗೆ ಸಾಧಕರೂ ಆಗಿದ್ದರು.

ಕ್ರಿಶ್ಚಿಯನ್ ಧರ್ಮದಲ್ಲಿ ಕೂಡ ಸ್ಮೃತಿಯರಲ್ಲಿರುವಂತೆ ಪತ್ನಿ ಪತಿಗೆ ವಿಧೆಯಳಾಗಿರಬೇಕು ಎಂಬುದನ್ನು ಸೂಚಿಸುತ್ತದೆ. ಪತ್ನಿಯಾದ ಸ್ತ್ರೀಯು ಪತಿಯಾದ ಪುರುಷನನ್ನು ಯಜಮಾನ ಎಂದು ಗಣಿಸಬೇಕಾಗುತ್ತದೆ. (ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ, ಡಾ.ಸುನೀತಾ ಎಂ.ಶೆಟ್ಟಿ)

ವೇದ ಕಾಲದಿಂದ ಹಿಡಿದು ಆಧುನಿಕ ಅವಧಿಯವರೆಗೆ ಭಾರತೀಯ ನಾರಿ ವೈಚಾರಿಕ ನೆಲೆಯಲ್ಲಿ ವಿದ್ಯಾವತಿಯಾಗಿ, ಧಾರ್ಮಿಕ ನೆಲೆಯಲ್ಲಿ ಶಕ್ತಿಸ್ವರೂಪಿಣಿಯಾಗಿ, ಕೌಟುಂಬಿಕ ನೆಲೆಯಲ್ಲಿ ಮಗಳು, ಮಾತೆ, ವಾತ್ಸಲ್ಯಮಯಿಯಾಗಿ ನಡೆದುಬಂದಿದ್ದಾಳೆ. ಅವಳು ತುಳಿದಿರುವ ದಾರಿಯಲ್ಲಿ ಒಳ್ಳೆಯದು ಇರುವಂತೆ ಕೆಟ್ಟದು ಇದೆ. ಗುಣಗಳಿರುವಂತೆ ದೋಷ ದೌರ್ಬಲ್ಯಗಳು ಇವೆ. ಸ್ತ್ರೀಯನ್ನು ಗೌರವದಿಂದ ಕಂಡಿರುವಂತೆ ಕಡೆಗಣಿಸಿಯೂ ಇದ್ದಾರೆ. ಆದುದರಿಂದಲೇ ಸಂಶೋಧಕರು "..... ನಾಗರಿಕತೆಯ ಬೆಳವಣಿಗೆಯ ಹಂತಗಳನ್ನು ಈಕ್ಷಿಸುವಲ್ಲಿ, ಅದರ ಉತ್ತಮಾಂಶಗಳನ್ನು ಪರಿಶೀಲಿಸುವಲ್ಲಿ ಮತ್ತು ಅದರ ಇತಿಮಿತಿಗಳ ಪರಿಕಲ್ಪನೆಯಲ್ಲಿ, ಸ್ತ್ರೀಯ ಸ್ಥಾನ - ಮಾನಗಳನ್ನು ಬಿಂಬಿಸುವ, ಒಂದು ದೀರ್ಘ ಇತಿಹಾಸದ ಅಧ್ಯಯನವು ಮುಖ್ಯವೆನಿಸುತ್ತದೆ."[೨೮]

ಸ್ತ್ರೀಯರಿಗೆ ಪುರುಷರಷ್ಟೇ ಪ್ರಧಾನವಾದ ಸ್ಥಾನವನ್ನು ಕಲ್ಪಿಸಿದ್ದರೂ ಪೆರಿಕ್ಲಿಸನ ಕಾಲದಲ್ಲಿ ಗುಲಾಮ ಪದ್ಧತಿ ಆವಿರ್ಭವಿಸಿದ್ದರಿಂದ (ಕ್ರಿ.ಪೂ.೫೦೦ರಲ್ಲಿ) ಸ್ತ್ರೀಯರ ಪ್ರಾಧಾನ್ಯತೆ ಸ್ಥಾನ - ಮಾನಗಳು ಕಡಿಮೆಯಾಯಿತೆಂದು ಅಲ್ತೇಕರರು ಅಭಿಪ್ರಾಯಪಡುತ್ತಾರೆ.[೨೯]

ವೇದಗಳ ಕಾಲದಲ್ಲಿ ಸ್ತ್ರೀಯರು ವಿದ್ಯಾವತಿಯರಾಗಿದ್ದರೂ ಸ್ತ್ರೀಯರು ಅಧ್ಯಯನವನ್ನು ಮಾಡಿರಬಹುದಾದ ಯಾವ ಗುರುಕುಲದ ಹೆಸರೂ ಧರ್ಮಶಾಸ್ತ್ರದಲ್ಲಾಗಲಿ, ಉಪನಿಷತ್ತಿನಲ್ಲಾಗಿ, ಪುರಾಣಗಳಲ್ಲಾಗಲಿ ಕಂಡುಬಂದಿಲ್ಲ. ಸ್ಮೃತಿಗಳಂತೂ ಹುಡುಗಿಯ ಎಂಟು ಇಲ್ಲವೆ ಹನ್ನೆರಡನೆಯ ವಯಸ್ಸಿನಲ್ಲಿ ಮದುವೆಯನ್ನು ಮಾಡಬೇಕೆಂದು ವಿಧಿಸಿವೆ. ಮನುವಿನ ಆಲೋಚನೆ ಅಭಿಪ್ರಾಯದಲ್ಲಿ ''ಸ್ತ್ರೀಯು ಉತ್ತಮ ಗೃಹಿಣಿಯೂ ಆದರ್ಶಮಾತೆಯೂ ಆಗಿದ್ದರೆ ಸಾಕು, ಅವಳು ತನ್ನ ಪತಿಯೊಡನೆ ವಾಸಿಸುವುದು ಶಿಷ್ಯನು ಗುರುವಿನ ಮನೆಯಲ್ಲಿರುವುದಕ್ಕೆ ಸಮಾನ, ಮನೆಯ ಕೆಲಸ ಕಾರ್ಯಗಳೇ ಸಂಧ್ಯಾವಂದನ ಇತ್ಯಾದಿ ಕರ್ಮಗಳಿಗೆ ಸಮಾನ.[೩೦]

ವೇದಗಳ ಕಾಲಾನಂತರದ ಇತಿಹಾಸದಲ್ಲಿ ಸ್ತ್ರೀಯರ ಸ್ಥಾನ-ಮಾನಗಳು ಕುಸಿದಂತೆ ಕಂಡುಬಂದಿವೆ. ಶಿಕ್ಷಣ, ಸ್ವಾತಂತ್ರ್ಯ, ಸಮಾನತೆಗಳ ಕೊರತೆ ದಟ್ಟವಾಗುತ್ತ ಬಂದಿದೆ. ಈ ಸಮಯದಲ್ಲಿ ಆವಿರ್ಭವಿಸಿದ ಸ್ಮೃತಿಕಾರರು, ಸ್ತ್ರೀ ಪುರುಷರೆಂಬ ವ್ಯತ್ಯಾಸವನ್ನು ಅಧಿಕಗೊಳಿಸಿ ಸ್ತ್ರೀಯರ ಸ್ಥಿತಿಯನ್ನು ಮತ್ತಷ್ಟು ಹೀನಾಯಗೊಳಿಸಿದರು. ಮನುವು

''ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ|
ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ| [೩೧]

ಎಂದು ಹೇಳಿದ್ದಾನೆ. ಇಂತಹ ಹಲವಾರು ಹೆಚ್ಚು ಪ್ರಖ್ಯಾತಿಯನ್ನು ಪಡೆದುಕೊಂಡ ಶ್ಲೋಕಗಳಿವೆ. ಮೇಲಿನ ಶ್ಲೋಕವು ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿರುವ ಶ್ಲೋಕ. ಈ ಶ್ಲೋಕದಲ್ಲಿ ಮನುವು ಸ್ತ್ರೀಯ ಯಾವುದೇ ಬಗೆಯ ಸ್ವತಂತ್ರವನ್ನು ಪಡೆದುಕೊಳ್ಳುವದಕ್ಕೆ ಅನರ್ಹಳಾಗಿದ್ದಾಳೆ ಎಂದು ಹೇಳಿದ್ದಾನೆ. ಅಲ್ಲದೆ ಸ್ತ್ರೀಯು ಪಿತ, ಪತಿ, ಸುತರ ಆಶ್ರಯ ಮತ್ತು ರಕ್ಷಣೆಯಲ್ಲಿಯೇ ಇರಬೇಕೆಂದು ವಿಧಿಸಿದ್ದಾನೆ. ಅದೇ ರೀತಿಯಾಗಿ ಎಲ್ಲಿ ಸ್ತ್ರೀ ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂಬರ್ಥವುಂಟು.

ಯತ್ರ ನಾರ್ಯಸ್ತು ಪೂಜ್ಯಂತೆ
ತತ್ರ ರಮಂತೆ ದೇವತಾಃ [೩೨]

ಈ ಶ್ಲೋಕವು ಸಹಿತ ಅತ್ಯಂತ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಎರಡೂ ಶ್ಲೋಕಗಳು ಮೇಲುನೋಟಕ್ಕೆ ಸ್ತ್ರೀಯರಿಗೆ ಗೌರವ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಂತೆ ಕಂಡುಬರುತ್ತವೆಯಾದರೂ ಸೂಕ್ಷ್ಮವಾಗಿ ನೋಡಿದಾಗ ಸ್ತ್ರೀ ವಿರೋಧಿಯಾದ ಅಂಶಗಳೇ ಮನುವಿನ ಪ್ರಸಿದ್ಧ ಶ್ಲೋಕದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸ್ತ್ರೀಯರು ಪೂಜಿಸಲ್ಪಡುವಲ್ಲಿ ದೇವತೆಗಳು ವಾಸಿಸುತ್ತಾರೆ ಎಂಬ ವಾಕ್ಯವನ್ನು ನೋಡಿದಾಗ ಸ್ತ್ರೀಯರ ಸ್ವತಂತ್ರ ಕಸಿದುಕೊಳ್ಳುವ ಪುರುಷನ ಹುನ್ನಾರು ಕಂಡುಬರುತ್ತದೆ. ಯಾವ ರೀತಿಯಾಗಿ ದೇವರನ್ನು ಪ್ರತ್ಯೇಕವಾದ ಕೊಠಡಿಯಲ್ಲಿಟ್ಟು ಪೂಜಾಸಮಯದಲ್ಲಿ ಮಾತ್ರ ಬಾಗಿಲು ತೆರೆಯುತ್ತೇವೆಯೊ ಅದೇ ಪ್ರಕಾರವಾಗಿ ಸ್ತ್ರೀ ಯಾವಾಗಲು ಪುರುಷನ ಆಶ್ರಯದಲ್ಲಿರಬೇಕು. ಅವಳಿಗೆ ಸ್ವತಂತ್ರ ಕೊಡಬಾರದು ಎಂದು ಮನು ವಿಧಿಸುತ್ತಾನೆ. ಅವಳು ಪಿತ, ಪತಿ,

[illegible]

ಸುತರ ಆಶ್ರಯದಲ್ಲಿರುವಾಗ ಸುರಕ್ಷತೆಯಿಂದ ಇರುತ್ತಾಳೆನ್ನುವ ಕಳಕಳಿ ಮನುವಿನ ನೇಮದಲ್ಲಿದೆಯಾದರೂ ಅದಕ್ಕಿಂತ ಸ್ವತಂತ್ರ ಅಪಹರಣದಂತಹ ಸ್ತ್ರೀ ವಿರೋಧಿ ಭಾವಗಳೇ ಗಾಢವಾಗಿರುವುದು ನಿಚ್ಚಳವಾಗಿ ತೋರುತ್ತದೆ.

"ಸ್ತ್ರೀಯು ತಂದೆಯಿಂದ, ಅಣ್ಣತಮ್ಮಂದಿರಿಂದ, ಗಂಡನಿಂದ ಮತ್ತು ತನ್ನ ಇತರ ಸಂಬಂಧಿಗಳಿಂದಲೂ ಗೌರವಿಸಲ್ಪಡಬೇಕು ಮತ್ತು ಪೂಜಿಸಲ್ಪಡಬೇಕು. ಅವಳ ಇಚ್ಛೆ ಅಥವಾ ಅಪೇಕ್ಷೆಯು ಸ್ವಾರ್ಥ ಏಳ್ಗೆಯನ್ನು ಬಯಸುವುದೇ ಆಗಿದೆ."[೩೩] ಎಂಬಲ್ಲಿಯೂ ಸಹಿತ ಸ್ವಾರ್ಥ ಅಡಕವಾಗಿರುವುದು ಕಂಡುಬರುತ್ತದೆ. ಪತ್ನಿಯಾದವಳು ಪತಿಯನ್ನು ಪರಮೇಶ್ವರನೆಂದು ತಿಳಿದುಕೊಂಡು, ಪತಿಗೆ ಸದಾ ವಿಧೇಯಳಾಗಿದ್ದು ಮನೆ ಕೆಲಸಗಳೊಡನೆ ಮಕ್ಕಳ ಪಾಲನೆಯನ್ನು ಮಾಡಿದರೆ ಅವಳ ಕರ್ತವ್ಯ ಮುಗಿದಂತೆ. ಅಲ್ಲಿಗೆ ಅವಳ ವ್ಯಕ್ತಿತ್ವ ಕೊನೆಗೊಳ್ಳುತ್ತದೆ. ಗಂಡ, ಮನೆ, ಮಕ್ಕಳು ಎನ್ನುವ ಸೀಮಿತ ಪ್ರಪಂಚವನ್ನು ಬಿಟ್ಟರೆ ಮಹಿಳೆಗೆ ಮತ್ತೆ ಬೇರಾವ ಪ್ರಪಂಚ ಇಲ್ಲವೆನ್ನುವುದು ಮನುವಿನ ಇಂಗಿತವಾಗಿದೆ. ಒಟ್ಟಾರೆಯಾಗಿ ಈ ವ್ಯವಸ್ಥೆಯಲ್ಲಿ ಸೀಮಿತ ಕೌಟುಂಬಿಕ ನೆಲೆಯೊಳಗೆ ಸ್ತ್ರೀಯ ವ್ಯಕ್ತಿತ್ವವು ತೀರಾ ಮೊಟಕುಗೊಳ್ಳುವ ಅಪಾಯಕಾರಿ ಅಂಶ ಎದ್ದುಕಾಣುತ್ತದೆ. ಒಟ್ಟಿನಲ್ಲಿ ಸ್ತ್ರೀಯು ತನ್ನ ಬದುಕಿಗೆ ಯಾವುದೇ ಘಟ್ಟದಲ್ಲಿಯಾಗಲಿ ಪುರುಷ ರಕ್ಷಣೆ, ಪೋಷಣೆಯ ಭದ್ರತೆ ಇಲ್ಲದೆ ಸ್ವತಂತ್ರವಾಗಿ ಜೀವಿಸುವುದು ಅಸಾಧ್ಯವಾಗಿತ್ತು. ಈ ಕಾರಣದಿಂದಾಗಿ ಸ್ತ್ರೀಯರ ಸ್ಥಾನಮಾನಗಳು ಪುರುಷನಿಗಿಂತ ಕೆಳಮಟ್ಟದಲ್ಲಿಯೇ ಇದ್ದವು ಎಂಬುದು ಸ್ಪಷ್ಟವಾಗಿದೆ.[೩೪]

ಈ ಸಂದರ್ಭದಲ್ಲಿ ವರಾಹಮಿಹಿರಾಚಾರ್ಯರು ಸ್ತ್ರೀಪರವಾಗಿ ತನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸಿರುವುದು ನಿಜವಾಗಿರುವಂತೆ ಅಚ್ಚರಿಯೂ ಆಗಿದೆ. ಸ್ತ್ರೀ ಪುರುಷರಿಬ್ಬರನ್ನೂ ಸಮಾನತೆಯಿಂದ ಕಾಣುವ ವರಾಹಮಿಹಿರಾಚಾರ್ಯನನ್ನು ಸಂಶೋಧಕ ಆರ್.ಸಿ.ಮಜುಂದಾರ್ ಶ್ಲಾಘಿಸಿದ್ದಾರೆ. ಸ್ತ್ರೀಪರವಾದಿಯಾಗಿರುವ ವರಾಹಿಮಿಹಿರಾಚಾರ್ಯನು ತನ್ನ "ಬೃಹತ್ ಸಂಹಿತೆ" ಎಂಬ ಗ್ರಂಥದಲ್ಲಿ ಸ್ತ್ರೀ ನಿಂದೆ ಎಷ್ಟು ಪ್ರಬಲವಾಗಿತ್ತು ಎನ್ನುವುದಕ್ಕೆ ಸಾಕ್ಷಿ ಪುರಾವೆಗಳನ್ನು ಒದಗಿಸುದರೊಂದಿಗೆ ಸ್ತ್ರೀಯರ ಗುಣಾತಿಶಯಗಳನ್ನು ಹಾಗೂ ಸ್ತ್ರೀ ಪುರುಷರ ಸಮಾನತೆಯ ವಿಚಾರಗಳನ್ನು ಹೊರಗೆಡಹುತ್ತಾನೆ. ಸ್ತ್ರೀ ವಿರೋಧಿಯಂತಹ ಪ್ರಾಚೀನ ಕಾಲದಲ್ಲಿ ಬದುಕಿದ್ದರೂ ವರಾಹಮಿಹಿರನು ಆತ್ಯಾಧುನಿಕವಾಗಿ ಯೋಚಿಸಬಲ್ಲ ಖಗೋಳ ತಜ್ಞನಾಗಿದ್ದಾನೆ. ಪ್ರಾಚೀನ ವಿದ್ವಾಂಸರಗಳಿಗೂ ಈ ವರಾಹಿಮಿಹಿರನಿಗೂ ಇರುವ ವ್ಯತ್ಯಾಸವನ್ನು ಆರ್.ಸಿ.ಮಜುಂದಾರ್ ಗುರುತಿಸಿ ಶ್ಲಾಘಿಸಿದ್ದಾರೆ.[೩೫] ಸ್ತ್ರೀ ವಿರೋಧಿ ಭಾವಗಳು ಜೀವಂತವಾಗಿರುವ ಪರಂಪರೆಯಲ್ಲಿ ಹುಟ್ಟಿ ಅಂತಹದೇ ವಾತಾವರಣದಲ್ಲಿ ಬೆಳೆದಿರುವ ವರಾಹಮಿಹಿರನು ಸ್ತ್ರೀಯರನ್ನು ಕುರಿತು ಪೂರ್ವಾಗ್ರಹಪೀಡಿತ ರಹಿತ ಸಮದೃಷ್ಟಿಯನ್ನು ಹೊಂದಿದ್ದಾನೆ.

ಸ್ತ್ರೀ ನಿಂದನೆಯನ್ನು ಮಾಡುವವರು ಅವರ ಗುಣಾತಿಶಯಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ವರಾಹಮಿಹಿರನು ಭಾವಿಸುತ್ತಾನೆ. ಸ್ತ್ರೀಯರನ್ನು ನಿಂದಿಸುವ ಪುರುಷರಿಗೆ ಪ್ರಶ್ನೆಗಳನ್ನು ಕೇಳುತ್ತಾನೆ. ವರಾಹಮಿಹಿರನ ಅಭಿಪ್ರಾಯದಂತೆ ಸ್ತ್ರೀಯರು ಚಂದ್ರನಿಂದ ಪಾವಿತ್ರ್ಯವನ್ನು ಪಡೆದುಕೊಂಡಿದ್ದಾರೆ. ಗಂಧರ್ವರಿಂದ

ಸುಸಂಸ್ಕೃತವಾಣಿಯನ್ನು ಮತ್ತು ಅಗ್ನಿಯಿಂದ ಸರ್ವ ಭಕ್ಷಿತ್ವವನ್ನು ಸ್ತ್ರೀಯರು ಪಡೆದುಕೊಂಡಿದ್ದಾರೆ. ಇಂತಹ ಸ್ತ್ರೀಯರು ಪುಟಕಿಟ್ಟ ಚಿನ್ನದಂತೆ ಎಂದು ಸ್ತ್ರೀಯರ ಗುಣಗಾನವನ್ನು ವರಾಹಮಿಹಿರನು ಮಂಡಿಸಿದ್ದಾನೆ.

ದಂಪತಿಗಳು ಪರಸ್ಪರ ನಂಬುಗೆಯನ್ನು ಕಳೆದುಕೊಂಡಾಗ ಅವರ ಅಪರಾಧಗಳಿಗೆ ನ್ಯಾಯಶಾಸ್ತ್ರವು ಸಮಾನ ಸ್ಥಾನಮಾನವನ್ನು ಅವರಿಬ್ಬರಿಗೂ ಕೊಟ್ಟಿದೆ. ಅದಾಗ್ಯೂ ಸ್ತ್ರೀಯರು ತಮ್ಮ ಅಪಮಾನಗಳನ್ನು ಸುಲಭವಾಗಿ ಒಪ್ಪಿಕೊಂಡಷ್ಟು ಪುರುಷರು ತಮ್ಮ ಒಪ್ಪಿಗೆಯನ್ನು ಕೊಡುವದಿಲ್ಲ. ಯಾಕೆಂದರೆ ಪುರುಷರಿಗೆ ತಮ್ಮ ಅಪರಾಧಗಳು ತೀರ ಸಣ್ಣವಾಗಿ ಕಾಣುತ್ತವೆ. ಆದರೆ ಅವೇ ತಪ್ಪುಗಳು ಸ್ತ್ರೀಯಿಂದ ಉಂಟಾದರೆ ಅದು ಮಹಾಪರಾಧವಾಗುತ್ತದೆ. ಈ ತಾರತಮ್ಯ ಖಗೋಳತಜ್ಞ ವರಾಹಮಿಹಿರನನ್ನು ಕೆರಳಿಸಿದೆ. ಮಾನವ ಸಮಾಜದ ಅಸಮಾನತೆಯ ವ್ಯವಸ್ಥೆಯನ್ನು ಸರಿಮಾಡುವ ಪ್ರಯತ್ನಕ್ಕೆ ಕೈಹಾಕುತ್ತಾನೆ.

ಭಾರತದ ಅರಸೊತ್ತಿಗೆಯ ಇತಿಹಾಸವನ್ನು ಗಮನಿಸಿದಾಗ ರಾಣಿಯಾಗಿರುವ ಅನೇಕ ಸ್ತ್ರೀಯರು ರಾಜಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡು ಉದಾಹರಣೆಗಳು ಕಂಡುಬರುತ್ತವೆ. ಚೀನಾ ದೇಶದ ಪ್ರವಾಸಿಯಾಗಿರುವ ಹ್ಯೂಯೆನ್ ತ್ಸಾಂಗನು ೭ನೆಯ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ್ದನು. ಅವನು ತನ್ನ ಸಿ.ಯು.ಕಿ.ಯಲ್ಲಿ ಸ್ತ್ರೀ ರಾಜ್ಯವನ್ನು ವರ್ಣಿಸುತ್ತಾನೆ. ಹಿಮಾಲಯದ ತಪ್ಪಲಲ್ಲಿರುವ ಪ್ರದೇಶವೇ ಕುಮಾವೂಂ ಗರವಾಲ್ ಎಂಬುದು ಈಗ ಬ್ರಹ್ಮಪುರುವಾಗಿರುವ ಇದಕ್ಕೆ ತೀರ ಪೂರ್ವದಲ್ಲಿ ''ಸುವರ್ಣಗೋತ್ರವೆಂಬ ಹೆಸರಿತ್ತು. ಇಲ್ಲಿ ವಂಶಪರಂಪರಾಗತವಾಗಿ ಸ್ತ್ರೀಯರೇ ರಾಜ್ಯಸೂತ್ರವನ್ನು ಹಿಡಿದುಕೊಂಡಿದ್ದರು.[೩೬] ಮೃಗನಯನೆಯು ಭಾರತ ಇತಿಹಾಸದಲ್ಲಿ ಪ್ರಸಿದ್ಧಳಾಗಿದ್ದಾಳೆ. ಗ್ವಾಲಿಯರದ ರಾಜಾ ಮಾನಸಿಂಗನ (೧೪೮೬ - ೧೫೧೬) ಪತ್ನಿಯಾದ ಮೃಗನಯನೆಯು ನಾಲ್ಕು ಬಗೆಯ ಸ್ವರಪದ್ಧತಿಗಳನ್ನು ನಿರ್ಮಿಸಿದ್ದಾಳೆ.[೩೭] (ಗುಜರಿ, ಬಾಬುಲ್ ಗುಜರಿ, ಮಾಲ್ ಗುಜರಿ ಮತ್ತು ಮಂಗಲ್ ಗುಜರಿ)

ಚೀನಿ ಪ್ರವಾಸಿಯಾದ ಹ್ಯೂಯೆನ್ ತ್ಸಾಂಗನು ಹರ್ಷವರ್ಧನನ ಸಹೋದರಿಯಾಗಿರುವ ರಾಜ್ಯಶ್ರೀಯು ಬೌದ್ಧಧರ್ಮದ ವ್ಯಾಸಂಗವನ್ನು ಬಹಳ ಚೆನ್ನಾಗಿ ಮಾಡಿರುವಳಲ್ಲದೆ ಅರಸನೊಂದಿಗೆ ಧಾರ್ಮಿಕ ಚರ್ಚೆಯಲ್ಲಿ ಭಾಗವಹಿಸಿರುವುದನ್ನು ಗಮನಿಸಿದ್ದಾನೆ.[೩೮] (ಮಹಿಳೆ ಒಂದು ಅಧ್ಯಯನ, ಪ್ರಾಚೀನ ಸ್ತ್ರೀ ಶಿಕ್ಷಣ, ಡಾ.ಜೋತ್ಸ್ನಾ ಕಾಮತ್, ಪು. ೩೭)

ಪುರಾಣಗಳ ಕಾಲದಲ್ಲಿ ಸ್ತ್ರೀಯರಿಗೆ ಸ್ವಯಂವರದಂತಹ ಸ್ವಾತಂತ್ರ್ಯವನ್ನು ನೀಡಿದರೂ, ಸ್ತ್ರೀಯನ್ನು ತೊರೆದವನಿಗೆ ಮುಕ್ತಿ ಎಂಬ ನಂಬಿಕೆ ಬಲವಾಗಿ ಇದ್ದಿರುವಂತೆ ಕಂಡುಬರುತ್ತದೆ. ಸುಭದ್ರವಾದ ಸಮಾಜ ರಚನೆಯ ಚೌಕಟ್ಟಿನೊಳಗೆ ಸ್ತ್ರೀಯು ತನ್ನ ಬದುಕನ್ನು ಯಾವುದೇ ಕಾಲದಲ್ಲಿಯಾಗಲಿ ರೂಪಿಸಿಕೊಳ್ಳಬೇಕಾದ ಸತ್ಯವನ್ನು ಅಲ್ಲಗಳೆಯಲಾಗದು. ರಾಮಾಯಣದ ಸೀತೆಯೇ ಈ ಮಾತಿಗೆ ಉದಾಹರಣೆಯಾಗಿದ್ದಾಳೆ. ಆದರೆ ಮಹಾಭಾರತದ ದ್ರೌಪದಿಯು ಮಾತ್ರ ಇಂತಹ ವ್ಯವಸ್ಥೆಗೆ ಪ್ರಶ್ನೆಗಳನ್ನು ಕೇಳುವ ಸ್ತ್ರೀವಾದಿ ವ್ಯಕ್ತಿತ್ವವುಳ್ಳವಳು ಎಂದೆನಿಸಿದರೂ

ಪರಿಸ್ಥಿತಿಯೊಡನೆ ರಾಜಿಮಾಡಿಕೊಳ್ಳುವ ಅಸಹಾಯಕಿಯೂ ಆಗಿದ್ದಾಳೆ. ಆದುದರಿಂದಲೇ ಮಾಸ್ತಿಯವರು "ದ್ರೌಪದಿ ಭಾರತ ಕಥೆಯ ಏಕಮಾತ್ರ ಸ್ತ್ರೀಮೂರ್ತಿ" ಎಂದಿದ್ದಾರೆ. ಮತ್ತು ಸ್ತ್ರೀಯರು ವೀರವನಿತೆಯರಾಗಬೇಕೆಂದಾಗ ಯಾವ ರೀತಿ ನಡೆದುಕೊಳ್ಳಬೇಕೆಂಬ ಪ್ರಶ್ನೆ ಇದಿರಾದರೆ, ಅದಕ್ಕೆ ಉತ್ತರ ಹೀಗಿದೆ "ದ್ರೌಪದಿಯಂತೆ ನಡೆಯಬೇಕು" ಹೀಗೆಂದು ಮಾಸ್ತಿ ದ್ರೌಪದಿಯನ್ನು ಹೊಗಳುತ್ತಾರೆ.[೩೯]

ಸ್ತ್ರೀಯರು ಸತಿಯರಾಗುವುದು ಅಥವಾ ಸತಿ ಹೋಗುವುದು ಸಹಿತ ಮಹಿಳೆಯರಿಗೆ ಸಮಾಜ ಕೊಟ್ಟ ಒಂದು ಸುವ್ಯವಸ್ಥಿತ ಶಾಪವೇ ಆಗಿದೆ. "ಮಹಾಸತಿ" ಯಾವಾಗ ರೂಢಿಯಲ್ಲಿ ಬಂದಿತು? ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಸಿಗಲಾರದು. ಆದರೆ ಅದರ ಅರ್ಥ ದೊರಕುತ್ತದೆ. ತಾನು ಭಕ್ತಿಯಿಂದ ಪೂಜಿಸುವ ಭಗವಂತನಿಗಾಗಿ ತನ್ನ ಪ್ರಾಣವನ್ನು ತೊರೆದರೆ ಅದು ಆತ್ಮ ಬಲಿದಾನವಾಗುತ್ತದೆ. ತನ್ನ ಯಜಮಾನನ ಸಲುವಾಗಿ ಸೇವಕನು ಪ್ರಾಣವನ್ನು ತೊರೆದರೆ ಅದು ವೇಳಿವಾಳಿ ಮರಣ ಎಂದು ಅರ್ಥವಾಗುತ್ತದೆ. ತನ್ನ ಪತಿಯ ಸಾವಿನ ನಂತರ ಪತ್ನಿಯೂ ಸಹಿತ ಅಗ್ನಿಪ್ರವೇಶದ ಮೂಲಕ ಸಾವನ್ನು ಸ್ವಾಗತಿಸಿದರೆ ಅವಳು ಸತಿ, ಮಹಾಸತಿಯಾಗುತ್ತಿದ್ದಳು. ಮಾಸ್ತಿ ಎಂಬುದು ಮಹಾಸತಿ ಪದದ ತದ್ಭವ ರೂಪವಾಗಿದೆ.

ಧಾರ್ಮಿಕರು ಸತಿ ಪದ್ಧತಿಯು ವೇದಗಳ ಕಾಲದಿಂದಲೇ ಆರಂಭಗೊಂಡಿದೆ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಪುರಾಣತಜ್ಞ ಅಥವಾ ಪುರಾಣಪ್ರಿಯರು ಶಿವನಿಂದೆಯನ್ನು ಸಹಿಸಲಾರದೆ ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ದಾಕ್ಷಾಯಿಣಿ ಹಾರಿ ಜೀವತ್ಯಾಗ ಮಾಡಿದ ದಿನದಿಂದಲೇ ಆರಂಭವಾಗಿರಬೇಕೆಂದು ಆಲೋಚಿಸುತ್ತಾರೆ. ಆದರೆ ಸ್ತ್ರೀವಾದಿಗಳು ಪುರುಷರ ಹಿರಿಮೆಯನ್ನು ಸದಾ ಎತ್ತಿಹಿಡಿಯುವದಕ್ಕಾಗಿ ಪುರುಷರೇ ಇಂತಹ ಅಮಾನವೀಯ ಪದ್ಧತಿಗೆ ಜನ್ಮಕೊಟ್ಟು ಅದನ್ನು ಪ್ರಚಾರ ಮಾಡುತ್ತಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಸಂಶೋಧಕರಾದ ಅಲ್ಟೇಕರ ಅವರು ಈ ಪದ್ಧತಿ ಅತ್ಯಂತ ಪ್ರಾಚೀನ ಕಾಲದಲ್ಲಿಯೂ ಕೂಡ ಪ್ರಚಲಿತದಲ್ಲಿತ್ತು ಎಂದು ಹೇಳಿದ್ದಾರೆ. ಮತ್ತು ಸತಿ ಪದ್ಧತಿಯ ಪ್ರಚಾರದ ವಿಷಯಗಳನ್ನು ಅವರಿಂದಲೇ ತಿಳಿದುಕೊಳ್ಳಬಹುದಾಗಿದೆ.[೪೦] ಆದರೆ ಅಥರ್ವವೇದದಲ್ಲಿರುವ ಉಲ್ಲೇಖವೇ ಬೇರೆಯಾಗಿದೆ. ವಿಧವಾ ಸ್ತ್ರೀಯು ಸಹಗಮನವನ್ನು ಸ್ವಇಚ್ಛೆಯಿಂದಲೇ ಕೈಗೊಂಡರೂ, ಹಾಗೆ ಮಾಡುವದಕ್ಕೆ ಆಸ್ಪದ ಕೊಡದ ಜನ ನೀನು ನಿನ್ನ ಮಕ್ಕಳ ಸಂಪತ್ತಿನೊಂದಿಗೆ ಸುಖಮಯವಾಗಿ ಜೀವಿಸು" ಎಂದು ಪ್ರಾರ್ಥನೆಯನ್ನು ಮಾಡುತ್ತಿದ್ದರು.[೪೧]

ಪ್ರಾಚೀನ ಸ್ಮೃತಿಕಾರರಾಗಿರುವ ಮನುವಾಗಿಲಿ ಅಥವಾ ಯಜ್ಞವಲ್ಕ್ಯನಾಗಲಿ 'ಮಹಾಸತಿ' ಕುರಿತಾಗಿ ಏನನ್ನು ಹೇಳಿಲ್ಲ.[೪೨] ಆದರೆ ಅಗ್ನಿಪುರಾಣದಲ್ಲಿ ಈ ಕುರಿತಾದ ದಾಖಲೆಯು ದೊರೆಯುತ್ತದೆ. ಅದು ಏನೆಂದರೆ "ಮರಣ ಹೊಂದಿದ ಪತಿಯ ಜತೆಯಲ್ಲಿ ಅಗ್ನಿಪ್ರವೇಶ ಮಾಡಿದ ವಿಧವೆ ಪತಿ ಸಹಿತ ಸ್ವರ್ಗಕ್ಕೆ ಹೋಗುತ್ತಾಳೆ."[೪೩] ಹೀಗಿದ್ದರೂ ಗರ್ಭವತಿ ಸ್ತ್ರೀಯರ, ತೀರ ಸಣ್ಣ ಮಕ್ಕಳಿರುವ ತಾಯಿಯರು ಸತಿ ಹೋಗುವದನ್ನು ನಿಷೇಧಿಸಲಾಗಿತ್ತು. ಭಾರತದ ತುಂಬಾ ಸತಿಪದ್ಧತಿ ಗಾಢವಾಗಿ ವ್ಯಾಪಿಸಿತ್ತು. ಉತ್ತರಭಾರತದ ಕಾಶ್ಮೀರ, ಪಂಜಾಬ್ , ರಾಜಸ್ಥಾನಗಳಲ್ಲಿ ಇಂದೂ ತುಂಬಾ ಗಾಢವಾಗಿದೆ.[೪೪]

ಪುನರ್ಜನ್ಮದ ನಂಬಿಕೆ, ಪತಿವ್ರತಾ ಧರ್ಮದ ಗಾಢವಾದ ನಂಬಿಕೆಗಳೇ 'ಸತಿ' ರೂಢಿಗೆ ತಳಹದಿಯಾಗಿವೆ. ಈ ಜನ್ಮದಲ್ಲಿ ಗಂಡನೊಡನೆ ತೀರಿಕೊಂಡರೆ ಜನ್ಮಾಂತರಗಳಲ್ಲಿ ಅವನನ್ನೇ ಪತಿಯನ್ನಾಗಿ ಪಡೆದುಕೊಳ್ಳಬಹುದೆನ್ನುವ ನಂಬಿಕೆಯನ್ನು ಆ ಕಾಲದವರು ಹೊಂದಿದ್ದರು. ಅಲ್ಲದೆ ಹಾಗೆ ಅಗ್ನಿಪ್ರವೇಶ ಮಾಡಿದರೆ ಸ್ವರ್ಗದಲ್ಲಿ ತಮ್ಮ ಪ್ರಿಯ ಪತಿಯೊಡನೆ ಸುಖವಾಗಿರಬಹುದೆಂದು ಕಲ್ಪನೆಯು ಅತ್ಯಂತ ಆಕರ್ಷಕವಾಗಿತ್ತು. ಹೀಗೆ ಅಗ್ನಿಪ್ರವೇಶ ಮಾಡಲಿರುವ ಸ್ತ್ರೀಯು ಸಾಲಂಕೃತಳಾಗಿ ಮದುವೆ ಹೆಣ್ಣಿನ ರೂಪದಲ್ಲಿರುತ್ತಿದ್ದಳು. ನಂತರ ಮಹಾಸತಿಯ ಗೌರವಾರ್ಥ ಸ್ಮಾರಕಗಳನ್ನು ನಿಲ್ಲಿಸುವ ಪದ್ಧತಿಯು ಬಳಕೆಯಲ್ಲಿ ಬಂದಿತು.

ಪತಿಯು ಯಾವುದೇ ರೀತಿಯ ಮರಣಕ್ಕೆ ತುತ್ತಾಗಿದ್ದರೂ ಪತ್ನಿಯೂ ಅವನನ್ನು ಹಿಂಬಾಲಿಸಲು ನರಕ ಸದೃಶ ವಿಧವೆಯ ಬಾಳಿನ ಭಯವೇ ಕಾರಣವಾಗಿದೆ. ವಿಧವೆಯ ಅಪಮಾನಕರವಾದ ಬಾಳುವೆಗಿಂತ ಒಂದೇ ಕ್ಷಣದಲ್ಲಿ ಸತಿ ಹೋಗಿ ದೈವತ್ವವನ್ನು ಪಡೆದುಕೊಳ್ಳುವುದೇ ಹೆಚ್ಚು ಆಕರ್ಷಕವಾಗಿ ಕಂಡಲ್ಲಿ ಅಚ್ಚರಿಪಡಬೇಕಾಗಿಲ್ಲ.

'ಸತಿ'ಯಂತೆ ದೇವದಾಸಿ ಪದ್ಧತಿಯು ಸಹಿತ ಸ್ತ್ರೀಲೋಕದ ಒಂದು ಕರಾಳಪುಟವಾಗಿದೆ. ದೇವದಾಸಿಯರೆಂದರೆ ದೇವಾಲಯಗಳಲ್ಲಿ ಗಾಯನ, ನರ್ತನಗಳ ಮೂಲಕ ಭಗವಂತನ ಸೇವೆಯನ್ನು ಮಾಡುತ್ತ ಕಾಲ ಕಳೆಯುವವರು ದೇವದಾಸಿಯರಾಗಿದ್ದಾರೆ. ಸೋಮೇಶ್ವರ ಕವಿಯ ಕೃತಿಯಾದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಈ ದೇವದಾಸಿಯ ಉಲ್ಲೇಖ ಬರುತ್ತದೆ.[೪೫] "ಗ್ರಹಂ ಗ್ರಾಮಸ್ತಥಆ ಭೂಮಿರ್ದಾನೆಕಾದ್ಯಾ ವಿಭೂಷಣಂ" ಇಲ್ಲಿ ದಾಸಿಯರೆಂದರೆ ದೇವದಾಸಿ. ಒಂದು ಅಚ್ಚರಿಯ ಸಂಗತಿಯೆನೆಂದರೆ ದೇವದಾಸಿ ಸ್ತ್ರೀಯರೊಂದಿಗೆ ಸಂಬಂಧ ಹೊಂದುವದನ್ನು ಪುಣ್ಯಕಾರಿಯೆಂದು ಪ್ರಾಚೀನ ಈಜಿಪ್ತ್, ಸಿರಿಯಾ, ಅರೇಬಿಯಾ ಮುಂತಾದ ದೇಶಗಳಲ್ಲಿ ನಂಬಿದ್ದರು.[೪೬] ಭಾರತದಲ್ಲಿ ಈ ಸಂಪ್ರದಾಯವು ಸು.ಕ್ರಿ.ಶ.ಮೂರನೆಯ ಶತಮಾನದಲ್ಲಿ ಪ್ರಾರಂಭವಾಗಿರಬೇಕು. ಡಾ.ಅಲ್ಟೇಕರ ಅವರ ಅಭಿಪ್ರಾಯದಂತೆ ಈ ಸಂಪ್ರದಾಯವನ್ನು ಆರಂಭದಲ್ಲಿ ಬ್ರಾಹ್ಮಣರು ವಿರೋಧಿಸಿದರೂ, ಅರಸು, ಚಕ್ರವರ್ತಿಗಳ ಒತ್ತಾಯದಿಂದ ಈ ಪದ್ಧತಿ ಮುಂದುವರೆಯುವದಕ್ಕೆ ಸಾಧ್ಯವಾಯಿತು ಎನ್ನುತ್ತಾರೆ.[೪೭] ಆದರೆ ಪ್ರಾಚೀನ ಕಾಲದಿಂದಲೂ ಈ ಪದ್ಧತಿಯು ನಡೆದುಬಂದು, ಈ ವಿಷಯಕ್ಕೆ ಸಂಬಂಧಪಟ್ಟ, ಹಾಗೆ ಜಾರಾ, ನಟಿ ಎಂಬ ಶಬ್ದಗಳು ಋಗ್ವೇದದಲ್ಲಿ ಕಂಡುಬಂದಿವೆ.[೪೮]

ಏನೇ ಆಗಲಿ, ಗಂಡಿನ ದೌರ್ಜನ್ಯ, ಹೆಣ್ಣು ಗಂಡುಗಳ ದೌರ್ಬಲ್ಯದ ಕಾರಣದಿಂದಾಗಿ ಅಸ್ತಿತ್ವಕ್ಕೆ ಬಂದ ಪ್ರತಿಷ್ಠೆಯ, ಗೌರವದ ಸೋಗಿನಲ್ಲಿ ನಡೆದುಕೊಂಡು ಬಂದಿರುವ ಪದ್ಧತಿ ಇದು.

ಊ. ವರದಕ್ಷಿಣೆ - ಸ್ತ್ರೀ

ವರದಕ್ಷಿಣೆಯೆಂದರೆ ಮದುವೆಯ ಕಾಲದಲ್ಲಿ ವಧುವಿನ ತಾಯಿ - ತಂದೆಯರು ವರನಿಗೆ ಅರ್ಪಿಸುವ ಕನ್ಯಾದಾನದ ಜತೆಗಿನ ದಕ್ಷಿಣೆಯೇ ವರದಕ್ಷಿಣೆಯಾಗಿದೆ. ಪ್ರಾಚೀನ ಅಥವಾ ಮಧ್ಯಕಾಲದಲ್ಲಿ ತಮ್ಮ ಮಗಳಿಗೆ ಅವಳ ಪಾಲಕರು ಗೃಹಕೃತ್ಯಕ್ಕೆ ಅತಿ ಅಗತ್ಯವಾದ ಪಾತ್ರೆಗಳ ಜತೆ ಹಾಲು ಕರೆಯಬಹುದಾದ ಹಸು - ಕರು ಮತ್ತು

ಸೇವಕ ಸೇವಕಿಯರನ್ನು ತಮ್ಮ ಮಗಳು ಗಂಡನ ಮನೆಗೆ ಹೋಗುವಾಗ ಕಳಿಸುವ ಸಂಪ್ರದಾಯವಿತ್ತು. ಇದನ್ನು ಪಿ.ವಿ.ಕಾಣೆಯವರು ತಮ್ಮ ಧರ್ಮಶಾಸ್ತ್ರದ ಚರಿತ್ರೆಯ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. (ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಡಾ.ಪ್ರೀತಿ ಶುಭಚಂದ್ರ, ಪು. ೨೮೬) ಬಹುಶಃ ಮೇಲೆ ತಿಳಿಸಲಾದ ಪದ್ಧದತಿ ಕೇವಲ ಉಳ್ಳವರ ಮನೆತನದಲ್ಲಿದ್ದಿರಬೇಕು ಎನಿಸುತ್ತದೆ. ಡಾ. ಎ.ಎಸ್.ಅಲ್ಟೇಕರ್ ಹೇಳುವಂತೆ "ಮಧ್ಯಕಾಲೀನ ಯುಗದಲ್ಲಿ ರಜಪೂತರ ಮದುವೆಯ ಸಂದರ್ಭದಲ್ಲಿ ಈ ತೆರನಾದ ಕನ್ಯಾ ಶುಲ್ಕದಂತ ಸಂಪ್ರದಾಯ ಹೆಚ್ಚಾಯಿತು. (The Position of women in Hindu civilization- Dr.A.S.Altekar)

ಬರುಬರುತ್ತ ಈ ಪದ್ಧತಿ ಪುರುಷ ಪಾಲಕರಿಗೆ ಅತಿ ಪ್ರಿಯವಾಗಿರುವುದು ಕಂಡುಬಂದಿರುವ ಸತ್ಯವಾಗಿದೆ. ಸುಶಿಕ್ಷಿತ ಮಧ್ಯಮವರ್ಗದ ವಿದ್ಯಾವಂತ ವರಗಳ ಬೇಡಿಕೆಯೊಂದಿಗೆ ವರದಕ್ಷಿಣೆಯ ಮೊತ್ತದ ಬೇಡಿಕೆಯು ಹೆಚ್ಚಾಗಿರುವದನ್ನು ಅಲ್ಲಗಳೆಯಲಾಗದು. ವರದಕ್ಷಿಣೆ ಎನ್ನುವುದು ಮಂಗಳಕರ ಮದುವೆಯನ್ನೇ ಮಾರುಕಟ್ಟೆಯನ್ನಾಗಿಸಿದೆ. ಮಗಳ ಮದುವೆಯನ್ನು ಮಾಡಲು ಮನೆ - ಮಾರುಗಳನ್ನು ಕಳೆದುಕೊಂಡ ತಾಯಿ - ತಂದೆಯರ ಸ್ಥಿತಿ ಕರುಣಾಜನಕವಾಗಿದೆ. ಮದುವೆಯ ನಂತರವೂ ಇನ್ನೂ ಹೆಚ್ಚಿನ ಹಣ, ಒಡವೆ, ಸ್ಕೂಟರ್ ತರಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡ ಸ್ತ್ರೀಯರ ಸಂಗತಿಗಳು ತೀರಾ ಶೋಚನೀಯವಾಗಿವೆ. ಕೌಟುಂಬಿಕ ವ್ಯಾಪ್ತಿಯೊಳಗಡೆಗೆ ಸಮಾಜದ ಒಂದು ಪದ್ಧತಿಯಾಗಿ ರೂಪುಗೊಂಡಿರುವ ವರದಕ್ಷಿಣೆ ಪುರುಷ ಪ್ರಧಾನತೆಯೇ ಆಶೆಬುರಕತನಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಈ ರೀತಿಯಾಗಿ ಸ್ತ್ರೀಯನ್ನು ದೇವತೆಯಂತೆ, ವಿನಾಶಕಾರಿ, ವಿಚ್ಛಿದ್ರಕಾರಿ ಶಕ್ತಿಯಂತೆ ರೂಪಿಸಿಕೊಂಡ ಬಹು ದೊಡ್ಡ ಇತಿಹಾಸ ಭಾರತೀಯ ಪರಂಪರೆಯಲ್ಲಿದೆ. ಸ್ತ್ರೀಯನ್ನು ಮಾತೆಯೆಂದು ಗೌರವಿಸುವ ಸೂಚನೆ ಕಂಡುಬಂದಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಸಂದರ್ಭಗಳಲ್ಲಿ ಸ್ತ್ರೀಯ ಸ್ಥಾನ - ಮಾನ ಮೌಲ್ಯಧಾರಿತವಾಗಿ ಕಂಡುಬಂದಿದೆ. ಇವತ್ತಿನ ವೈಜ್ಞಾನಿಕ, ವೈಚಾರಿಕ ನೆಲೆಯಲ್ಲಿಯೂ ಅನೇಕ ವೈರುಧ್ಯ, ವಿಪರ್ಯಾಸಗಳನ್ನು ಎದುರಿಸುತ್ತಲೇ ಬದುಕುತ್ತಿರುವ ಸ್ತ್ರೀಯು ಉಳಿಸಿಕೊಂಡು ಬಂದಿರುವ ಸನಾತನ ಮೌಲ್ಯವೆಂದರೆ ಸಾಮಾಜಿಕ ಅಸ್ತಿತ್ವದಲ್ಲಿಯೇ ಅರಳಿದ ಸಂಸ್ಕೃತಿಯಿಂದಾಗಿ ಉಂಟಾಗುವ ಭಾವ ಪ್ರಚೋದನೆ ಮಾತ್ರ. ರಾಮಾಯಣದಲ್ಲಿ ಕಣ್ಣೀರಿನಲ್ಲಿ ಕೈ ತೊಳೆಯುವ ಸೀತೆ, ಮಹಾಭಾರತದಲ್ಲಿ ತನ್ನ ಪತಿಗಳಿಂದಾಗಿ ಅವಮಾನಿತಳಾಗಿ ಬದುಕನ್ನು ಹೋರಾಟದಲ್ಲಿಯೇ ಮುಗಿಸಿಬಿಡುವ ದ್ರೌಪದಿಯರು ಇಂದಿಗೂ ಪ್ರಸ್ತುತವೆನಿಸುತ್ತಾರೆ. ಇಂಥದೊಂದು ಪರಂಪರೆಯಲ್ಲಿ ಸ್ತ್ರೀಯ ಸ್ಥಾನ - ಮಾನ, ಸ್ತ್ರೀಯ ಚಿಂತನೆಯ ಸ್ಪಷ್ಟ ಚಿತ್ರಣವನ್ನು ಅಷ್ಟೊಂದು ಸುಲಭವಾಗಿ ಕೊಡಲಾಗದು. ಆದರೂ ಯಾವುದೇ ಯುಗವಾಗಿರಲಿ, ಯಾವುದೇ ಧರ್ಮವಾಗಿರಲಿ, ಯಾವುದೇ ದೇಶ ಭಾಷೆಯಾಗಿರಲಿ, ಸಮಾಜ, ಕೌಟುಂಬಿಕ ವ್ಯವಸ್ಥೆ, ಧಾರ್ಮಿಕ ವಿಧಿನಿಯಮಕ್ಕೆ ಸಂಬಂಧಪಟ್ಟ ವಿಷಯಗಳ ಕೇಂದ್ರಬಿಂದು ಸ್ತ್ರೀಯೇ ಆಗಿರುವುದು ಸತ್ಯವೂ, ಸ್ಪಷ್ಟವೂ ಆಗಿದೆ.

[illegible]

ಪಾಶ್ಚಾತ್ಯರ ಆಗಮನದಿಂದ ಸ್ತ್ರೀಯ ಸ್ಥಾನ, ಶಿಕ್ಷಣದಲ್ಲಿ ಕೊಂಚ ವ್ಯತ್ಯಾಸ ಉಂಟಾಗಿದ್ದು ಸತ್ಯ. ಆದರೂ ಸ್ತ್ರೀಯನ್ನು ಕೇವಲ ಗೃಹಿಣಿಯ ಸ್ಥಾನದಲ್ಲಿಯೇ ಇಡಲು ಸಂಪ್ರದಾಯವಾದಿಗಳು ಇಷ್ಟಪಟ್ಟರು. ಪಾಶ್ಚಾತ್ಯರ ವಿಚಾರದಿಂದ ಪ್ರಭಾವಿತರಾದ ಧುರೀಣರು, ಪ್ರಜ್ಞಾವಂತ ನಾಗರೀಕರೂ, ವ್ಯಕ್ತಿತ್ವದ ಅರ್ಥ ಗೊತ್ತಿರುವ ಮಹನೀಯರು ಸ್ತ್ರೀಯರ ಶಿಕ್ಷಣ, ಸ್ಥಾನ - ಮಾನ ಮುಂತಾದ ವಿಷಯಗಳಲ್ಲಿ ಆಸಕ್ತಿ ತೋರಿಸಿ, ಸ್ತ್ರೀಪರ ಜಗತ್ತಿನ ನಿರ್ಮಾಣದಲ್ಲಿ ನಿರತರಾದರು. ಈ ಸಂದರ್ಭದಲ್ಲಿಯೇ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ವ್ಯಾಪಕ ಮನ್ನಣೆ ಬೆಂಬಲ ದೊರೆತವು. ಬಂಗಾಲದಲ್ಲಿ ರಾಜಾರಾಮ ಮೋಹನರಾಯರು ಶಾಸ್ತ್ರಾಧ್ಯಯನದ ಮರುಪರಿಶೀಲನೆ ನಡೆಸಿ, ಸ್ತ್ರೀ ಶಿಕ್ಷಣ, ವಿಧವಾ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಗುವಂತೆ ಸಂಪ್ರದಾಯವಾದಿಗಳ ಮನವೊಲಿಸಿದರು. ಮುಂದೆ ದೇಶದಾದ್ಯಂತ ನಡೆಯಬಹುದಾದ ಸಾಮಾಜಿಕ ಆಂದೋಲನದ ಅಂಕುರ ಇಲ್ಲಿಂದಲೇ ಆರಂಭವಾಯಿತು.

ಸ್ತ್ರೀ ವಿಷಯಕ್ಕೆ ಸಂಬಂಧಪಟ್ಟಂತೆ ನಾರಿಜಾಗೃತಿ, ಸ್ತ್ರೀಶೋಷಣೆಯಂತ ವಿಚಾರಗಳಿಗೆ ಕನ್ನಡ ಸಾಹಿತ್ಯವು ಸಾಕಷ್ಟು ಪ್ರಮಾಣದಲ್ಲಿ ಸ್ಪಂದಿಸಿದೆಯಾದರೂ, ಜಾಗತಿಕ ಸಾಹಿತ್ಯ ಭಾರತೀಯ ಸಾಹಿತ್ಯಕ್ಕೆ ಹೋಲಿಸಿ ನೋಡಿದಾಗ ನಮ್ಮಲ್ಲಿಯ ಸಾಹಿತ್ಯಿಕ ಸ್ತ್ರೀ ಚಿಂತನೆ ಕಡಿಮೆ ಎನಿಸುತ್ತದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಪ್ರಥಮ ಸ್ತ್ರೀ ಚಿಂತಕಿಯೆಂದು ಅಕ್ಕಮಹಾದೇವಿಯನ್ನು ಹೆಸರಿಸಬಹುದು. ಚೌಕಟ್ಟಿನೊಳಗಿನ ವರ್ಣಗಳು, ಜಾತಿ ಪದ್ಧತಿಯನ್ನು ರೂಪುಗೊಳಿಸಿವೆ. ಇಂತಹ ಕಟ್ಟುನಿಟ್ಟಾದ ಕಟ್ಟುಪಾಡುಗಳನ್ನೊಳಗೊಂಡ ಸಾಮಾಜಿಕ ವ್ಯವಸ್ಥೆಗಳು ಕುಸಿಯುವ ಸಂದರ್ಭ ಬಂದಾಗ, ಸಮಾಜವು ಸ್ತ್ರೀಯ ಸ್ಥಾನವನ್ನು ಪರಾಧೀನತೆಗೆ, ನಿಕೃಷ್ಟ ಅವಮಾನಗಳಿಗೆ ಗುರಿಪಡಿಸಿರುವದನ್ನೂ ಮಾನವ ಇತಿಹಾಸದಿಂದ ನಮಗೆಲ್ಲ ಗೊತ್ತಿರುವ ಸಂಗತಿಯಾಗಿದೆ.

ಅಕ್ಕಮಹಾದೇವಿ ೧೨ನೆಯ ಶತಮಾನದಲ್ಲಿ ಕರ್ನಾಟಕ ಕಂಡ ಅದ್ಭುತ ಆಧ್ಯಾತ್ಮಿಕ ಸಾಧಕಿ. ಮಹಿಳಾ ಸಾಧಕಿಯರಲ್ಲಿ ಅಗ್ರಗಣ್ಯಳು. ಮಹಾಸಂತಳಾದ ಮೀರಾಬಾಯಿ, ಮಹಾಭಕ್ತೆಯಾದ ಅಂಡಾಳ್ ಮಹಾದೇವಿಯಂತೆ ಅಕ್ಕಮಹಾದೇವಿ ಸ್ತ್ರೀತ್ವದ ಪರಿಪೂರ್ಣತೆಯನ್ನು ಜಗತ್ತಿಗೆ ತೋರಿಸಿದವಳು.

ಅಕ್ಕಮಹಾದೇವಿಯು ಕೆಲವಾರು ವಚನಗಳಲ್ಲಿ ಕೌಟುಂಬಿಕ ದುಃಖಸ್ಥಿತಿಯನ್ನು ಹೇಳುತ್ತಾಳೆ.

ಒಲ್ಲೆ ಗಂಡನ ಕೂಟ ಒಗತನವ
ಅಕ್ಕಟ ಗಂಡನ ಮನೆ ಬಿರಿಸಯ್ಯಯ್ಯೊ।
ಒಡಕು ಗಂಗಳದಲ್ಲಿ ನೀರಂಬಲಿಯ ನೀಡಿ
ಹೊಡೆದಳು ನಮ್ಮತ್ತೆ ಮೊರದಲ್ಲಿ
ಕಡು ದುಃಖದಿಂದ ನಾ ಒಲೆಯ ಮುಂದೆ ಕುಳಿತಿರೆ
ಕೋಡಿತನದಿ ಬಂದು ಒದ್ದಳಯ್ಯಯ್ಯೊ। [೪೯]

[illegible]

[illegible]

[illegible]

[illegible]

ಅತ್ತೆ, ಮಾವ, ಗಂಡ ಹೀಗೆ ಮೂವರು ಇರಬಹುದಾದ ಕುಟುಂಬವು ಯಾವ ಪ್ರಕಾರವಾಗಿ ಸ್ತ್ರೀಯ ಮೇಲೆ ತನ್ನ ಪ್ರಭುತ್ವವನ್ನು ನಡೆಸುತ್ತದೆ ಎಂಬುದನ್ನು ಅಕ್ಕಮಹಾದೇವಿಯು ಹಾಡಿದಳೆನ್ನಲಾದ ಈ ಪದವು ಸ್ಪಷ್ಟಪಡಿಸುತ್ತದೆ. ಕುಟುಂಬದ ಸದಸ್ಯರು ಮಾಡಬಹುದಾದ, ಮಾಡಿದ ಹಿಂಸೆಯನ್ನು ಈ ವಚನವು ಹೇಳುತ್ತದೆ. ಲೌಕಿಕ ಕುಟುಂಬದ ಆಶೋತ್ತರ, ನೀತಿ - ನಿಯಮ, ನಡವಳಿಕೆಗಳಲ್ಲಿ ಬಹುತೇಕ ಸ್ತ್ರೀ ವಿರೋಧಿಯಾಗಿರುವುದನ್ನು ಕಂಡುಕೊಂಡ ಅಕ್ಕಮಹಾದೇವಿಯು ಲೌಕಿಕದ ನೆಲೆಗಳನ್ನು ಮೀರಿದ ಹೊಸ ಸಂಬಂಧವನ್ನು ಸಮಾಜದೊಳಗಿದ್ದೆ ಅರಸುತ್ತ ಹೊರಟಳು.

ಗುರುವೆ ತೆತ್ತಿಗನಾದ
ಲಿಂಗವೆ ಮದವಣಿಗನಾದ
ನಾನು ಮದವಳಿಗನಾದದ
ಈ ಭುವನವೆಲ್ಲರಿಯಲು
ಅಸಂಖ್ಯಾತರೆನಗೆ ತಂದೆ - ತಾಯಿಗಳು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನಾದ ಬಳಿಕ
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲಯ್ಯ.[೫೦]

ಜನಸಾಮಾನ್ಯನಿಗೆ ತೀರ ಅಪರಿಚಿತವಾದ ಹೊಸ ಬಗೆಯ ಕುಟುಂಬದ ಸಂಬಂಧಗಳು, ಮದುವೆಯು ಈ ವಚನದಲ್ಲಿ ವರ್ಣಿತಗೊಂಡಿದೆ. ಅನುಭಾವ ಹಂತವನ್ನು ಇಲ್ಲಿ ಕಾಣುತ್ತೇವೆಯಾದರೂ, ಅತ್ಯಂತ ಸೂಕ್ಷ್ಮವಾಗಿ ಗಮನಿಸಿದಾಗ ಸಾಮಾಜಿಕ ವ್ಯವಸ್ಥೆ, ವ್ಯವಸ್ಥೆಯಲ್ಲಿರುವ ನೀತಿ ನಿಯಮಗಳ ವಿರೋಧವಿರುವದು ತಿಳಿದುಬರುತ್ತದೆ.

ಸ್ಥೂಲವಾಗಿ ತೀರ ವೈಯಕ್ತಿಕವೆನಿಸುವ ಅಕ್ಕಮಹಾದೇವಿಯ ಅನುಭವವು ಕನ್ನಡ ನಾಡಿನ ಪರಂಪರೆಯಲ್ಲಿ ಕಂಡುಬಂದಿರುವ ಸ್ತ್ರೀ ಶೋಷಣೆಯ ಪ್ರತಿಭಟನೆಯ ಧ್ವನಿಯನ್ನೇ ಸಂಕೇತಿಸುತ್ತದೆ.

ಇದೇ ಕಾಲದ ಶರಣ, ಶರಣೆಯರು ಸ್ತ್ರೀ ಸಮಾನತೆಯನ್ನೇ ಬೆಂಬಲಿಸಿದ್ದಾರೆ. ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲ ಭಾರತೀಯ ಪರಂಪರೆಯಲ್ಲಿ ಸಾಮಾಜಿಕ, ಧಾರ್ಮಿಕ ನೆಲೆಗಳಲ್ಲಿ ಸ್ತ್ರೀಯ ಕುರಿತಾಗಿ ಸಾಮಾನ್ಯವಾಗಿ ಇರುವ ನಂಬಿಕೆಗಳೆನೆಂದರೆ ಸ್ತ್ರೀಯೂ ಚಂಚಲ ಸ್ವಭಾದವಳು, ತನ್ನ ರೂಪ ಯೌವನಗಳಿಂದ ಪುರುಷನನ್ನು ದುರ್ಬಲಗೊಳಿಸುವಂತವಳು, ಕುಟಿಲ ಪ್ರವೃತ್ತಿಯವಳು ಎಂಬುದಾಗಿತ್ತು. ಅಲ್ಲದೆ ಸ್ತ್ರೀಯು ಭೋಗ ಸಾಮಗ್ರಿಯಾಗಿದ್ದಾಳೆನ್ನುವದನ್ನು ಅತ್ಯಂತ ಸಹಜವಾಗಿ ಒಪ್ಪಿಕೊಂಡಿದ್ದರು. ಆದರೆ ಅಲ್ಲಮಾದಿ ಶರಣರು ಇದನ್ನು ವಚನಗಳಲ್ಲಿ ವಿರೋಧಿಸಿದರು. "ಒಳಗೆ ಸುಳಿಯುವ ಆತ್ಮವು ಗಂಡು ಅಲ್ಲ ಹೆಣ್ಣು ಅಲ್ಲ" ಮತ್ತು ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ, ಹೆಣ್ಣಿಗೆ ಗಂಡಾಗಿ ಕಾಡಿತ್ತು ಮಾಯೆ" ಎಂಬಂತಹ ಸೂತ್ರಬದ್ಧ ವಚನಗಳ ಮಾತಿನಲ್ಲಿ ಕನ್ನಡಿಗರೆಲ್ಲರೂ ಗಮನಿಸಿದ್ದಾರೆ.

ಕರ್ನಾಟಕದ ಸ್ತ್ರೀ ಚಿಂತಕಿಯರ ಕುರಿತು ಅಧ್ಯಯನ ಮಾಡುವಾಗ ಸಂಚಿಯ ಹೊನ್ನಮ್ಮನ ಹೆಸರು ಮಹತ್ವಪೂರ್ಣದ್ದು ಎನಿಸುತ್ತದೆ. ಕುವರ, ಕುವರಿಯರ ಮಧ್ಯ ತಾರತಮ್ಯವೇಕೆಂದು ಹೊನ್ನಮ್ಮನು ಪ್ರಶ್ನಿಸುತ್ತಾಳೆ.

ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು
ಇವರೀರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರ ಸೌಖ್ಯ
ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳ್ಗುವರನಿಗಿತ್ತ ಮಾತ್ರಕೆ
ಕುಲಕೋಟಿಯನುದ್ಧರಿಪಳು.

(ಸಂಚಿಯ ಹೊನ್ನಮ್ಮ - ಎಚ್.ಎಂ.ಶಂಕರನಾರಾಯಣರಾವ್, ಎಂ.ಎ. ಪು. ೨೨)

ಹೊನ್ನಮ್ಮನ ಕಾವ್ಯದಲ್ಲಿ ಯಾವ ಕಥೆಯೂ ಇಲ್ಲ. ಸತಿ, ಸಾಧ್ವಿಯ ದಿನಚರಿ ಹೇಗಿರಬೇಕೆಂದು ಹೊನ್ನಮ್ಮ ಹೇಳುತ್ತಾಳೆ. ಈ ಸತಿ ಸಾಧ್ವಿಮಣಿಯು ಸತ್ಸಂಪ್ರದಾಯಗಳ ನೆಲೆವೀಡಾಗಬೇಕೆಂದು ಸಾರ್ವತ್ರಿಕ ದಿನಚರಿಯೊಂದನ್ನು ಹೊನ್ನಮ್ಮ ಮದುವೆಯಾಗಿ ಗಂಡನ ಮನೆಗೆ ಹೋಗುತ್ತಿರುವ ಹೆಣ್ಣುಮಗಳ ಮುಂದೆ ಇಟ್ಟಿದ್ದಾಳೆ. ಇಲ್ಲಿ ಒಂದು ಭಯ ಕಾಡುತ್ತದೆ. ಎಲ್ಲಿ ಹೊನ್ನಮ್ಮನು ಬೋಧಿಸಿರುವ "ಸತೀಧರ್ಮ ಸ್ಮೃತಿಕಾರರ ಸಾಲಿನಲ್ಲಿ ಸೇರ್ಪಡೆಯಾಗಿ ಸ್ತ್ರೀ ವಿರೋಧಿ ನಿಲುವನ್ನು ಹೊಂದುತ್ತದೆಯೋ ಎಂದು. ಆದರೆ ಕಾವ್ಯದ ವಸ್ತು ಸ್ಥಿತಿ ಹಾಗಿಲ್ಲ. ಹೊನ್ನಮ್ಮಳಿಗೆ ಸ್ತ್ರೀಯರ ಕುರಿತಾಗಿ ಅಪಾರವಾದ ಸಹಾನುಭೂತಿ ಇರುವದಂತೂ ಸತ್ಯ. ಆದುದರಿಂದಲೇ ಅವಳು ಸ್ತ್ರೀ ಬಾಲಕಿಯಾಗಿರುವಾಗ ಹೇಗೆ ಬೆಳೆಸಬೇಕು. ಎಂಥವರಿಗೆ ಅವಳನ್ನು ಕೊಟ್ಟು ಮದುವೆಯನ್ನು ಮಾಡಬೇಕು ಎಲ್ಲ ಕಾಲಕ್ಕೂ ಅವಳನ್ನು ಹೇಗೆ ನೋಡಿಕೊಳ್ಳಬೇಕು ಎಂಬಂತಹ ವಿಷಯಗಳನ್ನು ಧೈರ್ಯವಾಗಿ ಯಾವುದೇ ರೀತಿಯ ಮುಚ್ಚುಮರೆ ಇಲ್ಲ ಎಂದು ಹೇಳಿದ್ದಾಳೆ. ಅವಳ ಧೈರ್ಯ ಯಾರೇ ಆಗಲಿ ಮೆಚ್ಚುವಂತಹದ್ದು ಆಗಿದೆ.[೫೧]

ಸ್ತ್ರೀಯರನ್ನು ಕೀಳಾಗಿ ಕಾಣುವವರಿಗೆ ನೇರವಾಗಿ ಸಹಜವಾಗಿ, ಸ್ತ್ರೀಯರನ್ನು ತುಚ್ಛವಾಗಿ ಕಾಣುವವರು ಕಣ್ಣು ಕಾಣದ ಗಾವಿಲರೆಂದು ತೀರ್ಮಾನಿಸುತ್ತಾಳೆ. ಅದು ಹೀಗೆ

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ?
ಪೆಣ್ಣಲ್ಲವೆ ಪೊರೆದವಳು?
ಪೆಣ್ಣ ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು[೫೨]

ಹೊನ್ನಮ್ಮಳು ಸಂಚಿಯ ಊಳಿಗದಲ್ಲಿದ್ದವಳು. ಬಹುಶಃ ಅವಳಿಗೆ ಆದರ್ಶ ಗೃಹಿಣಿಯ ಅವಕಾಶ ದೊರೆತಿಲ್ಲ. ಆದುದರಿಂದ ತಾನು ಇಚ್ಛೆಪಟ್ಟಿರುವ ಆದರ್ಶ ಗೃಹಿಣಿಯ ಚಿತ್ರವನ್ನು ಹದಿಬದೆಯ ಧರ್ಮದಲ್ಲಿ ಚಿತ್ರಿಸಿದ್ದಾಳೆ. ಕಾವ್ಯದ ತುಂಬ ಸತಿ ಸಾಧ್ವಿಮಣಿಯು ಹೇಗೆ ಬದುಕೆಂಬ ಬೋಧನೆಯಿದೆ. ಬಂಧು ಬಳಗದವರನ್ನು ಸ್ನೇಹ ಸನ್ಮಾನದಿಂದ ಕಾಣುವರು. ಮಕ್ಕಳನ್ನು ಆ ವಾತ್ಸಲ್ಯದಿಂದ ನೋಡಿಕೊಳ್ಳುವದು. ಮನೆಯ ಅನ್ನಪೂರ್ಣೆಯಾಗಿ, ಎಲ್ಲರಿಗೆ ಮೇಲ್ಮೆಯನ್ನು ಕೋರುತ್ತಾ ಎಲ್ಲರಿಗಾಗಿ ದುಡಿಯುವುದೇ ಆದರ್ಶ ನಾರಿಮಣಿಯ ಸ್ವಭಾವವಾದಾಗ ಅವಳ ಬದುಕು ಶುಭವಾಗುತ್ತದೆ. (ಹದಿಬದೆಯ ಧರ್ಮ - ಪ್ರ.ಸಂ. ಬಿ.ಎಂ.ಶ್ರೀಕಂಠಯ್ಯ, ಸಂ.ಡಿ.ಚಂಪಾಬಾಯಿ. ಪು. ಪೀಠಿಕೆ ೧೩) ಒಟ್ಟಿನಲ್ಲಿ ಹೊನ್ನಮ್ಮ ಸತಿಯೊಬ್ಬರ ದಿನಚರಿಯನ್ನು ಕಾವ್ಯದಲ್ಲಿ ಬರೆದಿದ್ದಾಳೆ. ಹೀಗೆ ಎಲ್ಲರಿಗೂ ಉಪದೇಶ ಮಾಡುವ ಹೊನ್ನಮ್ಮ ಎಲ್ಲಿಯೂ ಸಮಸ್ಯೆಯನ್ನು ಎತ್ತುವದಿಲ್ಲ. ಮೇಲೆ ಹೇಳಿದ ಎರಡು ಮಾತುಗಳನ್ನು ಬಿಟ್ಟರೆ ಯಾವ ವೈಚಾರಿಕ ಜಾಗೃತಿಯನ್ನು ಹೊನ್ನಮ್ಮನು ಮಾಡಿಲ್ಲ ಎಂಬ ಜಿ.ಎಸ್.ಶಿವರುದ್ರಪ್ಪನವರ ಮಾತು ಯಥೋಚಿತವಾಗಿದೆ. (ಕನ್ನಡ ಸಾಹಿತ್ಯ ಸಮೀಕ್ಷೆ - ಶ್ರೀ.ಜಿ.ಎಸ್ .ಶಿವರುದ್ರಪ್ಪ, ಪು. ೧೦೬)

ಹೊನ್ನಮ್ಮನ ಬುದ್ಧಿವಾದ ಇಂದಿನ ಕಾಲಕ್ಕೆ ಕೆಲವೊಂದು ಅನ್ವಯವಾಗುವುದಿಲ್ಲ ಮನೆಯ ಒಳಗೂ, ಹೊರಗೂ ದುಡಿಯವ ಸ್ತ್ರೀಯರಿಗೆ ಪತಿಯ ಪಾದಸೇವೆಯಂತಹ ನೀತಿ ತೀರ ಬಾಲಿಶವೆನಿಸುತ್ತದೆ.

೧೯೭೫ - ೧೯೮೫ರ ಅವಧಿಯನ್ನು ಮಹಿಳಾ ದಶಕವಾಗಿ ಘೋಷಿಸಲಾಗಿತ್ತು. ಕೊಪೆನ್ ಹೇಗೆನ್‌ನಲ್ಲಿ ೧೯೮೦ರಲ್ಲಿ ಜಾಗತಿಕ ಸಮಾವೇಶವು ಏರ್ಪಟ್ಟಿತು. ಮೂರನೆಯ ಜಾಗತಿಕ ಸಮಾವೇಶವು ೧೯೮೫ರಲ್ಲಿ ನೈರೋಬಿಯದಲ್ಲಿ ನಡೆಯಿತು.[೫೩]

ಮೇಲೆ ಹೇಳಲಾದ ಸಮಾವೇಶದ ಕಾರಣದಿಂದಾಗಿ ಸ್ತ್ರೀಯ ಸಮಸ್ಯೆಯು ಕೇವಲ ಸ್ತ್ರೀ ಮಾತ್ರದಿಂದಲೇ ಪರಿಹಾರವಾಗುವದಿಲ್ಲ. ಪುರುಷರು ಸಹಿತ ಸ್ತ್ರೀ ಸಮಸ್ಯೆ ಪರಿಹಾರಕ್ಕಾಗಿ ಶ್ರಮಿಸಬೇಕೆಂದು ವಿಷಯವನ್ನು ಪ್ರತಿಯೊಬ್ಬನು ಗ್ರಹಿಸಿಕೊಂಡನು. ಸ್ತ್ರೀ ಪುರುಷರ ಸಮಭಾಗಿತ್ವವನ್ನು ಒಪ್ಪಿಕೊಳ್ಳಬಹುದಾದ ಅಧ್ಯಯನಕ್ಕೆ ಚಾಲನೆಸಿಕ್ಕ ಹಾಗಾಯಿತು. ೧೯೭೫ - ೮೫ರ ಕಾಲವನ್ನು ಮಹಿಳಾ ವರ್ಷವೆಂದು ಘೋಷಣೆ ಮಾಡಿರುವ ಕಾರಣ ಸ್ತ್ರೀಯರ ಸ್ಥಿತಿ - ಗತಿಗಳ ಅಧ್ಯಯನ ಚುರುಕಾಗತೊಡಗಿತು. ಆ ಕುರಿತಾದ ಸಂಶೋಧನೆ ವಿಮರ್ಶಾ ಲೇಖನಗಳು ಅಧಿಕ ಸಂಖ್ಯೆಯಲ್ಲಿ ಪ್ರಕಟಗೊಂಡವು. ಇದಕ್ಕೆ ಕನ್ನಡ ಸಾಹಿತ್ಯವು ಹೊರತಾಗಿರಲಿಲ್ಲ.

೩ು. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಪರ ವಾದಗಳು

ಪಂಪಾದಿ ಮಹಾಕವಿಗಳು ಜೈನಧರ್ಮದ ಸರ್ವಜೀವಗಳು ಸಮಾನವೆಂಬ ತಾತ್ವಿಕ ನೆಲೆಯಲ್ಲಿ ಕೃತಿ ರಚಿಸಿದರೂ, "ಲೌಕಿಕ ಕೃತಿ"ಯಲ್ಲಿ ಮಾತ್ರ ಸಾಮಾಜಿಕ ಅಸಮಾನತೆಯನ್ನು ಹಾಗೆಯೇ ಇರಗೊಟ್ಟು ಕರ್ಮಸಿದ್ಧಾಂತ, ಪುನರ್ಜನ್ಮವೆಂದು ಕರೆದು, ಜನ್ಮಜಾತವಾಗಿ ಸ್ತ್ರೀಯು ಪುರುಷನಿಗಿಂತ ಕೆಳಸ್ತರದಲ್ಲಿದ್ದು ಮೋಕ್ಷಕ್ಕೆ

ಅನರ್ಹಳು ಎನ್ನುವಂತೆ ಚಿತ್ರಿಸಲಾಗಿದೆ. ಸಾಧನೆಗೆ ಸ್ತ್ರೀಯು ಅಡ್ಡಿ, ಆತಂಕಿಯಾಗಿದ್ದಳು. ಹೀಗೆ ನರಕ ಒಮ್ಮೆ ಸಾಧಕಿಯಾದರೆ, ಸಾಧನೆಗೆ ನೆರವಾಗುವ ಒಮ್ಮೆ ಪತಿವ್ರತೆಯಾಗುತ್ತಾಳೆ.

ಶರಣರು ಮುಖ್ಯ ಕಾಯಕ ತತ್ವವನ್ನು ಮನಗಾಣಿಸಿದ್ದಾರೆ. ಆದರೂ ಮೋಕ್ಷ ಸಾಧನೆಗೆ ಸಂಸಾರ ತೊರೆಯುವ ಸೂತ್ರವನ್ನು ಅವರೆಂದು ಕೈಗೊಂಡಿಲ್ಲ. ಆಧ್ಯಾತ್ಮ ಸಾಧನೆಯನ್ನು ಪುರುಷರಂತೆ ಸ್ತ್ರೀಯರು ಸಾಧಿಸಬಹುದೆಂದು ಸ್ತ್ರೀ ಪುರುಷ ಸಮಾನತೆಯನ್ನು ತೋರಿಸಿಕೊಟ್ಟರು.

''ಸ್ತ್ರೀಯರು ಶಿಕ್ಷಣವನ್ನು ಪಡೆದುಕೊಂಡದ್ದಾದರೆ ಅವರ ಸಮಸ್ಯೆಗಳನ್ನು ಅವರೇ ಬಗೆಹರಿಸಲು ಶಕ್ತರಾಗುತ್ತಾರೆ''[೫೪] ಹೀಗೆಂದು ಹೇಳಿದವರು ವಿವೇಕಾನಂದರು. ಸ್ವಾಮಿ ದಯಾನಂದ ಸರಸ್ವತಿಯವರು ''ಸ್ತ್ರೀಯರು ವೇದಾಭ್ಯಾಸಕ್ಕೆ ಅರ್ಹರೆಂದು'' ಸಾರಿದ್ದಾರೆ. ದಯಾನಂದ ಸರಸ್ವತಿಯವರು ಗಾಯಿತ್ರಿ ಮಂತ್ರವನ್ನು ಸ್ತ್ರೀಯರಿಗೂ ಬೋಧಿಸಿದ್ದಾರೆ.[೫೫] ಆಂಗ್ಲರ ಆಗಮನದಿಂದ ಸ್ತ್ರೀ ಶಿಕ್ಷಣ ವ್ಯವಸ್ಥೆಯಲ್ಲಿ ಒಂದಿಷ್ಟಾದರೂ ಬದಲಾವಣೆಯಾದದ್ದು ಸುಳ್ಳಲ್ಲ. ಆದರೂ ಸ್ತ್ರೀಯರಿಗೆ ಹೆಚ್ಚಿನ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಸಾಮಾಜಿಕ ವ್ಯವಸ್ಥೆ ಅನುಮೋದಿಸಲೇ ಇಲ್ಲ. ಅವಳು ಗೃಹಿಣಿಯಾಗಿ ಮನೆ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋದರೆ ಸಾಕು ಎಂಬ ಭಾವವೇ ಬಲವಾಗಿತ್ತು. ಪ್ರಾಚೀನ ಕರ್ನಾಟಕದಲ್ಲಿ ಸುಮಾರು ೯೦೦ರ ಶಾಸನದಲ್ಲಿ ಉಲ್ಲೇಖಿತವಾಗಿರುವ ಸಾಮಿನಿರ್ಮಡಿ ಎಂಬ ಸ್ತ್ರೀಯನ್ನು ಹೊರತುಪಡಿಸಿದರೆ ಇನ್ನೆಲ್ಲಿಯೂ ಸ್ತ್ರೀಯರು ವಿದ್ವಾಂಸರಾಗಿರುವ ಉದಾಹರಣೆ ಶಾಸನದಲಿಲ್ಲ.[೫೬] ಆದರೆ ಸ್ತ್ರೀಯರ ವಿದ್ಯಾಭ್ಯಾಸವೆಂದರೆ ಸಂಗೀತ, ನರ್ತನಾದಿ ಕಲೆಗಳ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರಕಿರುವುದು ಕಂಡುಬಂದಿದೆ.

ತೀರಾ ಪುರಾತನ ಸಾಹಿತ್ಯದಲ್ಲಿ, ಸ್ತ್ರೀ ಪ್ರಪಂಚದ ಮಾನವೀಯ ಗುಣಗಳು ಗೌಣವಾಗಿ ಕಂಡಿವೆ. ಅವಳು ಸತಿ ಸಾಧ್ವಿಮಣಿ, ಗಯ್ಯಾಳಿಯಾಗಿ ಚಿತ್ರಿತಳಾಗಿದ್ದಾಳೆ. ಇಲ್ಲವೆ ಸ್ತ್ರೀಯ ಕುರಿತು ತೀರ ರಂಜಕವೆನಿಸುವ ವರ್ಣನೆಗಳು ಸಾಕಷ್ಟಿವೆ. ಈ ಸಂದರ್ಭದಲ್ಲಿ ವಿ.ಸೀತಾರಾಮಯ್ಯನವರ ಮಾತು ಸತ್ಯವೆನಿಸುತ್ತದೆ. ''ಪ್ರತಿಯೊಂದು ಹೆಣ್ಣು ಜೀವವೂ ತನ್ನದೇ ಆದ ಭಾವ ಪ್ರಪಂಚನ ನಡತೆ ಕಾಣಿಸುವ ಸ್ವತಂತ್ರ ಜೀವ ಆಕಾಂಕ್ಷೆಯುಳ್ಳ ವ್ಯಕ್ತಿಯಾಗಿ ಕಾಣಿಸುವಂತಿದ್ದರೆ ಚೆನ್ನಾಗಿತ್ತು. ಅದು ನಮ್ಮ ಪಾಲಿಗೆ ಫಲಿಸಲಿಲ್ಲ.[೫೭]

೩೦. ಭಾರತದಲ್ಲಿ ಸ್ತ್ರೀ ಚಿಂತನೆ ನಡೆದು ಬಂದ ಹಾದಿ

ಭಾರತದಲ್ಲಿ ೧೯ನೆಯ ಶತಮಾನದ ವೇಳೆಗೆ ಸುಧಾರಣೆಯ ಗಾಳಿ ಬೀಸುತಿತ್ತು. ಸ್ತ್ರೀಯ ಬದುಕಿನಲ್ಲಿ ಬಾಲ್ಯವಿವಾಹ, ವಿಧವೆಯ ಧಾರುಣಮಯ ಬದುಕು, ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶುಹತ್ಯೆ, ಸತಿಪದ್ಧತಿ, ದೇವದಾಸಿ ಪದ್ಧತಿ, ಸ್ತ್ರೀ ಶಿಕ್ಷಣ ನೀತಿ ಇಲ್ಲೆಲ್ಲಾ ಸುಧಾರಣೆಯ ಅಗತ್ಯತೆ ಇತ್ತು. ಈ ಸಮಸ್ಯೆಗಳತ್ತ ಆಸಕ್ತಿ ತೋರಿ ಸುಧಾರಣೆ ಮಾಡಬಯಸುವವರ ಕೇವಲ ಸ್ತ್ರೀಯರೇ ಆಗಿರಬೇಕೆಂದೇನೂ ಇಲ್ಲ. ಆಧುನಿಕ ಭಾರತದಲ್ಲಿ ಸ್ತ್ರೀಯರ ಪರವಾಗಿ ಪ್ರಯತ್ನಗಳನ್ನು ಕೈಗೊಂಡವರು ಪುರುಷರೇ ಆಗಿದ್ದಾರೆ. ಬಂಗಾಲದ ಈಶ್ವರಚಂದ್ರ

ವಿದ್ಯಾಸಾಗರರು, ಬ್ರಹ್ಮಸಮಾಜದ ಕೇಶವಚಂದ್ರ ಸೇನ್, ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದಸರಸ್ವತಿ, ರಾಧಾಸ್ವಾಮಿಯವರ ಅನುಯಾಯಿ ರಾಯ ಸಾಲಿಗರಾಮ ಹುಜೂರ ಮಹಾರಾಜರು ಈ ಮಹನೀಯರೆಲ್ಲಾ ಸ್ತ್ರೀಯರಿಗೆ ಒಂದಿಲ್ಲ ಒಂದು ಬಗೆಯಲ್ಲಿ ಅವರ ಸಮಸ್ಯೆಯ ದೂರೀಕರಣಕ್ಕೆ ಪ್ರಯತ್ನಪಟ್ಟವರಾಗಿದ್ದಾರೆ. ಇವರು ಸ್ತ್ರೀ ಶಿಕ್ಷಣದ ನೇತಾರರು, ವಿಧವಾ ಮರುವಿವಾಹದ ಕಾಯ್ದೆ ಬದ್ಧಗೊಳಿಸುವಿಕೆ, ಸ್ತ್ರೀ ಶಿಕ್ಷಣಕ್ಕೆ ಪ್ರೇರಕರು, ವರದಕ್ಷಿಣೆ, ಬಹುಪತ್ನಿತ್ವಗಳ ವಿರೋಧ, ಸ್ತ್ರೀ ಔನ್ನತ್ಯದ ತಿಳುವಳಿಕೆ ಹೀಗೆ ನಾನಾ ರೀತಿ ಸ್ತ್ರೀ ಪರವಾಗಿ ಕೆಲಸವನ್ನು ಮಾಡಿದ್ದಾರೆ.[೫೮]

೧೮೫೫ರಲ್ಲೇ ಈಶ್ವರಚಂದ್ರ ವಿದ್ಯಾಸಾಗರ ವಿಧವಾ ಮರುವಿವಾಹದ ಬಗ್ಗೆ ಗ್ರಂಥ ರಚಿಸಿ, ಅದು ಈ ಕಾಲದಲ್ಲೂ ಸಾಧ್ಯ ಎಂದು ವಾದಿಸಿದರು. ಪರಿಣಾಮವಾಗಿ ಬೈಗುಳ, ಕೊಲೆಯ ಬೆದರಿಕೆಯನ್ನು ಅವರು ಎದುರಿಸಬೇಕಾಯಿತು. ಎದೆಗುಂದದ ವಿದ್ಯಾಸಾಗರರು ಬ್ರಿಟಿಷ್ ಸರ್ಕಾರಕ್ಕೆ ವಿಧವಾ ಮರುವಿವಾಹ ಕಾಯಿದೆಯನ್ನು ಸ್ಥಿರಗೊಳಿಸಬೇಕೆಂದು ಒತ್ತಾಯದ ಮನವಿಗಳನ್ನು ಸಲ್ಲಿಸುತ್ತಲೇ ಬಂದರು. ಈ ವಿಷಯಕ್ಕೆ ಬೆಂಬಲವಾಗಿ ಮನವಿಯಲ್ಲಿ ಸಾವಿರಾರು ಜನರ ಸಹಿಯೊಂದಿಗೆ ಲೆಜಿಸ್ಲೇಟಿವ್ ಕೌನ್ಸಿಲಿಗೆ ಬಂದು ತಲುಪಿತು. ಈ ಮನವಿಯನ್ನು ವಿರೋಧಿಸುವ ಮನವಿಯೊಂದು ಮೊದಲಿನ ಮನವಿಯಲ್ಲಿರುವದಕ್ಕಿಂತ ಹೆಚ್ಚಿನ ಸಂಖ್ಯೆಯ ಸಹಿಯೊಂದಿಗೆ ಕೌನ್ಸಿಲರಿಗೆ ಬಂದು ತಲುಪಿತು. ಆದರೆ ವಿದ್ಯಾಸಾಗರರ ಮನವಿಯೇ ಪುರಸ್ಕೃತಗೊಂಡು ೧೮೫೬ರಲ್ಲಿ ಹಿಂದೂ ವಿಧವಾ ಮರುವಿವಾಹ ಕಾಯಿದೆಯು ಜಾರಿಗೆ ಬಂದಿತು.೫೯ ಇದೇ ರೀತಿಯಾಗಿ ಈಶ್ವರಚಂದ್ರರು ಬಹುಪತ್ನಿತ್ವವನ್ನು ವಿರೋಧಿಸಿದರು. ೧೮೭೧ ಮತ್ತು ೧೮೭೩ರಲ್ಲಿ ಬಹುಪತ್ನಿತ್ವವನ್ನು ವಿರೋಧಿಸುವ ಕೃತಿಗಳನ್ನು ಅವರು ರಚಿಸಿದರು.

ಅವರ ಪ್ರಯತ್ನಗಳೆಲ್ಲವೂ ವಿಫಲವಾದವು. ಅಂದಿನ ಸಾಮಾಜಿಕ ವ್ಯವಸ್ಥೆ ವಿಧವಾ ಮರುವಿವಾಹವನ್ನು ಒಪ್ಪಿಕೊಳ್ಳಲೇ ಇಲ್ಲ ಮತ್ತು ಅಂದಿನ ವ್ಯವಸ್ಥೆಯು ಬಹುಪತ್ನಿತ್ವವನ್ನು ನಿಷೇಧಿಸಲಿಲ್ಲ.

೧೯ನೇ ಶತಮಾನದ ಹೊತ್ತಿಗೆ ಬ್ರಿಟೀಷರ ಆಳ್ವಿಕೆಯ ಪ್ರಭಾವದಿಂದಾಗಿ ಸ್ತ್ರೀಯರ ಬದುಕಿನಲ್ಲಿ ಸಾಕಷ್ಟು ವ್ಯತ್ಯಾಸಗಳು ಏರ್ಪಡತೊಡಗಿದವು. ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವತಿಯಾರಾದರು. ಪ್ರಗತಿಯ ವ್ಯಕ್ತಿತ್ವ ವಿಕಸನ ಮಾಡಿಕೊಂಡು ಸಾರ್ವಜನಿಕ ಚಟುವಟಿಕೆಗಳಲ್ಲಿ ಸಮರ್ಥವಾಗಿ ಭಾಗವಹಿಸುವ ಮಟ್ಟಕ್ಕೆ ಸ್ತ್ರೀಯರ ಜೀವನ ಬದಲಾವಣೆಯಾಗಿತ್ತು. ಸ್ತ್ರೀಯರಿಗೆ ತಮ್ಮ ಪ್ರತಿಭೆಯ ಪ್ರಕಟನೆಗೆ ಸಾಕಷ್ಟು ಅವಕಾಶ ಈ ಕಾಲದಲ್ಲಿ ದೊರೆಯಿತು. "ಬಂಗಾಲದ ಸ್ತ್ರೀಯರು ಕಾವ್ಯ, ಕಾದಂಬರಿ, ಆತ್ಮಚರಿತ್ರೆಯಂತಹ ವಿಧ ವಿಧವಾದ ನಾಲ್ಕುನೂರಕ್ಕೂ ಮಿಕ್ಕಿದ ಸಾಹಿತ್ಯ ಕೃತಿಗಳನ್ನೂ, ಇಪ್ಪತ್ತೊಂದು ಪತ್ರಿಕೆಗಳನ್ನು ಹೊರತಂದಿರುವ ಸಂಗತಿ ತಿಳಿದುಬರುತ್ತದೆ.[೬೦]

ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆತ ನಂತರ ಮೊದ ಮೊದಲು ಬಾಲಿಕೆಯರಿಗಾಗಿ ಶಾಲೆಗಳನ್ನು ತೆರೆಯುವ ವ್ಯವಸ್ಥೆಯನ್ನು ಮಾಡಲಾಯಿತು. ಸ್ತ್ರೀ ಶಿಕ್ಷಣವನ್ನು ಪಡೆದುಕೊಳ್ಳುವುದೇ ಅಸಭ್ಯ, ಅಸಂಸ್ಕೃತವೆಂಬ ಭಾವನೆ ಬಹುದೂರ ಹೋಯಿತು. ಪ್ರತಿಷ್ಠಿತ ಕುಟುಂಬದವರೇ ಸ್ತ್ರೀಯರನ್ನು ಶಿಕ್ಷಣ ಪಡೆದುಕೊಳ್ಳಲು ಕಳುಹಿಸತೊಡಗಿದರು.

ಕಲ್ಕತ್ತಾ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಬೆಥೂನ್ ಕಾಲೇಜ್ ಮೂಲಕ ೧೮೮೩ರಲ್ಲಿ ಕಾದಂಬಿನಿ ಬಸು ಮತ್ತು ಚಂದ್ರಮುಖಿ ಬಸು ಎನ್ನುವವರು ಬ್ರಿಟಿಷ್ ಆಡಳಿತದಲ್ಲಿ, ಭಾರತದಲ್ಲಿ ಪದವಿಧರೆಯರಾದ ಮೊಟ್ಟಮೊದಲ ಸ್ತ್ರೀಯರಾಗಿದ್ದಾರೆ.[೬೧] ಹೀಗೆ ಮುಂದುವರೆಯುತ್ತಾ ಸ್ತ್ರೀ ಶಿಕ್ಷಣದಲ್ಲಿ ಪ್ರಗತಿ ಉಂಟಾಗ ಹತ್ತಿತ್ತು. ಈ ಶೈಕ್ಷಣಿಕ ಪ್ರಯೋಗದ ಫಲವಾಗಿ 'ಆಧುನಿಕ ಸ್ತ್ರೀ'ಯ ಉದಯವಾಯಿತು. ತಮ್ಮ ಚಟುವಟಿಕೆಗಳ ಧ್ಯೇಯ್ಯೊದ್ದೇಶಗಳನ್ನು ಇತರರಿಗೆ ತಿಳಿಸಿಕೊಂಡುವದಕ್ಕಾಗಿ ಸ್ತ್ರೀಯರೇ ಸಂಘ, ಸಂಸ್ಥೆಗಳನ್ನು ಕಟ್ಟಿಕೊಳ್ಳಲು ಆರಂಭವಾಯಿತು. ಬೇರೆ ಸಾಮಾಜಿಕ ಸಂಸ್ಥೆಗಳು ಇವುಗಳನ್ನು ಒಪ್ಪಿಕೊಂಡು ಗಮನಾರ್ಹವಾಗಿ ಕೆಲಸಮಾಡಿದರೂ ಅವುಗಳಿಗೆ ತಮ್ಮದೇ ಆದ ಮಿತಿ ಇದ್ದದ್ದು ಸ್ಪಷ್ಟವಾಗಿದೆ.

ಇಲ್ಲಿಯವರೆಗೆ ಮೌನವಹಿಸಿದ್ದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಚಳುವಳಿಯನ್ನು ಮಾಡತೊಡಗಿದರು. ಹಿಂದೂಸ್ಥಾನದ ಪ್ರಸಿದ್ಧ ಕವಯಿತ್ರಿ ಮತ್ತು ಹಿರಿಯ ಕಾಂಗ್ರೆಸ್ ಕಾರ್ಯಕರ್ತೆಯದ ಸರೋಜಿನಿನಾಯ್ಡು ಭಾರತೀಯ ಸ್ತ್ರೀಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಕೈಗೊಳ್ಳತೊಡಗಿದರು.[೬೨]

ಸ್ವಾತಂತ್ರ್ಯಾನಂತರ ಭಾರತ ಸಂವಿಧಾನವು "ಸಮಾನತೆ"ಯನ್ನು ಮೂಲಭೂತ ಹಕ್ಕು ಎಂದು ಘೋಷಿಸಿತು. ಸಾಮಾಜಿಕವಾಗಿ ಯಾವುದೆ ತಾರತಮ್ಯ ಇರಲಾರದೆ ಎಲ್ಲ ಕ್ಷೇತ್ರಗಳಲ್ಲಿ ಸಮಾನತೆಯೇ ಮುಖ್ಯ ಗುರಿಯಾಗಿತ್ತು.[೬೩] ಪ್ರತಿಫಲವಾಗಿ ೧೯೭೦ರ ಆರಂಭದಲ್ಲಿ ಗ್ರಾಮೀಣ ಮತ್ತು ಶ್ರಮಿಕ ವರ್ಗದ ಮಹಿಳೆಯರಿಗೆ ಮೊಟ್ಟಮೊದಲ ಬಾರಿಗೆ ಮುಂದಾಳತ್ವದ ತರಬೇತಿ ಪಡೆದುಕೊಳ್ಳಬಹುದಾದ ವಾತಾವರಣವು ನಿರ್ಮಾಣಗೊಂಡಿತು. "ಸಮಕಾಲೀನ ಮಹಿಳಾ ಚಳುವಳಿಗೆ ಮೊದಲ ಚಾಲನೆಯೂ ಇಲ್ಲೇ ಸೃಷ್ಟಿಯಾಯಿತು ಎಂದು ಗೇಯ್ಸ್ ವೆಮ್‌ವೆಡ್ಟ್ ಅವರು ಗುರುತಿಸುತ್ತಾರೆ.[೬೪] ಅಂದಿನಿಂದ ಇಂದಿನವರೆಗೂ ಮಹಿಳಾ ಚಳುವಳಿಗಳು ನಡೆಯುತ್ತಲೇ ಇವೆ. ಭಾರತೀಯರ ಗಮನವನ್ನು ಸೆಳೆದಿವೆ. ಹೀಗೆ ಭಾರತದಲ್ಲಿ ಸ್ತ್ರೀ ಚಿಂತನೆ ನಡೆದು ಬಂದ ಹಾದಿ ಸಮಾಧಾನಕರವಾಗಿದೆಯೆಂದರೆ, ಅದು ತಪ್ಪಾಗುತ್ತದೆ. ಅನೇಕ ವೈರುಧ್ಯಗಳ ಮಧ್ಯದಲ್ಲಿ ಬೆಳೆದುಬಂದಿರುವ ಸ್ತ್ರೀ ಚಿಂತನೆ ಇಂದು ಸಹಿತ ಕೆಲ ಸ್ತ್ರೀ ಸಮಸ್ಯೆಗಳಿಗೆ ಪೂರ್ಣ ಪರಿಹಾರ ಸಿಗಲಾರದ್ದನ್ನು ಒಪ್ಪಿಕೊಳ್ಳಲೇಬೇಕು. ಸ್ತ್ರೀಯರ ಬಗ್ಗೆ ಕ್ರೌರ್ಯ, ದೌರ್ಜನ್ಯ ಹೊಸ ವಿಷಯವಲ್ಲ. ಸತಿಪದ್ಧತಿ ಧಾರ್ಮಿಕತೆಯ ಸೋಗಿನಲ್ಲಿ ಅಡಗಿಹೋಗುತ್ತದೆ. ಬಹುಪತ್ನಿತ್ವ ವೈಯಕ್ತಿಕ ಆಸಕ್ತಿಯಾಗಿದೆ. ದೇವದಾಸಿ ಪದ್ಧತಿ ಇಂದು ವೇಶ್ಯಾವಾಟಿಕೆ Call girl ಎನ್ನುವ ಹೆಸರಿನಿಂದ ಗುರುತಿಸಲ್ಪಟ್ಟಿವೆ. ವರದಕ್ಷಿಣೆಯಂತೂ ಹೆಣ್ಮಕ್ಕಳು ಇರುವ ಎಷ್ಟೋ ಕುಟುಂಬಕ್ಕೆ ಸಿಂಹಸ್ವಪ್ನವಾಗಿದೆ. ಸ್ತ್ರೀ ಮೇಲಾಗುತ್ತಿರುವ ಅತ್ಯಾಚಾರವಂತೂ ಪರಿಹಾರ ಕಾಣದ ಸಮಸ್ಯೆಯಾಗಿದೆ. ಹೀಗಾಗಿ ಇಲ್ಲಿಯವರೆಗೆ ನಡೆದುಬಂದಿರುವ ಸ್ತ್ರೀ ಚಿಂತನೆಯಿಂದ ಯಾವ ಶಾಶ್ವತ ಪರಿಹಾರ ದೊರಕಿದೆ? ಎಂಬ ಪ್ರಶ್ನೆಗೆ ನಿರಾಶೆಗಳಿಂದ ತುಂಬಿದ ಮೌನವೇ ಉತ್ತರವಾಗುತ್ತದೆ. ಆದರೂ ಸ್ತ್ರೀಯರಿಗೆ ದೊರೆತಿರುವ ಶಿಕ್ಷಣ, ಸಮಾನತೆ, ರಾಜಕೀಯದಲ್ಲಿ ನಾಯಕತ್ವ ಇವುಗಳು ಎಲ್ಲ ಸ್ತ್ರೀಯರಿಗೆ ಅಲ್ಲದೆ ಹೋದರೂ ಕೆಲವಾರು ಸ್ತ್ರೀಯರಿಗಾದರೂ ದೊರೆತದ್ದನ್ನೂ ಅಲ್ಲಗಳೆಯಲಾಗದು.

ಇವರೆಲ್ಲರ ಚಿಂತನೆಯ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯ ಸಾರ್ಥಕ ಬದುಕನ್ನು ಒರೆಗೆ ಹಚ್ಚಿ ನೋಡುವುದು. ಈ ಮುಂದಿನ ಬರವಣಿಗೆಯ ಆಶಯವಾಗಿದೆ.

ಮನು ಮೊದಲಾದ ಸ್ಮೃತಿಕಾರರು ಹೇಳಿರುವಂತೆ ಸ್ತ್ರೀಯು ವಿದ್ಯೆಗೆ ಅನರ್ಹಳಾಗುತ್ತಾಳೆ. ಆದುದರಿಂದಲೇ ಸ್ತ್ರೀಯರು ವೇದಗಳನ್ನು ಓದುವದನ್ನು ನಿಷೇಧಿಸಲಾಗಿದೆ. ಅವಳಿಗೆ ಯಜ್ಞೋಪವಿತ ಧರಿಸುವ ದೀಕ್ಷೆಯಿಲ್ಲ. ಆದುದರಿಂದಲೇ ಅವಳು ವೇದಗಳನ್ನು ಓದುವ ಅರ್ಹತೆಯನ್ನು ಪಡೆದುಕೊಂಡಿಲ್ಲ. ಈ ವಸ್ತುಸ್ಥಿತಿಯನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ದೇಶದಲ್ಲಿ ಅರ್ಧಭಾಗವಾಗಿರುವ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಮನುಸ್ಮೃತಿಯು ನಿರಾಕರಿಸುವ ವರ್ಣಾಶ್ರಮ ಧರ್ಮ ಪದ್ಧತಿಯನ್ನು ಜಗದ್ಗುರು ಪೀಠಗಳೆಲ್ಲವೂ ಎತ್ತಿ ಹಿಡಿದಿರುವುದು ನಮ್ಮ ಸಂವಿಧಾನಕ್ಕೂ, ಮಾನವತೆಗೆ ವಿರೋಧವಾಗಿದೆ.[೨] ಈ ವಿರೋಧವನ್ನು ಪ್ರತಿಭಟಿಸಲಾರದೆ ತಾವು ಕೈಲಾಗದವರೆಂದು ಒಪ್ಪಿಕೊಳ್ಳಲಾರದೆ ತಮ್ಮಷ್ಟಕ್ಕೆ ತಾವು ತಮ್ಮ ಪ್ರತಿಭೆಯನ್ನು ಬಯಲಿಗೆಳೆದ ಮಾನಿನಿಯರು ಇದ್ದಾರೆ.

ಸಾಲು ಮರದ ತಿಮ್ಮಕ್ಕ :- ಬೆಂಗಳೂರು ಜಿಲ್ಲೆಯ ಮಾಗಡಿಯವಳಾದ ಈ ತಿಮ್ಮಕ್ಕನಿಗೆ ಮಕ್ಕಳಿಲ್ಲದ ಬಂಜೆತನದ ನೋವು ಅಪಮಾನಗಳನ್ನು ಸಹಿಸಿಕೊಂಡಿದ್ದಳು. ತನ್ನ ಬಂಜೆತನದ ನೋವನ್ನು ಮರೆಯುವದಕ್ಕೆ ಸುಮಾರು ಉದ್ದಕ್ಕೂ ರಸ್ತೆಯ ಇಕ್ಕೆಲ್ಲಗಳಲ್ಲಿ ಸಸಿಗಳನ್ನು ನೆಟ್ಟು ಬೇಸಿಗೆ ಕಾಲದಲ್ಲಿ ಶ್ರಮಪಟ್ಟು ಶ್ರದ್ಧೆಯಿಂದ ನೀರುಣಿಸಿ ಬೆಳೆಸಿದಳು ಅಲ್ಲಿಗೆ ಆಗಮಿಸಿದ ಜಿಲ್ಲಾಧಿಕಾರಿಯವರು ಇಷ್ಟು ಅಚ್ಚುಕಟ್ಟಾಗಿ ಮರಗಳನ್ನು ಬೆಳೆಸಿದ ತಿಮ್ಮಕ್ಕನಿಗೆ ಸಾಲುಮರದ ತಿಮ್ಮಕ್ಕನೆಂಬ ಅಭಿಧಾನವನ್ನು ನೀಡಿ ಸತ್ಕರಿಸಿದ್ದಾರೆ.

ಹಾಗೆಯೇ ಕೇಳಿ ಬರುವ ಮತ್ತೊಂದು ಹೆಸರು ಮದರ್ ಥೆರೇಸಾ ಬೇರೆ ದೇಶದವಳಾದ ಥೇರೆಸಾಳು ತಾನು ಯಾವಾಗಲೂ ಅನಾಥ, ಅಶಕ್ತ ಮಕ್ಕಳಿಗೆ ಸೇವೆ ಮಾಡಬೇಕೆಂದು ತನ್ನ ತಾಯ್ನಾಡನ್ನು ತೊರೆದು ಭಾರತಕ್ಕೆ ಬಂದು ದೀನ, ದಲಿತರ ಸೇವೆಗೆ ನಿಂತಳು. ಸಾವಿರಾರು ರೋಗಿಗಳಿಗೆ, ಅನಾಥರಿಗೆ ದಾರಿದೀಪವಾದಳು. ಮದರ್ ಥೆರೇಸಾ ಎಂಬ ಹೆಸರು ಸೇವೆ ಮತ್ತು ತ್ಯಾಗಕ್ಕೆ ಪರ್ಯಾಯ ಹೆಸರಾಯಿತು.

ಎ. ವಿಧವೆಯ ಶಾಪವನ್ನು ಮೀರಿ ನಿಂತ ಅತ್ತಿಮಬ್ಬೆ

ಗಂಡನನ್ನು ಕಳೆದುಕೊಂಡವಳು ವಿಧವೆಯಾದರೆ ಹೆಂಡತಿಯನ್ನು ಕಳೆದುಕೊಂಡವನು ವಿಧುರನಾಗುತ್ತಾನೆ. ಆದರೆ ಭವಿಷ್ಯದಲ್ಲಿ ಇಬ್ಬರಿಗೆ ಸಾಕಷ್ಟು ವ್ಯತ್ಯಾಸವಿದೆ. ವಿಧುರ ಅತ್ಯಂತ ಸರಳವಾಗಿ ಮರುಮದುವೆ ಮಾಡಿಕೊಂಡು ತನ್ನ ಜೀವನವನ್ನು ಯಥಾ ರೀತಿ ಯಾವುದೇ ತೊಂದರೆಗೆ ಅವಕಾಶವಿಲ್ಲದಂತೆ ಮುಂದುವರಿಸಿಕೊಂಡು ಹೋಗಬಹುದು. ಅವನಿಗೆ ಪತ್ನಿಯ ಸಾವು ಕೇವಲ ಮೂರು ದಿನದ ದುಃಖ ಮಾತ್ರ. ಆದರೆ ಸ್ತ್ರೀಗೆ ಹಾಗಾಗಲು ಸಾಧ್ಯವಿಲ್ಲ. ಸ್ತ್ರೀ ಚಿಂತನೆಯ ಫಲವಾಗಿ ವಿಧವಾ ಮರುವಿವಾಹ ಜಾರಿಗೆ ಬಂದರೂ ವಿಧವೆಯರಾರು ಅಥವಾ ವಿಧವೆಯನ್ನು ಯಾರೂ ಮದುವೆ ಮಾಡಿಕೊಳ್ಳಲು ಮುಂದೆ ಬಂದಿಲ್ಲ. ಮಕ್ಕಳ ಹೊಣೆಗಾರಿಕೆಯನ್ನು ಬಿಟ್ಟು ಸ್ತ್ರೀಯು ಪುನರ್ವಿವಾಹಕ್ಕೆ ಮುಂದೆ ಬರಲಾರಳು, ಸಮಾಜ ವ್ಯವಸ್ಥೆ ಒಪ್ಪಲಾರದು, ನಮ್ಮ ಸಂಸ್ಕೃತಿಯು

ಪುರಸ್ಕರಿಸಲಾರದು. ಅವಿಭಕ್ತ ಕುಟುಂಬ ಪದ್ಧತಿ ತೀರ ಕಡಿಮೆಯಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ವಿಧವೆಗೆ ಸಹಾನುಭೂತಿ, ಸಹಕಾರಗಳ ಅವಶ್ಯಕತೆ ಇದೆ.

ಪತಿ ಸತ್ತು ಸ್ವರ್ಗವನ್ನು ಪಡೆದುಕೊಂಡರೆ ಸತಿ ಜೀವಂತ ಮರಣವನ್ನು ಅನುಭವಿಸುತ್ತಾಳೆ. ಸತ್ತ ಗಂಡನ ಜತೆ ಚಿತೆ ಏರಿದ ಸತಿಯ ಭೌತಿಕ ಶರೀರದೊಡನೆ ಅವಳ ಸಮಸ್ಯೆ, ದು:ಖ ದುಮ್ಮಾನಗಳು ಕೊನೆಗೊಳ್ಳುತ್ತವೆ. ಆದರೆ ಬದುಕುಳಿದ ಸತಿ ಚಿಂತೆಗಳ ಬೇಗುದಿಯಲ್ಲಿ ನಿತ್ಯ ಸುಟ್ಟುಕೊಳ್ಳುತ್ತಾಳೆ. ಒಬ್ಬಂಟಿಗಳಾಗಿ ಆಯುಷ್ಯ ಕಳೆಯಬೇಕಾದ ಕಠಿಣತೆ ಅವಳ ಬಾಳಿನಲ್ಲಿದೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ಕಟ್ಟಳೆಗಳಾದ ಅರಿಷಿಣ ಕುಂಕುಮ ತೊರೆಯುವುದು, ಹೂವನ್ನು ಮುಡಿಯದೇ ಇರುವುದು ಮಂಗಲಕಾರ್ಯಕ್ಕೆ ಹೋಗದೆ ಇರುವುದು ಒಪ್ಪತ್ತು ಊಟಮಾಡಿ ಸಹಜ ಬಯಕೆಯನ್ನು ಹತ್ತಿಕ್ಕುವುದು ಇವುಗಳೆನ್ನೆಲ್ಲಾ ಅವಳು ವಿಧಿಯಿಲ್ಲದೆ ಎದುರಿಸಬೇಕಾಗುತ್ತದೆ. ಜೀವನದ ಈ ಹಠಾತ್ ಬದಲಾವಣೆಯಿಂದ ಕಂಗೆಟ್ಟಿದ್ದರೂ, ಪತಿಯು ಅರ್ಧಕ್ಕೆ ಬಿಟ್ಟು ಹೋಗಿರುವ ಸಂಸಾರದ ಸಾವಿರಾರು ತಾಪತ್ರಯಗಳ ಪರಿಹಾರಕ್ಕಾಗಿ, ಅನಿವಾರ್ಯವಾಗಿ ವಿಧವೆ ಹೊರ ಜಗತ್ತಿನೊಡನೆ ವ್ಯವಹರಿಸಲೇಬೇಕಾಗುತ್ತದೆ.

ಅತ್ತಿಮಬ್ಬೆಯು ಮೇಲೆ ಹೇಳಿದ ವೈಧವ್ಯದ ಪರಂಪರೆಯ ಚೌಕಟ್ಟನ್ನು ಮೀರಿ ನಿಂತವಳು. ತಾನು ಅಮಂಗಲೆಯೆಂದು ಅವಳು ಮನೆಯ ಮೂಲೆಯೊಂದರಲ್ಲಿ ಕುಳಿತುಕೊಳ್ಳಲಿಲ್ಲ. ಸಹಜವಾದ ಕಾಮನೆಗಳನ್ನು ಹತ್ತಿಕ್ಕುವ ಪ್ರಮೇಯವೇ ಆವಳಿಗಿಲ್ಲ. ರನ್ನ ಕವಿ ಹೇಳುವಂತೆ ಜೈನಧರ್ಮದ ಕಠಿಣವಾದ ವ್ರತ ನೇಮಾದಿಗಳಿಂದ ಅವಳ ಶ್ರದ್ಧೆಯೆಲ್ಲ ಮುಂದಿನ ಪೀಳಿಗೆಯ ಮಂಗಲಕರಕ್ಕಾಗಿ ಮಾತ್ರವೇ ಇತ್ತು. ಅವಳು ಅಮಂಗಲೆಯೆಂದು ತನ್ನನ್ನು ತಾನು ಶಪಿಸಿಕೊಳ್ಳಲಿಲ್ಲವಷ್ಟೆ! ಹಾಗೆಯೇ ತನಗೊಂದು ಶಕ್ತಿ ಇದೆ. ಅದು ಸ್ತ್ರೀ ಶಕ್ತಿ. ಅದನ್ನು ಪುರುಷರು ಅನಾದರ ಮಾಡುತ್ತಿದ್ದಾರೆ. ಆದುದರಿಂದ ತನಗೆ, ತನ್ನ ಯೋಗ್ಯತೆಗೆ ಸರಿಯಾದ ಸ್ಥಾನ - ಮಾನಗಳು ಬೇಕೆಂದು ಹಠಹಿಡಿದು ಕೇಳಲಿಲ್ಲ. ಅವಳದು ಮಾದರಿಯಾಗಬಹುದಾದ ನಡವಳಿಕೆ. ಪ್ರಗತಿಪರವಾದ ಧೋರಣೆಯಾಗಿದೆ. ಸಮಾಜವನ್ನು ತೊರೆಯಲಿಲ್ಲ. ಪುರುಷರ ಜತೆ ಸಮಾನತೆಯನ್ನು ಕೇಳಲಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿದ್ದುಕೊಂಡೇ ಸಮಾಜಕ್ಕೆ ಬೇಕಾದವಳಾಗಿ ಬಾಳಿದವಳು ಅತ್ತಿಮಬ್ಬೆ. ಜೈನಧರ್ಮದ ತತ್ವ ನೇಮಗಳನ್ನು ನಿಷ್ಠೆಯಿಂದ ಆಚರಿಸಿದ್ದಾಳೆ. ಬಸದಿಗಳ ನಿರ್ಮಾಪಕಿಯಾಗಿ ಅಪೂರ್ವ ವ್ಯಕ್ತಿತ್ವವನ್ನು ಮೆರೆದಿದ್ದಾಳೆ. ವಿಧಿವತ್ತಾಗಿ ಸನ್ಯಾಸತ್ವವನ್ನು ಸ್ವೀಕರಿಸಲಾರದೆ ವಿರಾಗಿಯ ಬದುಕನ್ನು ಬಾಳಿದ್ದಾಳೆ. ಬಾಲ್ಯದಲ್ಲಿಯೇ ಧರ್ಮಶ್ರದ್ಧೆಯ ವಾತಾವರಣದಲ್ಲಿ ಬೆಳೆದಿರುವದರಿಂದ ಅತ್ತಿಮಬ್ಬೆಗೆ ಸಮಾಜಕ್ಕೆ ಬೇಕಾದವಳಾಗಿ ಬಾಳಲು ಸಾಧ್ಯವಾಯಿತು. ಅತ್ತಿಮಬ್ಬೆಯು ಸಾವಿರಕ್ಕೂ ಮಿಕ್ಕಿ ಜಿನಾಲಯಗಳನ್ನು ಕಟ್ಟಿಸಿದ್ದಳು ಮತ್ತು ಸಾವಿರಕ್ಕೂ ಮಿಕ್ಕಿ ಜಿನಬಿಂಬಗಳ ದಾನಮಾಡಿದ್ದಾಳೆ ಎನ್ನುವ ವಿಷಯವು ಶಾಸನೋಕ್ತವಾಗಿದೆ.[೬೩] ಲಕ್ಕುಂಡಿ ಶಾಸನ ಮತ್ತು ಅಜಿತಪುರಾಣದಲ್ಲಿ ವ್ಯಕ್ತಗೊಂಡ ಈ ವಿಷಯವೇ ಕನ್ನಡಿಗನನ್ನು ಪುಲಕಿತನನ್ನಾಗಿ ಮಾಡುತ್ತದೆ. ಬಡಗಿ, ಕಮ್ಮಾರ, ಅಕ್ಕಸಾಲಿಗ ಮತ್ತು ಶಿಲ್ಪಿ ಈ ಎಲ್ಲ

ಸಮಾಜ ಬಂಧುಗಳಿಗೆ ಅತ್ತಿಮಬ್ಬೆ ಉದ್ಯೋಗ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾಳೆ. ಅತ್ತಿಮಬ್ಬೆಯ ತನ್ನೊಬ್ಬಳ ಕಲ್ಯಾಣದ ಕುರಿತಾಗಿ ಚಿಂತಿಸಲಿಲ್ಲ. ಮನು ಕುಲದ ಉದ್ಧಾರಕ್ಕಾಗಿ ಅವಳು ಶ್ರಮಿಸಿದಳು. ಸಮಾಜಕ್ಕೆ ಸರ್ವಕಾಲಕ್ಕೂ ಉಪಯುಕ್ತವಾಗುವಂತಹ ಸೇವೆಗಳನ್ನು ಮಾಡಿದವರು ಯಾವತ್ತಿಗೂ ಸಮಾಜಕ್ಕೆ ಬೇಕಾದವರೇ ಆಗುತ್ತಾರೆ. ಇಂತಹ ಬೇಕಾದವರ ಗುಂಪಿನಲ್ಲಿ ಅತ್ತಿಮಬ್ಬೆಯು ಇದ್ದಾಳೆ. ಅತ್ತಿಮಬ್ಬೆ ಯಾವತ್ತೂ ವೈಧವ್ಯ ಕೆಟ್ಟದ್ದು, ವಿಧವೆಯಾಗಿರುವ ತಾನು ಅದೃಷ್ಟಹೀನಳೆಂದು ಭಾವಿಸದೆ, ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜಕ್ಕೆ ಬೇಕಾದವಳಾಗಿ ತುಂಬು ಬದುಕನ್ನು ಬಾಳಿದ್ದು ಎಂತಹವರಿದಾಗದೂ ಬೆರಗುಂಟುಮಾಡುವಂತಹದೇ ಆಗಿದೆ.

ಏ. ಸ್ತ್ರೀಯಾಗಿಯೂ ರಾಜಕೀಯ ವ್ಯವಸ್ಥೆಯಲ್ಲಿ ಪಾತ್ರ

ಅತ್ತಿಮಬ್ಬೆಯು ಸ್ತ್ರೀಯಾಗಿಯೂ ರಾಜಕೀಯ ವ್ಯವಸ್ಥೆಯಲ್ಲಿ ಗುರುತರವಾದ ಪಾತ್ರವಹಿಸಿದ್ದನ್ನು ನೋಡಬೇಕೆಂದರೆ ಅವಳ ಬಿರುದ ಹಾಗೂ ಕಾವ್ಯದಲ್ಲಿಯ ಹೊಗಳಿಕೆಯ ಮಾತುಗಳನ್ನು ಮತ್ತೊಮ್ಮೆ ಸ್ಮರಣೆಗೆ ತಂದುಕೊಳ್ಳುವ ಅವಶ್ಯಕತೆ ಇದೆ ಎಂದೆನಿಸುತ್ತದೆ.

ರನ್ನ ಕವಿಯು ತನ್ನ ಅಜಿತ ಪುರಾಣದಲ್ಲಿ "ಕಲಿಯೆನೆ ನೆಗರ್ದಿಳ್ ಕಸವರಗಲಿಯೆನ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್ "[೬೪] ಎಂದು ಮನಪೂರ್ವಕವಾಗಿ ಬಣ್ಣಿಸಿದ್ದಾನೆ. ಅತ್ತಿಮಬ್ಬೆಯು ಕಲ್ಯಾಣ ಚಾಲುಕ್ಯರ ಶ್ರೀಮಂತ ಮಾಂಡಲಿಕ ಮನೆತನದಲ್ಲಿ ಹುಟ್ಟಿದವಳು. ಅವಳ ಅಪ್ಪ ಚಿಕ್ಕಪ್ಪಂದಿರ ಶೌರ್ಯ ಸಾಹಸಗಳನ್ನು ಕಣ್ಣಾರೆ ಕಂಡು ಅದೇ ಪ್ರಭಾವದಲ್ಲಿ ಬೆಳೆದವಳು. ಅವಳು ಹುಟ್ಟಿ ಬೆಳೆದ ಮನೆ ಸಾಹಸಲಕ್ಷ್ಮಿ, ವಿದ್ಯಾಲಕ್ಷ್ಮೀ ಹಾಗೂ ಐಶ್ವರ್ಯಲಕ್ಷ್ಮಿಯರಿಗೆ ನೆಲೆಮನೆಯಾಗಿತ್ತು. ಅವಳು ಜೈನಧರ್ಮದ ಪಂಚ ನಮಸ್ಕಾರಗಳನ್ನು ಬಲ್ಲ ಹಾಗೆ ರಣರಂಗದಲ್ಲಿ ಖಡ್ಗಗಳ ಚಮತ್ಕಾರವನ್ನು ಬಲ್ಲವಳಾಗಿದ್ದಳು. ಆದುದರಿಂದಲೇ ಇರಬೇಕು ಅವಳಿಗೆ ಕಟಕ ಪವಿತ್ರೆ ಎಂಬ ಬಿರುದು ಇದೆ. ಕಟಕ ಎನ್ನುವ ಶಬ್ದದ ಅರ್ಥಗಳಲ್ಲಿ ಸೈನ್ಯವು ಒಂದು. ಸೈನ್ಯದಲ್ಲಿಯು ಇದ್ದು ಹೋರಾಟ ಮಾಡಬಲ್ಲ ಯುದ್ಧ ವೀರೆ ಅತ್ತಿಮಬ್ಬೆಯಾಗಿದ್ದಾಳೆ. ಯುದ್ಧವೀರೆಯರನ್ನು ಕರ್ನಾಟಕವು ಕಂಡಿದೆಯಾದರೂ ಅತ್ತಿಮಬ್ಬೆಯ ಹಾಗೆ ರಾಜಕೀಯ ವ್ಯವಸ್ಥೆಯಲ್ಲಿ ಅನುರೂಪ ಪಾತ್ರವಹಿಸಿದ್ದನ್ನು ಕಂಡಿಲ್ಲವೆಂದೇ ಹೇಳಬಹುದು.

ಬಸದಿಗಳ ನಿರ್ಮಾಣದಲ್ಲಿ ಅತ್ತಿಮಬ್ಬೆಯದು ಅನುಪಮವಾದ ನಿಲುವು. ಅರಸರಿಂದ, ಮಾಂಡಲೀಕರಿಂದ, ಸಮಾಜದ ಗಣ್ಯ, ಶ್ರೀಮಂತ ವ್ಯಕ್ತಿಗಳಿಂದ ದಾನ ಕೊಡುವಂತೆ ಪ್ರೇರೇಪಿಸಿದ್ದಾಳೆ.

ಅತ್ತಿಮಬ್ಬೆಯ ಮಾಡಿದಳು ಎನ್ನಲಾದ ಒಂದು ಪವಾಡ ಗೋದಾವರಿ ನದಿಯೇ ದಾರಿ ಮಾಡಿಕೊಟ್ಟಿದ್ದು. ಈ ಪವಾಡವನ್ನು ಲಕ್ಕುಂಡಿಯ ಶಾಸನ, ರನ್ನಕವಿ ಮತ್ತು ಶ್ರವಣಬೆಳ್ಗೊಳದ ಶಾಸನವು ವರ್ಣಿಸಿದೆ. ಇದಕ್ಕೆ ಸಂಬಂಧಪಟ್ಟ "ಅತ್ತಿಮಬ್ಬೆ ವ್ಯಕ್ತಿತ್ವ ವರ್ಣನೆ"ಯಲ್ಲಿ ಚರ್ಚಿಸಿದ್ದೇನೆ. ಈ ಅಧ್ಯಾಯದಲ್ಲಿ ಸ್ತ್ರೀ ಚಿಂತನೆಯ

ಹಿನ್ನೆಲೆಯಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ನೋಡಬೇಕಾಗಿರುವದರಿಂದ ಮತ್ತೊಮ್ಮೆ ಪವಾಡದ ವಿಷಯವನ್ನು ನೆನಪಿಸಬೇಕಾಗಿದೆ.

ಈ ಪವಾಡವು ಅತ್ತಿಮಬ್ಬೆಯ ಜೀವನದಲ್ಲಿ ನಡೆದಿರಬಹುದಾದ ಸತ್ಯ ಘಟನೆಯಾಗಿದೆ. ಗೋದಾವರಿಯು ತುಂಬಿ ಹರಿಯುತ್ತಿದ್ದಾಳೆ. ಸೈನ್ಯದ ಜತೆಗೆ ಅತ್ತ ಹೋಗಬೇಕಾಗಿರುವ ಚಕ್ರವರ್ತಿಗೆ ಏನೂ ಮಾಡಬೇಕೆಂಬುದೇ ತಿಳಿಯುವದಿಲ್ಲ. ಏನೊಂದು ತಿಳಿಯಲಾರದ ಚಕ್ರವರ್ತಿಯು ಈ ಸಮಸ್ಯೆಯನ್ನು ಕುರಿತು ಅತ್ತಿಮಬ್ಬೆಗೆ ವಿವರಿಸಿ, ಅವಳ ಸೂಕ್ತ ಸಲಹೆಯನ್ನು ಕೇಳಿದ್ದಾನೆ. ಅತ್ತಿಮಬ್ಬೆಯು ಅತ್ಯಂತ ಚಾಣಾಕ್ಷತನದಿಂದ, ಆಳ, ಸುಳಿ, ಸೆಳೆತವಿರಲಾರದ ಒಂದು ಅಪಾಯರಹಿತವಾದ ಸುಮಾರ್ಗವನ್ನು ತೋರಿಸಿದ್ದಾಳೆ. ನಂತರವೇ ಇದು ಪವಾಡಪ್ರಿಯ ಜನರ ಬಾಯಲ್ಲಿ ಒಂದು ಪವಾಡ ವದಂತಿಯಾಗಿ ಹಬ್ಬಿದ್ದು. ಇಲ್ಲಿ ಎಲ್ಲರ ಮನಸ್ಸನ್ನು ಒಂದು ವಿಷಯ ಗಮನಿಸುತ್ತದೆ. ಅದು ಯಾವುದೆಂದರೆ ಸಾಕ್ಷಾತ್ ಚಕ್ರವರ್ತಿಯೇ ಅತ್ತಿಮಬ್ಬೆಯ ಸಲಹೆಯನ್ನು ಕೇಳಿದ್ದು. ಅತ್ತಿಮಬ್ಬೆಯ ವ್ಯಕ್ತಿತ್ವ ಒಬ್ಬ ಅರಸನೇ ಸಲಹೆ ಕೇಳುವಷ್ಟರ ಮಟ್ಟಿಗೆ ಹಿರಿದಾಗಿತ್ತು. ಚಕ್ರವರ್ತಿಗೆ ಆಪ್ತ ಸಲಹೆ ಕೊಡುವಷ್ಟು ಈ ಹೆಣ್ಣುಮಗಳು ಆತ್ಮೀಯಳಾಗಿದ್ದಳು. ಹಿರಿತನವುಳ್ಳವಳಾಗಿದ್ದಳು.

ಸ್ತ್ರೀಯರಿಗೆ ಜೈನ ಧರ್ಮದಲ್ಲಿದ್ದಿರಬಹುದಾದ ಸ್ವಾತಂತ್ರ ಪ್ರಾಮುಖ್ಯತೆಗಳು ಅತ್ತಿಮಬ್ಬೆಗೆ ದೊರಕಿದ್ದು ಅತ್ಯಂತ ಸಹಜವಾಗಿದೆ. ಹಾಗಾದರೆ ಅತ್ತಿಮಬ್ಬೆಯ ಜೀವನ ಸಾಧನೆ ಸರಳವಾಗಿದೆಯೆಂದು ತಿಳಿಯಲಾಗದು. ಅವಳ ದಾನಗುಣ ನ ಭೂತೋ ನ ಭವಿಷ್ಯತಿ ಎನ್ನುವ ಹಾಗಿತ್ತು. ಆದುದರಿಂದಲೇ ಐತಿಹಾಸಿಕ ಸುಪ್ರಸಿದ್ಧ ದಾನವೀರರ ಜತೆ ಅತ್ತಿಮಬ್ಬೆಯ ದಾನವನ್ನು ಹೋಲಿಸಿ ಆ ಇತಿಹಾಸ ಪ್ರಖ್ಯಾತಿವೆತ್ತ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯ ಹಾಗೂ ಶಂಕರ ಗಂಡರಿಗಿಂತ ದಾನಗುಣದಲ್ಲಿ ಅತ್ತಿಮಬ್ಬೆಯೇ ಹಿರಿಯಳೆನಿಸಿದ್ದಳು ಎಂದು ಹೇಳಿದ್ದಾನೆ. ಅಂದರೆ ಅತ್ತಿಮಬ್ಬೆಯದು ಪುರುಷರನ್ನೇ ಮೀರಿಸಿದ ದಾನ ಗುಣವಾಗಿದೆ. ಮಗನೇ ದಂಡಾಧಿಕಾರಿಯಾಗಿರುವುದರಿಂದ ಅವಳಿಗೆ ಹೆಚ್ಚಿನ ಅನುಕೂಲವಾಗಿದೆ.

ಸ್ತ್ರೀಯಲ್ಲಿ ಪುರುಷನಷ್ಟೇ ಕಾರ್ಯ-ಕ್ಷಮತೆಯಿದ್ದಾಗಲೂ ಆಕೆ ನಂಬಿಕೆಗೆ ಅನರ್ಹಳಾಗುತ್ತಾಳೆ. ವಿದ್ಯಾಭ್ಯಾಸಕ್ಕಂತೂ ಸಾಕಷ್ಟು ದೂರ ಉಳಿಯುತ್ತಾಳೆ. ಈ ಅಧ್ಯಾಯದಲ್ಲಿ ಚರ್ಚಿತವಾಗಿರುವಂತೆ ವೈಧವ್ಯ, ಆ ಸ್ತ್ರೀಗೆ ಶಾಪವೇ ಆಗಿ ಪರಿಣಮಿಸುತ್ತದೆ. ಅವಳ ಜೀವನದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ವಿಧವೆಯೆಂದರೆ ಅದೃಷ್ಟಹೀನಳು. ಶುಭಕಾರ್ಯಕ್ಕೆ ಹೋಗುವಾಗ ಅವಳ ದರ್ಶನವೇ ಅಶುಭ ಎನ್ನುವ ಗಾಢವಾದ ನಂಬಿಕೆಗೆ ಈಡಾಗುತ್ತಾಳೆ. ಆದರೆ ಈ ವೈಧವ್ಯದ ಕಟ್ಟುಪಾಡಿನ ಹುರುಳಿಲ್ಲದ ಮೌಲ್ಯಗಳನ್ನು ಅತ್ಯಮತ ಸರಳವಾಗಿ ಬದಿಗೊತ್ತಿ ತನ್ನ ನಡೆ ನುಡಿಗಳಿಂದಲೇ ಸ್ತ್ರೀಗೂ ಒಂದು ವ್ಯಕ್ತಿತ್ವವಿದೆ ಎಂಬುದನ್ನು ಅತ್ತಿಮಬ್ಬೆ ತೋರಿಸಿಕೊಟ್ಟಿದ್ದಾಳೆ. ಸರಳ ಸಜ್ಜನಿಕೆಯಿಂದ ಬಾಳಿ ಬೆಟ್ಟದಷ್ಟೂ ಇರುವ ಸಂಪತ್ತನ್ನೂ ದಾನ, ಧರ್ಮಗಳಿಗೆ ವಿನಿಯೋಗಿಸಿದ್ದಾಳೆ.

ಬುಧ ಜನವಂದಿತೆ ಧರ್ಮ
ಪ್ರಧಾನ ದರ್ಶನ ವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರ ಕಾ
ಮಧೇನುವೆಂಬುದತ್ತಿಮಬ್ಬೆಯೆನೆ ಜಗಂ

ಜಿನಪದ ಭಕ್ತೆ ಜಗತ್ರಯ
ಜನವಂದಿತೆ ಚಕ್ರವರ್ತಿ ಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲನ
ಜನನಿಯೆ ತೀರ್ಥಂಕರ ಜನನಿಯೆನ್ನದರೊಳರೇ

(ಅಜಿತಪುರಾಣ ತೀರ್ಥಕರ ಪುರಾಣಂ, ಸಂ, ಬಿ.ಎಸ್.ಸಣ್ಣಯ್ಯ, ರಾಮೇಗೌಡ, ೧ - ೫೪, ೫೫)

ಈ ರೀತಿಯಾಗಿ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ ಅತ್ತಿಮಬ್ಬೆ ಜಗತ್ರಯ ಜನವಂದಿತೆಯಾಗಿದ್ದಾಳೆ. ದಾನಚಿಂತಾಮಣಿ, ದಾನವಿನೋದೆ ಎಂಬ ಬಿರುದುಗಳನ್ನು ಪಡೆದುಕೊಂಡಿದ್ದಾಳೆ. ಇಷ್ಟು ಮೇಲು ಮಟ್ಟದ ಸ್ಥಾನವನ್ನು ಪಡೆಯಲು ಏನು ಕಾರಣವಿರಬಹುದು? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ, ಅವಳು ಮಾಂಡಲಿಕ ಮನೆತನದವಳಾಗಿದ್ದಳು. ಅವಳಿಗೆ ಆರ್ಥಿಕ ಸಂಬಲತೆ ಇತ್ತು. ಅವಳ ಮಗನೇ ದಂಡಾಧಿಕಾರಿಯಾಗಿದ್ದನು ಎನ್ನುವ ಉತ್ತರಗಳು ಹೊಳೆಯುತ್ತವೆ. ಈ ಉತ್ತರಗಳು ಸ್ವಲ್ಪಮಟ್ಟಿಗೆ ಕಾರಣವಾಗಿವೆಯೇ ಹೊರತು, ಅವುಗಳೇ ಪೂರ್ಣಾಂಶಗಳಲ್ಲ. ಅವಳ ಮೇಲು ಮಟ್ಟದ ಸ್ಥಾನದ ಕಾರಣಗಳು ಹೀಗಿವೆ.

ಐ. ಪ್ರಗತಿಪರ ಧೋರಣೆ

ಗಂಡು ಮಗುವಿನಿಂದಲೇ ಮುಕ್ತಿ ಎಂಬ ಬಲವಾದ ನಂಬುಗೆಯ ಕೌಟುಂಬಿಕ ಸೀಮಿತ ವಲಯದಲ್ಲಿದ್ದಾಗಲೂ ಅತ್ತಿಮಬ್ಬೆ ತವರುಮನೆ - ಗಂಡನ ಮನೆಯವರ ಸುಸಂಸ್ಕೃತ ವಿಚಾರಗಳನ್ನು ಯಾವಾಗಲೂ ಪರಿಪಾಲನೆ ಮಾಡಿಕೊಂಡು ಬಂದವಳು. ಆದುದರಿಂದಲೇ ತನ್ನ ಬಾಳು ಕತ್ತಲೆಯಲ್ಲಿ ಮುಂದುವರೆಯಬೇಕಾಗಿ ಬಂದಾಗ ಅವಳು ಸಾತ್ವಿಕ ನಿಲುವನ್ನು ಕಂಡುಕೊಂಡಳು. ಅತ್ತಿಮಬ್ಬೆ ಸತಿ ಹೋಗಲಾರದೆ ಮಹಾಸತಿರತ್ನ ತಿಲಕೆಯಾದದ್ದು ಒಂದು ವೈಶಿಷ್ಟ್ಯವೇ ಆಗಿದೆ. ಅವಳು ಪುರುಷ ದ್ವೇಷಿಯೂ ಅಲ್ಲ, ಸಮಾನತೆಯನ್ನೂ ಕೇಳಲಿಲ್ಲ. ಪರಂಪರಾಗತ ಸಂಪ್ರದಾಯದ ಚೌಕಟ್ಟನ್ನು ದಾಟಿದರೂ ಪರಂಪರೆಯಲ್ಲಿ, ಧರ್ಮದಲ್ಲಿ ಸಂಸ್ಕೃತಿಯಲ್ಲಿ ಅಡಕವಾಗಿರುವ ಅರ್ಥಪೂರ್ಣ ಮೌಲ್ಯಗಳನ್ನು ಬಿಟ್ಟುಕೊಡಲಿಲ್ಲ. ಅತ್ತಿಮಬ್ಬೆಯದು ಪ್ರಗತಿಪರ ಧೋರಣೆ, ದಾನಗುಣ, ಧರ್ಮಪರಿಪಾಲನೆಯಂತಹ ವ್ಯಕ್ತಿತ್ವದೊಂದಿಗೆ ಅವಳ ಸ್ತ್ರೀವಾದವನ್ನು ಒಪ್ಪಿಕೊಳ್ಳಲೇಬೇಕು. ಅವಳು ಯಾವರೀತಿಯಾಗಿ ಸನ್ಯಾಸ ದೀಕ್ಷೆಯನ್ನು ತೆಗೆದುಕೊಳ್ಳಲಾರದೆ ಸನ್ಯಾಸ ಜೀವನವನ್ನು ನಡೆಸಿದಳೊ, ಅದೇ

ರೀತಿಯಾಗಿ ಸ್ತ್ರೀ ವಾದವನ್ನು ಮಾಡದಿದ್ದರೂ ಸ್ತ್ರೀ ಚಿಂತನೆ ಅವಳ ಆಂತರೀಕ ವ್ಯಕ್ತಿತ್ವವಾಗಿದೆ. ಆದುದರಿಂದಲೇ ಡಾ.ಹಂಪನಾ ಅತ್ತಿಮಬ್ಬೆಯನ್ನು "ದೇಶೀ ಸ್ತ್ರೀವಾದದ ಉದ್ಘಾಟಕಿ" ಎಂದು ಕರೆದಿದ್ದಾರೆ.[೬೫] ವೈಧವ್ಯದ ಕಠಿಣವಾದ ದಿನಗಳನ್ನು ಅತ್ತಿಮಬ್ಬೆ ಸಮಾಜ ಸೇವೆಯಲ್ಲಿ ಸಾರ್ಥಕಪಡಿಸಿಕೊಂಡಳು. ತನ್ನ ಉದಾತ್ತವಾದ ಬದುಕಿನ ಸಮೃದ್ಧಿಯಿಂದ ಇತಿಹಾಸ ಗುರುತಿಸುವ ವ್ಯಕ್ತಿಯಾದಳು. ಪ್ರಗತಿಪರ ಧೋರಣೆಯಿಂದ ಉನ್ನತ ಸ್ಥಾನ - ಮಾನದ ಮೆಟ್ಟಿಲನ್ನು ಏರತೊಡಗಿದಳು.

೭. ದಾನಗುಣ

ಅತ್ತಿಮಬ್ಬೆಯನ್ನು ಕನ್ನಡಿಗರು ಗುರುತಿಸುವುದೇ ಅವಳ ದಾನಗುಣದಿಂದ. ದಾನಚಿಂತಾಮಣಿಯೆಂಬ ಬಿರುದು ಕೂಡಾ ಅವಳ ಹೆಸರೇನೊ ಎನ್ನುವಷ್ಟರ ಮಟ್ಟಿಗೆ ರೂಢಿಯಾಗಿದೆ. ತನ್ನ ಕಾಲದಲ್ಲಿ ಐತಿಹಾಸಿಕವಾಗಿ ದಾನವೀರರೆಂದೇ ಪ್ರಸಿದ್ಧಿಯನ್ನು ಪಡೆದುಕೊಂಡ ಗಂಗರಾಜಮನೆತನಕ್ಕೆ ಸೇರಿದ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯ ಮತ್ತು ರಾಷ್ಟ್ರಕೂಟ ರಾಜಮನೆತನಕ್ಕೆ ಸೇರಿದ ಶಂಕರಗಂಡರಿಗಿಂತಲೂ ದಾನಗುಣದಲ್ಲಿ ಅತ್ತಿಮಬ್ಬೆಯೇ ಆಧಿಕ್ಯಳಾಗಿದ್ದಳು ಎಂದು ಅಜಿತಪುರಾಣದಲ್ಲಿ ರನ್ನ ಮಹಾಕವಿಯು ವರ್ಣಿಸಿದ್ದಾನೆ. ಅತ್ತಿಮಬ್ಬೆಯ ದಾನಗುಣವನ್ನು ಎಷ್ಟು ಹೇಳಿದರೂ ರನ್ನ ಕವಿಗೆ ದಣಿವಿಲ್ಲ. ಆದುದರಿಂದಲೇ ಇತಿಹಾಸದಲ್ಲಿ ತಮ್ಮ ಶೌರ್ಯ ಸಾಹಸಗಳ ಜತೆ ದಾನಗುಣದಿಂದ ಪ್ರಖ್ಯಾತರಾದ ಬೂತುಗ, ಮಮಳ, ಮಾರಸಿಂಹ, ಚಾವುಂಡರಾಯ, ಶಂಕರಗಂಡರಿಗಿಂತ ಅತ್ತಿಮಬ್ಬೆ ದಾನ ಕೊಡುವದರಲ್ಲಿ ಮಿಗಿಲೆನಿಸಿದ್ದಳು.[೬೬] ಅಂದರೆ ಅತ್ತಿಮಬ್ಬೆಯರು ಪುರುಷರನ್ನು ಮಿರಿಸಿದ ದಾನಗುಣವಾಗಿತ್ತು.

೮. ವಿದ್ಯಾ ಪಕ್ಷಪಾತಿ ಅತ್ತಿಮಬ್ಬೆ

ರನ್ನ ಕವಿಯ ಪದ್ಯಗಳಾಗಲಿ, ಲಕ್ಕುಂಡಿಯ ಶಾಸನಗಳಾಗಲಿ ಅತ್ತಿಮಬ್ಬೆಯು ವಿದ್ಯಾವತಿಯಾಗಿದ್ದಳೆ ಇಲ್ಲವೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಅವಳು ಮಾಡಿರಬಹುದಾದ ಸಾಧನೆಯಿಂದ ಖಂಡಿತವಾಗಿಯೂ ಅವಳು ವಿದ್ಯೆಯನ್ನು ಪಡೆದುಕೊಂಡಿರಬೇಕು ಎಂದೆನಿಸುತ್ತದೆ. ಈ ಸಂದರ್ಭದಲ್ಲಿ ಡಾ.ಹಂಪನಾ ಅವರ ವಿಚಾರಗಳು, ಊಹೆಗಳು ಸರಿಯೆನಿಸುತ್ತವೆ. "ಅತ್ತಿಮಬ್ಬೆಗೆ ವಿದ್ಯಾಭ್ಯಾಸದ ಕೊರತೆಯಾಗಿರಲಿಲ್ಲ.[೬೭] ಅವಳಿಗೆ ಮನೆಯಲ್ಲಿಯೇ ನಾಲ್ಕು ಗೋಡೆಗಳ ಮಧ್ಯವಷ್ಟೇ ಜೀವನ ಸಾಗಿಸಬೇಕೆಂಬ ಕಟ್ಟಳೆಗಳು ಇಲ್ಲ. ಶ್ರೀಮಂತಿಕೆಯು ಸಾಕಷ್ಟು ಇದ್ದಿತು. ಪ್ರತಿಭೆ, ಪಾಂಡಿತ್ಯ, ಸಾಮರ್ಥ್ಯ, ವೈಚಾರಿಕತೆಯ ನಿಲುವು. ಇವುಗಳೆಲ್ಲ ಅತ್ತಿಮಬ್ಬೆಯಲ್ಲಿರುವದನ್ನು ನೋಡಿದರೆ ಖಂಡಿತವಾಗಿಯೂ ಅವಳು ವಿದ್ಯಾಭ್ಯಾಸವನ್ನು ಗಳಿಸಿಕೊಂಡವಳಾಗಿದ್ದಾಳೆ. ಅಲ್ಲದೆ ಅದೇ ಬಗೆಯ ವಾತಾವರಣದಲ್ಲಿ ತನ್ನ ಬಾಲ್ಯವನ್ನು ಅವಳು ಕಳೆದಿದ್ದಾಳೆ. ಕವಿಗಳಿಗೆ ಕಾವ್ಯವನ್ನು ಓದುವದಕ್ಕೆ, ಶಾಸ್ತ್ರ ವಿಚಾರಾದಿಗಳ ಚರ್ಚೆಗೆ, ಸಾಹಿತ್ಯದ ಯಾವುದೇ ಬಗೆಯ ಕಾರ್ಯಕಲಾಪಗಳಿಗೆ ಅತ್ತಿಮಬ್ಬೆಯ ತೌರುಮನೆಯೇ ವಾಸಸ್ಥಾನವಾಗಿತ್ತು ಎಂದು

ರನ್ನ ಕವಿಯೇ ಹೇಳಿದ್ದಾನೆ.[೬೭] ಅತ್ತಿಮಬ್ಬೆಯ ಅಪ್ಪ ಮತ್ತು ಚಿಕ್ಕಪ್ಪಂದಿರು ಪೊನ್ನ ಮಹಾಕವಿಯಿಂದ ಶಾಂತಿ - ಪುರಾಣವನ್ನು ಬರೆಯಿಸಿದ್ದರು. ಒಂದು ತಲೆಮಾರು ಮುಗಿಯುವವರೆಗೆ ಓದುಗರಿಗೆ ಲಭ್ಯವಿದ್ದ ಶಾಂತಿ - ಪುರಾಣದ ಹಸ್ತಪ್ರತಿಗಳು ನಂತರ ನಶಿಸಿ ಓದುಗರಿಗೆ ದೊರೆಯದಂತಾದವು. ಈ ಕೊರತೆಯನ್ನು ಅತ್ತಿಮಬ್ಬೆಯು ನೀಗಿಸಿದ್ದಳು. ಅಂದರೆ ಅತ್ತಿಮಬ್ಬೆ ಶಾಂತಿಪುರಾಣದ ಸಾವಿರ ಪ್ರತಿ ಮಾಡಿಸಿದ್ದಾಳೆ. ಮುದ್ರಣ ವ್ಯವಸ್ಥೆಯಿಲ್ಲದ ಕಾಲದಲ್ಲಿ ಒಂದು ಕೃತಿಯ ಮರುಲಿಪಿಕರಣ ಮಾಡಿಸಿದ್ದ ಸಣ್ಣ ಕೆಲಸವಲ್ಲ.

ರನ್ನ ಕವಿಯು ಚಾವುಂಡರಾಯನಿಂದ ಮತ್ತು ಅತ್ತಿಮಬ್ಬೆಯಿಂದ ಉಪಕೃತನಾಗಿದ್ದಾನೆ. ಚಾವುಂಡರಾಯನಿಗೆ ಅತ್ತಿಮಬ್ಬೆಯ ಪರಿಚಯಕ್ಕೆ ಬಂದಿದ್ದಾನೆ. ರನ್ನನಂತ ಕವಿಗೆ ಸಹಾಯದ ಅವಶ್ಯಕತೆಯಿರುವದನ್ನು ಅರಿತುಕೊಂಡ ಅತ್ತಿಮಬ್ಬೆ ಆ ಕವಿಗೆ ಆಶ್ರಯವನ್ನು ಕೊಟ್ಟಿದ್ದಾಳೆ. ಅವಳ ದಾನಗುಣವನ್ನು ಕಣ್ಣಾರೆ ಕಂಡುಂಡ ರನ್ನ ಮಹಾಕವಿಯು ಅವಳ ಜೀವನಗಾಥೆಯನ್ನು ಅಜಿತ ಪುರಾಣದ ಆರಂಭಿಕ ಮತ್ತು ೧೨ನೆಯ ಆಶ್ವಾಸದ ಪದ್ಯಗಳಲ್ಲಿ ಹಿಡಿದಿಟ್ಟಿದ್ದಾನೆ. ಹೀಗೆ ಅಕ್ಷರವಂತೆಯಾಗಿರುವ ಅತ್ತಿಮಬ್ಬೆ ಕವಿ ಪೋಷಕಿಯಾಗಿದ್ದಾಳೆ.

೫. ದೇವಾಲಯಗಳ ನಿರ್ಮಾಣದಲ್ಲಿ ಪುರುಷ ಸಮಾನೆ

ಕನ್ನಡ ನಾಡಿನಲ್ಲಿರುವ ಮೂವತ್ತು ಸಾವಿರ ಶಾಸನಗಳಲ್ಲಿ, ದಾನ ಶಾಸನಗಳೇ ಅಧಿಕವಾಗಿವೆ. ಆ ದಾನ ಶಾಸನಗಳಲ್ಲಿ ಅನೇಕ ರಾಜ ಮಹಾರಾಜರು, ಅಧಿಕಾರಿಗಳು, ಗ್ರಾಮ ಮುಖಂಡರು ಮತ್ತು ಇತರರು ಅನೇಕ ರೀತಿಯ ನಿರ್ಮಾಣ ಚಟುವಟಿಕೆಗೆ ದಾನ ನೀಡಿರುವ ವಿವರಗಳೇ ತುಂಬಿವೆ. ಇಂತಹ ದಾನ ಕಾರ್ಯಗಳನ್ನು ಅನೇಕ ಜನ ಕವಿಗಳು ಉಲ್ಲೇಖಿಸಿರುವದನ್ನು ಸಾಹಿತ್ಯ ಚರಿತ್ರೆಯಲ್ಲಿ ಕಾಣಬಹುದು. ಈ ಪುರುಷ ಪ್ರಧಾನ ನಿರ್ಮಾಣಗಳ ಮಧ್ಯೆ ನಮ್ಮ ಅತ್ತಿಮಬ್ಬೆ ವಿಭಿನ್ನಳಾಗಿರುವುದು ಮೇಲಿನ ಕಾರನದಿಂದಲೇ, ಜಿನಸಮಯ ಪ್ರದೀಪಿಕೆ ಜೈನಧರ್ಮ ಪತಾಕೆ ಎಂದು ನಾನಾ ರೀತಿ ಹೊಗಳಿಸಿಕೊಂಡಿರುವ ಅತ್ತಿಮಬ್ಬೆ ನೂರಾರು ಬಸದಿಗಳನ್ನು ನಿರ್ಮಿಸಿರುವುದು ಈಗ ಇತಿಹಾಸ. ನಿರ್ಮಾಣ ಚಟುವಟಿಕೆ ಎಂದರೆ ಸಾಮಾನ್ಯವಲ್ಲ. ಅದಕ್ಕೆ ಜನಸಮೂಹದ ಬೆಂಬಲ, ಅಪಾರವಾದ ಸಿದ್ಧತೆ, ಅಪಾರವಾದ ದ್ರವ್ಯ ಮತ್ತು ಹಲವರು ಒಪ್ಪುವ ವ್ಯಕ್ತಿತ್ವದ ಪ್ರಭಾವವಿರಬೇಕು ಈ ಎಲ್ಲ ಗುಣಗಳನ್ನು ಅತ್ತಿಮಬ್ಬೆ ಹೊಂದಿದ್ದಳೆಂಬದು ಅತೀಶಯೋಕ್ತಿಯೇನೂ ಅಲ್ಲ. ನೂರಾರು ಜನರಿಂದ ಹಲವಾರು ವರ್ಷ ಸಾಂಘಿಕ ಕಾರ್ಯದ ಮೂಲಕ ನಿರ್ಮಿಸಿದ ಬಸದಿಗಳು ಸಂಖ್ಯೆಯಲ್ಲಿ ಸಾವಿರನ್ನು ಮೀರಿವೆ. ಈ ಕಾರ್ಯ ಭಾರತೀಯ ಇತಿಹಾಸದಲ್ಲಿಯೇ ಅಪರೂಪವಾದದ್ದು. ಎಷ್ಟೋ ಚಕ್ರವರ್ತಿಗಳು ಇವಳಷ್ಟು ಬಸದಿಗಳನ್ನು ನಿರ್ಮಿಸಿಲ್ಲ. ಇಷ್ಟೆಲ್ಲ ಬಸದಿಗಳನ್ನು ಅವಳೊಬ್ಬಳೆ ನಿರ್ಮಿಸಿಲ್ಲ. ಅದು ಅಸಾಧ್ಯವೂ ಹೌದು. ಬಸದಿಗಳ ನಿರ್ಮಾಣಕ್ಕಂತೂ ಅತ್ತಿಮಬ್ಬೆಯ ಕೊಡುಗೆ ಇದ್ದೇ ಇದೆ. ಪುರುಷ ಪ್ರಧಾನ ಸಮಾಜದಲ್ಲಿ, ಒಬ್ಬ ಮಹಿಳೆಗೆ ಇಷ್ಟೆಲ್ಲಾ ಅವಕಾಶವಿತ್ತು ಎಂಬಂತೆ ಅಚ್ಚರಿ ಹುಟ್ಟಿಸುವ ಅವಕಾಶವನ್ನು ಅತ್ತಿಮಬ್ಬೆ ಸೃಷ್ಟಿಸಿಕೊಂಡಿದ್ದಳು. ಈ ಅವಕಾಶ ಸೃಷ್ಟಿ ಅತ್ತಿಮಬ್ಬೆ ಸ್ವಂತವಾಗಿ ಪಡದದ್ದೆ ಹೊರತು ಅನ್ಯರಿಂದ ಎರವಲು ಪಡೆದದ್ದು ಅಲ್ಲ.

[illegible]

೨೦. ಶಾಸನಗಳಲ್ಲಿ ಉಲ್ಲೇಖವಾಗಿರುವ ದಾನಗುಣ

ಅತ್ತಿಮಬ್ಬೆಯ ಜೀವನ, ಸಾಧನೆ, ದಾನ ಮೊದಲಾದವುಗಳು ಶಾಸನ ಮತ್ತು ಕಾವ್ಯಗಳಲ್ಲಿ ವರ್ಣಿತವಾಗಿವೆ. ಅನೇಕ ಶಾಸನಗಳು ಅತ್ತಿಮಬ್ಬೆಯ ದಾನ ಗುಣವನ್ನು ಸ್ಮರಿಸಿವೆ. ಅವುಗಳಲ್ಲಿ ಲಕ್ಕುಂಡಿಯ ಶಾಸನವೇ ಪ್ರಮುಖವಾದದ್ದು.

''ಭೈಷಜ್ಯ ಶಾಸ್ತ್ರಾಭಿದಾನ ದಾನಪೂಜಾ ಶೀಳೋಪವಾಸದ್ಯಶೇಷಗುಣವಿ ಭಾಸುರತೆಯಿಂ ಗುಣದಂಕಕಾರ್ತಿಯುಂ''[೬೮]

ಅತ್ತಿಮಬ್ಬೆಯು ಜೈನ ಧರ್ಮದಲ್ಲಿ ಪ್ರಮುಖವಾಗಿರುವ ನಾಲ್ಕು ಬಗೆಯ ದಾನಗಳನ್ನು ಮಾಡಿದ್ದಾಳೆ. ಅತ್ತಿಮಬ್ಬೆಯು ಜೈನ ಧರ್ಮದಲ್ಲಿ ವಿಶಿಷ್ಟವಾಗಿರುವ ದಾನವನ್ನು ತನ್ನ ಜೀವಿತದ ಪರಮ ಗುರಿಯನ್ನಾಗಿ ಮಾಡಿಕೊಂಡಳು. ಅದನ್ನೇ ಲಕ್ಕುಂಡಿ ಶಾಸನವು ಬಣ್ಣಿಸುತ್ತದೆ. ಜೈನಧರ್ಮದಲ್ಲಿ ಅಗತ್ಯವಾಗಿ ಮಾಡಬೇಕಾಗಿರುವ ದಾನಗಳು ನಾಲ್ಕು.

೧. ಭೋಜನ

೨. ಔಷಧಿ

೩. ಶಾಸ್ತ್ರ

೪. ಅಭಯ

ಈ ನಾಲ್ಕು ಬಗೆಯ ದಾನಗಳನ್ನು ಅತ್ತಿಮಬ್ಬೆ ಕೈಗೊಂಡಿದ್ದಳು. ಹಾಗೆಯೇ ಅತ್ತಿಮಬ್ಬೆಯನ್ನು ಹೋಲಿಸಿಯೂ ಅವಳ ದಾನಗುಣ ಶಾಸನೋಕ್ತವಾಗಿದೆ. ಅದು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ರಾಮಪಟ್ಟಣದ ಶಾಸನವಾಗಿದೆ.

ದಾನದೊಳಭಿಮಾನದೊಳೀ
ಮಾನಿನಿಗೆಣೆಯಿಲ್ಲ ಸತಿಯರೊಳೆಲ್ಲರುಮಂ ಕಃ
ಕೇನಾರ್ತ್ಥಿಯನ್ನು ಕುಡುವಳೆ
ದಾನಮನೇಚಬ್ಬೆಯತ್ತಿಮಬ್ಬೆರಸೆಯ ವೋಲ್ [೬೯]

ಬರೀ ದಾನವೊಂದೇ ಅಲ್ಲ ಅವಳು ನಾನಾ ಗುಣಗಳ ಗಣಿಯಾಗಿದ್ದಳು. ಆದರ್ಶ ಗುಣಗಳ ಪ್ರತೀಕವೇ ಅತ್ತಿಮಬ್ಬೆಯಾಗಿದ್ದಳು. ದಾನಗುಣ, ಧರ್ಮಶ್ರದ್ಧೆ, ಅಕ್ಷರ ಪಕ್ಷಪಾತಿ, ಬಸದಿಗಳನ್ನು ಕಟ್ಟಿಸುವ ಹಾಗೂ ನವೀಕರಿಸುವ ಗುಣ ಹೀಗೆ ಇಂದಿನ ಆಧುನಿಕ ಸ್ತ್ರೀಯರು ಕೂಡ ಮೆಚ್ಚುವಂತೆ ಕೃರ್ತತ್ವಶಕ್ತಿಯನ್ನು ಹತ್ತನೆಯ ಶತಮಾನದಲ್ಲಿ ಅತ್ತಿಮಬ್ಬೆ ಹೊಂದಿದ್ದಳೆಂಬುದು ಆಶ್ಚರ್ಯವಾದರೂ ಸತ್ಯ ಸಂಗತಿಯಾಗಿದೆ. ಅತ್ತಿಮಬ್ಬೆಯ

ಬದುಕು ವೈವಿಧ್ಯತೆಯಿಂದ ಕೂಡಿತ್ತು. ಅವಳು ರಣಕಲಿ, ಧರ್ಮಕಲಿ, ದಾನ ಕಲಿಯಾಗಿದ್ದಳು. ಇತಿಹಾಸವು ಕೇವಲ ದಾನಶೂರರ, ಧರ್ಮಭೀರುವಿನ, ಸಾಹಸಿಯ, ಸಾಹಿತ್ಯಿಕ ಗುಣಗಳಿಂದ ಪ್ರಸಿದ್ಧರಾದವರ ಪ್ರಸಂಗಗಳನ್ನು ವರ್ಣಿಸುತ್ತದೆ. ಆದರೆ ಇಷ್ಟೆಲ್ಲಾ ಗುಣಗಳು ಒಬ್ಬ ವ್ಯಕ್ತಿಯಲ್ಲಿರುವುದು ಅಸಾಧ್ಯವೇ ಆಗಿದೆ. ಆದರೆ ನಮ್ಮ ಅತ್ತಿಮಬ್ಬೆಯು ಜಗತ್ತಿನಲ್ಲಿಯೇ ಯಾವ ಪುರುಷನಲ್ಲಿಯೂ ಯಾವುದೇ ಕಾಲದಲ್ಲಿಯು ಇರಲಾರದ ಗುಣಗಳಾದ ದಾನ, ಧರ್ಮ, ಶೌರ್ಯ, ಸಮಯಪ್ರಜ್ಞೆ, ಸಮ್ಯಕ್ತಭಾವನೆ, ಶೀಲವ್ರತಾಚಾರಣೆ, ಶ್ರೀಮಂತಿಕೆ ಇವೆಲ್ಲವುಗಳನ್ನು ಹೊಂದಿದವಳಾಗಿದ್ದಳು ಎನ್ನುವುದು ಉತ್ಪ್ರೇಕ್ಷೆಯೇನಲ್ಲ.

ದೊರಕಿರುವ ಅಲ್ಪ ಸ್ವಲ್ಪ ದಾಖಲೆಗಳಲ್ಲಿ ಅತ್ತಿಮಬ್ಬೆಯ ವ್ಯಕ್ತಿತ್ವದ ಕಲ್ಪನೆ ಅಚ್ಚರಿ ಹುಟ್ಟಿಸುವ ಹಾಗಿದೆ. ಸಮಗ್ರ ವ್ಯಕ್ತಿತ್ವದ ದಾಖಲೆಗಳೇನಾದರೂ ಇದಿದ್ದರೆ ಅತ್ತಿಮಬ್ಬೆಯ ವ್ಯಕ್ತಿತ್ವದ ಕಲ್ಪನೆಯೇ ಅದ್ಭುತವಾಗಿರುತಿತ್ತು. ಕಾವ್ಯ ನಾಯಕಿಯಾಗಿ ಇವಳು ಕಾವ್ಯದಲ್ಲಿ ಹೇಗೆ ಸ್ಥಾನವನ್ನು ಪಡೆದುಕೊಂಡವಳೆಂದರೆ - ಅವಳು ವ್ಯಕ್ತಿತ್ವದಿಂದಲೇ ಜನ - ಮನದಲ್ಲಿ - ಪುರುಷ ಸಮಾನವಾಗಿ - ಪವಾಡ ಸದೃಶ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದಾಳೆ. ಬಸವಣ್ಣ, ಹರಿಹರ ನಿಜಗುಣ ಶಿವಯೋಗಿಯಂತೆ ಅತ್ತಿಮಬ್ಬೆಯನ್ನು ಪವಾಡ ಸ್ತ್ರೀಯಾಗಿ ಜನರು ಅಂಗೀಕರಿಸಿದ್ದಾರೆ. ಅವಳು ವೀರ ವನಿತೆಯೂ ಆಗಿದ್ದಾಳೆ. ಆದುದರಿಂದಲೇ ರನ್ನ ಕವಿಯು ''..... ಮೊಲೆವೊತ್ತ ತೈಲ ಜನನಿಯ ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್'' ಎಂಬ ಅಚ್ಚರಿಯ ಉಧ್ಗಾರವನ್ನೂ ತೆಗೆದಿದ್ದಾನೆ.

ಈ ರೀತಿಯಾಗಿ ೧೦ನೆಯ ಶತಮಾನದ ಅತ್ತಿಮಬ್ಬೆಯ ಸಾಧನೆಯ ಗುಣವನ್ನು ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಹೇಳಿದರೆ ತಪ್ಪಾಗಲಾರದು. ಅತ್ತಿಮಬ್ಬೆಯ ಜೀವನ ಮುಂದಿನ ಅನೇಕ ಸ್ತ್ರೀಯರಿಗೆ ಮಾದರಿಯಾಗಿದೆ. ನೊಂದ ಮಹಿಳೆಯರಿಗೆ ದಿಕ್ಸೂಚಿಯಾಗಿದೆ.

ಸಾಮಾನ್ಯವಾಗಿ ಸ್ತ್ರೀ ಪುರುಷರಿಬ್ಬರನ್ನು ಸ್ವಭಾವದಿಂದ ವಿಂಗಡಿಸುತ್ತಾರೆ. ಧೈರ್ಯ, ಸಾಹಸ, ಸಾಮಾಜಿಕ ಸಹಾಯ ಪುರುಷನ ಗುಣವಾದರೆ, ಸಂಕೋಚ, ಕೋಮಲತೆ, ಮಾತೃತ್ವ ಮೊದಲಾದವುಗಳು ಸ್ತ್ರೀಯರ ಗುಣವಾಗಿವೆ. ಆದರೆ ಅತ್ತಿಮಬ್ಬೆಯು ಸ್ತ್ರೀ ಪುರುಷರಿಬ್ಬರ ಸ್ವಭಾವಗಳನ್ನು ಹೊಂದಿರುವದಳಾಗಿದ್ದಾಳೆ. ಅತ್ತಿಮಬ್ಬೆ, ಹುಟ್ಟಿ, ಬೆಳೆದ ಮನೆಯ ವಾತಾವರಣವು ಶ್ರೀಮಂತವಾಗಿರುವಂತೆ ಸುಸಂಸ್ಕೃತವೂ ಅಗಿತ್ತು. ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ತವರು ಮನೆಯಾಗಿತ್ತು. ಕೃತಿ ರಚನೆ ಪಠಣ, ಆಗಮ ಶಾಸ್ತ್ರಾದಿಗಳ ಪಾರಾಯಣ ಅತ್ಯಂತ ಸಹಜವಾಗಿತ್ತು. ವಾದ, ವಿವಾದ, ವಿಚಾರಗಳು ಮೇಲಿಂದ ಮೇಲೆ ಆ ಮನೆಯಲ್ಲಿ ನಡೆಯುತ್ತಿದ್ದವು. ಆ ಮನೆತನದವರ ಆಚರಣೆಗಳಲ್ಲಿ ವೈದಿಕ, ಜೈನ ಪರಂಪರೆಗಳು ಸಹಜವಾಗಿ ಕೂಡಿಕೊಂಡಿದ್ದವು. ಆ ಕುಟುಂಬದ ಸದಸ್ಯರಲ್ಲಿ ಹುತಾತ್ಮರು ಆಗಿಹೋಗಿದ್ದರು. ಅತ್ತಿಮಬ್ಬೆಯ ತಂದೆ ಚಿಕ್ಕಪ್ಪರು ಚಾಲುಕ್ಯ ಸೇನೆಯಲ್ಲಿ ಸೇನಾಧಿಕಾರಿಗಳಾಗಿರುವ ಕಾರಣ ಮನೆಯಲ್ಲಿ ವೀರತನದ ವಾತಾವರಣವಿದ್ದುದರಿಂದ ಸಹಜವಾಗಿಯೇ ಅತ್ತಿಮಬ್ಬೆಯ ಸಹೋದರರು ವೀರರೇ ಆಗಿದ್ದರು. ಅವರ ಜತೆಯಲ್ಲಿ ಬೆಳೆದ ಅತ್ತಿಮಬ್ಬೆ ತನ್ನ ಸಹೋದರರು ಪಡೆದುಕೊಂಡಿರುವ ಶಿಕ್ಷಣವನ್ನು

ಪಡೆದುಕೊಂಡಳು. ಯುದ್ಧವಿದ್ಯೆಗಳಾದ ಕತ್ತಿವರಸೆ, ಕುದುರೆ ಸವಾರಿ ನಾನಾ ಆಯುಧ ಬಳಕೆ ಇವುಗಳನ್ನೆಲ್ಲ ಅತ್ಯಂತ ಸಹಜವಾಗಿ ಅವಳು ಕಲಿತುಕೊಂಡಳು. ಸ್ತ್ರೀಯಾಗಿ ನನಗೆ ಇಂತಹ ವಿದ್ಯೆಯನ್ನು ಕಲಿಸಿಕೊಡಿಯೆಂದು ಅವಳು ಪುರುಷರ ಹತ್ತಿರ ಹೋಗಿ ಕೇಳಿಕೊಳ್ಳಲಿಲ್ಲ. ಯಾಕೆಂದರೆ ಕಾಳಗದಲ್ಲಿ ಭಾಗವಹಿಸುವವರು. ಅಪ್ಪ ಚಿಕ್ಕಪ್ಪಂದಿರು ಆಗಿರುವಾಗ ಅವಳಿಗೆ ಸೇನೆ, ಸೈನಿಕ, ರಣರಂಗ ಕುದುರೆ ಸವಾರಿ ಇವುಗಳು ಚಿರಪರಿಚಿತವೇ ಆಗಿದ್ದವು. ಮನೆಯವರು ಸಹಿತ ಅವಳ ವಿದ್ಯಾಭ್ಯಾಸ, ಯುದ್ಧ ವಿದ್ಯಾಭ್ಯಾಸವನ್ನು ಪ್ರೊತ್ಸಾಹಿಸಿದರೆ ಹೊರತು ನೀನು ಹೆಣ್ಣಾಗಿದ್ದು ಈ ವಿದ್ಯೆಯ ಅವಶ್ಯಕತೆಗಳು ನಿನಗೆ ಬೇಕಾಗಿಲ್ಲವೆಂದು ಯಾರೂ ಹೇಳಲಿಲ್ಲ. ಇಂತಹ ಪರಿಸರದಲ್ಲಿ ಅತ್ತಿಮಬ್ಬೆಯ ಮುಂದಿನ ಉದಾತ್ತ ವ್ಯಕ್ತಿತ್ವಕ್ಕೆ ಬೇಕಾಗುವ ಪೂರಕ ಅಂಶಗಳೆಲ್ಲ ಇದ್ದಿರುವುದರಿಂದ ಅವಳಲ್ಲಿ ಸ್ತ್ರೀ ಪುರುಷರಿಬ್ಬರ ಸ್ವಭಾಗವಗಳು ಇದ್ದವು. ಅವಳು ಸ್ತ್ರೀ ಸ್ವಭಾವದಂತೆ ಮಮತಾಮಯಿಯಾಗಿದ್ದಳು. ಪುರುಷನಂತೆ ಗಂಭೀರಳಾಗಿದ್ದಳು. ಅತ್ತಿಮಬ್ಬೆಯು ಮಹತ್ಸಾಧನೆಗೈದ ಸಾಧಕಿ. ಯಾವ ಪುರುಷನಿಗೂ ಕಡಿಮೆ ಇರದಂತೆ ಅವಳು ಸಾಧನೆಯನ್ನು ಮಾಡಿದ್ದಾಳೆ. ಆರ್ಥಿಕವಾಗಿ ಅವಳು ಸಬಲಳಿದ್ದಳು. ಹೀಗಾಗಿ ಪತಿಯ ಮರಣದ ನಂತರ ದಾನ ಎನ್ನುವುದು ಅವಳ ವ್ಯಕ್ತಿತ್ವದ ಒಂದು ಭಾಗವಾಯಿತು. ಅವಳ ಈ ದಾನಕಾರ್ಯವನ್ನು ಮಗನು ಪ್ರೊತ್ಸಾಹಿಸಿದನೆ ಹೊರತು ವಿರೋಧಿಸಲಿಲ್ಲ. ಅವಳು ಸ್ತ್ರೀಯಂತೆ ತನ್ನ ಸಮಾಜ ಪ್ರಜಾಜನರನ್ನು ಕಾಪಾಡಿದಳು. ತರ್ಕಬದ್ಧವಾಗಿ ಯೋಚಿಸುವ ವೈಚಾರಿಕವಾದಿಯಾಗಿರುವುದರಿಂದ ಚಕ್ರವರ್ತಿಗೆ ಸಲಹೆ ಕೊಡುವಷ್ಟು ಆಪ್ತಳಾದಳು. ಯಾವುದೇ ಸಂದರ್ಭದಲ್ಲಿ ಸಹಜವಾಗಿ ಸ್ತ್ರೀಯಂತೆ ಥಟ್ಟನೆ ಗಾಬರಿಯಾಗಲಾರದೆ ಸ್ಥಿತಪ್ರಜ್ಞೆಯಿಂದ ವಾಸ್ತವದ ನೆಲೆಗಟ್ಟಿನ ಮೇಲೆ ಯೋಚಿಸಿದಳು. ಒಬ್ಬ ಸುಸಂಸ್ಕೃತ, ಧೀರ, ಉದಾರ ಪುರುಷನಂತೆ ಅವಳು ಬಾಳಿದಳು. ಆದುದರಿಂದ ಸ್ತ್ರೀ ಚಿಂತನೆಯ ಹಿನ್ನೆಲೆಯಲ್ಲಿ ಅವಳ ವ್ಯಕ್ತಿತ್ವವನ್ನು ಗಮನಿಸಿದ್ದು ಉಚಿತವಾಗಿದೆಯೆನ್ನಬಹುದು.

ಹೆಣ್ಣಿನ ಜೀವನ ಸಣ್ಣ ಮಾಡಲೀಬೇಕ
ಸುಣ್ಣದ್ಹರಳಾಗಿ ಸುಡಬೇಕ
ಈ ಜನ್ಮ ಮಣ್ಣು ಮಾಡಿ ಮರ್ತ್ಯಗೆದಿಬೇಕ

ಅಡಿಟಿಪ್ಪಣಿ

೧. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ, ವೈ.ಬಿ.ಹಿಮ್ಮಡಿ, ಪು. ೫

೧ಅ. ಆಶಯ ಆಕೃತಿ, ಸಿ.ಎನ್.ರಾಮಚಂದ್ರನ್

೨. ಆಶಯ ಆಕೃತಿ, ಸಿ ಮೋನ್‌ದ ಬೋವಾ, ಮುಖ್ಯ ವಿಚಾರಗಳು, ಸಿ.ಎನ್.ರಾಮಚಂದ್ರನ್ , ಪು. ೧೦೦

೩. ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ, ವೈ.ಬಿ.ಹಿಮ್ಮಡಿ, ಮಾರ್ಚ್ ೧೯೯೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಮಹಿಳೆಯ ಮುನ್ನಡಿ, (ಸಂ), ಅಂದನೂರು ಶೋಭ ಶ್ರೀಲಕ್ಷ್ಮೀ ಮಾನಿನಿ, ರಾಜಾಜಿನಗರ, ಬೆಂಗಳೂರು, ೫೬೦೦೧೦, ೧೫, IV ಎನ್ ಬ್ಲಾಕ್, ೧೯೮೮

೫. ಆಶಯ ಆಕೃತಿ, ಸಿಮೋನ್‌ದ ಬೋವಾ, ಮುಖ್ಯ ವಿಚಾರಗಳು, ಸಿ.ಎನ್.ರಾಮಚಂದ್ರನ್

೬. The Origin of the F amily, Private Property and thd States by F .Engels

೭. ಡಾ. ವಿಜಯಾ ದಬ್ಬೆ, ಮುನ್ನುಡಿ, ಸ್ತ್ರೀವಾದ, ದಕ್ಷಿಣ ಏಷ್ಯಾದಲ್ಲಿ ಅದರ ಪ್ರಸಕ್ತತೆ

೮. A Vindication of Rights of women, ೧೭೯೧

೯. Torilmoi, ೧೯೮೫, Introduction, P. ೮-೧೭

೧೦. ೧. A Room of one's own, ೧೯೨೯. ೨. Three Guineus, ೧೯೩೮. ೩. Women and writing, ೧೯೨೯

೧೧. The Second Sex, ೧೯೪೯

೧೨. The Feminine Mystique, ೧೯೬೩

೧೩. ಸ್ತ್ರೀವಾದ, ಡಾ.ಬಿ.ಎನ್.ಸುಮಿತ್ರಾಬಾಯಿ, ಪು.ಸಂ. ೩೨

೧೪. Thinking about Women, ೧೯೬೮

೧೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ, ಪು.ಸಂ. ೨೩೬

೧೫. ಸಭಾಷ್ಯ ಬೃಹದಾರಣ್ಯಕ, ಉಪನಿಷತ್, ಅಗ್ರಹಾರ ನಾರಾಯಣ ತೂತ್ರಿ, ಪು. ೧೩೮

೧೬. The Position of Women in Hindu Civilization, Dr.A.S.Altekar

೧೭. ಬೃಹದಾರಣ್ಯಕೋಪನಿಷತ್, (ಅನು. ಸ್ವಾಮಿ ಆದಿದೇವಾನಂದ), ಪು. ೧೩೧ ರಿಂದ ೧೪೬

೧೮. ಅದೇ, ಪು. ೧೩೧ ರಿಂದ ೧೪೬

೧೯. ಅದೇ, ಪು. ೧೩೧ ರಿಂದ ೧೪೬

೨೦. Ancient Indian Education, Mookherji, P. ೨೦೮

೨೧. Great Women of India, Radhakrishnan

೨೨. Great Women of India, Ramesh chandra Majumdar

೨೩. ಛಾಂದೋಗ್ಯೋಪನಿಷತ್, ಕನ್ನಡ ಟೀಕಾ, ಅಗ್ರಹಾರ ನಾರಾಯಣ ತಂತ್ರಿ, ಪು. ೩೭೧

೨೪. ಅದೇ, ಪು. ೨೦೨

ಸತ್ಯಕಾಮನ ಸರಳತನವನ್ನು ತಿಳಿದು ಗೌತಮರು, ಬ್ರಾಹ್ಮಣೇತರರು ಸರಳತನದಿಂದ ಸತ್ಯನುಡಿಯನ್ನು ಸರ್ವಥಾ ಹೇಳಲಾರರು ಅದು ಕಾರಣ ಇವನು ಬ್ರಾಹ್ಮಣನು.

೨೫. The Postion of Women in Hindu Civilization, Dr.A.S.Altekar, P. ೪

೨೬. Buddhism in Kashimer and Ladaka, P. ೧೦೪
J.N.Ganahara and P.N.Ganahur

೨೭. ಎ.ಕ. ii, ಶ್ರವಣಬೆಳಗೊಳ ಮುನ್ನುಡಿ

೨೮. The Position of Women in Hindu Civilization, Dr.A.S.Altekar, P.

೨೯. The Position of Women in Hindu Civilization, Dr.A.S.Altekar, P. ೩೪೨

೩೦. Indra, The Status of Women in ancient India, P. ೧೪೩

೩೧. ಮನುಸ್ಮೃತಿ, ಬಿ.ಶ್ರೀನಿವಾಸಭಟ್ಟ, ಕರ್ನಾಟಕ ಟೀಕಾ ಸಹಿತ, ೯ - ೩

೩೨. ಮನುಸ್ಮೃತಿ, ಬಿ.ಶ್ರೀನಿವಾಸಭಟ್ಟ, ಕರ್ನಾಟಕ ಟೀಕಾ ಸಹಿತ, ೯ - ೩

೩೩. ಮನುಸ್ಮೃತಿ, ೯ - ೨೬, ೯ - ೨೮

೩೪. History of Ancient India, Dr.Hans Raj, P. ೧೬೮

೩೫. Great Women of India, R.C.Majumdar, P. ೨೪

೩೬. Great Women of India, Swami Madhavananda and Rameshchandra Majumdar

೩೭. Cunningham, Archaeological Survey Report, Vol, ೨, P. ೩೮೬

೩೮. ಮಹಿಳೆ ಒಂದು ಅಧ್ಯಯನ, ಡಾ.ಜ್ಯೋತ್ಸ್ನಾ ಕಾಮತ್, ಪು. ೩೭

೩೯. ಭಾರತ ತೀರ್ಥ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಪು. ೨೦

೪೦. Position of women in Hindu civilization p. ೧೧೬ by Dr. A.S.Altekar.

"The customs of the sacrifice of the widow at the funeral of her husband was widely prevailing in ancient times. There is no direct evidence to show that it prevailed in the Indo\European age, but the fact that it was practised among the gauls, the goths the Norwegians, the celts, the slaaves and the thracians would justify the inference that it was prbobebly well established among the Indo-Europeans. It is quite common among the scythians. In china if a widow killed herself in order to follow her husband to heaven her corpse was taken out in a great procession.

೪೧. Position of women in Hindu civilization p. ೧೧೮ by Dr. A.S.Altekar.

೪೨. Position of women in Hindu civilization p. ೧೧೮ by Dr. A.S.Altekar.

೪೩. ಅಗ್ನಿಪುರಾಣ ೧೨೨, ಪು. ೭೯೬

೪೪. Position of women in Hindu civilization p. ೧೩೦ by Dr. A.S.Altekar.

೪೫. ಸೋಮೇಶ್ವರ ಅಭಿಂಷಿತಾರ್ಥ ಚಿಂತಾಮಣಿ, ಕ್ರಿ.ಶ. ೧೧೨೯ - ೩೦, ೧ - ೬೧

೪೬. Encyclopedia of the social sciences xii, p. ೫೩೩

೪೭. Position of women in Hindu civilization p. ೧೧೮ by Dr. A.S.Altekar.

೪೮. ಭಾರತೀಯ ಸಂಸ್ಕೃತಿ, ಶ್ರೀಕಂಠಶಾಸ್ತ್ರೀ, ಪು. ೨೦೪

೪೯. ಶಿವದಾಸ ಗೀತಾಂಜಲಿ, (ಸಂ), ಎಲ್.ಬಸವರಾಜು

೫೦. ಶಿವಶರಣೆಯರ ವಚನಗಳು, (ಸಂ), ಆರ್.ಸಿ.ಹಿರೇಮಠ, ವಚನ - ೫೦

೫೧. ಸಂಚಿಯ ಹೊನ್ನಮ್ಮ, ಎಚ್.ಎಮ್.ಶಂಕರನಾರಾಯಣ್ ರಾವ್, ಪು. ೪೧

೫೨. ಹದಿಬದೆಯ ಧರ್ಮ, (ಪ್ರ.ಸಂ.), ಬಿ.ಎಂ.ಶ್ರೀಕಂಠಯ್ಯ, (ಸಂ), ಡಿ.ಚಂಪಾಬಾಯಿ, ಎಂ.ಎ. ಪು. ೨೦

೫೩. ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಡಾ.ಪ್ರೀತಿ ಶುಭಚಂದ್ರ, ಪು. ೨೧

೫೪. The quitntessence of Vivekananda - G.S. Banhatti, P.೭೩

೫೫. Dayananda Saraswathi - His life and ideas, J.I.F. Jordens, P.೧೧೨

೫೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ

೫೭. ಮಹಾಕವಿ ಪಂಪ, ವಿ.ಸೀತಾರಾಮಯ್ಯ, ಪು. ೨೯೭

೫೮. ಆಧುನಿಕ ಭಾರತದಲ್ಲಿ ಮಹಿಳೆ, ಇಂಗ್ಲಿಶ್ ಮೂಲ ಜೆರಾಲ್ಡಿನ್ ಪೋರ್ಬ್ಸ್, ಕನ್ನಡಕ್ಕೆ, ಡಾ.ಎಚ್.ಎಸ್.ಶ್ರೀಮತಿ, ಪು. ೨೯

೫೯. ಅದೇ, ಪು. ೩೧

೬೦. ಅದೇ, ಪು. ೬೩

೬೨. ಆದೇ, ಪು. ೧೯೨

೬೩. ಅದೇ, ಪು. ೩೩೮

೬೪. ಅದೇ, ಪು. ೩೬೨

೬೫. ಸಲ್ಲಲಿತ ಸನ್ಮಾರ್ಗ, ಚೆನ್ನಬಸವಪ್ಪ ಬೆಟ್ಟದೂರು, ಪು. ೭೦

೬೬. SII, XI, i No. ೫೨

೬೭. ಅಜಿತ ಪುರಾಣ ಸಂಗ್ರಹ, ೧ - ೬೫

೬೮. ಜೈನಧರ್ಮ, ಸಾಹಿತ್ಯ ಚಿಂತನೆ ಮತ್ತು ಅತ್ತಿಮಬ್ಬೆ ಸ್ಮರಣೆ, (ಸಂ), ಡಾ.ಕಮಲಾ ಹಂಪನಾ, ಪು. ೪೫

೬೯. ಅಜಿತ ತೀರ್ಥಕರ ಪುರಾಣ, (ಸಂ), ಬಿ.ಎಸ್ .ಸಣ್ಣಯ್ಯ ರಾಮೇಗೌಡ, ೧೨ - ೯

೭೦. ಜೈನಧರ್ಮ, ಸಾಹಿತ್ಯ ಚಿಂತನ ಮತ್ತು ಅತ್ತಿಮಬ್ಬೆ ಸ್ಮರಣೆ, (ಸಂ), ಡಾ.ಕಮಲಾ ಹಂಪನಾ, ಪು. ೫೭

೭೧. ಅಜಿತ ತೀರ್ಥಕರ ಪುರಾಣ, ಬಿ.ಎಸ್.ಸಣ್ಣಯ್ಯ, ರಾಮೇಗೌಡ, ೧೨ - ೧೬

೭೨. SII, XI, i No. ೫೨, ಲಕ್ಕುಂಡಿ, ಶಾಸನ ಸಾಲು, ೪೮

೭೩. EC, IV, ೫೩೨, (೩೯೪), ೧೧೨೫, ೪೪ನೆಯ ಸಾಲು

❑❑

೬

ಸಮಾರೋಪ

೬

ಸಮಾರೋಪ

ಸತಿಯರೊಳಗಗ್ಗಳದವ ನೀ
ಸುತೆ ಸೀತೆ ಪುಲೋಮಸುತೆ ಶಚಿದೇವಿ ಕುಭೃ
ತ್ಸುತೆ ಗಂಗೆ ದಕ್ಷಸುತೆ ಭವ
ಸತಿಯರ್ ಸಮನಪ್ಪಡಕ್ಕೆ ಮಲ್ಲಪಸುತೆಯೊಳ್[೧]

ಕರ್ನಾಟಕದ ಇತಿಹಾಸದಲ್ಲಿ ಅತ್ಯುತ್ತಮ ವ್ಯಕ್ತಿತ್ವವನ್ನು ಹೊಂದಿದ ಅನೇಕ ಸ್ತ್ರೀರತ್ನಗಳಿವೆ. ಅವರಲ್ಲಿ ಅತ್ತಿಮಬ್ಬೆಯೂ ಒಬ್ಬಳು. ಅತ್ತಿಮಬ್ಬೆಯ ಗುಣವು ದಾನ-ಧರ್ಮದಿಂದ ಕೂಡಿತ್ತು. ಧಾರ್ಮಿಕ ಮನೋಧರ್ಮ ನಮ್ಮ ಸಂಸ್ಕೃತಿಯ ಒಂದು ಭಾಗವೂ ಹೌದು. ಕನ್ನಡ ಶಾಸನಗಳಲ್ಲಂತೂ ದಾನ ಶಾಸನಗಳು ಹೇರಳವಾಗಿವೆ. ಆದುದರಿಂದಲೇ ಪಿ.ಬಿ. ದೇಸಾಯಿ "ಕನ್ನಡ ಶಾಸನಗಳಲ್ಲಿ ಒಂದಲ್ಲ ಒಂದು ಬಗೆಯ ದಾನ ಶಾಸನಗಳ ಸಂಖ್ಯೆಯೇ ಅತ್ಯಧಿಕ, ನೂರಕ್ಕೆ ೬೫ರಷ್ಟು ದಾನಶಾಸನಗಳೇ ಇವೆಯೆನ್ನಬಹುದು."[೧] ಶಾಸನಗಳು ಜನ್ಮ ತಾಳುವದಕ್ಕೆ ಈ ಧಾರ್ಮಿಕ ಮನಸ್ಸೆ ಒಂದು ಪ್ರೇರಕ ಪೂರಕ ಶಕ್ತಿಯಾಗಿದೆ ಎಂದರೆ ತಪ್ಪಾಗಲಾರದು. ಶಾಸನಗಳ ಉಗಮಕ್ಕೂ ದಾನ ಧರ್ಮಗಳೇ ಕಾರಣವಾಗಿವೆ ಎನ್ನುವ ವಿಷಯವೇ ರೋಚಕವಾದದ್ದು.

ಕನ್ನಡ ನಾಡಿನಲ್ಲಿ ವೀರರೆಂದು, ಶೂರರೆಂದು ಪ್ರಸಿದ್ಧಿಯನ್ನು ಪಡದವರಿದ್ದಾರೆ. ಪ್ರಜಾಹಿತ ಅರಸರೂ ಚತುರ ಆಡಳಿತಗಾರರೂ, ಅದ್ಭುತ ತ್ಯಾಗಿಗಳೆಂದು ಪ್ರಖ್ಯಾತಿ ಪಡೆದವರಾಗಿದ್ದಾರೆ. ಆದುದರಿಂದಲೇ ಶ್ರೀವಿಜಯ, ನಂಜುಂಡ ಕವಿ ಉದಾರಿಗಳಾದ ಕನ್ನಡಿಗರ ಗುಣ ವಿಶೇಷಣಗಳನ್ನು ಹಾಡಿ ಹೊಗಳಿದ್ದಾರೆ. ಕವಿ ಪಂಪನಂತೂ ಕರ್ಣನ ನನ್ನಿ ಕ್ಷಾತ್ರದಂತೆ, ಅವನ ದಾನ ಗುಣಕ್ಕೂ ಮರುಳಾಗಿ "ನೆನೆಯದಿರ್ ಭಾರತದೊಳ್ ಇಂ ಪೆರರಾರನ್ ನೆನೆವುದಾದರೆ ಒಂದೇ ಚಿತ್ತದಿಂ ನೆನೆ ಕರ್ಣನಂ" ಎಂದು ಹೃದಯತುಂಬಿ ಹಾರೈಸುತ್ತಾನೆ.

ಮನುಷ್ಯನು ಪ್ರಾಣಿಗಿಂತ ಭಿನ್ನ. ಅದಕ್ಕೆ ಭಾಷೆ ಒಂದು ಕಾರಣವಾದರೆ, ಬುದ್ಧಿಶಕ್ತಿ ಮತ್ತೊಂದು ಕಾರಣವಾಗುತ್ತದೆ. ಆದರೆ ಅವೆಲ್ಲಕ್ಕಿಂತ ಮಹತ್ತರವಾದದ್ದು ಅವನ ಸಂಸ್ಕೃತಿ. ಸಾಮಾಜಿಕ ಕಟ್ಟುಪಾಡಿನಲ್ಲಿರುವ ಅಪಾರವಾದ ಬುದ್ಧಿಶಕ್ತಿಯ ಒಡೆಯನಾದ ಮನುಷ್ಯ ಪ್ರಾಣಿಯಿಂದ ಭಿನ್ನನಾಗುವುದು ಸಂಸ್ಕೃತಿಯಿಂದಲೇ. ಸಂಸ್ಕೃತಿ ಮನುಷ್ಯನ ಅಂತರಂಗದ ವಿಕಾಸವಾದರೂ ಅದು ಅವನ ಬಾಹ್ಯ ನಡವಳಿಕೆಯಿಂದ ಗುರುತಿಸಲ್ಪಡುತ್ತದೆ. ಸಂಸ್ಕೃತಿಯೆಂದರೆ ಹಲವು ಮಾನವೀಯ ಮೌಲ್ಯಗಳ ಕಟ್ಟು ಎಂದು ಅರ್ಥೈಸಬಹುದಾಗಿದೆ. ಸಂಘಜೀವಿಯಾಗಿರುವ ಮನುಷ್ಯ ಒಂದಿಲ್ಲ ಒಂದು ಬಗೆಯಲ್ಲಿ ಧರ್ಮಿಷ್ಟನಾಗುತ್ತಾನೆ. ಅವನ ಧರ್ಮ, ದಯೆ, ದಾನದಿಂದ ಕೂಡಿರುವುದೇ ಆಗಿರುತ್ತದೆ.

ಕರ್ನಾಟಕದ ಪರಂಪರೆಯಲ್ಲಿ ದಾನ ಅತ್ಯುತ್ತಮವಾದ ಮೌಲ್ಯಗಳಲ್ಲಿ ಒಂದು. ಆದುದರಿಂದಲೇ ಅನೇಕ ಕನ್ನಡ ಕವಿಗಳು ತಮ್ಮ ಕೃತಿಗಳಲ್ಲಿ ದಾನದ ಮಹತ್ವವನ್ನು ವರ್ಣಿಸಿರುವರು.

ಮುನಿಧರ್ಮವನ್ನು ಆಚರಿಸುತ್ತಿದ್ದ ನಯಸೇನನಿಗೆ ಸ್ವಧರ್ಮದ ಬಗ್ಗೆ ಪ್ರೀತಿ ಅಭಿಮಾನ ಇರುವುದು ಸಹಜ. ಆದರೆ ನಯಸೇನನಿಗೆ ಸಾಮಾಜಿಕ ಪ್ರಜ್ಞೆಯೂ ಇದೆ. ಈ ನಯಸೇನನು ಧರ್ಮಾಮೃತದಲ್ಲಿ ಅನ್ನದಾನದ ಪ್ರತಿಫಲವನ್ನು ಹೇಳುತ್ತಾನೆ.

"ಮಲಯಜಮಂ ಪೂಸಿ ತಳತ್ತಳಿಸುವ ಚೆಂಬೊನ್ನ ರತ್ನದಾಭರಣ ಮನುಜ್ಜ್ವಳಮಾಗಿ ತೊಟ್ಟು ಸುಖಿಮಿರುಲೆಳಸುವೊಡೆಂತನ್ನ ದಾನಮಂ ಮಾಡ್ಪೊಳಿಂ[೧]

ಶ್ರೀಗಂಧವನ್ನು ಲೇಪಿಸಿಕೊಂಡು, ಝುಗ ಝುಗಿಸುವ ಚಿನ್ನದ ರತ್ನದ ಆಭರಣಗಳನ್ನು ಶೋಭಾಯಮಾನ ವಾಗಿರುವಂತೆ ತೊಟ್ಟು ಸುಖವಾಗಿರಲು ಇಷ್ಟಪಡುವೆಯಾದರೆ, ಒಳ್ಳೆಯ ರೀತಿಯಿಂದ ಅನ್ನದಾನವನ್ನು ಮಾಡು ಎಂಬುದು ಇದರ ಅರ್ಥ.

ರತ್ನತ್ರಯರಲ್ಲಿ ಒಬ್ಬನಾದ ಪೊನ್ನ ಕವಿ ತನ್ನ ಶಾಂತಿ ಪುರಾಣದಲ್ಲಿ ದಾನದ ಮಹತ್ವವನ್ನು ತಿಳಿಸುತ್ತಾನೆ.

ಆನೆಯುಮಗುರ್ವುಗಿಡುಗುಮ
ದಾನಂ ಸಾಹಣಿಕೆ ಪುಲ್ಲನಡುಕುಗುಮದರಿಂ
ದಾನೇತರನಪಮಾನ
ಸ್ಥಾನಮುಪಾಯದೊಳನೂರಮುತ್ತಮ ದಾನಂ[೨]

ದಾನವಿರದಿದ್ದರೆ ಆನೆಯ ಶ್ರೇಷ್ಠತೆಯು ತಗ್ಗಿ ಹೋಗುತ್ತದೆ. ಅಲ್ಲದೆ ಅದು ಕಾಸ್ತಾರನ (ಕುದುರೆಯ ಸೇವಕ) ಕೈಯಲ್ಲಿ ಸಿಕ್ಕಿ ಹುಲ್ಲನ್ನು ಹೊರುವುದಕ್ಕೆ ಮಾತ್ರ ಯೋಗ್ಯವಾಗುತ್ತದೆ. ದಾನವಿರಹಿತನಾದವನು ಅಪಮಾನದ ನೆಲೆಯಾಗುತ್ತಾನೆ. ಚತುರ ಉಪಾಯಗಳಲ್ಲಿ ಉತ್ತಮವಾದ ದಾನವೇ ಶ್ರೇಷ್ಠವಾದುದು.

ದುರ್ಗಸಿಂಹನು ಪಂಚತಂತ್ರದಲ್ಲಿ ದಾನಕ್ಕಾಗಿ ವಿನಿಯೋಗಿಸಿದ ಸಂಪತ್ತು ಯಾವ ರೀತಿಯಾಗಿ ಸಾರ್ಥಕವಾಗುತ್ತದೆಂಬುದನ್ನು ಹೇಳುತ್ತಾನೆ.

ಬಡತನವಾದಂದಿಂಗೆಂ
ದೊಡವೆಗಳಂ ಮಡಗಬೇಡ ದೆಂತನೆ ಪುಣ್ಯಂ
ಕಿಡೆ ಮಡಗಿದೊಡವೆ ಕಿಡುಗುಂ
ಕಿಡುದತ್ತಿ ಪರಾರ್ಥಮಾಗಿ ಕೊಟ್ಟವರರ್ಥ”[೪]

ಆಪತ್‌ಧನವೆಂದು, ಬಡತನದ ಹೊತ್ತಿಗೆ ಬರುತ್ತದೆಯೆಂದು ಒಡವೆಗಳನ್ನು ಜೋಪಾನ ಮಾಡಿಟ್ಟುಕೊಳ್ಳುವುದು ಬೇಡ. ಯಾಕೆಂದರೆ ಪುಣ್ಯ ಕೆಟ್ಟರೆ ಜೋಕೆ ಮಾಡಿಟ್ಟ ಒಡೆವೆಯೂ ಹೋಗುತ್ತದೆ. ಆದರೆ ಪರೋಪಕಾರಕ್ಕೆಂದು ದಾನ ಮಾಡಿದ ಸಂಪತ್ತು ಹಾಳಾಗುವುದಿಲ್ಲ.

ನಯಸೇನನು ಧರ್ಮಾಮೃತದಲ್ಲಿ ದಾನದಿಂದ ದೊರೆಯಬಹುದಾದ ಫಲಗಳನ್ನು ಹೀಗೆ ಹೇಳಿದ್ದಾನೆ.

ಪರಮಾಯಂ ಶ್ರೀಯ ಪೆಂಪುಂ ವನಿತೆಯರೊಲವುಂ ಕೀರ್ತಿಯುಂ ಧೈರ್ಯಮುಂ ಸುಂ
ದರರೂಪುಂ ವೀರಮುಂ ಭೋಗಮುಮೆಸೆವ ಮಹಾವೀರ್ಯಮುಂ ಚಾಗಮುಂ ವಿ
ಸ್ತರದಿಂ ಸದ್ಬುದ್ಧಿಯುಂ ತೇಜಮುಮಳವು ಮಹೈಶ್ವರ್ಯಮುಂ ದಿವ್ಯಸೌಖ್ಯೋ
ತ್ಕರಮುಂ ಸದ್ದಾನದಿಂದಂ ನರರ್ಗೆ ಸಮನಿಕುಂ ಸಂತತೋತ್ಸಾಹದಿಂದಂ.[೫]

ದಾನದಿಂದ ದೊರೆಯಬಹುದಾದ ಒಟ್ಟು ಫಲಗಳನ್ನು ನಯಸೇನನು ಈ ಪದ್ಯದಲ್ಲಿ ಹಿಡಿದಿಟ್ಟಿದ್ದಾನೆ. ದಾನದಿಂದ ಮನುಷ್ಯನಿಗೆ ಸಂಪೂರ್ಣವಾದ ಆಯುಷ್ಯ, ಸಂಪತ್ತು, ವನಿತೆಯ ಪ್ರೇಮ, ಕೀರ್ತಿ, ಧೈರ್ಯ, ಸುಂದರವಾದ ರೂಪ, ವೀರತನ, ಭೋಗವೂ ಶೋಭಿಸುವ ಮಹಾವೀರ್ಯವೂ, ತ್ಯಾಗವೂ, ಸಮೃದ್ಧಿಯೂ, ತೇಜಸ್ಸು, ಸಾಮರ್ಥ್ಯವೂ, ಮಹಾ ಐಶ್ವರ್ಯವೂ, ದಿವ್ಯವಾದ ಸೌಖ್ಯವೂ ಸಂಭ್ರಮದಿಂದ ಪ್ರಾಪ್ತವಾಗುತ್ತದೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ದಾನದ ಮಹತ್ವವೇನೆಂದರೆ, ಒಳ್ಳೆಯ ದಾನ ಮಹತ್ತರವಾದ ಫಲಗಳನ್ನು ಕೊಡುತ್ತದೆ. ದಾನ ಗುಣಕ್ಕಿಂತ ಅಸಾಧ್ಯವಾದದ್ದು ಬೇರೆ ಯಾವುದು ಇಲ್ಲ. ದಾನಗುಣದಿಂದ ಮನುಷ್ಯನಿಗೆ ಸಮುದ್ರದ ಗಾಂಭೀರ್ಯ, ಅರ್ಜುನನ ಸಾಮರ್ಥ್ಯ, ಬ್ರಹ್ಮನ ಜ್ಞಾನ, ಸೂರ್ಯನ ತೇಜಸ್ಸು, ಸರ್ವದಾ ಬಂದು ಮುತ್ತಿಕೊಳ್ಳುತ್ತದೆ. ಮನುಷ್ಯ ಜನ್ಮವೇ ಅಪೂರ್ವವಾದದ್ದು, ಜ್ಞಾನವನ್ನು ಪಡೆಯುವವರು ಮತ್ತು ಅಪೂರ್ವವಾಗಿದ್ದಾದರೆ, ದಾನದಗುಣ ಅಪೂರ್ವದಲ್ಲಿ ಅಪೂರ್ವ.[೬] ಅಲ್ಲದೆ ದಾನದ ಮಹತ್ವ ಇನ್ನೂ ಇದೆ. ಅದೇನೆಂದರೆ ಕಹಳೆಯ ಧ್ವನಿ ಗಾವುದಕ್ಕೆ ಕೇಳಿಸುತ್ತದೆ, ಮೊಳಗುವ ಸಿಡಿಲು ಯೋಜನಕ್ಕೆ ಕೇಳಿಸುತ್ತದೆ. ಆದರೆ ವಿವೇಕಿಗಳು ದಾನ ಮಾಡಿದರು ಎಂಬ ಒಂದು ಘೋಷ ಮೂರು ಲೋಕಗಳಿಗೂ ಕೇಳಿಸುತ್ತದೆ, ಯಾಕೆಂದರೆ ಚತುರುಪಾಯಗಳಲ್ಲಿ ಉತ್ತಮ ದಾನವು ಮೇಲಾದುದು.[೭]

ದಾನ ಕೇವಲ ಕವಿಗಳ ಭಾವಾಭಿವ್ಯಕ್ತಿಯಲ್ಲ. ಅದು ಶಾಸನಗಳಲ್ಲಿಯೂ ಸಹಿತ ಉಲ್ಲೇಖಿತವಾಗಿರುವುದನ್ನು ಅಧ್ಯಾಯದ ಆರಂಭದಲ್ಲಿಯೇ ಪ್ರಸ್ತಾಪಿಸಿದ್ದೇನೆ.

ಈ ರೀತಿಯಾಗಿ ದಾನದ ಮಹತ್ವ ಕೇವಲ ಕಾವ್ಯ ಶಾಸನೋಕ್ತವಲ್ಲ. ಸಂಸ್ಕೃತ ಸಾಹಿತ್ಯದಲ್ಲಿಯೂ ಕೂಡ ದಾನದ ಮಹತ್ವ ಕಂಡುಬಂದಿದೆ. ದಾನಶಾಸನಗಳು ಸಂಸ್ಕೃತ ಶ್ಲೋಕಗಳಿಂದ ಕೊನೆಗೊಂಡಿವೆ. ಈ ಶ್ಲೋಕಗಳು ದಾನದ ಮಹತ್ವ ದಾನವನ್ನು ಕಾಪಾಡುವುದರ ಕುರಿತಾಗಿ ಹೇಳಲ್ಪಟ್ಟಿವೆ.

"ದಾನಪಾಲನ ಯೋರ್, ಮಧ್ಯೇ ದಾನಾಚ್ಛೇಯೋನುಪಾಲನಂ
ದಾನಾತ್ ಸ್ವರ್ಗ ಅವಾಪ್ನೋತಿ ಪಾಲನಾತ್ ಅಚ್ಯುತಂ ಪದಂ"

ದಾನವನ್ನು ಕೊಡುವುದು ಮತ್ತು ದಾನವನ್ನು ಸ್ವೀಕರಿಸುವರಲ್ಲಿ, ದಾನವನ್ನು ತೆಗೆದುಕೊಳ್ಳುವವನೇ ಹೆಚ್ಚು ಶ್ರೇಷ್ಠವಾದವನು. ದಾನ ಕೊಟ್ಟವನಿಗೆ ಸ್ವರ್ಗ ಪ್ರಾಪ್ತಿಯಾದರೆ ಪಡೆದುಕೊಂಡವನಿಗೆ ಅಚ್ಯುತ ಪದವಿಯು ದೊರೆಯುತ್ತದೆ.

ಜಗತ್ತಿನ ಪ್ರತಿಯೊಂದು ಧರ್ಮವು ಒಂದಲ್ಲ ಒಂದು ರೀತಿಯಲ್ಲಿ ದಾನವನ್ನು ಮೌಲ್ಯವನ್ನಾಗಿ ಒಪ್ಪಿಕೊಂಡಿದೆ. ಜೈನ ಧರ್ಮವು ದಾನವನ್ನು ತುಸು ಹೆಚ್ಚಾಗಿಯೇ ಒಪ್ಪಿಕೊಂಡಿದೆ. ಆದುದರಿಂದಲೇ ಮಹಾಪುರಾಣದಲ್ಲಿ ಭಗವಜ್ಜಿನಸೇನಾಚಾರ್ಯರು ದಾನದ ಅರ್ಥ, ಮಹತ್ವವನ್ನು ಹೇಳುತ್ತಾ ದಾನ ಕೊಡುವವನಿಗೆ ಏಳು ಗುಣವಿರಬೇಕೆಂದು ಹೇಳುತ್ತಾರೆ. ಅವುಗಳೇ ಶ್ರದ್ಧಾ, ಶಕ್ತಿ, ಭಕ್ತಿ, ವಿಜ್ಞಾನ, ಅಲುಬ್ಧತೆ, ಕ್ಷಮಾ ಮತ್ತು ತ್ಯಾಗ, ತನಗೆ ನಿರುಪಯುಕ್ತವಾಗಿದೆಯೆಂದು ಆಲಸ್ಯದಿಂದ ದಾನ ಮಾಡುವುದು, ಅನ್ನ ಹೆಚ್ಚಿಗೆ ಇದೆಯೆಂದು ಉಣಬಡಿಸುವುದು ದಾನವಾಗುವುದಿಲ್ಲ.

ದಾನದಲ್ಲಿ ಆಸ್ತಿಕತೆ, ಬುದ್ಧಿಯಲ್ಲಿ ನಾಸ್ತಿಕವೇ	- ಶ್ರದ್ಧೆ
ದಾನದಲ್ಲಿ ಆಲಸ್ಯವಿಲ್ಲದಿರುವುದೇ	- ಶಕ್ತಿ
ಪಾತ್ರನಲ್ಲಿರುವ ಗುಣ ಸ್ವಭಾವಗಳನ್ನು ಪ್ರೀತಿಸುವುದೇ	- ಭಕ್ತಿ
ದಾನದ ವಿಧಿ ನಿಯಮಗಳ ತಿಳುವಳಿಕೆಯೇ	- ವಿಜ್ಞಾನ
ದಾನದ ವಸ್ತುಗಳಲ್ಲಿ ಲೋಭವಿಲ್ಲದಿರುವುದೇ	- ಅಲುಬ್ಧತೆ
ದಾನದಲ್ಲಿ ತನ್ನ ವಸ್ತು ಹೋಗಿಬಿಟ್ಟಿತೆಂದೂ ಕೋಪಿಸಿಕೊಳ್ಳದೆ ಇರುವುದೇ	- ಕ್ಷಮೆ
ಯೋಗ್ಯವಾದ ದಾನವನ್ನು ಸತ್ಪಾತ್ರರಿಗೆ ಕೊಡುವುದೇ	- ತ್ಯಾಗ[೯]

ಹೀಗೆ ಈ ಏಳು ಗುಣಗಳುಳ್ಳ ವ್ಯಕ್ತಿಯಿಂದ "ದಾನ"ವೆಂಬ ಮಹಾಕಾರ್ಯ ನಡೆದಾಗ, ಆಕಾಶದಲ್ಲಿ ದೇವತೆಗಳು ಮಹಾ, ಮಹಾ ಶಬ್ದಗಳಿಂದ ಕೊಂಡಾಡುತ್ತಾರೆ. ಈ ಮೆಚ್ಚಿಕೆಯ ಧ್ವನಿ ಕಹಳೆಯ ಧ್ವನಿಗಿಂತ, ಮೊಳಗುವ ಸಿಡಿಲಿಗಿಂತ ಮೂಲೋಕಗಳಿಗೂ ಕೇಳಿಸುತ್ತದೆ. ಆದುದರಿಂದಲೇ ಸರ್ವಜ್ಞನು

"ಗಾನ ವಿದ್ಯವು ಲೇಸು ಮಾನವತಿ ಸತಿ ಲೇಸು
ಸ್ವಾನುಭಾವಿಗಳ ಕೆಳೆ ಲೇಸು ಎಲ್ಲಕ್ಕು
ದಾನಿಯೇ ಲೇಸು ಸರ್ವಜ್ಞ"

ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯಕ್ಕು ಸರ್ವಜ್ಞ.[೧೦]

ಗಾನವಿದ್ಯೆ, ಮಾನವತಿ ಸತಿ, ಸ್ವಾನುಭವಿಗಳ ಗೆಳೆತನಕ್ಕಿಂತ ದಾನವೇ ಲೇಸು, ದಾನದಿಂದಲೇ ಕೀರ್ತಿ ಕೈಲಾಸ ಲಭಿಸುತ್ತದೆಯೆಂದು ಸರ್ವಜ್ಞನ ಅಭಿಪ್ರಾಯವಾಗಿದೆ.

ಸಾಮಾನ್ಯವಾಗಿ ಮನುಷ್ಯ ತನ್ನ ಲೌಕಿಕ ಬದುಕನ್ನು ಕಾಲ ಕಳೆಯುತ್ತಾ ಹೋದಂತೆ, ಅಲ್ಪ ಸ್ವಲ್ಪ ಪಾರಮಾರ್ಥಿಕ ಚಿಂತನೆಯನ್ನು ಸಹಜವಾಗಿಯೇ ಬೆಳೆಸಿಕೊಳ್ಳುತ್ತಾ ಹೋಗುತ್ತಾನೆ. ಈ ಬದುಕು ಕ್ಷಣ ಮಾತ್ರದ್ದು. ಈ ಕ್ಷಣಮಾತ್ರದ ಸೀಮಿತ ಜೀವನದ ನಡುವೆ ಒಂದಿಷ್ಟು ಉತ್ತಮವಾದ ಕೆಲಸಗಳನ್ನು ಮಾಡಬೇಕೆಂಬ ಅಲೌಕಿಕ ಹಂಬಲ ಒಂದು ಕಾಲಘಟ್ಟದಲ್ಲಿ ಪ್ರತಿಯೊಬ್ಬನನ್ನು ಕಾಡಿಯೇ ಕಾಡುತ್ತದೆ. ಈ ಹಿನ್ನೆಲೆಯಲ್ಲಿ ರಾಜ - ಮಹಾರಾಜರು, ಪಾಳೆಯಗಾರರು, ಮಾಂಡಲೀಕರು, ಶ್ರೀಮಂತ ವರ್ಗದವರು "ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವ" ಸಾರ್ವಜನಿಕ ಹಿತಾಸಕ್ತ ಕೆಲಸಗಳನ್ನು ನಿರ್ವಹಿಸಿದ್ದಾರೆ.

ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಹೇಳುವಂತೆ ಪರಮಸಿದ್ಧಿಯನ್ನು ಪಡೆಯ ಬಸುವವರು ಉದ್ಯಾನ, ಅಗ್ಗಿಷ್ಟಿಕೆ, ಕೆರೆ, ಅನ್ನಛತ್ರಗಳನ್ನು ನಿರ್ಮಿಸಬೇಕು. ಈ ಸಂದರ್ಭದಲ್ಲಿ ಶ್ರವಣಬೆಳ್ಗೊಳ ಶಾಸನವು,

"ಕೆರೆ, ಬಾವಿ, ಬಸದಿ, ದೇಗುಲ, ಮರವಂಟಿಕೆ, ಸತ್ರವೆಂಬ ಧರ್ಮಮನಿನಿತುಂ ನೆರೆದುವು ಮುಗುಂದ ಮೂವತ್ತೊರೆವಿಭು ಚಾವುಂಡರಾಯನಿಂದಂ ಜಗದೊಳ್" ಎಂದು ಹೇಳಿರುವದನ್ನು ಸ್ಮರಿಸಿಕೊಳ್ಳಬಹುದು.

ಈ ಶತಮಾನದಲ್ಲಿ ಬೆಂಕಿ ತೀರಾ ಸರಳವಾಗಿ ಲಭ್ಯವಿದೆ. ಆದರೆ ತೀರಾ ಪ್ರಾಚೀನ ಕಾಲದಲ್ಲಿ ಈ ಸುಲಭ ಲಭ್ಯತೆ ಇದ್ದಿಲ್ಲ. ಆಗ ಬೆಂಕಿಯನ್ನು ವೈದಿಕರ ಮನೆ ಅಥವಾ ಮಠಗಳಲ್ಲಿ ಅಗ್ಗಿಷ್ಟಿಕೆಯನ್ನು ನಿರ್ಮಿಸಿ ಸದಾ ಅಲ್ಲಿ ಬೆಂಕಿಯಿದ್ದು ಎಲ್ಲರಿಗೂ ಅನುಕೂಲವಾಗಿ ದೊರೆಯುವಂತೆ ನಿರ್ಮಿಸುತ್ತಿದ್ದರು. ಈ ಉಪಕೃತ ಕಾರ್ಯಕ್ಕಾಗಿ ದಾನ ದತ್ತಿಗಳನ್ನು ಬಿಡುತ್ತಿದ್ದರು. ಇದು ಕೂಡಾ ಶಾಸನೋಕ್ತವೇ ಆಗಿದೆ.[೧೧]

ದೇಶಸಂಚಾರಿ ಹಾಗೂ ದೂರಸಂಚಾರಿ ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಪೂರ್ವಜರು ಅರವಟ್ಟಿಗೆ, ಅನ್ನಛತ್ರಗಳ ನಿರ್ಮಾಣದಂತಹ ಉತ್ತಮ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. "ಪೆರ್ಗಡೆನೊಕ್ಕಯ್ಯನೆಂಬುವನ ಧರ್ಮಾರ್ಥ, ದಾನ ಕಾರ್ಯಗಳು ಶಾಸನದಲ್ಲಿ ಉಲ್ಲೇಖಿತವಾಗಿವೆ.[೧೨]

ಮಹಾಭಾರತದಲ್ಲಿ ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಮಾನವರೂ ಸೇರಿದಂತೆ ಪಶು, ಪಕ್ಷಿಗಳು ನೀರನ್ನು ಕುಡಿದು ಸಂತೃಪ್ತರಾಗುವರೋ, ... ಅಂತಹ ಕೆರೆಯನ್ನು ಕಟ್ಟಿಸಿದವನು ಅಶ್ವಮೇಧಯಾಗದ ಪುಣ್ಯವನ್ನು ಪಡೆಯುತ್ತಾನೆಂದು ವ್ಯಾಸ ಋಷಿ ಹೇಳಿರುವುದನ್ನು ಸ್ಮರಿಸಿಕೊಳ್ಳಬಹುದು. ಅಲ್ಲದೆ ಬೇಸಿಗೆಯ ಬಿಸಿಲಿನ ತಾಪದಲ್ಲಿ ದಾಹವಿರುವುದು ನಿಸರ್ಗ ಸಹಜವಾದದ್ದು. ಈ ಸಮಯದಲ್ಲಿ ನೀರನ್ನು ಕೊಡಲು ಮಂಟಪಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ಭವಿಷ್ಯೋತ್ತರ ಪುರಾಣದಲ್ಲಿ ಹೇಳಿದೆ. [೧೩]

ಮಹಾಭಾರತದಲ್ಲಿ ದಾನದ ಕುರಿತಾಗಿ ಒಂದು ಅಧ್ಯಾಯವೇ ಇದೆ. ಅದನ್ನು ದಾನ ಧರ್ಮ ಪರ್ವ ಎಂದು ಹೆಸರಿಸಲಾಗಿದ್ದು, ಭೀಷ್ಮನು ಯುಧಿಷ್ಠರಿನಿಗೆ ಎಲ್ಲ ವಿಧವಾದ ದಾನ ಧರ್ಮಗಳನ್ನೂ, ಅವುಗಳ ಸ್ವರೂಪವನ್ನೂ ಅವುಗಳನ್ನು ಆಚರಿಸುವ ವಿಧಾನವನ್ನೂ, ಅದರಿಂದುಂಟಾಗುವ ಫಲವನ್ನು ವಿವರಿಸಿದೆ. ಅಲ್ಲದೆ ಷೋಡಶ ಮಹಾದಾನಗಳನ್ನು ಹೆಸರಿಸಲಾಗಿದೆ. ಅವುಗಳು

೧. ತುಲಾಭಾರ
೨. ಹಿರಣ್ಯಗರ್ಭ
೩. ತಿಲ ಪರ್ವತ
೪. ಸುವರ್ಣಮೇನಿನಿ
೫. ಕಲ್ಪಪಾದಪ
೬. ಗಣೇಶೇಶ
೭. ಸುವರ್ಣಧೇನು
೮. ಲಕ್ಷ್ಮೀ
೯. ತಿಲಧೇನು
೧೦. ಗೋಸಹಸ್ರ
೧೧. ಹಿರಣ್ಯಾಶ್ವ
೧೨. ಕನ್ಯಾ
೧೩. ಹಿರಣ್ಯವೃಷಭ
೧೪. ಗಜ
೧೫. ಲೋಕಪಾಲಾಷ್ಟಕ ತ್ರಿಮೂರ್ತಿ
೧೬. ಪ್ರತಿಮಾ

ಎಂದಿವೆ. [೧೪]

ದಾನ ಧರ್ಮಗಳ ಪರಂಪರೆ ನಮ್ಮ ನಾಡಿನ ಸಂಸ್ಕೃತಿಯಲ್ಲಿ ಅಡಕವಾಗಿರುವದನ್ನು ಕನ್ನಡ ಸಾಹಿತ್ಯವು ಹೇಳುತ್ತದೆ. ಕವಿಪಂಪನನ್ನು ನೆನಸಿಕೊಳ್ಳುತ್ತಿರುವ ಹಾಗೆ ಅವನ ಆಶ್ರಯದಾತ ಅರಿಕೇಸರಿಯ ನೆರವಿನ ನೆನಪು ಬರುತ್ತದೆ. ಕವಿ ರನ್ನನನ್ನು ನೆನಪಿಸಿಕೊಳ್ಳುತ್ತಿರುವಂತೆ ಅತ್ತಿಮಬ್ಬೆ ಚಾವುಂಡರಾಯರ ನೆರವು ಸಹಾಯದ ನೆನಪುಂಟಾಗುತ್ತದೆ.

ನೆರವು, ಸಹಾಯ ಅಥವಾ ದಾನ ಬರೀ ನಮ್ಮ ನಾಡು - ನುಡಿಯಲ್ಲಿ ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿಯೂ ದಾನದ ಮಹತ್ವ ಮುಖ್ಯವಾಗಿದೆ. ಕಾರ್ಲ್‌ಮಾರ್ಕ್ಸ್ ತನ್ನ ಅದ್ಭುತ ಕೃತಿ ''ದಾಸ್ ಕ್ಯಾಪಿಟಲ್'' ರಚಿಸುವಾಗ ಅವನ ಶ್ರೀಮಂತ ಗೆಳೆಯ ಎಂಜೆಲ್ಸ್ ಎನ್ನುವವನು ಕಾರ್ಲ್‌ಮಾರ್ಕ್ಸ್‌ನ ಸಂಕಷ್ಟದ ದಿನಗಳಲ್ಲಿ ಅವನ ನಿರಾಂತಕವಾದ ಅಧ್ಯಯನ ಸಾಧನೆಗೆ ಅತಿ ಅಗತ್ಯವಾದ ನೆರವನ್ನು ನೀಡಿದ್ದಾನೆ.[೧೫]

ಏನೇ ಆಗಲಿ ''ದಾನ''ದ ಗುಣ ವಿಶೇಷತೆ ಒಬ್ಬ ವ್ಯಕ್ತಿಯ ವೈಯಕ್ತಿಕ ಸ್ವಭಾವವೆಂದರೆ ತಪ್ಪಾಗಲಾರದು. ಮನುಷ್ಯ ಹುಟ್ಟಿನಿಂದಲೇ ದಾನ ಬೆಳೆದುಬಂದಿದೆ. ಭಾರತದ ಪುರಾಣ ಕಾವ್ಯಗಳಲ್ಲಿ ದಾನಿಗಳ ದಂಡೇ ಕಾಣ ಸಿಗುತ್ತದೆ.

ಕರ್ಣ, ಬಲಿ ಚಕ್ರವರ್ತಿ, ಶಿಬಿಚಕ್ರವರ್ತಿ, ಸಿರಿಯಾಳ ಶೆಟ್ಟಿ, ಸತ್ಯ ಹರಿಶ್ಚಂದ್ರ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ದಾನಗುಣವು ಭಾರತೀಯರ ಸಂಸ್ಕೃತಿಯಲ್ಲಿರುವಂತೆ ಕನ್ನಡಿಗರ ಜನಜೀವನದ ಉಸಿರು ಆಗಿತ್ತು.

ಜೈನ ಧರ್ಮದಲ್ಲಿ ನಾಲ್ಕು ಬಗೆಯ ದಾನಗಳಿವೆ. ಅವು ''ಆಹಾರಾಭಯ ಭೈಷಜ್ಯ ಶಾಸ್ತ್ರದಾನ'' ವೆಂಬವುಗಳಾಗಿವೆ. ಜೈನರಲ್ಲಿ ಅಪಾರವಾದ ವಿದ್ವತ್ತು ಬೆಳೆಯಲು ಪ್ರಚಾರವಾಗಲು ಕಾರಣ ಅವರ ಶಾಸ್ತ್ರದಾನವೂ ಒಂದು.[೧೬] ಹರಿಯವ್ವೆ ಎಂಬಾಕೆಯನ್ನು ಹೊಗಳುತ್ತ ಅವಳು ''ಓದಲು ಶಾಸ್ತ್ರಮನ್'' ಕೊಡುತಿದ್ದಳೆಂದು ಶಾಸನವು ಗುರುತಿಸಿದೆ.[೧೭]

ಕನ್ನಡ ನಾಡಿನ ಇತಿಹಾಸದಲ್ಲಿ ನಾಟ್ಯಕ್ಕೆ ಶಾಂತಲೆ ಪ್ರಸಿದ್ಧಿಯಾಗಿರುವಂತೆ ದಾನಕ್ಕೆ ಅತ್ತಿಮಬ್ಬೆ ಹೆಸರುವಾಸಿಯಾಗಿದ್ದಾಳೆ. ಅತ್ತಿಮಬ್ಬೆ ಒಬ್ಬ ಸಾಮಾನ್ಯ ಮಹಿಳೆಯಲ್ಲ. ದಾನಶೀಲೆ, ಸತ್ಕುಲ ಪ್ರಸೂತೆ, ಗುಣಶೀಲೆ, ಆಶ್ರಯದಾತೆ, ಕವಿಪೋಷಕಿ, ಜಿನದೀಕ್ಷೆಯನ್ನು ಪಡೆದು, ವ್ರತನಿಷ್ಠೆ ನಡೆಸಿದ ಪವಾಡಮಾನಿನಿ.

ದಾನದ ಮೌಲ್ಯಗಳನ್ನೇ ತನ್ನ ಜೀವಿತದ ಗುರಿಯಾಗಿಟ್ಟುಕೊಂಡು ಬದುಕನ್ನೇ ಸಾರ್ಥಕಪಡಿಸಿಕೊಂಡವಳು ಅತ್ತಿಮಬ್ಬೆ. ಈ ಅತ್ತಿಮಬ್ಬೆಯ ಕಾರ್ಯಕ್ಷೇತ್ರವೇ ಲಕ್ಕುಂಡಿ. ಹಿಂದಿನ ಲೊಕ್ಕಿಗುಂಡಿಯೇ ಗದಗ ಜಿಲ್ಲೆಯ ಗ್ರಾಮವಾಗಿರುವ ಲಕ್ಕುಂಡಿಗೂ ಅತ್ತಿಮಬ್ಬೆಗೂ ನಿಕಟವಾದ ಸಂಬಂಧವಿದೆ. ಅತ್ತಿಮಬ್ಬೆಯು ಕಟ್ಟಿಸಿದಳು ಎನ್ನಲಾದ ೧೫೦೧ ಬಸದಿಗಳಲ್ಲಿ ಸುಸ್ಥಿತಿಯಲ್ಲಿರುವುದು ಲಕ್ಕುಂಡಿಯ ಬ್ರಹ್ಮಜಿನಾಲಯವೊಂದೆ. ಲಕ್ಕುಂಡಿಯೆಂದರೆ ಬ್ರಹ್ಮಜಿನಾಲಯ ನೆನಪಾಗಿ ಜತೆಗೆ ಅದರ ನಿರ್ಮಾಪಕಿಯಾದ ಅತ್ತಿಮಬ್ಬೆಯು ಥಟ್ಟನೆ ನೆನಪಾಗುತ್ತಾಳೆ. ಅತ್ತಿಮಬ್ಬೆ ಬೇರೆ ಅಲ್ಲ, ಲಕ್ಕುಂಡಿ ಬೇರೆ ಅಲ್ಲ.

ಲಕ್ಕುಂಡಿಯಲ್ಲಿಯೇ ಮ್ಯೂಸಿಯಂ ಇದ್ದು, ಮ್ಯೂಸಿಯಂ ಮುಂಭಾಗದಲ್ಲಿಯೇ ಅತ್ತಿಮಬ್ಬೆಯ ಕುರಿತಾದ ಶಾಸನವಿದೆ. ಆದರೆ ಈಗ ಇರುವ ಮ್ಯೂಸಿಯಂಗಿಂತ ದೊಡ್ಡ ಮ್ಯೂಸಿಯಂನ ಅವಶ್ಯಕತೆ ಇರುವುದು ಕಂಡುಬರುತ್ತದೆ. ಅತ್ತಿಮಬ್ಬೆಯ ಕಾಲ, ತಂದೆ, ತಾಯಿ, ಗಂಡ, ಮಾವ, ತಂಗಿ, ಊರು, ಸಾಹಿತ್ಯಕ್ಕೆ, ಧರ್ಮಕ್ಕೆ ಅವಳು ಕೊಟ್ಟ ಕೊಡುಗೆಯನ್ನು ಲಕ್ಕುಂಡಿಯ ಶಾಸನ ಹೇಳುತ್ತದೆಯಾದರೂ, ಅವಳ ವಿದ್ಯಾಭ್ಯಾಸದ ಕುರಿತಾಗಿ ಶಾಸನವಾಗಲಿ, ರನ್ನ ಕವಿಯಾಗಲಿ ಅವಳ ವಿದ್ಯಾಭ್ಯಾಸದ ಕುರಿತಾಗಿ ಹೇಳಿಯೆ ಇಲ. ಶಾಂತಿಪುರಾಣದಂತಹ ಕೃತಿಯ ಮರುಲಿಪಿಕರಣ, ರನ್ನನಂಥ ಮಹಾಕವಿಗೆ ಆಶ್ರಯ ಕೊಟ್ಟಿರುವುದಲ್ಲದೆ, ಅವನಿಂದ ಕೃತಿಯನ್ನು ಬರೆಯಿಸಿದ್ದನ್ನು ನೋಡಿದರೆ ಅತ್ತಿಮಬ್ಬೆಯು ವಿದ್ಯಾವತಿಯಾದ ಅಕ್ಷರಪಕ್ಷಪಾತಿಯ ಗುಣವುಳ್ಳವಳಾಗಿರಬೇಕು ಎಂದೆನಿಸುತ್ತದೆ. ಆ ಕುರಿತಾಗಿ ಮತ್ತೆ ಕೆಲವಾದರೂ ಶಾಸನಗಳು ಇದ್ದಿರಲೇಬೇಕು. ಬ್ರಹ್ಮ ಜಿನಾಲಯದ ಸುತ್ತಮುತ್ತ ಉತ್ಖನನ ಕಾರ್ಯ ನಡೆಸಿದರೆ ಏನಾದರೂ ಸುಳಿವು ಸಿಗುವುದಕ್ಕೆ ಸಾಧ್ಯತೆಗಳಿವೆ. ಆದುದರಿಂದ ಉತ್ಖನನ ಕಾರ್ಯವಾಗಬೇಕು. ಶಾಸನ ಸಂಶೋಧನೆಗೆ ಸರ್ಕಾರ ಬದ್ಧವಾಗಬೇಕು.

ಅತ್ತಿಮಬ್ಬೆಯ ಸುಪ್ರಯತ್ನದ ಪ್ರತಿಫಲವಾದ ಬ್ರಹ್ಮ ಜಿನಾಲಯವು ಅಲ್ಲಲ್ಲಿ ಶಿಥಿಲವಾಗುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅದರ ಪುನರುಜ್ಜೀವನ ಕಾರ್ಯ ಎಷ್ಟು ಸಾಧ್ಯವೋ ಅಷ್ಟು ಬೇಗನೆ ಆಗಬೇಕಾಗಿದೆ. ಅಂದರೆ ಈ ಜಿನಾಲಯದ ರೀಪೇರಿ ಕಾರ್ಯಕ್ಕೆ ಕರ್ನಾಟಕ ಸರಕಾರ ಹಾಗೂ ಪುರಾತತ್ವ ಇಲಾಖೆಯವರು ತಮ್ಮ ಗಮನ ಹರಿಸಬೇಕು.

ಅತ್ತಿಮಬ್ಬೆಯ ಬ್ರಹ್ಮ ಜಿನಾಲಯವಲ್ಲದೆ ಬೇರೆ ಬೇರೆ ಜಿನಾಲಯ, ಕಟ್ಟಡಗಳು ಲಕ್ಕುಂಡಿಯಲ್ಲಿ ಇರುವುದರಿಂದ ಲಕ್ಕುಂಡಿಯನ್ನು ಒಂದು ಸುಂದರ ಪ್ರೇಕ್ಷಣೀಯ ಸ್ಥಳವನ್ನಾಗಿಸಬೇಕು. ಅಲ್ಲಿ ಬರುವ ಪ್ರವಾಸಿಗರಿಗೆ ಎಲ್ಲಾ ಅನುಕೂಲಗಳು ಒದಗುವಂತಾಗಬೇಕು.

ಇಷ್ಟು ಹಿರಿದಾದ ವ್ಯಕ್ತಿತ್ವವಿರುವ ಅತ್ತಿಮಬ್ಬೆಯ ಸಾಧನೆ, ಕೊಡುಗೆ, ಸಾಹಿತ್ಯಸೇವೆ ಇವುಗಳ ಕುರಿತು ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಸಂಕಿರಣ ಏರ್ಪಡಬೇಕು.

ಡಾ. ಕಮಲಾ ಹಂಪನಾ ಹೇಳುವಂತೆ "ಕರ್ನಾಟಕದಲ್ಲಿ ಒಂದು ಪ್ರತ್ಯೇಕ ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿ ಅದಕ್ಕೆ "ಅತ್ತಿಮಬ್ಬೆ ವಿಶ್ವವಿದ್ಯಾಲಯ" ಎಂದು ನಾಮಕರಣವಾಗಬೇಕು."[೮]

ಪ್ರಾಥಮಿಕ, ಪ್ರೌಢ ಶಾಲಾ ಪಠ್ಯಕ್ರಮದಲ್ಲಿ ಅತ್ತಿಮಬ್ಬೆಯ ಕುರಿತಾದ ಪರಿಚಯ, ಸಾಧನೆ, ಕೊಡುಗೆ, ವ್ಯಕ್ತಿತ್ವ ಇವುಗಳನ್ನು ಸೇರಿಸಬೇಕು.

ಅತ್ತಿಮಬ್ಬೆ ಜಿನಾಲಯದ ರಕ್ಷಣೆಯ ಭಾರವು ಲಕ್ಕುಂಡಿ ನಾಗರಿಕರ ಹೊಣೆಗಾರಿಕೆಯಾಗಿದೆ. ಹಾಗೆಯೇ ಲಕ್ಕುಂಡಿ ಗ್ರಾಮದ ಪಂಚಾಯಿತಿಯು ಅತ್ತಿಮಬ್ಬೆ, ಬ್ರಹ್ಮ ಜಿನಾಲಯ ಇವುಗಳ ಕುರಿತಾಗಿರುವ ಲಭ್ಯ ಮಾಹಿತಿಯನ್ನು ರಕ್ಷಿಸಿ ಇಟ್ಟುಕೊಳ್ಳಬೇಕು.

ಅತ್ತಿಮಬ್ಬೆಯ ವ್ಯಕ್ತಿತ್ವ ಅಸಾದೃಶವಾದದ್ದು. ಅವಳು ಮಗಳಾಗಿ, ಮಡದಿಯಾಗಿ, ಮಾತೆಯಾಗಿ, ಜೈನ ವ್ರತ ಪರಿಪಾಲಕಿಯಾಗಿ, ಕವಿಪೋಷಕಿಯಾಗಿ, ಮಹಾದಾನಿಯಾಗಿ, ಬಸದಿಗಳ ನಿರ್ಮಾಪಕಿಯಾಗಿ ತುಂಬುಜೀವನವನ್ನು ನಡೆಸಿದವಳು. ಧಾರ್ಮಿಕ ಕ್ಷೇತ್ರವೊಂದೆಯಾದರೂ ಅದಕ್ಕೆ ಪೂರಕವಾಗಿ ಹಲವಾರು ವ್ಯಕ್ತಿತ್ವಗಳನ್ನು ತನ್ನಲ್ಲಿ ಮೈಗೂಡಿಸಿಗೊಂಡವಳು. ಅವಳ ಈ ಸಮಗ್ರ ಬದುಕನ್ನು ಬರಹಕ್ಕೆ ಇಳಿಸಬೇಕೆಂದರೆ ಸಿಗುವ ಮಾಹಿತಿ, ಆಧಾರಗಳು ಅತ್ಯಲ್ಪಗಳಾಗಿವೆ.

೧. ಪೊನ್ನ ಕವಿಯ ಶಾಂತಿಪುರಾಣ
೨. ಲಕ್ಕುಂಡಿಯ ಶಾಸನ
೩. ರನ್ನ ಕವಿಯ ಅಜಿತ ತೀರ್ಥಕರ ಪುರಾಣ
೪. ಬ್ರಹ್ಮಶಿವ ಕವಿಯ ಕೆಲವೊಂದು (೩) ಪದ್ಯಗಳು ಮಾತ್ರ.

ಇಷ್ಟು ಸೀಮಿತ ಆಧಾರಗಳನ್ನಿಟ್ಟುಕೊಂಡು ಅತ್ತಿಮಬ್ಬೆಯ ಬದುಕನ್ನು ಬರಹಕ್ಕಿಳಿಸಲಾಗಿದೆ. ಅತ್ತಿಮಬ್ಬೆಯ ವ್ಯಕ್ತಿತ್ವದ ಸಮಗ್ರ ದರ್ಶನವನ್ನು ಮಾಡಲು ನಾನು ಪ್ರಯತ್ನಪಟ್ಟಿದ್ದೇನೆ. ಅವಳ ಇತಿಹಾಸ, ವ್ಯಕ್ತಿತ್ವ, ಕೊಡುಗೆಗಳಲ್ಲಿ ಆಂತರೀಕ ವ್ಯಕ್ತಿತ್ವವಾದ ಸ್ತ್ರೀವಾದಿ ನೆಲೆಗಳ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯನ್ನು ದರ್ಶಿಸಲು ಮೊಟ್ಟಮೊದಲ ಬಾರಿ ಬೆಳಕು ಚೆಲ್ಲಲು ಪ್ರಯತ್ನಿಸಿದ್ದೇನೆ. ಇನ್ನೊಂದಿಷ್ಟು ಆಧಾರ, ಶಾಸನಗಳು ದೊರಕಿದ್ದರೆ ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಇನ್ನಷ್ಟು ಚೆನ್ನಾಗಿ ಅಧ್ಯಯನ ಮಾಡಲು ಸಾಧ್ಯವಿತ್ತು ಎಂಬ ವಿಚಾರ ಮಾತ್ರ ಕಾಡುತ್ತಲೇ ಇದೆ.

ಜಗತೀಚಕ್ರಮನಾಳ್ಗೆ ತೈಲನೃಪನೇಕಚ್ಛತ್ರದಿಂದ ಚಕ್ರವ
ರ್ತಿಗೆ ದಿಗ್ಭಿತ್ತಿವರಂ ನಿಮಿರ್ಗೆ ನೆಲನಾಸ್ವಾಮಿ ಪ್ರಸಾದೋದಯಂ
ಮಿಗೆ ತೈಲಂ ನೆಗವ್ದೆತ್ತಿಮಬ್ಬೆಯಮಗಂ ಮತ್ಕಾವ್ಯಮಂ ಮೆಚ್ಚಿಕೇ
ಳ್ವಗುಣಂಗೊಳ್ವ ಜನಕ್ಕಮಕ್ಕೆ ವಿಭವಂ ಭದ್ರಂಶುಭಂ ಮಂಗಳಂ.[೯]

ಅಡಿಟಿಪ್ಪಣಿ

೧. ಕನ್ನಡ ನಾಡಿನ ಶಾಸನಗಳು, ಪಿ.ಬಿ.ದೇಸಾಯಿ
೨. ಕನ್ನಡ ಚೆನ್ನುಡಿ, ಕನ್ನಡ ಸುಭಾಷಿತಗಳ ಬೃಹತ್ ಸಂಪುಟ (ಸಂ), ಡಾ. ಟಿ.ವೀ.ವೆಂಕಟಾಚಲಶಾಸ್ತ್ರೀ, ದಾನ, ಪು. ೩೭೩
